ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ
ವಿಜಯನಗರ, ಬೆಂಗಳೂರು

ಜೂಲೈ – 2020

ಜ್ಞಾನಗಂಗೋತ್ರಿ

ಇ–ಮ್ಯಾಗಝಿನ್

Useful for KAS, KPSC, PSI and all State govt exams

Free copy not for sale

JNANAGANGOTHRI
Inspiring to serve...

www.iasjnana.com **9916399276**

Jnanagangothri

An Institute for IAS, KAS, PSI, Banking, SSC, Railways and for all State govt and Central govt. recruitments.

Join Jnanagangothri Online Classes
Click the link below to download JG's Online Classes:
https://play.google.com/store/apps/details?id=com.iasjnana.courses

Login to www.iasjnana.com for daily current affairs and free PDF download

SERVICES AVAILABLE AT JNANAGANGOTHRI		
Course	**Batches**	**Timings**
KAS Prelims	3 Batches/day	7am, 10am 5:45pm
KAS Core batch prelims+mains	6 Months	7am to 7 pm
FDA/SDA Regular batch	3 Batches/day	7am, 10am 5:45pm
FDA/SDA Core Batch	1 Batch/Day	7am to 7 pm
PSI Regular batch	3 Batches/day	7am, 10am 5:45pm
PSI Core batch	1 Batch/Day	7am to 7 pm
Banking/SSC/Railways	1 Batch	10am to 1 pm
Test Series for KAS, FDA/SDA, PSI, BANKING, RRB ETC	Available both online and offline	
24 hr Reading Rooms	24 hr	NA
Mock intervies for all competitive Exams	On appointment	
Free KPSC current affairs available everyday visit www.iasjnana.com		

ಕ್ರ. ಸಂ.	ವಿಷಯ	ಪುಟ ಸಂಖ್ಯೆ
1	ರಾಜ್ಯ/STATE	05
2	ರಾಷ್ಟ್ರೀಯ/NATIONAL	15
3	ಅಂತರ–ರಾಷ್ಟ್ರೀಯ/INTERNATIONAL	47
4	ವಿಜ್ಞಾನ/SCIENCE	60
5	ಆರ್ಥಿಕ/ECONOMY	64
6	ಕ್ರೀಡೆ/SPORTS	79
7	ವಿಶೇಷ ದಿನಗಳು/Special Days	81
8	ಪ್ರಶಸ್ತಿಗಳು/AWARDS	83
9	ನೇಮಕ/APPOINTMENTS	84
10	ಸಂತಾಪ/OBITUARY	84

GOOD NEWS - **ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (PSI) 2019** ರ ನೇಮಕಾತಿಯಲ್ಲಿ ಜ್ಞಾನಗಂಗೋತ್ರಿ ಸಂಸ್ಥೆಯಿಂದ ಅತೀ ಹೆಚ್ಚು ಸ್ಪರ್ಧಾರ್ಥಿಗಳು ತೇರ್ಗಡೆಗೊಂಡಿರುತ್ತಾರೆ. ಒಟ್ಟು ನೇಮಕಾತಿಯ **25 ಪ್ರತಿಶತ** ವಿದ್ಯಾರ್ಥಿಗಳು ಜ್ಞಾನಗಂಗೋತ್ರಿಯಿಂದ ತೇರ್ಗಡೆಗೊಂಡಿರುವುದು ನಮಗೆ ಹೆಮ್ಮೆ ತಂದಿದೆ.

ಈ ಸಾಧಕರ ಯಶಸ್ಸಿನ ಕಾರ್ಯತಂತ್ರವನ್ನು ಜ್ಞಾನಗಂಗೋತ್ರಿ **YouTube** ಚಾನೆಲ್‌ನಲ್ಲಿ ವೀಕ್ಷಿಸಿ.

Warning- We have no Branches

PSI CORE BATCH -2019
*7am to 7 pm batch,
*Only for the first 30 students;
*Intense Training for 5 months; guidance till exam;
*Classes and Individual mentoring;
*Paper-1 learning with unique strategy;
*Ample number of Tests;
* Close to 1000 Model Questions discussion of each GS subject;
*Previous years QP discussion;
*Preparation according to 'TARGET BASED STUDY PLAN';
*Coaching both in KANNADA/ENGLISH;
*Dedicated study hall for uninterrupted preparation;
CONTACT- JNANAGANGOTHRI ACADEMY
Vijayanagara, Bengaluru. 9916399276
More you sweat in practice, less you bleed in battle.
www.iasjnana.com

ರಾಜ್ಯ

1. ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಿಸಲು ಸರ್ಕಾರದ ಜತೆ ಇ–ಆಫೀಸ್ ಆನ್ ಲೈನ್ ಮೂಲಕವೇ ವ್ಯವಹಾರ:

- ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಿಸಲು ಸಂಪೂರ್ಣ ಡಿಜಿಟಲೀಕರಣದತ್ತ ಹೆಜ್ಜೆ ಇಟ್ಟಿರುವ ಉನ್ನತ ಶಿಕ್ಷಣ ಇಲಾಖೆ, ಜುಲೈ 15 ರಿಂದ ಎಲ್ಲ ವಿಶ್ವವಿದ್ಯಾಲಯಗಳೂ ಸರ್ಕಾರದ ಜತೆ ಇ–ಆಫೀಸ್ ಆನ್‌ಲೈನ್ ಮೂಲಕವೇ ವ್ಯವಹರಿಸಬೇಕು ಎನ್ನುವ ಕಟ್ಟಾಜ್ಞೆ ಹೊರಡಿಸಿದೆ.

ಏನಿದು ಆನ್‌ಲೈನ್ ಸಂಯೋಜನೆ?

- ಈವರೆಗೆ ಎಲ್ಲ ವ್ಯವಹಾರಗಳು ಕಡತಟ ಪಾಲು ಇಲ್ಲವೇ ಪತ್ರ ಮುಖೇನ ನಡೆಯುತ್ತಿದ್ದವು. ಇನ್ನು ಮುಂದೆ ಇವೆಲ್ಲವೂ ಆನ್‌ಲೈನ್ ವ್ಯವಸ್ಥೆಯ ಮೂಲಕವೇ ನಡೆಯಲಿವೆ.
- ಮ್ಯಾನುವಲ್ ಪ್ರಕ್ರಿಯೆಯಲ್ಲಿ ಬಹಳಷ್ಟು ಲೋಪಗಳಿದ್ದ, ಯುಜಿಸಿ ನಿಯಮಗಳಿಗೆ ವಿರುದ್ಧವಾಗಿದ್ದವು. ಇದೆಲ್ಲವನ್ನೂ ಆನ್‌ಲೈನ್ ಸಂಯೋಜನೆ ನಿವಾರಿಸಲಿದೆ.
- ಇದು ಸಂಪೂರ್ಣ ದೋಷರಹಿತವಾಗಿದ್ದು, ವಿಶ್ವವಿದ್ಯಾಲಯ ನಿರ್ವಹಣಾ ವ್ಯವಸ್ಥೆ ಎಂದು ಕರೆಯಲಾಗುತ್ತದೆ. ರಾಷ್ಟ್ರೀಯ ಮಾಹಿತಿ ಕೇಂದ್ರದ (ಎನ್‌ಐಸಿ) ನೆರವಿನೊಂದಿಗೆ ಅಭಿವೃದ್ಧಿಪಡಿಸಲಾಗಿದ್ದು, ಏಕಗವಾಕ್ಷಿ ವ್ಯವಸ್ಥೆಯಂತೆ ಕೆಲಸ ಮಾಡುತ್ತದೆ.
- ವಿಶ್ವವಿದ್ಯಾಲಯಗಳು ಹೊಸ ಕಾಲೇಜುಗಳಿಗೆ ಅನುಮತಿ, ಕೋರ್ಸ್‌ಗಳಿಗೆ ಒಪ್ಪಿಗೆ ಸೇರಿದಂತೆ ಮಾನ್ಯತೆ ನೀಡುವ ಹಾಗೂ ಆಡಳಿತಾತ್ಮಕ ವಿಚಾರಗಳನ್ನು ಇದರ ಮೂಲಕವೇ ಮಾಡಬೇಕು.

ಸಂಯೋಜನೆ ಏಕೆ?

- ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ,
- ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಸುಧಾರಣೆ ಆಡಳಿತಕ್ಕೆ ತ್ವರಿತ ನಿರ್ಧಾರ ಬೆಂಬಲದ ವ್ಯವಸ್ಥೆ ಹಾರ್ಡ್‌ವೇರ್, ಸಾಫ್ಟ್‌ವೇರ್ ಮತ್ತು ನೆಟ್‌ವರ್ಕ್ ಮೂಲ ಸೌಕರ್ಯಗಳನ್ನು ಅಳವಡಿಸಿ ಕೊಳ್ಳಲು ಪ್ರೋತ್ಸಾಹ ಗುಣಮಟ್ಟದ ಮೌಲ್ಯಮಾಪನಕ್ಕಾಗಿ ಸಂಸ್ಥೆಗಳ ಅಧ್ಯಾಪಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಫಲಿತಾಂಶಗಳ ಬಗ್ಗೆ ಮಾಹಿತಿ ಸಂಗ್ರಹ ಸುಲಭ.

2. ಗಣಿಗಾರಿಕೆ: ರಾಯಧನ ಪರಿಷ್ಕರಣೆ:

- ಉಪ ಖನಿಜ ಗಣಿಗಾರಿಕೆ ಸಂಬಂಧ ವಿಧಿಸಲಾಗುವ ರಾಯಧನ ಪರಿಷ್ಕರಣೆ ಜೊತೆಗೆ, ಪರವಾನಗಿ ಇಲ್ಲದೆ ಉಪ ಖನಿಜ ಸಾಗಣೆ ವೇಳೆ ಜಪ್ತಿಯಾಗುವ ವಾಹನಗಳ ಮಾದರಿವಾರು ವಿಧಿಸುವ ದಂಡ ಪ್ರಮಾಣ ನಿಗದಿಪಡಿಸಿ ರಾಜ್ಯ ಸರ್ಕಾರ 'ಕರ್ನಾಟಕ ಉಪ ಖನಿಜ ರಿಯಾಯಿತಿ ಕಾಯ್ದೆ (ತಿದ್ದುಪಡಿ)-2020' ಅನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದೆ.
- ಆಯ್ದ ಕೆಂಪು, ಕಪ್ಪು, ತಿಳಿ ಕೆಂಪು, ಕಂದು, ಬಿಳಿ ಬಣ್ಣದ ಗ್ರಾನೈಟ್ ಶಿಲೆ ಮತ್ತು ಪ್ರದೇಶವಾರು ಸಿಗುವ ಆಯ್ದ ಗ್ರಾನೈಟ್ ಶಿಲೆಗಳಿಗೆ ಮಾರಾಟ ಶುಲ್ಕ ಇಲ್ಲವೇ ಸರಾಸರಿ ಮಾರಾಟ ಶುಲ್ಕ, ನಿರ್ದಿಷ್ಟ ಪ್ರಮಾಣಕ್ಕಿಂತ ಟನ್‌ವಾರು ಶುಲ್ಕ ನಿಗದಿಪಡಿಸಲಾಗಿದೆ. ಗಣಿಗಾರಿಕೆ ವೇಳೆ ಉತ್ಪತ್ತಿಯಾಗುವ ಆಕಾರ ರಹಿತ ಅನುಪಯುಕ್ತ ಶಿಲೆಗಳಿಗೂ ಟನ್‌ವಾರು ರಾಯಧನ ನಿಗದಿಪಡಿಸಲಾಗಿದೆ.
- ಅಕ್ರಮವಾಗಿ ಉಪ ಖನಿಜ ಸಾಗಣೆ ವೇಳೆ ವಶಪಡಿಸಿಕೊಳ್ಳುವ ವಾಹನಗಳನ್ನು ದಂಡ ಕಟ್ಟಿ ಬಿಡುಗಡೆ ಮಾಡಿಸಿಕೊಳ್ಳ ಬಹುದು. ವಶಪಡಿಸಿಕೊಂಡ ಎತ್ತಿನ ಗಾಡಿಗೆ 5,000 ರೂ, ಟ್ರ್ಯಾಕ್ಟರ್ ಸೇರಿದಂತೆ ಇತರ ಸಣ್ಣ ವಾಹನಗಳಿಗೆ 10,000 ರೂ, 10 ಟನ್‌ಗಿಂತ ಕಡಿಮೆ ಸಾಗಣೆ ಸಾಮರ್ಥ್ಯದ ವಾಹನಕ್ಕೆ 20,000 ರೂ, ಹತ್ತು ಟನ್‌ಗಿಂತಲೂ ಹೆಚ್ಚು ಸಾಗಣೆ ಸಾಮರ್ಥ್ಯದ ವಾಹನಕ್ಕೆ 30,000 ರೂ, ದಂಡ ವಿಧಿಸಲು ನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಕ್ರಮ ಗಣಿಗಾರಿಕೆ ಕಾರಣಕ್ಕೆ ಜಪ್ತಿಯಾದ ಡ್ರಿಲ್ಲಿಂಗ್ ಯಂತ್ರ, ಕಂಪ್ರೆಸ್ಸರ್, ಪವರ್ ಟಿಲ್ಲರ್ ಮತ್ತಿತರ ಸಾಧನಗಳಿಗೆ 10,000ರೂ, ಕ್ರೇನ್ ಡಂಪರ್‌ಗೆ 30,000 ರೂ, ಹೆವಿ ಡ್ಯೂಟಿ ಡಂಪರ್, ಎಕ್ಸವೇಟರ್ (ಜೆಸಿಬಿ, ಹಿಟಾಚಿ ಪವರ್ ಹ್ಯಾಮರ್‌ಗೆ 50,000 ರೂ, ಹಾಗೂ ಇತರೆ ಸಲಕರಣೆಗಳನ್ನು ಸಕ್ರಮಗೊಳಿಸಲು 20,000 ರೂ, ದಂಡ ನಿಗದಿಪಡಿಸಲಾಗಿದೆ.
- ಅಕ್ರಮ ಗಣಿಗಾರಿಕೆ ನಡೆಸಿ ಜಪ್ತಿಯಾದ ಉಪಖನಿಜಗಳ ಟನ್‌ವಾರು ದಂಡದ ಮೊತ್ತ ನಿಗದಿಪಡಿಸಲಾಗಿದೆ. ಗಣಿಗಾರಿಕೆ ಗುತ್ತಿಗೆ ವರ್ಗಾವಣೆಗೂ ಕಠಿಣ ನಿಯಮ ಜಾರಿಗೊಳಿಸಲಾಗಿದೆ.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

3. ರಸ್ತೆಗೆ ವಿಮೆ ಮಾಡಿಸಿದ ಚಾಲಕ:

- ಮೈಸೂರಿನ ಬೋಗಾದಿಯ ಸಿ.ಎಫ್.ಟಿ.ಆರ್.ಐ. ಬಡಾವಣೆ ನಿವಾಸಿ, ಕ್ಯಾಬ್ ಚಾಲಕ ವಾಸು ಅವರು ತಾವು ವಾಸ ಇರುವ ಮನೆಯ ರಸ್ತೆಗೆ ರೂ. 3.23 ಲಕ್ಷ ಮೊತ್ತದ ವಿಮೆ ಮಾಡಿಸಿದ್ದಾರೆ. ಇದಕ್ಕೆ ತಗಲುವ ವಾರ್ಷಿಕ ಪ್ರೀಮಿಯಂ ರೂ. 889 ಅನ್ನು ತಾವೇ ಭರಿಸಿದ್ದಾರೆ. ಜೂನ್ 26ರಿಂದಲೇ ವಿಮೆ ಅವಧಿ ಆರಂಭವಾಗಿದೆ.
- ನೈಸರ್ಗಿಕ ಕಾರಣಗಳಿಂದ ಹಾಗೂ ಕಿಡಿಗೇಡಿಗಳಿಂದ ರಸ್ತೆಗೆ ಹಾನಿಯಾದರೆ ಓರಿಯಂಟಲ್ ವಿಮಾ ಕಂಪನಿ ರೂ. 3.23 ಲಕ್ಷದವರೆಗೆ ನಷ್ಟ ಭರಿಸುತ್ತದೆ. ಮೈಸೂರಿನಲ್ಲಿ ಈ ರೀತಿ ವಿಮೆ ಮಾಡಿಸಿದ ಮೊದಲ ವ್ಯಕ್ತಿ ಎಂಬ ಶ್ರೇಯಕ್ಕೆ ಇವರು ಪಾತ್ರರಾಗಿದ್ದಾರೆ.

4. ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಾಗ ಮೋಹನ್ ದಾಸ್ ನೇತೃತ್ವದ ಆಯೋಗ :

- ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಪಂಗಡದವರಿಗೆ ಹಾಲಿ ನೀಡುತ್ತಿರುವ ಮೀಸಲು ಪ್ರಮಾಣವನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸುವಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಾಗ ಮೋಹನ್ ದಾಸ್ ನೇತೃತ್ವದ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಯಾರ ಮೀಸಲು ಬುಟ್ಟಿಗೆ ಕಡಿತ?

- ವರದಿಯಲ್ಲಿ ಪರಿಶಿಷ್ಟ ಜಾತಿಗೆ ಶೇ. 2 ಹಾಗೂ ಪರಿಶಿಷ್ಟ ವರ್ಗಕ್ಕೆ ಶೇ. 4ರಷ್ಟು ಮೀಸಲು ಪ್ರಮಾಣ ಹೆಚ್ಚಿಸುವಂತೆ ಶಿಫಾರಸ್ಸು ಮಾಡಲಾಗಿದೆ. ಆದರೆ ಇದರಿಂದ ಸುಪ್ರೀಂ ಕೋರ್ಟ್ ನಿಗದಿ ಮಾಡಿದ ಶೇ. 50 ರ ಮಿತಿ ದಾಟಿದಂತಾಗುತ್ತದೆ. ಹಾಗಾದರೆ ಉಳಿದ ವರ್ಗಕ್ಕೆ ನೀಡಿದ ಮೀಸಲು ಪ್ರಮಾಣ ಕಡಿತ ಮಾಡಲಾಗಿದೆಯೇ ಎಂಬ ಚರ್ಚೆ ಪ್ರಾರಂಭವಾಗಿದೆ.
- ಮೂಲಗಳ ಪ್ರಕಾರ ವರದಿಯಲ್ಲಿ ಉಳಿದ ವರ್ಗಕ್ಕೆ ನಿಗದಿಯಾದ ಮೀಸಲು ಪ್ರಮಾಣ ಕಡಿಮೆ ಮಾಡಿಲ್ಲ. ಒಟ್ಟಾರೆಯಾಗಿ ಶೇ. 6ರಷ್ಟು ಮೀಸಲು ಹೆಚ್ಚಳಕ್ಕೆ ಸೂಚಿಸಲಾಗಿದೆ. ತಮಿಳುನಾಡು ಹಾಗೂ ಜಾರ್ಖಂಡ್ ಮಾದರಿಯಲ್ಲಿ ಮೀಸಲು ಹೆಚ್ಚಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಹೀಗಾಗಿ ಸರ್ಕಾರ ಈ ವಿಚಾರದಲ್ಲಿ ಯಾವ ನಿರ್ಣಯ ತೆಗೆದುಕೊಳ್ಳುತ್ತದೆ ಎಂಬ ಕುತೂಹಲ ಸೃಷ್ಟಿಯಾಗಿದೆ.
- ಒಳಮೀಸಲು, ಕೆನೆಪದರದ ಬಗ್ಗೆ ಪ್ರಸ್ತಾಪ,
- ಬಡ್ತಿ ಹಾಗೂ ಖಾಸಗಿ ಕ್ಷೇತ್ರದಲ್ಲಿನ ಮೀಸಲು ಹೆಚ್ಚಳಕ್ಕೂ ಸಲಹೆ,
- ಮೀಸಲು ವಂಚಿತ ವರ್ಗಕ್ಕೆ ಅವಕಾಶ ನೀಡುವುದಕ್ಕೆ ಶಿಫಾರಸ್ಸು,
- ಹಿಂದುಳಿದ ವರ್ಗದ ಮೀಸಲು ಕಡಿತವಿಲ್ಲ,

5. ಕೋವಿಡ್ ನಿಯಂತ್ರಿಸಲು 6 ದೇಶೀಯ ಉತ್ಪನ್ನಗಳ ಅಭಿವೃದ್ಧಿ:

- ಕೋವಿಡ್–19 ಸೋಂಕು ನಿಯಂತ್ರಣಕ್ಕೆ ಬಳಸುತ್ತಿದ್ದ ಆರು ಪ್ರಮುಖ ಆಮದು ಉತ್ಪನ್ನಗಳನ್ನು ಇದೀಗ ದೇಶೀಯವಾಗಿಯೇ ಬೆಂಗಳೂರಿನ ವಿಜ್ಞಾನಿಗಳು ಮತ್ತು ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.
- ರಾಜ್ಯದ ಐಟಿ–ಬಿಟಿ ಇಲಾಖೆಯ ಬೆಂಗಳೂರು ಬಯೋ ಇನ್ನೋವೇಷನ್ ಕೇಂದ್ರದಡಿ ಸಂಶೋಧನೆಯಲ್ಲಿ ನಿರತವಾಗಿರುವ ವಿವಿಧ ಸ್ಟಾರ್ಟ್‌ಅಪ್‌ಗಳು ಈ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿವೆ. ಹೀಗಾಗಿ ಬಹುತೇಕ ವಿದೇಶಿ ಅವಲಂಬನೆ ಕಡಿಮೆಯಾಗುವ ಸಾಧ್ಯತೆಗಳಿವೆ.

ಶೀಲೆಡೆಕ್ಸ್24 :

- ವೈರಸ್ ನಿರ್ಮೂಲನೆ ಮಾಡುವ ಸಾಧನವಿದು. ಇದು ಮೈಕ್ರೋವೇವ್ ಬಾಕ್ಸ್ ರೀತಿಯಲ್ಲಿ ವಿವಿಧ ಗಾತ್ರಗಳಲ್ಲಿ ಇರುತ್ತದೆ. ಇದರಲ್ಲಿ ಅಲ್ಟ್ರಾವೈಲೆಟ್ ರೇಸ್ ಇರುತ್ತದೆ. ಈ ರೇಸ್ ಬಿದ್ದಾಗ ವೈರಸ್ 15 ಸೆಕೆಂಡುಗಳಲ್ಲಿ ಸಾಯುತ್ತದೆ. ನಮಗೆ ಯಾವುದೇ ವಸ್ತುವಿನ ಉದಾ ಪರ್ಸ್, ಮೊಬೈಲ್, ಪೆನ್ನು ಮೇಲೆ ವೈರಸ್ ಇದೆ ಎಂಬ ಅನುಮಾನವಿದ್ದರೆ ಈ ಬಾಕ್ಸ್‌ನಲ್ಲಿ ಆ ವಸ್ತುವನ್ನು ಹಾಕಿದರೆ ವೈರಸ್ ನಾಶವಾಗುತ್ತದೆ. ಇದನ್ನು ಬಯೋ ಫೀ ಕಂಪನಿಯ ರವಿಕುಮಾರ್ ಸಂಶೋಧಿಸಿದ್ದಾರೆ.

ಆಂಟಿ ಮೈಕ್ರೋಬಿಯೇಲ್ ಫೇಸ್ ವಾಷ್ :

- ಮುಖದ ಮೇಲೆ ಕೂರುವ ಕೋವಿಡ್ ವೈರಸ್ ಜತೆಗೆ ಬೇರೆ ಯಾವುದೇ ವೈರಾಣುವನ್ನು ಸೆಕೆಂಡುಗಳಲ್ಲಿ ನಾಶ ಮಾಡುವ ಫೇಸ್ ವಾಷ್ ಇದಾಗಿದೆ. ಇದನ್ನು ಗಿಡಮೂಲಿಕೆಗಳಿಂದ ತಯಾರಿಸಲಾಗಿದೆ. ಇದನ್ನು ಆಟ್ರಿಮ್ಡ್ ಕಂಪನಿಯ ಡಾ. ಲತಾ ಡ್ಯಾಮಲ್ ಸಂಶೋಧಿಸಿದ್ದಾರೆ.

ಫ್ಲೋರೋಸೆನ್ಸ್ ಪ್ರೋಬ್ :

- ಇದು ಕೋವಿಡ್ ಪತ್ತೆಯ ಕಿಟ್‌ನಲ್ಲಿ ಇರಬಹುದಾದ ಪ್ರಮುಖ ಅಂಗ. ಆರ್.ಟಿ.ಪಿ.ಸಿ.ಆರ್ ಪರೀಕ್ಷೆಯಲ್ಲಿ ಬಳಸಲಾಗುತ್ತದೆ. ಕೋವಿಡ್ ಕಿಟ್ ತಯಾರಿಸುವ ಕಂಪನಿಗಳಿಗೆ ಈ ಸಂಶೋಧನೆ ವರದಾನವಾಗಿದೆ. ಇದನ್ನು ವಿ.ಎನ್.ಐ.ಆರ್. ಸಂಸ್ಥೆಯ ಡಾ.ಗೋವಿಂದರಾಜು ಮತ್ತು ಡಾ. ಮೆಹರ್ ಪ್ರಕಾಶ್ ಅಭಿವೃದ್ಧಿಪಡಿಸಿದ್ದಾರೆ.

ಭ್ರೂಣ ನಿಗಾ ಯಂತ್ರ (ಫೀಟೆಲ್ ಮಾನಿಟರಿಂಗ್ ಡಿವೈಸ್) :

- ಕೋವಿಡ್ ಇದ್ದಾಗ ಗರ್ಭಿಣಿಯರು ನೇರವಾಗಿ ವೈದ್ಯರ ಭೇಟಿ ಸಾಧ್ಯವಿಲ್ಲದ ಸಮಯದಲ್ಲಿ ಪಟ್ಟಿಯಾಕಾರಾದ ಈ ಉಪಕರಣದ ಮೂಲಕ ಭ್ರೂಣದ ಹೃದಯ ಬಡಿತವನ್ನೂ ವೈದ್ಯರು ತಿಳಿಯಬಹುದು. ಗರ್ಭಿಣಿಯರು ಹೊಟ್ಟೆ ಮೇಲೆ ಇಟ್ಟುಕೊಂಡಾಗ ಎಲ್ಲ ಮಾಹಿತಿಯೂ ತಿಳಿಯುತ್ತದೆ. ಈ ಯಂತ್ರಕ್ಕೆ 'ದಕ್ಷ್' ಎಂದು ಹೆಸರಿಸಲಾಗಿದೆ ಜೆನಿತ್ರೀ ಕಂಪನಿಯ ಡಾ. ಅರುಣ್ ಅಗರವಾಲ್ ಸಂಶೋಧಿಸಿದ್ದಾರೆ.

ವಿಟಿಎಂ (ವೈರಲ್ ಟ್ರಾನ್ಸ್ ಪೋರ್ಟ್ ಮೀಡಿಯಾ)

- 'ಡೇಕೊಂತೋ' ಎಂಬ ಹೆಸರಿನ ಈ ಉತ್ಪನ್ನವನ್ನು ಡಿನೋವೋ ಬಯೋಲ್ಯಾಬ್‌ನ ಐ.ಬಿ.ಎ.ಬಿ.ಯ ಮಂಜುನಾಥ್ ಹಾಗೂ ದಿನೇಶ್ ಸಂಶೋಧಿಸಿ ತಯಾರಿಸಿದ್ದಾರೆ. ಸೋಂಕಿತರಿಂದ ಗಂಟಲು ದ್ರವ ಮತ್ತಿತರೆ ಸ್ಯಾಂಪಲ್ ಗಳನ್ನು ಪಡೆದು ಟೆಸ್ಟಿಂಗ್ ಲ್ಯಾಬ್‌ಗೆ ಕಳುಹಿಸುವ ಪ್ರಕ್ರಿಯೆಯಲ್ಲಿ ಇದು ಅಗತ್ಯ. ಇದು ಜೀವಂತ ವೈರಸ್ ಅನ್ನು ಸಾಗಿಸುತ್ತದೆ.

ಸೋಂಕು ಪರೀಕ್ಷೆಗೆ ಕೋವ್ ಅಸ್ತ್ರ:

- ಸದ್ಯ ಗಂಟಲು ದ್ರವ ಪರೀಕ್ಷೆ ಮೂಲಕ ಸೋಂಕು ಪತ್ತೆ ಮಾಡಲಾಗುತ್ತಿದೆ. ಈಗ ಕೋವ್ ಅಸ್ತದ ಮೂಲಕ ರೋಗಿಯ ಎದೆಯ ಭಾಗದ ಎಕ್ಸ್‌ರೇ ತೆಗೆದು ವೈರಸ್ ಪತ್ತೆ ಮಾಡಬಹುದಾಗಿದೆ. ಸುಮಾರು 4 ರಿಂದ 5 ಸಾವಿರ ರೂ. ವೆಚ್ಚ ಕಡಿಮೆಮಾಡಿ ಕೇವಲ 150 ರಿಂದ 200 ರೂ. ಎಕ್ಸ್‌ಯಿಂದ ಸೋಂಕೂ ಪತ್ತೆ ಮಾಡಬಹುದು. ಇದನ್ನು ಅಯಿಂದ್ರ ಕಂಪನಿಯ ಆದರ್ಶ್ ನಟರಾಜನ್ ಸಂಶೋಧಿಸಿದ್ದಾರೆ.

6. ಪ್ರೌಢಶಾಲಾ 'ಸೇತುಬಂಧ' ಚಂದನ ವಾಹಿನಿಯಲ್ಲಿ ಪ್ರಸಾರ ಮಾಡಲಾಗುವುದು:

- ಕೊರೋನಾ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 8, 9 ಮತ್ತು 10ನೇ ತರಗತಿಗಳಿಗಾಗಿ 'ಸೇತುಬಂಧ' (ಬ್ರಿಡ್ಜ್ ಕೋರ್ಸ್) ಕಾರ್ಯಕ್ರಮಗಳ ವಿಡಿಯೊ ತರಗತಿಗಳನ್ನು ದೂರದರ್ಶನ ಚಂದನವಾಹಿನಿಯಲ್ಲಿ ಶೀಘ್ರ ಪ್ರಸಾರ ಮಾಡಲಾಗುವುದು.

7. ಮನೆ ಆರೈಕೆಗೆ ಟೆಲಿ ಕನ್ಸಲ್ಟೇಷನ್ ನೆರವು:

- ರಾಜ್ಯ ಸರ್ಕಾರವು ಲಕ್ಷಣ ರಹಿತ ಕೊರೋನ ರೋಗಿಗಳಿಗೆ ಮನೆ ಆರೈಕೆ ಕ್ರಮ ಜಾರಿಗೊಳಿಸಿದ ಬಳಿಕ ಖಾಸಗಿ ಆಸ್ಪತ್ರೆಗಳು ವಿಡಿಯೋ ಮೂಲಕ ಮಾರ್ಗದರ್ಶನ ಮಾಡುವ ಮತ್ತು ಕಿಟ್ ಕಳುಹಿಸುವ ಪ್ಯಾಕೇಜ್‌ಗಳನ್ನು ಪರಿಚಯಿಸಿವೆ.
- ಮನೆ ಆರೈಕೆ ಕ್ರಮದಲ್ಲಿ ಲಕ್ಷಣರಹಿತ ರೋಗಿಗಳು ಮನೆಯಲ್ಲೇ ಪ್ರತ್ಯೇಕವಾಗಿ ವಾಸವಿದ್ದು, ಆರೈಕೆ ಮಾಡಿಕೊಳ್ಳಬಹುದು. ಇಂತಹವರಿಗೆ ಪ್ರತಿ ದಿನ ಆರೋಗ್ಯ ಸಲಹೆ ನೀಡಲು ಮತ್ತು ಆರೋಗ್ಯದ ಮೇಲೆ ನಿಗಾ ಇರಿಸಲು ಖಾಸಗಿ ಆಸ್ಪತ್ರೆಗಳು ನೆರವಾಗಲಿವೆ.

8. ಕರಕುಶಲ ವಸ್ತು ಅಭಿವೃದ್ಧಿಗೆ ಫ್ಲಿಪ್‌ಕಾರ್ಟ್ ರಾಜ್ಯ ಸರ್ಕಾರದ ಜೊತೆ ಒಪ್ಪಂದ:

- ಸ್ಥಳೀಯ ಕರಕುಶಲ ವಸ್ತು, ಕಲೆ, ಕೈಮಗ್ಗದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಕರ್ನಾಟಕ ಸರ್ಕಾರದ ಜತೆಗೆ

ಇ–ಕಾಮರ್ಸ್ ದಿಗ್ಗಜ ಫ್ಲಿಪ್‌ಕಾರ್ಟ್ ಒಪ್ಪಂದ ಮಾಡಿಕೊಂಡಿದೆ.

- ಮೇಕ್ ಇನ್ ಇಂಡಿಯಾಗೆ ಇದು ಉತ್ತೇಜನ ನೀಡಲಿದೆ. ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ಕಾವೇರಿ, ಪ್ರಿಯದರ್ಶಿನಿ ಹ್ಯಾಂಡ್ ಲೂಮ್ಸ್ ಬ್ರ್ಯಾಂಡ್‌ಗಳು ಫ್ಲಿಪ್‌ಕಾರ್ಟ್‌ನ ಸಮರ್ಥ ಕಾರ್ಯಕ್ರಮದ ಜತೆ ಕೈಜೋಡಿಸಲಿವೆ.
- ಇದರಿಂದ ಕರ್ನಾಟಕದ ಸ್ಥಳೀಯ ಉತ್ಪನ್ನಗಳಿಗೆ ರಾಷ್ಟ್ರೀಯ ಮಟ್ಟದ ಮಾರುಕಟ್ಟೆ ಸಿಗುವ ನಿರೀಕ್ಷೆ ಇದೆ.

KAS,FDA,SDA,PSI-
KPSC Technical and Non Technical
ಜ್ಞಾನಗಂಗೋತ್ರಿಯಲ್ಲಿ ಆನ್‌ಲೈನ್ ತರಗತಿಗಳು
ತರಗತಿಗಳಿಗಾಗಿ JG's Online Classes ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ
ಹೆಚ್ಚಿನ ವಿವರಗಳಿಗಾಗಿ– www.iasjnana.com ಗೆ ಭೇಟಿ ನೀಡಿ
ಮೇಲಿನ ಎಲ್ಲಾ ಪರೀಕ್ಷೆಗಳಿಗೆ ಪರೀಕ್ಷಾ ಸರಣಿ
ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಪ್ರಾರಂಭಿಸಲಾಗಿದೆ
ಹೊಸ ಮಾದರಿಯೊಂದಿಗೆ ಪಿಎಸ್‌ಐ ಟೆಸ್ಟ್ ಸರಣಿ ಪ್ರಾರಂಭವಾಗಿದೆ
Contact- Jnanagangothri Academy,
Vijayanagar, B'lure
99163-99276; 080-41547999

9. ಉದ್ಯೋಗ ಅವಕಾಶ 'ಅಸೀಮ್' ಅಂತರ್ಜಾಲ ತಾಣಕ್ಕೆ ಚಾಲನೆ :

- ಪರಿಣತ ಉದ್ಯೋಗಿಗಳ ಬೇಡಿಕೆ, ಪೂರೈಕೆ ಅಂತರ ತಗ್ಗಿಸಲು ಮತ್ತು ಉದ್ಯೋಗ ಮಾರುಕಟ್ಟೆಯ ಮಾಹಿತಿ ಸುಧಾರಿಸುವ ಉದ್ದೇಶಕ್ಕೆ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ (ಎಂ.ಎಸ್.ಡಿ.ಇ) ಸಚಿವಾಲಯವು ಪ್ರತ್ಯೇಕ ಅಂತರ್ಜಾಲ ತಾಣ ಆರಂಭಿಸಿದೆ.
- ಆತ್ಮನಿರ್ಭರ ಸ್ಕಿಲ್ಡ್ ಎಂಪ್ಲಾಯಿ ಎಂಪ್ಲಾಯರ್ ಮ್ಯಾಪಿಂಗ್ (ಅಸೀಮ್) ಹೆಸರಿನ ಈ ಅಂತರ್ಜಾಲ ತಾಣವು ವೃತ್ತಿ ಪರಿಣತರು ಹೊಸ ಜೀವನೋಪಾಯ ಕಂಡುಕೊಳ್ಳಲು ನೆರವಾಗಲಿದೆ.
- ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮವು (ಎನ್.ಎಸ್.ಡಿ.ಸಿ), ಬೆಂಗಳೂರಿನ ಬೆಟರ್‌ಪ್ಲೇಸ್ ಕಂಪನಿಯ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಈ ಸೌಲಭ್ಯವು ಮೊಬೈಲ್ ಆ್ಯಪ್‌ನಲ್ಲಿಯೂ ದೊರೆಯಲಿದೆ.
- ಕೋವಿಡ್ ದಿಗ್ಬಂಧನ ನಂತರದ ದಿನಗಳಲ್ಲಿ ಲಭ್ಯ ಇರುವ ಹೊಸ ಉದ್ಯೋಗ ಅವಕಾಶಗಳ ಬಗ್ಗೆ ಮತ್ತು ಪ್ರಸ್ತುತವಾಗುವ ವೃತ್ತಿ ಕೌಶಲ್ಯಗಳ ಬಗ್ಗೆ ಈ ತಾಣದಲ್ಲಿ ಅಗತ್ಯ ವಿವರಗಳು ದೊರೆಯಲಿವೆ.
- ವ್ಯಾಪಕವಾಗಿ ಬದಲಾಗುತ್ತಿರುವ ಕೆಲಸದ ಸ್ವರೂಪಕ್ಕೆ ತಕ್ಕಂತೆ ಉದ್ಯೋಗ ಆಕಾಂಕ್ಷಿಗಳು ತಮ್ಮ ವೃತ್ತಿ ಕೌಶಲ್ಯ ಪುನರ್‌ರೂಪಿಸಿಕೊಳ್ಳುವ ಅಗತ್ಯ ಇದೆ. ಉದ್ಯೋಗ ಮಾರುಕಟ್ಟೆಯಲ್ಲಿ ಲಭ್ಯ ಇರುವ ಕುಶಲ ಉದ್ಯೋಗಿಗಳಿಗೆ ಅನುಗುಣವಾಗಿ ತಮ್ಮ ನೇಮಕಾತಿ ಯೋಜನೆ ಹಾಕಿಕೊಳ್ಳಲು ಈ ತಾಣವು ಉದ್ಯೋಗದಾತರಿಗೂ ನೆರವಾಗಲಿದೆ.
- ಕೇಂದ್ರ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಡಾ. ಮಹೇಂದ್ರನಾಥ ಪಾಂಡೆ ಅವರು 'ಅಸೀಮ್' ಅಂತರ್ಜಾಲ ತಾಣಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು.

10. ಹಿರಿಯ ಸಾಹಿತಿ 'ಕೃಷ್ಣ ಸುರಪುರ'ರವರು ನಿಧನರಾಗಿದ್ದಾರೆ:

- ಹಿರಿಯ ಸಾಹಿತಿ ಎ. ಕೃಷ್ಣ ಸುರಪುರ (80) ನಿಧನರಾದರು.
- 'ಎದೆಗಡಲ ಮುತ್ತುಗಳು', 'ಕರುಣ ಕಿರೀಟ', 'ಗೀತಾಂಜಲಿ', 'ಅಣು ಪುರಾಣ' ಸೇರಿದಂತೆ ಹಲವು ಗ್ರಂಥಗಳನ್ನು ರಚಿಸಿದ್ದಾರೆ.
- ಯಾದಗಿರಿ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.
- ಶಿಕ್ಷಕರಾಗಿದ್ದ ಕೃಷ್ಣ ಇವರು ಚಂಪೂ ಕಾವ್ಯದಿಂದ ನವ್ಯ ಶೈಲಿಯವರೆಗೆ ಸಾಹಿತ್ಯ ರಚಿಸಿದ್ದರು.

11. ಮಸಾಲೆ ಪದಾರ್ಥಗಳನ್ನು ಅಂಚೆ ಮೂಲಕ ಮನೆಗಳಿಗೆ ಕಳುಹಿಸಿಕೊಡುವ ಹೊಸ ಯೋಜನೆ:

- ಕೊರೋನಾ ಕಾಲದಲ್ಲಿ ಕಷಾಯ ತಯಾರಿಸುವ ಮಸಾಲೆ ಪದಾರ್ಥಗಳಿಗೆ ಹೆಚ್ಚಿನ ಬೇಡಿಕೆ ಬಂದಿದೆ. ಹೀಗಾಗಿ, ಮಸಾಲೆ ಪದಾರ್ಥಗಳನ್ನು ಅಂಚೆ ಮೂಲಕ ಮನೆಗಳಿಗೆ ಕಳುಹಿಸಿಕೊಡಿಸುವ ಹೊಸ ಯೋಜನೆಯನ್ನು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ರೂಪಿಸಿದೆ.
- ಅಂಚೆ ಇಲಾಖೆ ಸಹಯೋಗದೊಂದಿಗೆ ಗ್ರಾಹಕರಿಗೆ ಮಾವಿನಹಣ್ಣು ತಲುಪಿಸುವ ಯೋಜನೆ ಯಶಸ್ವಿಯಾದ ಬೆನ್ನಲ್ಲೇ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಈ ಯೋಜನೆ ರೂಪಿಸಿದೆ.
- ಯೋಜನೆ ಶೀಘ್ರದಲ್ಲೇ ಅದು ಜಾರಿಗೆ ಬರಲಿದೆ. ಬೆಂಗಳೂರು ವ್ಯಾಪ್ತಿಯಲ್ಲಿನ ಗ್ರಾಹಕರಿಗೆ ಮಾತ್ರ ಈ ಸೇವೆ ಲಭ್ಯವಿರುತ್ತದೆ.
- ಕಿಟ್‌ನಲ್ಲಿ ಒಣಶುಂಠಿ, ಜವಾರಿ ಬೆಳ್ಳುಳ್ಳಿ (ನಾಟಿ), ಅರಿಶಿಣ, ಜೀರಿಗೆ, ಮೆಣಸು, ಚಕ್ಕೆ, ಲವಂಗ ತಲಾ ಕಾಲು ಕೆ.ಜಿ. ಇರುತ್ತವೆ. ಇದರ ಜತೆಗೆ 1.2 ಕೆ.ಜಿ.ಯಷ್ಟು ಬೆಲ್ಲದ ಪುಡಿಯಿರುತ್ತದೆ. ಎಲ್ಲವೂ ಸೇರಿ 3 ಕೆ.ಜಿ. ತೂಕದ ಮಸಾಲೆ ಪದಾರ್ಥಗಳ ಕಿಟ್ ಇದಾಗಿದೆ. 600 ರೂ. ದರ ನಿಗದಿಪಡಿಸಲಾಗಿದೆ. ಇದಕ್ಕೆ ಅಂಚೆ ಶುಲ್ಕ ಪ್ರತ್ಯೇಕವಾಗಿರುತ್ತದೆ.

12. ತಿರುಮಲದಲ್ಲಿ ಸೌಲಭ್ಯ ಕಲ್ಪಿಸಲು 200 ಕೋಟಿ ರೂ. ಯೋಜನೆಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ:

- ಆಂಧ್ರಪ್ರದೇಶದ ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರದ ಆವರಣದಲ್ಲಿ ನೂತನ ಅತಿಥಿ ಗೃಹ ನಿರ್ಮಾಣದ 200 ಕೋಟಿ ರೂ.ಗಳ ಯೋಜನೆಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.
- ಹಿಂದಿನ ಯೋಜನೆಯ ಕೇವಲ 70 ಕೊಠಡಿಗಳ ಬದಲಿಗೆ ಹೊಸ ಯೋಜನೆಯಲ್ಲಿ 305 ಕೊಠಡಿಗಳು, 12 ಡಾಮೆರ್ಂಟ್ರಿಗಳು, 24 ಸೂಟ್‌ಗಳು, 4 ಡಬಲ್ ಸೂಟ್‌ಗಳ ಕೊಠಡಿ, ಒಂದು ಕಲ್ಯಾಣ ಮಂಟಪ ಹಾಗೂ 1005 ಯಾತ್ರಿಕರ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗಿದೆ.
- ತಿರುಮಲದಲ್ಲಿ ರಾಜ್ಯ ಛತ್ರಕ್ಕೆ ಸೇರಿದ 7.05 ಎಕರೆ ಜಾಗದಲ್ಲಿ ಈ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಸಂಬಂಧ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

13. ಶ್ರೀಗಂಧ ಕೃಷಿ ಯೋಜನೆ:

- ಶ್ರೀಗಂಧದ ನಾಡು ಎಂದೇ ಹೆಸರಾದ ಕರ್ನಾಟಕದಲ್ಲಿ ಶ್ರೀಗಂಧ ಬೆಳೆಯಲು ಸರ್ಕಾರವೇ ಶೇ. 75ರಷ್ಟು ಸಹಾಯಧನ ನೀಡುವ ಯೋಜನೆ ಹಿಂದಿನ ವರ್ಷವೇ ಘೋಷಣೆ ಆಗಿದ್ದರೂ ಅನುದಾನ ಮತ್ತು ಮಾರ್ಗಸೂಚಿಯಿಲ್ಲದೆ ಜಾರಿಯಾಗಿಲ್ಲ.
- 'ನ್ಯಾಷನಲ್ ಆಯುಷ್ ಮಿಷನ್ ಯೋಜನೆ'ಯಡಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ಕಳೆದ ವರ್ಷ ಘೋಷಣೆ ಮಾಡಿತ್ತು.

ಹೆಕ್ಟೇರ್‌ಗೆ 64,762 ರೂ. ಸಬ್ಸಿಡಿ:

- ಯೋಜನೆ ಪ್ರಕಾರ ಒಂದು ಹೆಕ್ಟೇರ್ ಶ್ರೀಗಂಧ ಬೆಳೆಯಲು 86,350 ರೂ. ಮತ್ತು ಎಕರೆಗೆ 34,500 ರೂ. ವೆಚ್ಚ ಆಗುತ್ತದೆ. ಶೇ.75 ಸಬ್ಸಿಡಿಯಂತೆ ಹೆಕ್ಟೇರ್‌ಗೆ 64,762 ರೂ. ಹಾಗೂ ಎಕರೆಗೆ 25,905 ರೂ. ಸಬ್ಸಿಡಿ ನೆರವು ಸಿಗುವುದು.
- ಕೇವಲ ಶ್ರೀಗಂಧ ಅಷ್ಟೇ ಅಲ್ಲ ಶತಾವರಿ, ರಕ್ತಚಂದನ, ಆನೆಮುಂಗು, ಗುಗ್ಗುಳ, ಆಗಾರ್ವುಡ್, ದರುಅಲ್ದಿ, ಇಂಗು ಸೇರಿದಂತೆ ಸುಮಾರು 93 ಔಷಧ ಸಸ್ಯಗಳನ್ನು ಬೆಳೆದರೆ ಶೇ. 75ರಷ್ಟು ಸಬ್ಸಿಡಿ ನೀಡುವ ಯೋಜನೆ ಇದಾಗಿದೆ.

14. ರಾಜ್ಯ ಮುಕ್ತ ವಿ.ವಿ. ಈಗ ಹೈಟೆಕ್:

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಈಗ ಸಂಪೂರ್ಣವಾಗಿ ಡಿಜಿಟಲೀಕರಣಗೊಂಡಿದ್ದು, ಎಲ್ಲವೂ ಆನ್‌ಲೈನ್‌ಗೆ ಒಳಪಟ್ಟಿರುವ ಏಕೈಕ ವಿ.ವಿ. ಎಂಬ ಹೆಗ್ಗಳಿಕೆ ಪಡೆದುಕೊಳ್ಳುತ್ತಿದೆ.
- ಕೊರೋನಾ ಸಂಕಷ್ಟದ ದಿನಗಳಲ್ಲಿ ಆನ್‌ಲೈನ್ ಶಿಕ್ಷಣದ ಕುರಿತು ಚರ್ಚೆಗಳು ನಡೆಯುತ್ತಿರುವಂತೆ ಕರ್ನಾಟಕ ರಾಜ್ಯ ಮುಕ್ತ ವಿ.ವಿ. ಮತ್ತೊಂದು ಹೆಜ್ಜೆ ಮುಂದೆ ಹೋಗಿದೆ. ಕೊರೋನಾ ಲಾಕ್‌ಡೌನ್ ವೇಳೆ ಹೊಸತನಕ್ಕೆ ಹೊರಳಲು ಎಲ್ಲಾ ಸಿದ್ಧತೆ ಮಾಡಿಕೊಂಡಿತ್ತು. ಇದೀಗ ಪೂರ್ಣಗೊಳ್ಳುವ ಹಂತ ತಲುಪಿದ್ದು ಇನ್ನು ಮುಂದೆ ವಿದ್ಯಾರ್ಥಿಗಳು ಕುಳಿತಲ್ಲಿಯೇ ಎಲ್ಲಾ ರೀತಿಯ ಸೌಲಭ್ಯ ಪಡೆಯಬಹುದು.
- ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗೆ ಪರೀಕ್ಷಾ ಕೇಂದ್ರಗಳಿಗೆ ತೆರಳುವುದು ಬಿಟ್ಟರೆ ಎಲ್ಲಾ ಶೈಕ್ಷಣಿಕ ಚಟುವಟಿಕೆ ಆನ್‌ಲೈನ್ ನಲ್ಲಿಯೇ ಮಾಡಬಹುದು.
- ಆಗಸ್ಟ್ 1 ರಿಂದ ನೂತನ ಸೌಲಭ್ಯ ಸಿಗಲಿದೆ. ಅಂಕಪಟ್ಟಿ ಮನೆಗೆ ಬರಲಿದೆ.
- ಅಂಕಪಟ್ಟಿ ಸೇರಿದಂತೆ ಯಾವುದೇ ವರ್ಷದ ಹಳೆಯ ದಾಖಲೆಗಳನ್ನು ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದರೆ ವಿ.ವಿ. ಯಲ್ಲಿ ಪರಿಶೀಲಿಸಿ ಸ್ಕ್ಯಾನ್ ಕಾಪಿಯನ್ನು ಮೇಲ್‌ಗೆ ಕಳುಹಿಸಲಿದೆ. ಮೂಲ ಪ್ರತಿಯನ್ನು ಅಂಚೆ ಮೂಲಕ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ.

15. ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ಅರ್ಜಿಗೆ ಪಿ.ಎಂ. ಸ್ವ–ನಿಧಿ ಆ್ಯಪ್:

- ಬೀದಿಬದಿ ವ್ಯಾಪಾರಿಗಳಿಗೆ ಸಾಲ ಒದಗಿಸುವ ಕೇಂದ್ರದ ಆತ್ಮನಿರ್ಭರ ನಿಧಿ ಯೋಜನೆಯಡಿ ಅರ್ಜಿ ಸಲ್ಲಿಸಲು 'ಪಿಎಂ ಸ್ವನಿಧಿ' ಎನ್ನುವ ಮೊಬೈಲ್ ಆ್ಯಪ್ ಬಿಡುಗಡೆಯಾಗಿದೆ
- ಈಗಾಗಲೇ 1,54,000 ಅರ್ಜಿದಾರರ ಪೈಕಿ 48 ಸಾವಿರ ಮಂದಿಗೆ ಸಾಲ ಮಂಜೂರಾಗಿದೆ. ಶೇ. 7ರ ಬಡ್ಡಿದರದಲ್ಲಿ ಗರಿಷ್ಠ 10 ಸಾವಿರ ರೂ. ಸಾಲ ನಿಗದಿತ ಬ್ಯಾಂಕ್‌ಗಳ ಮೂಲಕ ಸಿಗಲಿದ್ದು, 2020ರ ಮಾರ್ಚ್ 24 ಕ್ಕಿಂತ ಮೊದಲು ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ನೋಂದಾಯಿತ ಬೀದಿ ವ್ಯಾಪಾರಸ್ಥರಿಗೆ ಸಾಲ ನೆರವು ಸೌಲಭ್ಯ ಸಿಗಲಿದೆ. 24 ಮಾರ್ಚ್ 2020 ರ ನಂತರ ಬೀದಿ ವ್ಯಾಪಾರ ಆರಂಭ

ಮಾಡಿದವರಿಗೆ ಸ್ಥಳೀಯ ಆಡಳಿತ ಮತ್ತು ಗ್ರಾಮೀಣ ಪ್ರದೇಶ ಅಥವಾ ಪಟ್ಟಣಗಳಲ್ಲಿ ಇರುವವರಿಗೆ ಗ್ರಾಮ ಮತ್ತು ಪಟ್ಟಣ ವ್ಯಾಪಾರ ಸಂಘದಿಂದ ನೀಡಲಾಗುವ ಶಿಫಾರಸ್ಸು ಪತ್ರದ ಆಧಾರದಲ್ಲಿ ಸಾಲ ಮಂಜೂರು ಆಗುವುದು.

- 50 ಲಕ್ಷ ಮಂದಿಗೆ ಸಾಲ ಒದಗಿಸಲು 5 ಸಾವಿರ ಕೋಟಿ ರೂ. ಬಜೆಟ್ ನಿಗದಿಯಾಗಿದ್ದು ಪ್ರತಿ ತಿಂಗಳ ಕಂತನ್ನು ಒಂದು ವರ್ಷದೊಳಗೆ ಪಾವತಿಸಬೇಕು. 2022ರ ಮಾರ್ಚ್ 31 ರ ತನಕ ಯೋಜನೆ ಅಸ್ತಿತ್ವದಲ್ಲಿ ಇರಲಿದ್ದು, ನಿಗದಿತ ಅವಧಿಯೊಳಗೆ ಸಾಲ ಚುಕ್ತಾ ಮಾಡಿದರೆ, ಪಾವತಿಸಿದ ಶೇ. 7ರ ಬಡ್ಡಿ ಸಹಾಯಧನದ ರೂಪದಲ್ಲಿ ಖಾತೆಗೆ ಜಮೆಯಾಗಲಿದೆ.
- ಕ್ಲುಪ್ತವಾಗಿ ಸಾಲ ತೀರಿಸಿ ಮತ್ತೆ 20 ಸಾವಿರ ರೂ. ಸಾಲ ಪಡೆಯುವ ಅವಕಾಶವೂ ಇದೆ. ಸಾಲದ ಕಂತಿನ ಡಿಜಿಟಲ್ ಪಾವತಿಗೆ ಪ್ರತಿ ತಿಂಗಳು 100 ರೂ. ಪ್ರೋತ್ಸಾಹಧನ ಖಾತೆಗೆ ವರ್ಗಾವಣೆಯಾಗಲಿದೆ. ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ನೋಂದಾಯಿತ ಬೀದಿ ಬದಿ ವ್ಯಾಪಾರಿಗಳು ತಮ್ಮ ಮೊಬೈಲ್ ಸಂಖ್ಯೆಯನ್ನು ಆಧಾರ್ ಲಿಂಕ್ ಮಾಡಿರಬೇಕು.
- ಸೀಮಿತ ಅವಧಿಯೊಳಗೆ ಯಾವುದೇ ಗ್ಯಾರಂಟಿ, ಜಾಮೀನು, ಅಡಮಾನದ ಅಗತ್ಯವಿಲ್ಲದೆ ಸಾಲದ ಮೊತ್ತವನ್ನು ಸರಳ ದಾಖಲೆ ಅಪ್‌ಲೋಡ್ ಮಾಡಿ ಪಡೆಯಬಹುದು.

16. ಕರ್ನಾಟಕದ ಪ್ರಥಮ ಪ್ಲಾಸ್ಮಾ ಬ್ಯಾಂಕ್‌ಗೆ ಚಾಲನೆ:
ಮುಖ್ಯಾಂಶಗಳು:

- ಪ್ಲಾಸ್ಮಾ ದಾನ ಮಾಡಲು ಕೋವಿಡ್ ಜಯಿಸಿದವರಿಗೆ ಮನವಿ
- ಕೋವಿಡ್ ಜಯಿಸಿದವರಿಂದ ಪ್ಲಾಸ್ಮಾ ಸಂಗ್ರಹ ಮತ್ತು ರಕ್ತನಿಧಿ ಮಾದರಿಯಲ್ಲಿ ರೋಗಿಗಳಿಗೆ ವಿತರಣೆ.
- ಸರ್ಕಾರದ ಸಹಯೋಗದಲ್ಲಿ ಬೆಂಗಳೂರಿನ ಎಚ್.ಸಿ.ಜಿ. ಆಸ್ಪತ್ರೆಯಲ್ಲಿ ಆರಂಭ
- ಉಪಮುಖ್ಯಮಂತ್ರಿ ಡಾ. ಸಿ.ಎನ್.ಅಶ್ವತ್ಥ ನಾರಾಯಣ, ಪ್ಲಾಸ್ಮಾಬ್ಯಾಂಕ್ ಉದ್ಘಾಟಿಸಿದರು.
- ಪ್ಲಾಸ್ಮಾ ದಾನಿಗಳಿಗೆ ಸರ್ಕಾರದಿಂದ 5 ಸಾವಿರ ರೂ ಗೌರವಧನ ನೀಡಲಾಗುವುದು.
- ಸಹಾಯವಾಣಿ ಸಂಖ್ಯೆ: (080) 61914960

17. ಬೆಂಗಳೂರಿಗೆ ಬಂತು ಜೂಮ್ ಸೆಂಟರ್:

- ಅಮೆರಿಕ ಮೂಲದ ಜೂಮ್ ವಿಡಿಯೊ ಕಮ್ಯುನಿಕೇಶನ್ಸ್ ಬೆಂಗಳೂರಿನಲ್ಲಿ ತನ್ನ ನೂತನ ತಂತ್ರಜ್ಞಾನ ಕೇಂದ್ರವನ್ನು ತೆರೆಯಲಿದೆ.
- ವೀಡಿಯೊ ಟೆಲಿಫೋನಿ, ಟೆಲಿಕಾನ್ಫರೆನ್ಸ್ ಆಪ್, ಆನ್‌ಲೈನ್ ಚಾಟ್ ಸೇವೆಗೆ ಸಾಫ್ಟ್‌ವೇರ್ ತಂತ್ರಜ್ಞಾನ ನೆರವು ಒದಗಿಸುವ ಪ್ರಮುಖ ಕಂಪನಿಗಳಲ್ಲಿ ಜೂಮ್ ಒಂದಾಗಿದೆ.
- ಕಾರ್ಪೋರೇಟ್ ವಲಯದಲ್ಲಿ ಜೂಮ್ ವೀಡಿಯೊ ಕಾನ್ಫರೆನ್ಸಿಂಗ್ ಆ್ಯಪ್ ಜನಪ್ರಿಯವಾಗಿದೆ. ಕೋವಿಡ್ ಬಿಕ್ಕಟ್ಟಿನ ಸಂದರ್ಭ ವಿಡಿಯೋ ಕಾನ್ಫರೆನ್ಸ್ ಮಾಡಲು ಈ ಆ್ಯಪ್ ಬಳಕೆ ಆಗುತ್ತಿದೆ.
- ಮುಂದಿನ ಕೆಲ ವರ್ಷಗಳಲ್ಲಿ ಪ್ರತಿಭಾವಂತ ಟೆಕ್ಕಿಗಳನ್ನು ನೇಮಕಮಾಡಿಕೊಳ್ಳಲಿದೆ. ಜೂಮ್ ಈಗಾಗಲೇ ಮುಂಬಯಿನಲ್ಲಿ ಕಚೇರಿಯನ್ನು ಹೊಂದಿದೆ. ಮುಂಬಯಿ ಮತ್ತು ಹೈದರಾಬಾದ್‌ನಲ್ಲಿ ಎರಡು ಡೇಟಾ ಸೆಂಟರ್‌ಗಳನ್ನೂ ಸಂಸ್ಥೆ ಹೊಂದಿದೆ.
- ಭಾರತದಲ್ಲಿ ಜೂಮ್ ವಿಡಿಯೋದ ಗ್ರಾಹಕರ ಸಂಖ್ಯೆ ವ್ಯಾಪಕವಾಗಿ ಹೆಚ್ಚುತ್ತಿದ್ದು ಇದಕ್ಕೆ ತಕ್ಕಂತೆ ವಿಸ್ತರಣೆಗೆ ಕಂಪನಿ ಸಜ್ಜಾಗಿದೆ. 2020ರ ಜನವರಿಯಿಂದ ಏಪ್ರಿಲ್ ತನಕ ಕಂಪನಿಗೆ ಫ್ರೀ ಯೂಸರ್ ಸಂಖ್ಯೆಯಲ್ಲಿ 6700% ಏರಿಕೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ.
- ಜೂಮ್ ವಿಶ್ವ ದರ್ಜೆಯ ಏಕೀಕೃತ ಕಮ್ಯುನಿಕೇಷನ್ಸ್ ಸೇವೆಯನ್ನು ಒದಗಿಸುತ್ತಿದ್ದು ಬೆಂಗಳೂರಿನಲ್ಲಿ ಹೊಸ ಕೇಂದ್ರವನ್ನು ತೆರೆಯಲಿದೆ ಎಂದು ಕಂಪನಿಯ ಎಂಜಿನಿಯರಿಂಗ್ ವಿಭಾಗದ ಅಧ್ಯಕ್ಷ ವೆಲ್ಚಾಮೈ ಶಂಕರಲಿಂಗಮ್ ತಿಳಿಸಿದ್ದಾರೆ. ಎಂಜಿನಿಯರ್, ಸೆಕ್ಯುರಿಟಿ, ಬಿಸಿನೆಸ್ ಆಪರೇಷನ್ ವಿಭಾಗಗಳಿಗೆ ನೇಮಕಾತಿಯನ್ನು ತಕ್ಷಣ ಆರಂಭಿಸಲಿದ್ದೇವೆ ಎಂದಿದ್ದಾರೆ.

18. ರಾಜ್ಯ ಸರ್ಕಾರದ ವಿವಿಧ ಅನುಮೋದನೆಗಳು:

- ಇನ್ನು ಮುಂದೆ ನ್ಯಾಯಾಲಯಗಳಲ್ಲಿ ಮುದ್ರಾಂಕ ಶುಲ್ಕ ಮತ್ತು ನ್ಯಾಯಾಲಯ ಶುಲ್ಕಗಳನ್ನು ಆನ್‌ಲೈನ್ (ಇ–ಪೇಮೆಂಟ್) ಮೂಲಕ ಪಾವತಿ ವ್ಯವಸ್ಥೆ ಜಾರಿ ತರುವ ಉದ್ದೇಶದ ತಿದ್ದುಪಡಿ ಸುಗ್ರೀವಾಜ್ಞೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.
- ರಾಜ್ಯದಲ್ಲಿ ಸುಮಾರು 7,000 ನವೋದ್ಯಮಗಳಿವೆ. ಈವರೆಗೆ ಟೆಕ್ನಾಲಜಿ ಮಿಷನ್ ವ್ಯಾಪ್ತಿಯಲ್ಲಿದ್ದವು. ಮೂರರಿಂದ ನಾಲ್ಕು ಏಜೆನ್ಸಿಗಳು ಉಸ್ತುವಾರಿ ಹೊಂದಿದ್ದವು. ಹೊಸದಾಗಿ 'ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್' ಎಂಬ ಸಂಸ್ಥೆ ಮಾಡಿ ನವೋದ್ಯಮಗಳನ್ನು ಅದರ ಅಡಿ ತರಲಾಗುವುದು. ಇದರಲ್ಲಿ ರಾಜ್ಯ ಸರ್ಕಾರ ಶೇ. 49ರಷ್ಟು ಷೇರುಗಳನ್ನು ಮತ್ತು ಸಂಘ ಸಂಸ್ಥೆಗಳು ಶೇ. 51ರಷ್ಟು ಷೇರುಗಳನ್ನು ಹೊಂದಿರಲಿವೆ.
- ಕೆ.ಎಸ್.ಎಫ್.ಸಿ. ಸಾಲದ ಮೇಲಿನ ಬಡ್ಡಿ ದರ ಶೇ. 10 ರಿಂದ ಶೇ. 6ಕ್ಕೆ ಇಳಿಕೆ ಮತ್ತು ಸಂಸ್ಥೆಗೆ 150 ಕೋಟಿ ಸಾಲಕ್ಕೆ ಖಾತರಿ.
- ಪಿಂಚಣಿ, ಸಣ್ಣ ಉಳಿತಾಯ ಇಲಾಖೆ ವಿಲೀನಗೊಳಿಸಿ ಖಜಾನೆ ಆಯುಕ್ತಾಲಯ ಆರಂಭಿಸಲು ತೀರ್ಮಾನ.

- ಡ್ರಗ್ಸ್ ಮತ್ತು ಲಾಜಿಸ್ಟಿಕ್ಸ್ ಸೊಸೈಟಿಯನ್ನು ಪ್ರತ್ಯೇಕ ನಿಗಮ ಮಾಡಲು ಅನುಮೋದನೆ.
- ನಗರ ಪ್ರದೇಶಗಳಲ್ಲಿ ರೈಲು ನಿಲ್ದಾಣಗಳಂತಹ ಪ್ರಮುಖ ಸ್ಥಳಗಳ ಭೂಮಿಯ ಪ್ರೀಮಿಯಂ ಮೊತ್ತ ಹೆಚ್ಚಿಸಲು ನಗರ ಯೋಜನಾ ಕಾಯ್ದೆಗೆ ತಿದ್ದುಪಡಿಗೆ ಒಪ್ಪಿಗೆ.
- ಮಡಿಕೇರಿಯಲ್ಲಿರುವ ಅರಮನೆ ಮತ್ತು ಕೋಟೆಯನ್ನು ನವೀಕರಿಸಿ ಭಾರತೀಯ ಪುರಾತತ್ವ ಇಲಾಖೆಗೆ ಹಸ್ತಾಂತರ.

19. ಕಾರ್ಮಿಕ ಕಾಯ್ದೆಗೆ ನೂತನ ತಿದ್ದುಪಡಿ:

- ಕೈಗಾರಿಕಾ ಸಂಸ್ಥೆಗಳ ಹಿತ ಕಾಯುವ ಉದ್ದೇಶದ ಕೈಗಾರಿಕಾ ವ್ಯಾಜ್ಯ ಸಂಬಂಧದ ಕಾಯ್ದೆ ತಿದ್ದುಪಡಿಯು ಸುಗ್ರೀವಾಜ್ಞೆಗೆ ಸಚಿವ ಸಂಪುಟ ಸಭೆ ಸಮ್ಮತಿ ನೀಡಿದೆ. ಈ ತಿದ್ದುಪಡಿಯಿಂದ ಉದ್ಯಮಗಳಿಗೆ ಸಹಾಯಕವಾಗಲಿದೆ. ಮತ್ತೊಂದೆಡೆ ಕಾರ್ಮಿಕರ ಹಿತರಕ್ಷಣೆಗೆ ಧಕ್ಕೆಯಾಗುವ ಆತಂಕವೂ ಇದೆ. ಈ ತಿದ್ದುಪಡಿಯಿಂದ ಕೈಗಾರಿಕಾ ವ್ಯಾಜ್ಯ ಕಾಯ್ದೆ ಹಾಗೂ ಗುತ್ತಿಗೆ ಕಾರ್ಮಿಕರ ಕಾಯ್ದೆ (ನಿಯಂತ್ರಣ ಹಾಗೂ ನಿರ್ಮೂಲನ) ಸಂಬಂಧದಲ್ಲಿ ವಿಧಿಸಲಾಗುತ್ತಿದ್ದವರನ್ನು ಸಡಿಲವಾಗಲಿದೆ.

ತಿದ್ದುಪಡಿಯೇನು?:

- ಈ ತಿದ್ದುಪಡಿ ಅನುಸಾರ ಕೈಗಾರಿಕಾ ವ್ಯಾಜ್ಯ ಕಾಯ್ದೆಯ ಸೆಕ್ಷನ್ 25 (ಕೆ) ಅನ್ವಯ ಕಾರ್ಮಿಕರ ಮಿತಿಯನ್ನು 100 ರಿಂದ 300ಕ್ಕೆ ಹೆಚ್ಚಿಸಲಾಗಿದೆ. ಈ ಮೊದಲು 100 ಕಾರ್ಮಿಕರನ್ನು ಹೊಂದಿರುವ ಉದ್ಯಮ ಕಂಪನಿಗಳು ಸಂಸ್ಥೆಯನ್ನು ಮುಚ್ಚಲು ಹಾಗೂ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲು ಸರ್ಕಾರದ ಅನುಮತಿ ಪಡೆಯಬೇಕಿತ್ತು. ಆದರೀಗ ಕಾರ್ಮಿಕರ ಮಿತಿ 300ಕ್ಕೆ ಹೆಚ್ಚಿದಂತಾಗಿದೆ.

ಓ.ಟಿ. ಅವಧಿ ಹೆಚ್ಚಳ

- ಫ್ಯಾಕ್ಟರಿ ಕಾಯ್ದೆ 63 (3) (4) ಸೆಕ್ಷನ್ ಗೂ ತಿದ್ದುಪಡಿ ತರಲಾಗಿದೆ. ಅದರಂತೆ 5 ಓವರ್ ಟೈಮ್ (ಓ.ಟಿ.) ಡ್ಯೂಟಿ, ಅವಧಿ ಯಾವುದೇ ತ್ರೈ ಮಾಸಿಕದಲ್ಲಿ 75 ಗಂಟೆಯಿಂದ 125 ಗಂಟೆಗೆ ಹೆಚ್ಚಿಸಬಹುದು.
- ಇದಲ್ಲದೆ ಮಹಿಳಾ ಉದ್ಯೋಗಿಗಳು ರಾತ್ರಿ 7 ಗಂಟೆಯಿಂದ ಬೆಳಗ್ಗೆ 6 ಗಂಟೆಯವರೆಗೆ ಕೆಲಸ ಮಾಡಲು ಅವಕಾಶ ನೀಡಲಾಗುತ್ತಿದೆ.

ಆಕ್ಷೇಪಗಳೇನು?

- ಕಾರ್ಖಾನೆಗಳನ್ನು ಮುಚ್ಚಲು ಸರ್ಕಾರದ ಅನುಮತಿ ಬೇಕಿಲ್ಲದ ಕಾರಣ ಸೇವಾ ಭದ್ರತೆ ಇಲ್ಲದೆ ಸಂಕಷ್ಟದಲ್ಲಿ ಕಾರ್ಮಿಕರು.
- ಕಾರ್ಖಾನೆಗಳನ್ನು ಮುಚ್ಚುವುದರಿಂದ ನಿರುದ್ಯೋಗ ಹೆಚ್ಚಳ. ಕಾರ್ಮಿಕರ ಸುರಕ್ಷತೆ, ಸೇವಾ ಸೌಲಭ್ಯಗಳ ಕುರಿತ ಶಾಸನಾತ್ಮಕ ನಿಯಂತ್ರಣ ಇಲ್ಲದಂತಾಗಲಿದೆ.
- ಶೇ. 64ರಷ್ಟು ಕಾರ್ಖಾನೆಗಳು ಸರ್ಕಾರ ತಪಾಸಣೆಯಿಂದ ಹೊರಗುಳಿಯಲಿವೆ.
- ಗುತ್ತಿಗೆ ಕಾರ್ಮಿಕರ ಶೋಷಣೆಗೆ ಅವಕಾಶ.

20. ಐ.ಐ.ಎಸ್ಸಿ. ನಿರ್ದೇಶಕರಾಗಿ ಪ್ರೊ. ಗೋವಿಂದನ್ ರಂಗರಾಜನ್ ನೇಮಕ:

- ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ನೂತನ ನಿರ್ದೇಶಕರಾಗಿ ಪ್ರೊ. ಗೋವಿಂದನ್ ರಂಗರಾಜನ್ ನೇಮಕಗೊಂಡಿದ್ದಾರೆ. ಹಾಲಿ ನಿರ್ದೇಶಕ ಪ್ರೊ. ಅನುರಾಗ್ ಕುಮಾರ್ ಅವರು ತಮ್ಮ ಸೇವಾವಧಿ ಪೂರ್ಣಗೊಳಿಸಲಿದ್ದಾರೆ.
- ಪ್ರೊ.ರಂಗರಾಜನ್ ಅವರು ಪಿಲಾನಿಯ ಬಿರ್ಲಾ ತಂತ್ರಜ್ಞಾನ ಮತ್ತು ವಿಜ್ಞಾನ ಸಂಸ್ಥೆಯಿಂದ ಇಂಟಿಗ್ರೇಟೆಡ್ ಎಂ.ಎಸ್ಸಿ ಪದವಿ ಪಡೆದಿದ್ದಾರೆ ಮತ್ತು ಮೇರಿಲ್ಯಾಂಡ್ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ.
- 1992ರಲ್ಲಿ ಭಾರತಕ್ಕೆ ಹಿಂದಿರುಗುವ ಮುನ್ನ ಇವರು, ಅಮೆರಿಕದ ಲಾರೆನ್ಸ್ ಬರ್ಕ್ಲಿ ಪ್ರಯೋಗಾಲಯದಲ್ಲಿ ಕಾರ್ಯನಿರ್ವಹಿಸಿದ್ದರು.

21. ಸಾಮೂಹಿಕ ಬೀಜೋತ್ಪಾದನೆಗೆ ಶ್ರೀಕಾರ:

- ಪ್ರತಿ ವರ್ಷ ರೈತ ಗುಣಮಟ್ಟದ ಬೀಜ ಪಡೆಯಲು ಹರಸಾಹಸ ಪಡಬೇಕಿದೆ. ದೇಶದಲ್ಲಿ ನಾನಾ ಕಂಪನಿಗಳು ಪ್ರಮಾಣೀಕೃತ ಬೀಜಗಳನ್ನು ಉತ್ಪಾದಿಸಿ ಪೂರೈಸುತ್ತಿದ್ದರೂ ಶೇ. 60 ರೈತರು ಪ್ರಮಾಣೀಕೃತ ಅಲ್ಲದ ಬೀಜಗಳನ್ನೇ ನಂಬಿಕೊಂಡಿದ್ದಾರೆ. ಹೀಗಾಗಿ ರೈತರೇ ಗುಣಮಟ್ಟದ ಬೀಜೋತ್ಪಾದನೆ ಮಾಡುವ ನಿಟ್ಟಿನಲ್ಲಿ ನವಲಗುಂದದ ಕಲ್ಮೇಶ್ವರ ರೈತ ಉತ್ಪಾದಕ ಸಂಸ್ಥೆ ಅಗತ್ಯ ಪ್ರಕ್ರಿಯೆಗೆ ಚಾಲನೆ ನೀಡಿದೆ.

50 ಎಕರೆಯಲ್ಲಿ ಬೀಜೋತ್ಪಾದನೆ:

- ದಶಕಗಳ ಹಿಂದೆ ಪ್ರತಿಯೊಬ್ಬ ರೈತ ಬೀಜಗಳನ್ನು ತಾನೇ ಉತ್ಪಾದನೆ ಮಾಡಿಕೊಂಡು ಸ್ವಾವಲಂಬಿ ಆಗಿದ್ದ. ಆದರೆ, ಈಗ ಪರಾವಲಂಬಿ ಆಗಿದ್ದಾನೆ. ಇದೇ ಅವಕಾಶ ಬಳಸಿಕೊಂಡ ಕೆಲವರು ಕಳಪೆ ಬೀಜಗಳನ್ನೇ ಸರ್ಟಿಫೈ ಬೀಜವೆಂದು ನಂಬಿಸಿ ರೈತರನ್ನು ವಂಚಿಸುತ್ತಿದ್ದಾರೆ.
- ದೇಶಪಾಂಡೆ ಪ್ರತಿಷ್ಠಾನದ ಪ್ರೋತ್ಸಾಹ ಹಾಗೂ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ ಧಾರವಾಡ ಜಿಲ್ಲೆ ನವಲಗುಂದದ ಕಲ್ಮೇಶ್ವರ ರೈತ ಉತ್ಪಾದಕ ಕಂಪೆನಿ ಧಾರವಾಡ ಕೃಷಿ ವಿವಿ, ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣೀಕೃತ ಸಂಸ್ಥೆ, ನಬಾರ್ಡ್ ಬ್ಯಾಂಕ್ ಸಹಕಾರದೊಂದಿಗೆ ಕಲ್ಮೇಶ್ವರ ರೈತ ಉತ್ಪಾದಕ ಕಂಪೆನಿ ಷೇರುದಾರ ರೈತರು ರಾಜ್ಯದಲ್ಲಿಯೇ ಮೊದಲ ಪ್ರಯೋಗಕ್ಕೆ ಮುಂದಾಗಿದ್ದಾರೆ. ಮೊದಲ ಹಂತವಾಗಿ 50 ಎಕರೆ ಜಮೀನಿನಲ್ಲಿ ಹೆಸರು ಬೀಜೋತ್ಪಾದನೆಗೆ ಅಣಿಯಾಗಿದೆ. ಮೊದಲ ಯತ್ನದಲ್ಲಿ ಸುಮಾರು 200 ಕ್ವಿಂಟಲ್‌ನಷ್ಟು ಹೆಸರು ಬೀಜ ಉತ್ಪಾದನೆ ಗುರಿ ಹೊಂದಲಾಗಿದೆ.

- ಕೃಷಿ ವಿಶ್ವವಿದ್ಯಾಲಯದಿಂದ 'ಡಿಜಿಜಿವಿ–4' ಎಂಬ ಹೆಸರುಬೇಳೆ ತಳಿಯ ಪ್ರಮಾಣಿಕೃತ ತಾಯಿ ಬೀಜ (ಫೌಂಡೇಶನ್ ಸೀಡ್) ವನ್ನು ಖರೀದಿಸಿರುವ ದೇಶಪಾಂಡೆ ಫೌಂಡೇಶನ್ ಕಲ್ಮೇಶ್ವರ ರೈತ ಉತ್ಪಾದಕ ಸಂಸ್ಥೆ ಮೂಲಕ ರೈತರಿಗೆ ಉಚಿತವಾಗಿ ನೀಡಿದೆ.
- ಈಗ 200 ಕ್ವಿಂಟಲ್ ಬೀಜ ಉತ್ಪಾದನೆ ನಿರೀಕ್ಷೆ ಹೊಂದಲಾಗಿದೆ. ಕರ್ನಾಟಕ ಬೀಜ ಪ್ರಮಾಣೀಕರಣ ನಿಗಮದಿಂದ ಸೀಡ್ಸ್ ತಯಾರಿಕೆಗೆ ಅನುಮತಿ ಕೂಡ ದೊರೆತಿದೆ. ಮುಂದಿನ ವರ್ಷದಿಂದ ಕಲ್ಮೇಶ್ವರ ಫಾರ್ಮರ್ ಪ್ರೋಡ್ಯೂಜರ್ ಕಂಪನಿಯ ಹೆಸರು ಬೀಜ ರೈತರಿಗೆ ಲಭ್ಯವಾಗಲಿದೆ. ಕಂಪನಿಯಲ್ಲಿ 55 ಹಳ್ಳಿಗಳ 1034 ರೈತರೇ ಷೇರುದಾರರಿದ್ದಾರೆ. ಅವರ ಮೂಲಕ ಬೀಜ ಉತ್ಪಾದನೆ ಗುರಿ ಹೊಂದಲಾಗಿದೆ.
- ಬಿತ್ತಿದ ಬೀಜದಲ್ಲಿ ಮೊಳಕೆ ಪ್ರಮಾಣ ಕಡಿಮೆ ಇದ್ದರೆ ಅದನ್ನು ಧಾನ್ಯವಾಗಿ ಮಾರಾಟ ಮಾಡಲಾಗುವುದು. ಶೇ. 90ರಷ್ಟು ಮೊಳಕೆ ಒಡೆಯುವ ಸಾಮರ್ಥ್ಯದ ಬೀಜವನ್ನು ಗುಣಮಟ್ಟ ಪರೀಕ್ಷೆ ನಂತರ ಪ್ಯಾಕಿಂಗ್ ಮಾಡಿ ರೈತರಿಗೆ ನೀಡಲಾಗುವುದು. ಹೆಚ್ಚುವರಿ ಬೀಜವನ್ನು ಬೇರೆ ಜಿಲ್ಲೆಗಳಲ್ಲಿ ಮಾರಾಟ ಮಾಡಲಾಗುವುದು.
- ಇಲ್ಲಿ ಬೀಜೋತ್ಪಾದನೆ ಮಾಡಿದ ರೈತನಿಗೂ ಶೇ. 25ರಷ್ಟು ಹೆಚ್ಚು ಲಾಭ ಸಿಗಲಿದೆ.
- ಮುಂದಿನ ದಿನಗಳಲ್ಲಿ ಶೇಂಗಾ, ಉಳ್ಳಾಗಡ್ಡಿ, ಕಡಲೆ, ಸಿರಿಧಾನ್ಯ ಹಾಗೂ ತರಕಾರಿಗಳ ಬೀಜೋತ್ಪಾದನೆಗೂ ಗಮನ ನೀಡಲಾಗುವುದು.

22. ಲಡಾಖ್‌ನಲ್ಲಿ ಕೇಂದ್ರೀಯ ವಿ.ವಿ. ಆರಂಭಕ್ಕೆ ಸಮ್ಮತಿ:

- ಲಡಾಖ್ ಕೇಂದ್ರಾಡಳಿತ ಪ್ರದೇಶದಲ್ಲಿ ಪ್ರಥಮ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪಿಸುವ ಮಹತ್ವದ ಪ್ರಸ್ತಾಪಕ್ಕೆ ಕೇಂದ್ರ ಸರ್ಕಾರ ಒಲವು ತೋರಿದೆ.
- ಜಮ್ಮು ಕಾಶ್ಮೀರಕ್ಕೆ ಪ್ರತ್ಯೇಕತೆಯ ಸ್ಥಾನಮಾನ ಕಲ್ಪಿಸಿದ್ದ 370ನೇ ವಿಧಿ ರದ್ದುಗೊಂಡ ಬಳಿಕ ಕೇಂದ್ರಾಡಳಿತ ಪ್ರದೇಶವಾಗಿ ವಿಭಜನೆಗೊಂಡ ಲಡಾಖ್‌ಗೆ ದಕ್ಕುತ್ತಿರುವ ಮಹತ್ವದ ಶೈಕ್ಷಣಿಕ ಸವಲತ್ತು ಇದಾಗಿದೆ.
- ಪ್ರಸಕ್ತ ಸಾಲಿನಿಂದಲೇ ಲಡಾಖ್‌ನಲ್ಲಿ ಕೇಂದ್ರ ವಿ.ವಿ. ಆರಂಭವಾಗಲಿದೆ. ಕಲಾ ಮತ್ತು ಮೂಲ ವಿಜ್ಞಾನಕ್ಕೆ ಸಂಬಂಧಿಸಿದ ಡಿಗ್ರಿ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತದೆ. ಇದರಿಂದ ರಾಜ್ಯದ 10,000 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

23. ಕೇರಳ, ಕರ್ನಾಟಕ ಉಗ್ರರ ನೆಲೆ: ವಿಶ್ವಸಂಸ್ಥೆ ವರದಿ:

- ಕೇರಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಐ.ಎಸ್. ಸಂಘಟನೆಗೆ ಸೇರಿದ ಉಗ್ರರು ಗಣನೀಯ ಸಂಖ್ಯೆಯಲ್ಲಿದ್ದಾರೆ ಎಂದು ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಭಯೋತ್ಪಾದನೆ ಕುರಿತ ವರದಿ ಉಲ್ಲೇಖಿಸಿದೆ.
- ಭಾರತ ಉಪಖಂಡದಲ್ಲಿರುವ ಅಲ್‌ಖೈದಾ ಉಗ್ರ ಸಂಘಟನೆಯಲ್ಲಿ ಭಾರತ, ಪಾಕಿಸ್ತಾನ, ಮ್ಯಾನ್ಮಾರ್‌ಗೆ ಸೇರಿದ 150 ರಿಂದ 200 ಮಂದಿ ಉಗ್ರರಿದ್ದು, ಈ ಭಾಗದಲ್ಲಿ ದಾಳಿ ನಡೆಸುವ ಸಂಚು ರೂಪಿಸುತ್ತಿದೆ ಎಂದು ವಿಶ್ಲೇಷಣಾತ್ಮಕ ಬೆಂಬಲ ಮತ್ತು ನಿರ್ಬಂಧಗಳ ಕಣ್ಗಾವಲು (ಅನಾಲಿಟಿಕಲ್ ಸಪೋರ್ಟ್ ಆ್ಯಂಡ್ ಸಾಂಕ್ಷನ್ಸ್ ಮಾನಿಟರಿಂಗ್) ತಂಡದ 26ನೇ ವರದಿ ತಿಳಿಸಿದೆ.
- ಈ ತಂಡವು ಐಎಸ್, ಅಲ್‌ಖೈದಾ ಮತ್ತು ಇತರ ವೈಯಕ್ತಿಕ ಮತ್ತು ಉಗ್ರ ಗುಂಪುಗಳ ಚಟುವಟಿಕೆಯ ಮೇಲೆ ಗಮನವಿಡುತ್ತದೆ.
- ಭಾರತ ಉಪಖಂಡದಲ್ಲಿ ಅಲ್‌ಖೈದಾ ಸಂಘಟನೆಯು, ಅಫ್ಘಾನಿಸ್ತಾನದ ನಿಮುಲ್, ಹೆಲ್ಮಂಡ್ ಮತ್ತು ಕಂದಹಾರ್ ಪ್ರಾಂತ್ಯಗಳಲ್ಲಿರುವ ತಾಲಿಬಾನ್ ಸಂಘಟನೆಯ ನಿರ್ದೇಶನದಡಿ ಕಾರ್ಯನಿರ್ವಹಿಸುತ್ತಿದೆ.
- ಅಸೀಮ್ ಉಮರ್ ಹತ್ಯೆಯಾದ ನಂತರ ಒಸಾಮಾ ಮಹಮೂದ್ ಎಂಬಾತ ಈ ಸಂಘಟನೆಯ ನೇತೃತ್ವ ವಹಿಸಿಕೊಂಡಿದ್ದಾನೆ. ಮಾಜಿ ನಾಯಕನ ಹತ್ಯೆಗೆ ಪ್ರತೀಕಾರ ಕೈಗೊಳ್ಳಲು ಸಂಘಟನೆ ಯೋಜನೆ ರೂಪಿಸುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

24. ಆಯುಷ್ ಗ್ರಾಮ ಯೋಜನೆ:

- ಗ್ರಾಮೀಣ ಜನರ ಆರೋಗ್ಯ ಕಾಪಾಡುವ ಜತೆಯಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಉದ್ದೇಶದಿಂದ ಹತ್ತು ವರ್ಷದ ಹಿಂದೆ ಆರಂಭವಾಗಿದ್ದ 'ಆಯುಷ್ ಗ್ರಾಮ ಯೋಜನೆ' ಹಿಂದೆ ಸರಿಯುತ್ತಿದೆ. ಆಯುರ್ವೇದ, ಯೋಗದ ಜತೆಯಲ್ಲಿ ಆಯುಷ್ ಇಲಾಖೆಯಡಿ ಬರುವ ಸಿದ್ದ, ಯುನಾನಿ ಹಾಗೂ ಹೋಮಿಯೋಪತಿ ಚಿಕಿತ್ಸಾ ಪದ್ಧತಿಯನ್ನು ಪರಿಣಾಮ ಕಾರಿಯಾಗಿ ಜಾರಿಗೆ ತರುವುದು. ಇದರಿಂದ ಜನರ ಆರೋಗ್ಯ, ಜೀವನಪದ್ಧತಿಯನ್ನು ಉತ್ತಮಪಡಿಸುವುದು ಈ ಯೋಜನೆಯ ಉದ್ದೇಶವಾಗಿತ್ತು.
- ಕೊರೋನಾ ಉಲ್ಬಣಗೊಳ್ಳುತ್ತಿರುವ ಈ ಕಾಲದಲ್ಲಿ ಈ ಯೋಜನೆ ಅವಶ್ಯಕತೆ ಇತ್ತು. ಆದರೆ ಈ ಯೋಜನೆ ವ್ಯವಸ್ಥಿತವಾಗಿ ಅನುಷ್ಠಾನಗೊಳ್ಳಲಿಲ್ಲ.
- ಕೇಂದ್ರ ಆರೋಗ್ಯ ಇಲಾಖೆಯ ಈ ಯೋಜನೆ ಜಾರಿ ಮಾಡುವ ಹೊಣೆ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯದ್ದು, ಮೋದಿ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಕೇಂದ್ರದಲ್ಲಿ ಪ್ರತ್ಯೇಕ ಆಯುಷ್ ಇಲಾಖೆ ಸ್ಥಾಪನೆಗೊಂಡಿದ್ದರಿಂದ ಗ್ರಾಮ ಮಟ್ಟದಲ್ಲಿ ಈ ಯೋಜನೆ ನೇಪತ್ಯಕ್ಕೆ ಸರಿಯುತ್ತಿದೆ.

ಉದ್ದೇಶ:

- ಸಾರ್ವಜನಿಕರ ಆರೋಗ್ಯ ಕಾಪಾಡುವ ಉದ್ದೇಶದಿಂದ ಆರಂಭವಾದ ಆಯುಷ್ ಗ್ರಾಮ ಯೋಜನೆ ಉತ್ತಮ ಪರಿಕಲ್ಪನೆ. ಇದರಲ್ಲಿ ಜಿಲ್ಲೆಯ ಕೆಲವು ಗ್ರಾಮಗಳನ್ನು ಆಯ್ಕೆ ಮಾಡಿ ಅಲ್ಲಿ ಆಯುಷ್ ಜೀವನ ಪದ್ಧತಿ, ಆರೋಗ್ಯ ಸುಧಾರಣಾ ಕ್ರಮಗಳು, ಆಹಾರ ಕ್ರಮಗಳು, ಯೋಗಾಭ್ಯಾಸ ಅಳವಡಿಸಿಕೊಳ್ಳುವುದು, ಆಯುಷ್ ಆರೋಗ್ಯ ಸೇವೆಗಳನ್ನು ಆ ಗ್ರಾಮದ ಜನರಿಗೆ ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶ.
- ಈ ಯೋಜನೆಯಲ್ಲಿ ಗಿಡಮೂಲಿಕೆಗಳ ವನ ಸ್ಥಾಪನೆ ಮತ್ತು ಬಳಕೆ ಬಗ್ಗೆಯೂ ಹೆಚ್ಚು ಗಮನ ಹರಿಸಲಾಗುತ್ತಿತ್ತು. ತಮ್ಮ ಮನೆಗಳಲ್ಲೇ ಔಷಧ ಸಸ್ಯಗಳನ್ನು ಬೆಳೆಸುವಂತೆ ಮತ್ತು ಇದನ್ನು ಯಾವಾಗ ಬಳಸಬೇಕು ಎಂಬ ಬಗ್ಗೆ ತರಬೇತಿ ಪಡೆದ ಆರೋಗ್ಯ ಕಾರ್ಯಕರ್ತರ ಮೂಲಕ ಮಾಹಿತಿ ನೀಡುವ ವ್ಯವಸ್ಥೆ ಇತ್ತು.

25. ಮುತ್ತೋಡಿ ಅರಣ್ಯದಲ್ಲಿ ಕಂಡ ಕೆಂಪು ಕಾಡೆಮ್ಮೆ:

- ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಮುತ್ತೋಡಿ ವಲಯದಲ್ಲಿ ಕೆಂಪು ಬಣ್ಣದ ಕಾಡೆಮ್ಮೆಯೊಂದು ಕಂಡುಬಂದಿದೆ. ಕಾಡೆಮ್ಮೆ ನಸುಕೆಂಪು ಬಣ್ಣದಿಂದ ಕೂಡಿರುವುದು ವಿಶೇಷವಾಗಿದೆ.
- ವನ್ಯಜೀವಿಗಳ ಜಗತ್ತಿನಲ್ಲಿ ಅಪರೂಪಕೊಮ್ಮೆ ತಮ್ಮ ನಿಗದಿತ ಬಣ್ಣಕ್ಕೆ ಹೊರತಾದ ಬಣ್ಣದಲ್ಲಿ ವನ್ಯಜೀವಿಗಳು ಗೋಚರಿಸುತ್ತವೆ. ಕಪ್ಪು ಚಿರತೆ, ಬಿಳಿ ಜಿರಾಫೆ, ಬಿಳಿ ಬಣ್ಣದ ಜಿಂಕೆ ಹೀಗೆ ಅಪರೂಪದಲ್ಲಿ ಅಪರೂಪವೆಂಬಂತೆ ಬಣ್ಣದಲ್ಲಿ ವ್ಯತ್ಯಾಸ ಇರುತ್ತವೆ.
- ಮೆಲನಿನ್ ಎಂಬ ಅಂಶದ ಏರುಪೇರಿನಿಂದ ಜೀವಿಯ ದೇಹದ ಬಣ್ಣವು ಬದಲಾವಣೆ ಆಗುವುದು ಒಂದು ಸಹಜ ಪ್ರಕ್ರಿಯೆ ಎಂಬುದು ತಜ್ಞರ ಅಭಿಮತವಾಗಿದೆ.
- ಇತ್ತೀಚೆಗೆ ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಅಪರೂಪದ ಚಿನ್ನದ ಬಣ್ಣದ ಹುಲಿ (ಗೋಲ್ಡನ್ ಟೈಗರ್) ಕಾಣಿಸಿಕೊಂಡಿದ್ದನ್ನು ಈ ಸಂಧರ್ಭದಲ್ಲಿ ನೆನಪಿಸಿ ಕೊಳ್ಳಬಹುದು.

26. ಗುಜರಾತಿನ ಅಣು ವಿದ್ಯುತ್ ಸ್ಥಾವರಕ್ಕೆ ಉಡುಪಿ ಕಂಪನಿ ಉಪಕರಣ ಪೂರೈಕೆ :

- ಗುಜರಾತಿನಲ್ಲಿ 700 ಮೆಗಾ ವ್ಯಾಟ್ ಸಾಮರ್ಥ್ಯದ ಕಕ್ರಾಪರ್ ಅಣು ವಿದ್ಯುತ್ 3ನೇ ಸ್ಥಾವರ ಸ್ವದೇಶಿ ತಂತ್ರಜ್ಞಾನದಲ್ಲಿ ರೂಪುಗೊಂಡಿದ್ದು, ಸಹಸ್ರಾರು ವಾಲ್ವ್‌ಗಳನ್ನು ಉಡುಪಿಯ 'ಬೆಲ್ ಒ ಸೀಲ್' ಸಂಸ್ಥೆ ಪೂರೈಸಿದೆ.
- ಇದರಿಂದ ನ್ಯಾಷನಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ (ಎನ್.ಪಿ.ಸಿ.ಎಲ್.) ಯುರೋಪಿಯನ್ ರಾಷ್ಟ್ರಗಳಿಂದ ಇಂಡಸ್ಟ್ರೀಯಲ್ ವಾಲ್ವ್ ಆಮದು ಮಾಡಿಕೊಳ್ಳುವುದು ನಿಲುಗಡೆಯಾಗಿ ಸ್ವಾವಲಂಬನೆ ಸಾಧಿಸಿದಂತಾಗಿದೆ.
- 2018ರಿಂದ ಈ ಸಂಸ್ಥೆ ಅಣು ವಿದ್ಯುತ್ ಘಟಕಕ್ಕೆ ವಾಲ್ವ್‌ಗಳನ್ನು ಪೂರೈಕೆ ಮಾಡುತ್ತಿದ್ದು, ಯಶಸ್ವಿ ಪರೀಕ್ಷೆ ನಡೆಸಲಾಗಿದೆ.
- ಐ.ಎಸ್.ಒ. ಜತೆಗೆ ಯುರೋಕ್ಲೋರ್ ಸರ್ಟಿಫಿಕೇಶನ್ ಪಡೆದ ಜಗತ್ತಿನ ಆರು ಕಂಪನಿಗಳಲ್ಲಿ 'ಬೆಲ್ ಒ ಸೀಲ್' ಭಾರತದ ಏಕೈಕ ಕಂಪನಿಯಾಗಿದೆ.

27. ಕೊರೋನಾ ಪತ್ತೆ ವರದಿಯಲ್ಲಿ ಕರ್ನಾಟಕವೇ ಅತ್ಯುತ್ತಮ:



- ಕೋವಿಡ್–19 ಸೋಂಕಿತರ ಪತ್ತೆ ಹಾಗೂ ಪ್ರಕರಣಗಳ ವರದಿ ನಿರ್ವಹಣೆಯಲ್ಲಿ ಕರ್ನಾಟಕ ಅತ್ಯುತ್ತಮ ಸಾಧನೆ ಮಾಡಿದೆ ಎಂದು ಸ್ಟಾ ನ್‌ಫೋರ್ಡ್ ಯೂನಿವರ್ಸಿಟಿ ವರದಿ ಮಾಡಿ, ಗುಣ ಮಟ್ಟದ ಕೋವಿಡ್ ಟೆಸ್ಟ್ ನಡೆಸುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಮುಂದಿದೆ ಎಂದು ಹೇಳಿದೆ.
- ಸೌಲಭ್ಯಗಳ ಲಭ್ಯತೆ, ಕೈಗೆಟುಕುವ ವ್ಯವಸ್ಥೆ ಹಾಗೂ ದತ್ತಾಂಶಗಳ ಸಂಗ್ರಹ ಮತ್ತು ಗೌಪ್ಯತೆ ಮಾನದಂಡಗಳಡಿ ಭಾರತದಾದ್ಯಂತ ರಾಜ್ಯಗಳಲ್ಲಿ ಕೊರೋನಾ ಪ್ರಕರಣಗಳ ಪತ್ತೆ ಹಾಗೂ ಅವುಗಳ ವರದಿಯ ಕುರಿತು ವಿಶ್ವವಿದ್ಯಾಲಯವು ಡೇಟಾ ರಿಪೋರ್ಟಿಂಗ್ ಸ್ಕೋರ್ (ಸಿ.ಡಿ.ಆರ್.ಎಸ್.) ನೀಡಿ ಪಟ್ಟಿ ಸಿದ್ಧಪಡಿಸಿದೆ. ಅದರಲ್ಲಿ ಕರ್ನಾಟಕ 0.61 ಅಂಕಗಳ ಮೂಲಕ ಮೊದಲ ಸ್ಥಾನದಲ್ಲಿದ್ದರೆ, 0.52 ಅಂಕಗಳೊಂದಿಗೆ ಕೇರಳ ಎರಡನೇ ಸ್ಥಾನದಲ್ಲಿದೆ. 0.51 ಅಂಕಗಳೊಂದಿಗೆ ತಮಿಳುನಾಡು ಮತ್ತು ಒಡಿಶಾ ಮೂರನೇ ಸ್ಥಾನ ಹಂಚಿಕೊಂಡಿವೆ.
- ಬಿಹಾರ ಮತ್ತು ಉತ್ತರ ಪ್ರದೇಶ ಅತಿ ಕಳಪೆ ಸಾಧನೆ ತೋರಿ ಆ ಪಟ್ಟಿಯಲ್ಲಿ ಕೊನೆಯ ಸಾನದಲ್ಲಿವೆ ಎಂದು 'ಮೆಡ್ ಆರ್‌ಎಕ್ಸ್ ವಿ' ಎಂಬ ನಿಯತಕಾಲಿಕೆ ವರದಿ ಪ್ರಕಟಿಸಿದೆ.



28. ಕಳಸಾ–ಬಂಡೂರಿ: 885.80 ಕೋಟಿ ಪರಿಷ್ಕೃತ ಯೋಜನೆಗೆ ಒಪ್ಪಿಗೆ:

- ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿ ಗ್ರಾಮದ ಬಳಿ ಮಹದಾಯಿ ನದಿಗೆ ಅಣೆಕಟ್ಟು ನಿರ್ಮಿಸಿ, ಕೂಡು ಕಾಲುವೆ ಮುಖಾಂತರ 1.72 ಟಿಎಂಸಿ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಮಲಪ್ರಭಾ ನದಿಗೆ ತಿರುಗಿಸುವ ಕಳಸಾ ನಾಲಾ ತಿರುವು ಯೋಜನೆಗೆ ರಾಜ್ಯ ಸರ್ಕಾರ 885.80 ಕೋಟಿ ರೂ. ಮೊತ್ತದ ಪರಿಷ್ಕೃತ ಯೋಜನಾ ವರದಿಗೆ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಿದೆ.
- ಈ ಹಿಂದೆ ನೀರಾವರಿ ನಿಗಮದ ನಿರ್ದೇಶಕರ ಮಂಡಳಿಯು 931.40 ಕೋಟಿ ರೂ. ಮೊತ್ತವನ್ನು ಶಿಫಾರಸ್ಸು ಮಾಡಿತ್ತು. ಮುಖ್ಯಮಂತ್ರಿ ಅವರ ತಾಂತ್ರಿಕ ಸಲಹೆಗಾರರ ಹಾಗೂ ನಿಗಮದ ವಿನ್ಯಾಸ ಶಾಖೆಯಲ್ಲಿ ವ್ಯಕ್ತವಾದ ಅಂಶಗಳನ್ನು ಪರಿಗಣಿಸಿ, ಪರಿಷ್ಕೃತ ಯೋಜನೆ ಸಿದ್ಧಪಡಿಸಲಾಗಿದೆ.
- ಕಳಸಾ ಬಂಡೂರಿ ಕಾಮಗಾರಿ ಟೆಂಡರ್ ಪ್ರಕ್ರಿಯೆಗೆ ಆರ್ಥಿಕ ಇಲಾಖೆಯ ಅನುಮೋದನೆ ಅಗತ್ಯವಿದೆ.
- ಖಾನಾಪುರ ತಾಲ್ಲೂಕಿನ ನೆರಸೆ ಗ್ರಾಮದ ಬಳಿ ಬಂಡೂರ ಹಳ್ಳಕ್ಕೆ ಅಣೆಕಟ್ಟು ನಿರ್ಮಿಸಿ ಕೂಡು ಕಾಲುವೆ ಮುಖಾಂತರ 2.18 ಟಿ.ಎಂ.ಸಿ. ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಮಲಪ್ರಭಾ ನದಿಗೆ ತಿರುಗಿಸುವ ಬಂಡೂರಿ ನಾಲಾ ತಿರುವು ಯೋಜನೆಗೂ ಆಡಳಿತಾತ್ಮಕ ಒಪ್ಪಿಗೆ ಸಿಕ್ಕಿದೆ.

29. ತಲಕಳಲೆ ನಡುಗಡ್ಡೆಗಳಲ್ಲೇ ಮಂಕಿ ಪಾರ್ಕ್:

- ಶರಾವತಿ ಕಣಿವೆಯ ತಲಕಳಲೆ ಜಲಾಶಯದ ಎರಡು ನಡುಗಡ್ಡೆಗಳಲ್ಲಿ 'ಮಂಕಿ ಪಾರ್ಕ್' ಸ್ಥಾಪಿಸಲು ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿಸಿದ್ದು, ಆಗಸ್ಟ್ ಮೊದಲ ವಾರದಿಂದಲೇ ಮಂಗಗಳನ್ನು ಸೆರೆಹಿಡಿಯಲು ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ.
- ಜೋಗ ಜಲಪಾತ ತಪ್ಪಲಿನ ಕಾರ್ಗಲ್ ಪಟ್ಟಣದಿಂದ 8 ಕಿ.ಮೀ. ಅಂತರದಲ್ಲಿ ಶರಾವತಿ ವಿದ್ಯುದಾಗರಕ್ಕೆ ನೀರು ಪೂರೈಸಲು ಸಮತೋಲಿತ ಜಲಾಶಯ ನಿರ್ಮಿಸಲಾಗಿದೆ. ಈ ಜಲಾಶಯದ ಒಳಗೆ ಮೂರು ಕಿ.ಮೀ. ಅಂತರದಲ್ಲಿ 10

ರಿಂದ 15 ಹೆಕ್ಟೇರ್ ವಿಸ್ತಾರದ ದಟ್ಟ ಅರಣ್ಯವಿರುವ ಎರಡು ನಡುಗಡ್ಡೆಗಳಲ್ಲಿ ಸೆರೆಹಿಡಿದ ಮಂಗಗಳನ್ನು ಬಿಡಲಾಗುತ್ತದೆ.

ನಾಗೋಡಿ ಅರಣ್ಯ ವಿವಾದ:

- ಹೊಸನಗರ ತಾಲ್ಲೂಕು ನಿಟ್ಟೂರು–ನಾಗೋಡಿ ಸರ್ವೆ ನಂಬರ್ 305 ರಲ್ಲಿನ 400 ಎಕರೆ ಅರಣ್ಯದಲ್ಲಿ 'ಮಂಕಿ ಪಾರ್ಕ್' ಸ್ಥಾಪಿಸಲು ನಿರ್ಧರಿಸಲಾಗಿತ್ತು. ಆದರೆ, ಅಲ್ಲಿನ ಭೂ ಮಾಫಿಯಾ, ಬಗರ್ ಹುಕುಂ ಸಾಗುವಳಿದಾರರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.
- ಅರಣ್ಯ ಇಲಾಖೆ ತಲಕಳಲೆ ದ್ವೀಪ ಆಯ್ದುಕೊಂಡು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿತ್ತು.
- ದ್ವೀಪದಲ್ಲಿ ಪಾರ್ಕ್ ನಿರ್ಮಾಣ ವೆಚ್ಚದಾಯಕ. ಅಲ್ಲಿ ಭಾರಿ ಸಂಖ್ಯೆಯ ಮೊಸಳೆಗಳಿದ್ದು, ಮಂಗಗಳ ಸಂತತಿಯನ್ನೇ ನಾಶ ಮಾಡಬಹುದು ಎನ್ನುವುದು ಪರಿಸರವಾದಿಗಳ ವಾದ.

ರಾಷ್ಟ್ರೀಯ

1. ಅನಿಲ ಸೋರಿಕೆ ಉಂಟಾಗಿ ಇಬ್ಬರು ನೌಕರರ ಸಾವು:

- ಆಂಧ್ರಪ್ರದೇಶದ ವಿಶಾಖಪಟ್ಟಣಂನ ಔಷಧ ತಯಾರಿಕಾ ಕಂಪನಿಯಲ್ಲಿ ಅನಿಲ ಸೋರಿಕೆ ಉಂಟಾಗಿ, ಇಬ್ಬರು ನೌಕರರು ಮೃತಪಟ್ಟಿದ್ದಾರೆ. ಪರವಾಡಾದಲ್ಲಿರುವ ಕಂಪನಿಯಲ್ಲಿ ಬೆಂಜಮಿಡಾ ಜೋಲ್ ಅನಿಲ ಸೋರಿಕೆಯಾಗಿದೆ.
- ಮೂರು ದಿನಗಳ ಮುನ್ನ ಕರ್ನೂಲ್‌ನಲ್ಲಿ ಆಕ್ರೋ ಇಂಡಸ್ಟ್ರೀಸ್‌ನಲ್ಲಿ ಅಮೋನಿಯಾ ಅನಿಲ ಸೋರಿಕೆಯಿಂದಾಗಿ ವ್ಯವಸ್ಥಾಪಕರೊಬ್ಬರು ಮೃತಪಟ್ಟಿದ್ದರು. ಮೇ ತಿಂಗಳಲ್ಲಿ ಆರ್.ಆರ್. ವೆಂಕಟಾಪುರಂನಲ್ಲಿನ ಎಲ್.ಜಿ. ಪಾಲಿಮರ್ಸ್ ಘಟಕದಲ್ಲಿ ಅನಿಲ ಸೋರಿಕೆಯಿಂದಾಗಿ 12 ಮಂದಿ ಮೃತಪಟ್ಟು, ಸುತ್ತಲಿನ ಪ್ರದೇಶದ ಗ್ರಾಮಗಳ 500ಕ್ಕೂ ಅಧಿಕ ಮಂದಿ ಅಸ್ವಸ್ಥರಾಗಿದ್ದರು.

2. ಮದ್ರಾಸ್ ಐಐಟಿಯಿಂದ ಬಿಎಸ್ಸಿ ಆನ್‌ಲೈನ್ ಕೋರ್ಸ್:

- ಕೋವಿಡ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣದಲ್ಲಿ ಆನ್‌ಲೈನ್ ಕೋರ್ಸ್‌ಗಳಿಗೆ ಹೆಚ್ಚು ಬೇಡಿಕೆ ಬಂದಿರುವ ಬೆನ್ನಲ್ಲೇ, ಮದ್ರಾಸ್ ಐಐಟಿಯು ಪ್ರೋಗ್ರಾಮಿಂಗ್ ಮತ್ತು ಡೇಟಾ ಸೈನ್ಸ್ ನಲ್ಲಿ ಇದೇ ಮೊದಲ ಬಾರಿಗೆ ಬಿಎಸ್ಸಿ ಆನ್‌ಲೈನ್ ಕೋರ್ಸ್ ಶುರುಮಾಡಿದೆ. ಇಂತಹದ್ದೊಂದು ಪ್ರಯತ್ನ ವಿಶ್ವದಲ್ಲೇ ಮೊದಲಾಗಿದೆ.
- ಈ ಕೋರ್ಸ್‌ಅನ್ನು ಪಿಯುಸಿ ಮುಗಿಸಿದ ಹಾಗೂ 10ನೇ ತರಗತಿಯಲ್ಲಿ ಇಂಗ್ಲಿಷ್ ಮತ್ತು ಗಣಿತದಲ್ಲಿ ಒಳ್ಳೆಯ ಅಂಕ ಗಳಿಸಿದ ಹಾಗೂ ಹಾಲಿ ಪದವಿಪೂರ್ವ ವಿದ್ಯಾರ್ಥಿಗಳು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಪದವೀಧರರು ಹಾಗೂ ವೃತ್ತಿನಿರತರೂ ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಹತೆ ಹೊಂದಿರುತ್ತಾರೆ.
- ಈ ಕೋರ್ಸ್‌ಗೆ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವ ರಮೇಶ್ ಪೋಖಿಯಾಲ್ ನಿಶಾಂಕ್ ಹಾಗೂ ಸಹಾಯಕ ಸಚಿವ ಸಂಜಯ್ ಧೋತ್ರಿ ಅವರು ಚಾಲನೆ ನೀಡಿದರು.

3. 5 ತಿಂಗಳು ಉಚಿತ ಅಕ್ಕಿ:

- ದೇಶದ ಸುಮಾರು 80 ಕೋಟಿ ಜನರಿಗೆ ಉಚಿತ ಧಾನ್ಯ ನೀಡುವ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು (ಪಿಎಂಜಿಕೆಎವೈ) ಇನ್ನೂ ಐದು ತಿಂಗಳು ವಿಸ್ತರಿಸಲಾಗಿದೆ. ಉಚಿತ ಧಾನ್ಯ ವಿತರಣೆ ಯೋಜನೆಯ ವಿಸ್ತರಣೆಗೆ ರೂ. 90 ಸಾವಿರ ಕೋಟಿ ಬೇಕಾಗುತ್ತದೆ. ಕಳೆದ ಮೂರು ತಿಂಗಳು ಕೂಡ ಉಚಿತ ಧಾನ್ಯ ವಿತರಿಸಲಾಗಿದೆ. ಅದನ್ನೂ ಸೇರಿಸಿದರೆ ಒಟ್ಟು ವೆಚ್ಚವು ರೂ. 1.5 ಲಕ್ಷ ಕೋಟಿಯಾಗುತ್ತದೆ ಎಂದು ಪ್ರಧಾನಿ ವಿವರಿಸಿದರು. ಕೋವಿಡ್ ಹರಡುವಿಕೆ ತಡೆಗಾಗಿ ಲಾಕ್‌ಡೌನ್ ಹೇರಿದ ಬಳಿಕ ಏಪ್ರಿಲ್‌ನಲ್ಲಿ ಯೋಜನೆಯನ್ನು ಜಾರಿಗೆ ತರಲಾಗಿತ್ತು.

4. ಪಿ.ಪಿ.ಎಫ್, ಎನ್‌ಎಸ್‌ಸಿ ಬಡ್ಡಿ ಯಥಾಸ್ಥಿತಿ:

- ಸರ್ಕಾರ 2020ರ ಜುಲೈ–ಸೆಪ್ಟೆಂಬರ್ ಅವಧಿಗೆ ಅಂಚೆ ಇಲಾಖೆಯ ಸಣ್ಣ ಉಳಿತಾಯ ಯೋಜನೆಗಳು, ಸಾರ್ವಜನಿಕ ಭವಿಷ್ಯ ನಿಧಿಯ (ಪಿಪಿಎಫ್) ಬಡ್ಡಿ ದರವನ್ನು ಶೇ. 7.1ರ ಯಥಾಸ್ಥಿತಿಯಲ್ಲಿರಿಸಿದೆ.
- ಅಂಚೆ ಇಲಾಖೆ 2020ರ ಜುಲೈ 1ರಂದು ಹೊರಡಿಸಿರುವ ಸುತ್ತೋಲೆಯ ಪ್ರಕಾರ, ಹಿರಿಯ ನಾಗರಿಕರ ಉಳಿತಾಯ ಯೋಜನೆ (ಎಸ್‌ಸಿಎಸ್ ಎಸ್) ಬಡ್ಡಿ ದರ ಶೇ. 7.40ರಲ್ಲಿ ಮುಂದುವರಿಯಲಿದೆ. ಅಂಚೆ ಇಲಾಖೆಯ ಟೈಮ್ ಡಿಪಾಸಿಟ್‌ಗಳು ಶೇ. 5.5 – 6.7ರ ಬಡ್ಡಿ ಪಡೆಯಲಿವೆ. ಈ ಬಡ್ಡಿ ದರಗಳು 2020ರ ಜುಲೈ 1ರಿಂದ ಸೆಪ್ಟೆಂಬರ್ 30ರ ತನಕ ಅನ್ವಯ. 5 ವರ್ಷ ಅವಧಿಯ ರಾಷ್ಟ್ರೀಯ ಉಳಿತಾಯ ಯೋಜನೆಗೆ ಶೇ. 6.8 ಕಿಸಾನ್ ವಿಕಾಸಪತ್ರಕ್ಕೆ, ಶೇ. 6.9 ಸುಕನ್ಯಾ ಸಮೃದ್ಧಿ ಯೋಜನೆಗೆ ಶೇ. 7.6ರ ಬಡ್ಡಿ ಸಿಗಲಿದೆ.
- 5 ಉತ್ತಮ ಸ್ವಯಂ ನಿವೃತ್ತಿ ಉಳಿತಾಯ ಯೋಜನೆಗಳು ಉದ್ಯೋಗಿಗಳ ಭವಿಷ್ಯನಿಧಿ ಯೋಜನೆಯಲ್ಲಿ (ಇ.ಪಿ.ಎಫ್.) ಕಡ್ಡಾಯವಾಗಿ ಹೂಡಬೇಕಿರುವ ಮೊತ್ತಕ್ಕಿಂತ ಹೆಚ್ಚಿನ ಹಣವನ್ನು ಸ್ವಯಂ ಪ್ರೇರಣೆಯಿಂದ ಪಾವತಿಸಲು ಅವಕಾಶ

ಇದೆ. ಆದರೆ ಇದಕ್ಕೆ ಪ್ರತಿಯಾಗಿ ಉದ್ಯೋಗದಾತರ ಪಾಲು ಇರುವುದಿಲ್ಲ.

- 8–65 ವರ್ಷ ವಯಸ್ಸಿನವರೆಗೆ ಎನ್‌ಪಿಎಸ್ ಲಭ್ಯ, ಸರಕಾರಿ, ಖಾಸಗಿ ಸಂಸ್ಥೆಗಳ ಪಿಂಚಣಿ ಯೋಜನೆಯ ಸೌಲಭ್ಯ ಪಡೆಯದವರೂ ಈ ಯೋಜನೆಯ ಪ್ರಯೋಜನ ಪಡೆಯಬಹುದು.
- ಸಾರ್ವಜನಿಕ ಭವಿಷ್ಯನಿಧಿ (ಪಿ.ಪಿ.ಎಫ್.) ಎಲ್ಲ ಸಾರ್ವಜನಿಕರಿಗೂ ಲಭ್ಯವಿದೆ. ತೆರಿಗೆ ಮುಕ್ತ ಹೂಡಿಕೆಯ ಆಯ್ಕೆ ಇದಾಗಿದೆ.
- ವಿಮೆ ಪಿಂಚಣಿ ಯೋಜನೆಗಳನ್ನೂ ಪರಿಶೀಲಿಸಬಹುದು. ಮ್ಯೂಚುವಲ್ ಫಂಡ್‌ಗಳೂ ಪಿಂಚಣಿ ಪ್ಲಾನ್ ಹೊಂದಿವೆ.

5. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನ (ಐಒಸಿಎಲ್) ಅಧ್ಯಕ್ಷರಾಗಿ ಶ್ರೀಕಾಂತ್ ಮಾಧವ ವೈದ್ಯ ಅಧಿಕಾರ ಸ್ವೀಕಾರ:

- ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನ (ಐ.ಒ.ಎಲ್) ಅಧ್ಯಕ್ಷರಾಗಿ ಶ್ರೀಕಾಂತ್ ಮಾಧವ ವೈದ್ಯ ರವರು ಸೇವೆಯಿಂದ ನಿವೃತ್ತರಾದ ಸಂಜೀವ್ ಸಿಂಗ್ ಅವರ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ವೈದ್ಯ ಅವರು 2019ರ ಅಕ್ಟೋಬರ್‌ನಿಂದ ಇಂಡಿಯನ್ ಆಯಿಲ್ ಮಂಡಳಿಯ (ರಿಫೈನರೀಸ್) ನಿರ್ದೇಶಕರಾಗಿದ್ದರು.

6. ಚೀನಾಗೆ ಭಾರತ ಸಡ್ಡು:

- ಗಡಿ ತಂಟೆ ತೆಗೆಯುತ್ತಿರುವ ಚೀನಾದೊಂದಿಗೆ ಯಾವುದೇ ಸ್ಥಿತಿ ಎದುರಿಸಲು ಭಾರತ ಸಜ್ಜಾಗುತ್ತಿದೆ. ರಷ್ಯಾದಿಂದ ರೂ. 38,900 ಕೋಟಿ ಮೊತ್ತದ ಮಹತ್ವದ ರಕ್ಷಣಾ ಉಪಕರಣಗಳ ಖರೀದಿ ಒಪ್ಪಂದಕ್ಕೆ ರಕ್ಷಣಾ ಪರಿಕರಗಳ ಸ್ವಾಧೀನ ಮಂಡಳಿ (ಡಿಎಸಿ) ಸಮ್ಮತಿಸಿದೆ. 21 ಮಿಗ್–29 ಯುದ್ಧ ವಿಮಾನಗಳು, 12 ಸುಖೋಯ್–30 ಎಂಕೆಐ ಯುದ್ಧ ವಿಮಾನ ಸೇರಿ ಹಲವು ಬಗೆಯ ಕ್ಷಿಪಣಿ ವ್ಯವಸ್ಥೆಗಳು ಈ ಒಪ್ಪಂದದಲ್ಲಿ ಸೇರಿವೆ.

7. ಗಡಿಯಿಂದ ಚೀನಾಕ್ಕೆ ಸಂದೇಶ:

- ಪ್ರಧಾನಿ ಶ್ರೀ. ನರೇಂದ್ರ ಮೋದಿ ಅವರು ಲೇಹ್ ಸಮೀಪದ ನಿಮು ಎಂಬಲ್ಲಿಗೆ ಭೇಟಿ ನೀಡಿದರು. ಇದು ಭಾರತ–ಚೀನಾ ಗಡಿ ಹತ್ತಿರದ ಪ್ರದೇಶ. ಅಲ್ಲಿ, ಯೋಧರ ಜತೆಗೆ ಸಂವಾದ ನಡೆಸಿದರು. ಜೂನ್ 15 ರಂದು ಪೂರ್ವ ಲಡಾಖ್‌ನ ಗಾಲ್ವನ್ ಕಣಿವೆಯಲ್ಲಿ ಭಾರತ-ಚೀನಾ ಸೈನಿಕರ ನಡುವೆ ಸಂಘರ್ಷ ಏರ್ಪಟ್ಟಿತ್ತು.
- ಅದರಲ್ಲಿ ಭಾರತದ 20 ಯೋಧರು ಹುತಾತ್ಮರಾಗಿದ್ದರು. ಈಗ, ಲೇಹ್‌ಗೆ ಭೇಟಿ ನೀಡುವ ಮೂಲಕ ಪ್ರಧಾನಿಯವರು ಚೀನಾ ದೇಶಕ್ಕೆ ಕಠಿಣ ಸಂದೇಶ ರವಾನಿಸಿದ್ದಾರೆ.
- ಹುತಾತ್ಮರಾದ 20 ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಿದ ಮೋದಿ ಅವರು, ಯೋಧರ ಕೆಚ್ಚೆದೆಯ ಹೋರಾಟವು ಭಾರತದ ಶಕ್ತಿಯ ಬಗ್ಗೆ ಇಡೀ ಜಗತ್ತಿಗೆ ಸಂದೇಶ ನೀಡಿದೆ ಎಂದು ಹೇಳಿದರು.
- ಭೂಸೇನೆ, ವಾಯುಪಡೆ ಮತ್ತು ಐಟಿಬಿಪಿಯ (ಇಂಡೊ–ಟಿಬೆಟ್ ಗಡಿ ಪೊಲೀಸ್) ಸಿಬ್ಬಂದಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ವಿಸ್ತರಣಾವಾದದ ಯುಗವು ಮುಗಿದಿದೆ. ಇಡೀ ಜಗತ್ತು ಇಂತಹ ಪ್ರವೃತ್ತಿಯ ವಿರುದ್ಧ ಇದೆ. ಶಾಂತಿಗೆ ಮುಂದಾಗುವ ಅಥವಾ ಶಾಂತಿ ಸ್ಥಾಪಿಸುವ ಶಕ್ತಿಯು ದುರ್ಬಲರಿಗೆ ಇರುವುದಿಲ್ಲ ಎಂದು ಅವರು ಪ್ರತಿಪಾದಿಸಿದರು. ಈಗಿನದ್ದು ಅಭಿವೃದ್ಧಿಯ ಯುಗ. ಅಭಿವೃದ್ಧಿಯೇ ಭವಿಷ್ಯದ ನೆಲೆಗಟ್ಟು. ವಿಸ್ತರಣೆ ಮಾಡಿಯೇ ತೀರುತ್ತೇವೆ ಎಂದು ಯಾರಾದರೂ ಪಟ್ಟು ಹಿಡಿದರೆ ಅದು ಜಾಗತಿಕ ಶಾಂತಿಗೆ ಅಪಾಯಕಾರಿ.
- ಇಂತಹ ಶಕ್ತಿಗಳನ್ನು ನಿರ್ಮೂಲನೆ ಮಾಡಿದ್ದಕ್ಕೆ ಅಥವಾ ಈ ಶಕ್ತಿಗಳೇ ಹಿಂದಕ್ಕೆ ನಡೆದದ್ದಕ್ಕೆ ಇತಿಹಾಸವು ಸಾಕ್ಷಿಯಾಗಿದೆ ಎಂದು ವಿವರಿಸಿದರು. ಸೇನಾಪಡೆಗಳ ಮುಖ್ಯಸ್ಥ ಜೆ. ಬಿಪಿನ್ ರಾವತ್, ಭೂಸೇನಾ ಮುಖ್ಯಸ್ಥ ಜ.ಎಂ.ಎಂ. ನರವಣೆ ಅವರು ಮೋದಿ ಜತೆಗೆ ಇದ್ದರು.
- ಲೇಹ್, ಲಡಾಖ್, ಕಾರ್ಗಿಲ್ ಅಥವಾ ಸಿಯಾಚಿನ್ ನೀರ್ಗಲ್ಲು ಪ್ರದೇಶವಾಗಿರಲಿ, ಪರ್ವತ ಪ್ರದೇಶವಾಗಿರಲಿ, ಮಂಜುಗಡ್ಡೆಯಂತೆ ತಂಪು ನೀರು ಹರಿಯುವ ನದಿಯಾಗಿರಲಿ, ಇವೆಲ್ಲವೂ ಭಾರತದ ಸಶಸ್ತ್ರ ಪಡೆಗಳ ಧೈರ್ಯಕ್ಕೆ ಸಾಕ್ಷಿ ಹೇಳುತ್ತವೆ. ಶತ್ರುಗಳು ನಮ್ಮ ಪಡೆಯ ಕೆಚ್ಚು ಮತ್ತು ಕಸುವನ್ನು ಕಂಡಿದ್ದಾರೆ ಎಂದು ಪ್ರಧಾನಿ ಹೇಳಿದರು.
- ನೀವು ದೇಶವನ್ನು ಪ್ರಬಲವಾಗಿ ಮತ್ತು ಸುರಕ್ಷಿತವಾಗಿ ಇರಿಸುವಿರಿ ಎಂಬ ನಂಬಿಕೆ ಪ್ರತಿ ಭಾರತೀಯನಲ್ಲಿಯೂ ಇದೆ. ನಿಮ್ಮ ಧೈರ್ಯವು ನೀವಿರುವ ಈ ಸ್ಥಳಕ್ಕಿಂತಲೂ ಎತ್ತರವಾದುದು. ನಿಮ್ಮ ಬಾಹುಗಳು ಸುತ್ತಲಿನ ಪರ್ವತಗಳಿಗಿಂತಲೂ ಬಲವಾದವು. ನಿಮ್ಮ ಆತ್ಮವಿಶ್ವಾಸ, ಬದ್ಧತೆ ಮತ್ತು ನಂಬಿಕೆಗಳು ಈ ಶಿಖರಗಳಂತೆಯೇ ಅಚಲ ಎಂದು ಮೋದಿ ಸೈನಿಕರನ್ನು ಕೊಂಡಾಡಿದರು. ಲೇಹ್‌ನ ಸೇನಾ ಆಸ್ಪತ್ರೆಗೆ ಭೇಟಿ ನೀಡಿದ ಪ್ರಧಾನಿ, ಗಾಲ್ವನ್ ಸಂಘರ್ಷದಲ್ಲಿ ಗಾಯಗೊಂಡು ಅಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯೋಧರ ಜತೆಗೆ ಮಾತನಾಡಿದರು.

8. ರೆಮ್‌ಡೆಸಿವಿರ್' ಬಳಕೆ : ಪರಿಷ್ಕೃತ ಮಾರ್ಗಸೂಚಿ

- ಕೋವಿಡ್ ರೋಗಿಗಳಿಗೆ 'ರೆಮ್‌ಡೆಸಿವಿರ್' ಔಷಧವನ್ನು ಐದು ದಿನಗಳ ಕಾಲ ನೀಡುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಸೂಚಿಸಿದೆ. ಈ ಮೊದಲು ಆರು ದಿನಗಳ ಕಾಲ ಔಷಧವನ್ನು ನೀಡಲಾಗುತ್ತಿತ್ತು. ಔಷಧ ಬಳಕೆ ಕುರಿತು ಪರಿಷ್ಕೃತ ಮಾರ್ಗಸೂಚಿಯನ್ನು ಪ್ರಕಟಿಸಿದೆ. ಇಂಜೆಕ್ಷನ್ ರೂಪದಲ್ಲಿ ಈ ಔಷಧವನ್ನು ನೀಡಲಾಗುತ್ತಿದೆ. ಮೊದಲ ದಿನ 200 ಮಿಲಿ ಗ್ರಾಂ ನೀಡಬೇಕು. ನಂತರ ನಾಲ್ಕು ದಿನಗಳ ಕಾಲ ಪ್ರತಿ ದಿನವೂ 100 ಮಿ.ಗ್ರಾಂ. ನೀಡಬೇಕು ಎಂದು ತಿಳಿಸಲಾಗಿದೆ.
- ತುರ್ತು ಪರಿಸ್ಥಿತಿ ಸಂದರ್ಭದಲ್ಲಿ 'ರೆಮ್‌ಡೆಸಿವಿರ್' ಬಳಸುವುದನ್ನು ಪರಿಗಣಿಸಬಹುದು. ಆದರೆ, ಗರ್ಭಿಣಿಯರಿಗೆ ಮತ್ತು ಎದೆ ಹಾಲುಣಿಸುವವರಿಗೆ ಹಾಗೂ 12 ವರ್ಷದ ಒಳಗಿನವರಿಗೆ ಈ ಔಷಧ ಬಳಸಲು ಶಿಫಾರಸು ಮಾಡಬಾರದು ಎಂದು ಸಚಿವಾಲಯ ಸೂಚಿಸಿದೆ.

9. ಚೀನಾದಿಂದ ಡೇಟಾ ಗೂಢಚಾರಿಕೆಯ ಅಪಾಯ:

- ಚೀನಾವು 5ಜಿ ಮೊಬೈಲ್ ನೆಟ್‌ವರ್ಕ್‌ನಂತಹ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ವ್ಯವಸ್ಥಿತ ರೀತಿಯಲ್ಲಿ ಭಾರತದ ವಿರುದ್ಧ ಬೇಹುಗಾರಿಕೆ ಮಾಡುತ್ತಿದ್ದು, ಇದು ದೇಶದ ಆರ್ಥಿಕತೆ ಹಾಗೂ ಭದ್ರತೆಗೆ ಕಂಟಕ ತಂದೊಡುತ್ತಿದೆ.
- ವಂಚನೆಯನ್ನೇ ಬಂಡವಾಳ ಮಾಡಿಕೊಂಡು ಬದುಕುತ್ತಿರುವ ಚೀನಾಕ್ಕೆ ಭಾರತ ಬಹುಮುಖ್ಯ ಟಾರ್ಗೆಟ್ ಆಗಿದೆ. ಹಲವು ವರ್ಷಗಳಿಂದಲೂ ಆ ರಾಷ್ಟ್ರ ನಮ್ಮ ದೇಶದ ಬೇಕುಬೇಡ ಗಳನ್ನು ದತ್ತಾಂಶಗಳ ಮೂಲಕ ಅಂದಾಜಿಸುತ್ತ ಬಂದಿದೆ. ವಿಶೇಷ ಆ್ಯಪ್‌ಗಳು ಹಾಗೂ ಜ5 ನೆಟ್‌ವರ್ಕ್‌ನಿಂದ ಸಂಗ್ರಹಿಸಿದ ಭಾರತದ ಡೇಟಾವನ್ನು ಚೀನಾ ಕಮ್ಯುನಿಸ್ಟ್ ಪಾರ್ಟಿ ಮತ್ತು ಅಲ್ಲಿನ ಮಿಲಿಟರಿ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸುತ್ತಿದೆ.

ಡೇಟಾವನ್ನೇ ಅಸ್ತ್ರವನ್ನಾಗಿಸಿಕೊಂಡಿದೆ:

- ಮೊಬೈಲ್ ಆ್ಯಪ್, 5ಜಿ ಮೂಲಕ ಚೀನಾ ಅನ್ವೇಷಣೆ ಕುರಿತು ವೆಬಿನಾರ್‌ನಲ್ಲಿ ದೇಶದ ಪ್ರಮುಖ ತಜ್ಞರು ಮತ್ತು ಉದ್ಯಮಿಗಳು ಡೇಟಾ ಗೂಢಚಾರಿಕೆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಟೆಲಿಕಾಂ ಸೇರಿದಂತೆ ತಂತ್ರಜ್ಞಾನ ವಲಯದಲ್ಲಿ ಚೀನಾ ಆಕ್ರಮಣ ಮಿತಿಮೀರಿದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಇದರಿಂದ ದೇಶದ ಭದ್ರತೆಗೆ ಅಪಾಯ ಎದುರಾಗುತ್ತದೆ. ಪರ್ಯಾಯವಾಗಿ ಭಾರತ ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುವ ಅಗತ್ಯ ಇದೆ. ಟೆಲಿಕಾಂ ಕ್ಷೇತ್ರದ ಬೇಡಿಕೆ ಈಡೇರಿಸಲು ಉತ್ಪನ್ನಗಳ ಹೆಚ್ಚಳಕ್ಕೆ ಒತ್ತು ನೀಡಬೇಕಾದ ಅಗತ್ಯ ಇದೆ.

ತನ್ನ ಕಡಿಮೆ ಬೆಲೆಯ ಆರ್ಥಿಕ ಅಸ್ತ್ರ ಪ್ರಯೋಗಿಸಿದೆ:

- ಅತಿ ಅಗ್ಗದ ಬೆಲೆಗೆ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಚೀನಾ ಉತ್ಪನ್ನಗಳು ಮಾರಾಟವಾಗುತ್ತಿವೆ ಆ ಉತ್ಪನ್ನಗಳ ಬೆಲೆಗೆ ಸರಿಗಟ್ಟುವುದು ಬೇರೆ ರಾಷ್ಟ್ರಗಳಿಗೆ ಸವಾಲಿನ ಸಂಗತಿ. ಆದರೆ ಈ ಅಗ್ಗದ ಬೆಲೆಯ ಉತ್ಪನ್ನಗಳ ಮಾರಾಟದ ಹಿಂದೆ ಚೀನಾ ಸರ್ಕಾರದ ಬಹು ದೊಡ್ಡ ಪಿತೂರಿ ಅಡಗಿದೆ ಕಡಿಮೆ ಬೆಲೆಗೆ ಮಾರಾಟ ಮಾಡಿ, ನೆರೆ ಹೊರೆಯ ರಾಷ್ಟ್ರಗಳ ದೇಶಿ ಉತ್ಪನ್ನಗಳ ಮಾರುಕಟ್ಟೆಯನ್ನು ನಾಶ ಮಾಡುವುದು ಇದರ ಹಿಂದಿನ ಸಂಚು.
- ಇದರ ಪೆಟ್ಟಿಗೆ ಅಮೆರಿಕ ಮತ್ತು ಯೂರೋಪ್ ದೇಶಗಳ ಕೈಗಾರಿಕೆಗಳು ಅಸ್ತಿತ್ವ ಕಳೆದುಕೊಳ್ಳತೊಡಗಿವೆ. ಇದೇ ಕುಣಿಕೆಯಲ್ಲಿ ಭಾರತ ಸಿಲುಕದಂತೆ ಎಚ್ಚರ ವಹಿಸಬೇಕಾದ ಅಗತ್ಯ ಇದ್ದು, ತಂತ್ರಜ್ಞಾನ ವಲಯದಲ್ಲಿ ತ್ವರಿತ ಸ್ವಾವಲಂಬನೆ ಸಾಧಿಸಬೇಕು.
- ಸಿಸಿಟಿವಿ ಕ್ಯಾಮರಾಗಳಿಂದ ಹಿಡಿದು ಅನೇಕ ರೀತಿಯ ತಾಂತ್ರಿಕ ಉತ್ಪನ್ನಗಳನ್ನು ಚೀನಾ ಭಾರತದ ಒಳಕ್ಕೆ ಕಳಿಸಿಕೊಡುತ್ತಿದೆ. ತಾಂತ್ರಿಕ ಸಾಧನಗಳ ಮೂಲವೇ ನಮ್ಮಲ್ಲಿನ ಜನರ ಬೇಡಿಕೆಗಳನ್ನು ಅಂದಾಜಿಸಿ ತನ್ನ ಉತ್ಪಾದನಾ ಸಾಮರ್ಥ್ಯವನ್ನು ನಿರ್ಧರಿಸುತ್ತಿದೆ.

ಚೀನಾ ಕಡಲ ಗಡಿಗೆ ಅಮೆರಿಕ ಯುದ್ಧ ನೌಕೆಗಳ ರವಾನೆ:

- ಜಾಗತಿಕ ಮಟ್ಟದಲ್ಲಿ ಚೀನಾ ತೆಗೆದಿರುವ ತಗಾದೆಯಿಂದ ಯುದ್ಧ ಭೀತಿ ಸೃಷ್ಟಿಯಾಗಿದೆ. ಸಾಗರ ಪ್ರದೇಶದಲ್ಲಿ ಚೀನಾ ಸಮರಾಭ್ಯಾಸ ಶುರು ಮಾಡಿದ ಬೆನ್ನ ಹಿಂದೆಯೇ ಅಮೆರಿಕ ದಕ್ಷಿಣ ಚೀನಾ ಕಡಲ ಪ್ರದೇಶಕ್ಕೆ ಯುದ್ಧ ವಿಮಾನಗಳನ್ನು ಹೊತ್ತ ಎರಡು ನೌಕೆಗಳನ್ನು ಕಳಿಸಿಕೊಟ್ಟುಸಡ್ಡು ಹೊಡೆದಿದೆ. ಯುಎಸ್‌ಎಸ್ ರೊನಾಲ್ಡ್ ರೇಗನ್ ಮತ್ತು ಯುಎಸ್‌ಎಸ್ ನಿಮಿಟ್ಸ್ ನೌಕೆಗಳು ಈಗಾಗಲೇ ದಕ್ಷಿಣ ಚೀನಾ ಸಮುದ್ರ ತಲುಪಿವೆ.
- ಪ್ರಾದೇಶಿಕ ಭದ್ರತೆ ಮತ್ತು ಸ್ಥಿರತೆ ಕಾಯಲು ನಾವು ಬದ್ದರಾಗಿದ್ದೇವೆ. ಇದನ್ನು ನಮ್ಮ ಪಾಲುದಾರರು ಮತ್ತು ಮಿತ್ರರಿಗೆ ನಿಸ್ಸಂದಿಗ್ಧವಾದ ಸಂಕೇತದ ಮೂಲಕ ರವಾನಿಸುತ್ತಿದ್ದೇವೆ, ಎಂದು ಅಮೆರಿಕದ ರೇರ್ ಅಡ್ಮಿರಲ್ ಜಾರ್ಜ್ ಎಂ.ವಿಕ್ ಆಫ್ ಹೇಳಿರುವುದಾಗಿ ವಾಲ್‌ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಅಮೆರಿಕದ ಒಟ್ಟು ಆರು ಯುದ್ಧ ನೌಕೆಗಳು ಈಗ ಒತೀನಾದ ಸಾಗರ ಗಡಿಗೆ ಬಂದು ತಲುಪಿವೆ. ಆದರೆ ಅವು ಸಮರಾಭ್ಯಾಸ ನಡೆಸುವ ತಾಣದ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಮೂಲಗಳು ತಿಳಿಸಿವೆ.

ಗಡಿ ವಿಷಯದಲ್ಲಿ ಭೂತಾನ್‌ನಲ್ಲೂ ವಿವಾದ ತೆಗೆದ ಚೀನಾ:

- ಲಡಾಖ್‌ನ ಗಲ್ವಾನ್ ಕಣಿವೆಯಲ್ಲಿ ಭಾರತದ ಭೂಪ್ರದೇಶವನ್ನು ಅತಿಕ್ರಮಿಸಿ ಹಿಂಸಾತ್ಮಕ ಘರ್ಷಣೆ ನಡೆಸಿದ ಚೀನಾ ಈಗ ಭೂತಾನ್ ಜತೆಗೂ ಹೊಸ ಗಡಿ ವಿವಾದ ತೆಗೆದಿದೆ.
- ಭೂತಾನ್‌ನ ತ್ರಾಶಿಗಾಂಗ್ ಜಿಲ್ಲೆಯಲ್ಲಿರುವ ಸಕ್ತೆಂಗ್ ವನ್ಯಜೀವಿ ಅಭಯಾರಣ್ಯಕ್ಕೆ ಗ್ಲೋಬಲ್ ಎನ್ವಿರಾನ್‌ಮೆಂಟ್ ಫೆಸಿಲಿಟಿಟಿಯಿಂದ (ಜಿಇಎಫ್) (ನೀಡಲಾಗುತ್ತಿದ್ದ ಅನುದಾನ

ತಡೆಗೆ ಚೀನಾದ ಮುಂದಾಗಿದೆ. ಅನುದಾನ ಪಡೆಯುತ್ತಿರುವ ಅಭಯಾರಣ್ಯ ಚೀನಾ ಹಾಗೂ ಭೂತಾನ್ ಗಡಿಯಲ್ಲಿದ್ದು, ಅದು ವಿವಾದಿತ ಪ್ರದೇಶವಾಗಿದೆ ಎಂದು ಚೀನಾ ಜಿಇಎಫ್‌ಗೆ ಹೇಳಿದ್ದು, ಸದ್ಯಕ್ಕೆ ಅನುದಾನ ನಿಲ್ಲಿಸುವಂತೆ ಮನವಿ ಮಾಡಿದೆ. ಆದರೆ ಭೂತಾನ್ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದೆ.

- ಸಕ್ತಿಂಗ್ ಅಭಯಾರಣ್ಯ ದೇಶದ ಅವಿಭಾಜ್ಯ ಹಾಗೂ ಸಾರ್ವಭೌಮ ಪ್ರದೇಶವಾಗಿದೆ ಎಂದು ಭೂತಾನ್ 'GEF'ಗೆ ಹೇಳಿದೆ.

10. ಜೈಪುರದಲ್ಲಿ ವಿಶ್ವದ 3ನೇ ಬೃಹತ್ ಸ್ಟೇಡಿಯಂ ನಿರ್ಮಾಣಗೊಳ್ಳಲಿದೆ:

- ಶೀಘ್ರದಲ್ಲೇ 75 ಸಾವಿರ ಆಸನ ಸಾಮರ್ಥ್ಯದ ಬೃಹತ್ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಗೊಳ್ಳಲಿದೆ. ಇದರೊಂದಿಗೆ ವಿಶ್ವದಲ್ಲಿ 3ನೇ ಅತಿದೊಡ್ಡ ಕ್ರಿಕೆಟ್ ಸ್ಟೇಡಿಯಂ ಹೊಂದಿದ ಸಂಸ್ಥೆ ಎಂಬ ಹೆಗ್ಗಳಿಕೆ ರಾಜಸ್ಥಾನ ಕ್ರಿಕೆಟ್ ಸ್ಟೇಡಿಯಂ ಸಂಸ್ಥೆ (ಆರ್‌ಸಿಎ) ಯದ್ದಾಗಲಿದೆ.
- ಅಹಮದಾಬಾದ್‌ನ ಮೊಟೆರಾ ಕ್ರೀಡಾಂಗಣ 1.10 ಲಕ್ಷ ಆಸನ ಸಾಮರ್ಥ್ಯ ಹಾಗೂ ಆಸ್ಟ್ರೇಲಿಯಾದ (ಎಂಸಿಜಿ ಅಥವಾ ಮೆಲ್ಬೋರ್ನ್ ಕ್ರಿಕೆಟ್ ಗ್ರೌಂಡ್) 10 ಲಕ್ಷ ಆಸನ ಸಾಮರ್ಥ್ಯಮೊದಲ ಎರಡು ಬೃಹತ್ ಕ್ರಿಕೆಟ್ ಸ್ಟೇಡಿಯಮ್‌ಗಳಾಗಿವೆ. 100 ಎಕರೆ ಪ್ರದೇಶದಲ್ಲಿ ಸ್ಟೇಡಿಯಂ ನಿರ್ಮಾಣಗೊಳ್ಳಲಿದೆ.
- ವಿಶ್ವ ದರ್ಜೆಯ ಹಸಿರು ಕ್ರೀಡಾಂಗಣದಲ್ಲಿ ಮಾಡರ್ನ್ ಗ್ರ್ಯಾಂಡ್ ಪೆವಿಲಿಯನ್ ಸ್ಟ್ಯಾಂಡ್‌ಗಳು, ಕಾರ್ಪೊರೇಟ್ ಬಾಕ್ಸ್‌ಗಳು, ಫ್ಲಶ್ ಸ್ಪೋರ್ಟ್ಸ್ ಫೀಲ್ಡ್, ಒಳಾಂಗಣ ಕ್ರೀಡೆಗಳಿಗೆ ವಿಶ್ವದರ್ಜೆಯ ಸೌಕರ್ಯ ತರಬೇತಿ ವ್ಯವಸ್ಥೆಗಳಿರಲ್ಲಿವೆ, ಎಂದು ಆರ್‌ಸಿಎ ಕಾರ್ಯದರ್ಶಿ ಮಹೇಂದ್ರ ಶರ್ಮ ಶನಿವಾರ ಮಾಧ್ಯಮಗಳಿಗೆ ತಿಳಿಸಿದ್ದಾರೆ.

11. ಗಾಳಿಯಿಂದಲೂ ಹರಡುತ್ತಿದೆ ಕೊರೋನಾ ಸೋಂಕು :

- ಗಾಳಿಯಲ್ಲಿ ಇರುವ ಕೊರೋನಾ ವೈರಸ್‌ನ ಅತಿಸಣ್ಣ ಜೀವಕಣಗಳು ಮನುಷ್ಯರಿಗೆ ಸೋಂಕು ಉಂಟು ಮಾಡಬಹುದು. ವಿಶ್ವ ಆರೋಗ್ಯ ಸಂಸ್ಥೆಯು ತನ್ನ ಮಾರ್ಗಸೂಚಿಗಳಲ್ಲಿ ಬದಲಾವಣೆ ತರಬೇಕಾದ ಅಗತ್ಯವಿದೆ ಎಂದು 32 ರಾಷ್ಟ್ರಗಳ 239 ವಿಜ್ಞಾನಿಗಳು ವಿಶ್ವ ಆರೋಗ್ಯ ಸಂಸ್ಥೆಗೆ ಪತ್ರ ಬರೆದಿದ್ದಾರೆ.
- ಸೋಂಕಿತರು ಸೀನಿದಾಗ, ಕೆಮ್ಮಿದಾಗ ಅಥವಾ ಮಾತನಾಡುವಾಗ ಬಾಯಿ ಅಥವಾ ಮೂಗಿನಿಂದ ಹೊರಬೀಳುವ ದ್ರವಕಣಗಳಿಂದಾಗಿ ಕೊರೋನಾ ವೈರಸ್ ಸೋಂಕು ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿತ್ತು. ಆದರೆ, ಗಾಳಿಯಲ್ಲಿರುವ ಅತಿಸಣ್ಣ ಕಣಗಳಿಂದಲೂ ಸೋಂಕು ಹರಡುತ್ತದೆ ಎಂದು ಈ ವಿಜ್ಞಾನಿಗಳು ಹೇಳಿದ್ದಾರೆ.
- ಸೀನಿದಾಗ ಹೊರಬರುವ ದ್ರವಕಣಗಳ ಗುಳ್ಳೆಗಳು ಗಾಳಿಯಲ್ಲಿ ಹಿಗ್ಗುತ್ತವೆ. ಸೀನಿದಾಗ ವೇಗವಾಗಿ ಹೊರಬೀಳುವ ದ್ರವಕಣಗಳು ಒಂದು ಕೊಠಡಿಯಷ್ಟು ದೊಡ್ಡದಾಗಿ ಹರಡಿಕೊಳ್ಳುತ್ತವೆ. ದೂರ ಕ್ರಮಿಸುತ್ತವೆ. ಇಂಥ ಅತಿಸೂಕ್ಷ್ಮ ಕಣಗಳು ಗಾಳಿಯಲ್ಲಿ ತೇಲುತ್ತಾ ಮತ್ತೊಬ್ಬರ ದೇಹ ಪ್ರವೇಶಿಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ ಎಂದು ವಿಜ್ಞಾನಿಗಳು ಹೇಳಿದ್ದಾರೆ.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

12. ಭಾರತ–ಚೀನಾ ವಿವಾದ :

- ಗಲ್ವಾನ್ ನದಿಯ ತೀರವನ್ನು ಪೂರ್ತಿಯಾಗ್ ಕಬಳಿಸುವ ಯೋಜನೆಯೇ ಚೀನಾಕ್ಕೆ ಇತ್ತು. ಆದರೆ ಘರ್ಷಣೆ ಪಡೆದುಕೊಂಡ ಸ್ವರೂಪ, ಭಾರತ ಪ್ರಯೋಗಿಸಿದ ಒತ್ತಡ ತಂತ್ರಗಳು, ಅಂತರರಾಷ್ಟ್ರೀಯವಾಗಿ ಈ ನಡೆ ತನಗೆ ರಿವರ್ಸ್ ಹೊಡೆಯಬಹುದಾದ ಸಾಧ್ಯತೆ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಚೀನಾ ಈಗ ಒಂದೂವರೆ ಕಿಲೋಮೀಟರ್‌ನಷ್ಟು ಹಿಂದೆ ಸರಿದಿದೆ. ಚೀನಾದಂತೆ ಭಾರತವೂ ಸೇನೆ ಜಮಾವಣೆ ಮಾಡಿ ತಕ್ಕ ಪ್ರತ್ಯುತ್ತರ ನೀಡಿದೆ.
- ಘರ್ಷಣೆ ನಡೆದ ಗಲ್ವಾನ್ ಪ್ರದೇಶ, ಲಡಾಖ್‌ನ ಪ್ಯಾಂಗಾಂಗ್ ಸರೋವರ ಮತ್ತಿತರ ಕಡೆಗಳಲ್ಲಿ ಉಭಯ ದೇಶಗಳೂ ದೊಡ್ಡ ಪ್ರಮಾಣದ ಸೈನ್ಯವನ್ನು ಜಮಾಯಿಸಿವೆ. ಮೊದಲು ಚೀನಾ

ತನ್ನ ಸೈನಿಕರನ್ನು ಸೇರಿಸಿ ಭಾರತವನ್ನು ಹೆದರಿಸಲು ನೋಡಿತು.

- ಆದರೆ ಭಾರತ ಕೂಡ ಅದೇ ಪ್ರಮಾಣದ ಸೈನಿಕರು ಹಾಗೂ ಶಸ್ತ್ರಾಸ್ತ್ರಗಳನ್ನು ಚೀನಾಕ್ಕಿಂತಲೂ ವೇಗವಾಗಿ ಗಡಿಯಲ್ಲಿ ಜಮಾಯಿಸಿ, ತನ್ನ ಸನ್ನದ್ಧತೆ 1962ರ ಹಾಗಲ್ಲ ಎಂಬ ಸಂದೇಶವನ್ನು ಸಷ್ಟವಾಗಿ ಸಾರಿತು.
- ಲೇಹ್‌ಗೆ ಪ್ರಧಾನಿ ಭೇಟಿ ನೀಡಿ ಘರ್ಷಣೆ ಯಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಸೈನಿಕರನ್ನು ಮಾತನಾಡಿಸಿ ಧೈರ್ಯ ತುಂಬಿದರು
- ಘರ್ಷಣೆ ನಡೆದ ಗಲ್ವಾನ್ ಪ್ರಾಂತ್ಯಕ್ಕೆ ಸಮೀಪದ ಲೇಹ್‌ಗೆ ಪ್ರಧಾನಿ ಮೋದಿ ಅಚ್ಚರಿಯ ಭೇಟಿ ನೀಡಿ, ಘರ್ಷಣೆ ಯಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಸೈನಿಕರನ್ನು ಮಾತನಾಡಿಸಿ ಧೈರ್ಯ ತುಂಬಿದರು ಹುತಾತ್ಮರ ತ್ಯಾಗವನ್ನು ದೇಶ ಮರೆಯಲಾರದು ಎಂದರು. ಭಾರತದ ಈ ನಡೆ ಚೀನಾವನ್ನು ಅಚ್ಚರಿಯಲ್ಲಿ ಕೆಡವಿತು. ಭಾರತ ಸುಮ್ಮನೆ ಕುಳಿತೀತು ಎಂದು ಅದು ಭಾವಿಸಿದ್ದರೆ, ತಕ್ಕ ಪ್ರತ್ಯುತ್ತರ ನೀಡಲು ಸದಾ ಸಿದ್ಧ ಎಂದ ಪ್ರಧಾನಿ ಮಾತು ಚೀನಾಕ್ಕೆ ಎಚ್ಚರಿಕೆಯ ಸಂದೇಶದಂತ ಕೇಳಿಸಿರಬಹುದು.
- ಭಾರತದ ಭದ್ರತಾ ಸಲಹೆಗಾರ ಅಜಿತ್ ದೋವಲ್ ಹಾಗೂ ಚೀನಾದ ವಿದೇಶಾಂಗ ಖಾತೆ ಸಚಿವ ವಾಂಗ್ ಲಿ ದೂರವಾಣಿ ಮೂಲಕ ಶಾಂತಿ ಮಾತುಕತೆ ಎರಡು ದಿನದಿಂದ ಭಾರತದ ಭದ್ರತಾ ಸಲಹೆಗಾರ ಶ್ರೀ. ಅಜಿತ್ ದೋವಲ್ ಹಾಗೂ ಚೀನಾದ ವಿದೇಶಾಂಗ ಖಾತೆ ಸಚಿವ ವಾಂಗ್ ಲಿ ದೂರವಾಣಿ ಮಾತುಕತೆಯಲ್ಲಿ ನಿರತರಾಗಿದ್ದರು. ಉಭಯ ದೇಶಗಳೂ ಶಾಂತಿಯಿಂದ ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಬೇಕು ಎಂದು ಇಬ್ಬರೂ ಒಪ್ಪಿದ್ದಾರೆ. ಗಡಿಯ ಕುರಿತಾದ ಯಾವುದೇ ತಕರಾರುಗಳು ದೊಡ್ಡ ಬಿಕ್ಕಟ್ಟಾಗಿ ಬೆಳೆಯಲು ಬಿಡಬಾರದು; ಅದನ್ನು ಮಾತುಕತೆಯ ಮೂಲಕ ಪರಿಹರಿಸಿ ಕೊಳ್ಳಬೇಕು ಎಂದು ತೀರ್ಮಾನಕ್ಕೆ ಬರಲಾಗಿದೆ.

ಗಡಿಯಲ್ಲಿ ನಿರಂತರ ಕಮಾಂಡರ್‌ಗಳ ಮಾತುಕತೆ

- ಘರ್ಷಣೆ ನಡೆದಂದಿನಿಂದ ಈವರೆಗೂ ಉಭಯ ದೇಶಗಳ ಕಮಾಂಡರ್‌ಗಳು ನಿರಂತರ ಮಾತುಕತೆಯಲ್ಲಿದ್ದಾರೆ. ಉಭಯ ದೇಶಗಳ ಸೈನಿಕರು ಪಾಲಿಸಬೇಕಾದ ಶಿಸ್ತು, ಪಹರೆ ನಡೆಸಬೇಕಾದ ಜಾಗಗಳು, ಯಾವ ಪಾಯಿಂಟ್ ವರೆಗೆ ಯಾವ ದೇಶದವರು ಗಸ್ತು ನಡೆಸಬಹುದು, ಯಾವ ಕಾಮಗಾರಿ ನಡೆಸಬಹುದು ಯಾವುದನ್ನು ನಡೆಸಬಾರದು, ಗಡಿ ಠಾಣೆಗಳು ಎಲ್ಲಿರಬೇಕು ಇತ್ಯಾದಿಗಳ ಕುರಿತು ಸಮಗ್ರ ಚರ್ಚೆ ನಡೆಯುತ್ತಿದೆ.

ದಕ್ಷಿಣ ಚೀನಾ ಸಮುದ್ರಕ್ಕೆ ಅಮೆರಿಕದ ತನ್ನ ಏರ್‌ಕ್ರಾಫ್ಟ್ ಕ್ಯಾರಿಯರ್‌ಗಳನ್ನು ರವಾನಿಸಿದೆ

- ದಕ್ಷಿಣ ಚೀನಾ ಸಮುದ್ರದಲ್ಲಿ ಅಮೆರಿಕದ 'ರೊನಾಲ್ಡ್ ರೇಗನ್,' 'ನಿಮಿಟ್' ಎಂಬ ಹೆಸರಿನ ಎರಡು ಏರ್‌ಕ್ರಾಫ್ಟ್ ಕ್ಯಾರಿಯರ್‌ಗಳು (ಫೈಟರ್ ಜೆಟ್‌ಗಳು ಹಾಗೂ 1 ಕ್ಷಿಪಣಿಗಳನ್ನು ಹೊತ್ತು ಬಂದ ಬೃಹತ್ ಹಡಗುಗಳು) ಅಮರಿಕ ತೇಲುತ್ತಾ ರಕ್ಷಣಾ ಡ್ರಿಲ್ ನಡೆಸಿದವು.
- ಇದು ಚೀನಾ ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸುವ ಪ್ರದೇಶಕ್ಕೆ ಸಮೀಪದಲ್ಲೇ ಇವು ಓಡಾಡಿದವು. ಈ ಪ್ರದೇಶ ಹಾಗೂ ಇಲ್ಲಿರುವ ದ್ವೀಪಗಳೆಲ್ಲ ತನ್ನದೆಂದೇ ಚೀನಾ ಹೇಳಿ ಕೊಳ್ಳುತ್ತದೆ. ಸಾಮಾಜಸುವುದು ಆದರೆ ದಕ್ಷಿಣ ಪೆಸಿಫಿಕ್ ಪ್ರಾಂತ್ಯದ ದೇಶಗಳೆಲ್ಲ ಇದನ್ನು ವಿರೋಧಿಸುತ್ತವೆ.
- ಇದು ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟಿನ ಹಡಗುಗಳು ಓಡಾಡುವ ಪ್ರದೇಶ. ಇದು ಭಾರತಕ್ಕೂ ಸಮೀಪವಾಗಿದೆ. ಯುದ್ಧಸನ್ನದ್ಧ ಹಡಗುಗಳನ್ನು ಝಳಪಿಸುವ ಮೂಲಕ ಅಮೆರಿಕ, ತನ್ನ ಮಿತ್ರರಾಷ್ಟ್ರ ಭಾರತದ ನೆರವಿಗೆ ತಾನಿದ್ದೇನೆ ಎಂಬ ಸ್ಪಷ್ಟ ಸಂದೇಶವನ್ನು ಚೀನಾಕ್ಕೆ ರವಾನಿಸಿದೆ.

13. ಭಾರತದಲ್ಲಿ ಚೀನಾ ವಿರೋಧಿ ಮನೋಭಾವ ಹೆಚ್ಚುತ್ತಿದೆ:

- ಭಾರತದಲ್ಲಿ ಉಲ್ಬಣಿಸುತ್ತಿರುವ ಚೀನಾ ವಿರೋಧಿ ಭಾವನೆಯನ್ನು ಚೀನಾ ಗಮನಿಸಿದೆ. ಗಡಿಯಲ್ಲಿ ಉಪಟಳ ನೀಡುವುದರಿಂದ ಹಿಡಿದು, ರಾಶಿ ರಾಶಿ ಉತ್ಪನ್ನಗಳನ್ನು ಅಗ್ಗದ ದರದಲ್ಲಿ ತಂದು ಸುರಿದು ಸ್ಥಳೀಯ ಕೈಗಾರಿಕೆಗಳ ನಾಶಕ್ಕೆ ಕಾರಣವಾದ ಚೀನಾದ ಕುರಿತು ಇರುವ ಭಾರತೀಯರ ಸಿಟ್ಟು ಸ್ವದೇಶಿ ಚಳವಳಿಯಾಗಿ ರೂಪುಗೊಳ್ಳುವುದು ಚೀನಾಕ್ಕೆ ಹಾನಿಕರ ಆಗಬಹುದು ಎಂಬ ಅರಿವು ಅದಕ್ಕೆ ಇದೆ. 5.5 ಲಕ್ಷ ಕೋಟಿ ರೂಪಾಯಿಗಳ ಮೌಲ್ಯದ ನಾನಾ ಸಾಮಗ್ರಿಗಳನ್ನು ಚೀನಾದಿಂದ ಭಾರತ ಆಮದು ಮಾಡಿಕೊಳ್ಳುತ್ತಿದೆ. ಇದು ಇಲ್ಲವಾಗಬಹುದು ಎಂಬುದು ಚೀನಾದ ಆತಂಕಗಳಲ್ಲಿ ಒಂದು.
- ಭಾರತವನ್ನು ಹೆದರಿಸಿ ಅಂಕೆಯಲ್ಲಿಟ್ಟುಕೊಳ್ಳುವ ಚೀನಾದ ತಂತ್ರ ತಿರುಗೇಟು ಹೊಡೆದಿದೆ. ಭಾರತ ಹೆಚ್ಚು ಹೆಚ್ಚಾಗಿ ಅಮೆರಿಕದತ್ತ ವಾಲುತ್ತಿದೆ ಎಂಬುದು ಚೀನಾಕ್ಕೆ ಸ್ಪಷ್ಟವಾಗಿದೆ.

14. ಚೀನಾದ ವಿರುದ್ಧ ವಾಣಿಜ್ಯ ಸಮರ ಸಾರಲು ಮುಂದಾದ ಭಾರತ:

- 'ದೇಶದ ಭದ್ರತೆಗೆ ಬೆದರಿಕೆಯಾಗಿವೆ' ಎಂದು ಹೆಸರಿಸಿ ಚೀನಾ ಮೂಲದ 50 ಆ್ಯಪ್‌ಗಳನ್ನು ಬ್ಯಾನ್ ಮಾಡಿದ ಭಾರತದ ಕ್ರಮ ಮಾಸ್ಟರ್ ಸ್ಟ್ರೋಕ್ ಆಗಿತ್ತು. ಇದರಿಂದ ಈ ಕಂಪನಿಗಳು 60 ಕೋಟಿ ಸ್ಮಾರ್ಟ್‌ಫೋನ್ ಬಳಕೆದಾರರ ಮಾರುಕಟ್ಟೆಯನ್ನು ಒಂದೇ ಏಟಿಗೆ ಕಳೆದುಕೊಂಡವು. ಯಾವುದೇ ಆರ್ಥಿಕ ದುಷ್ಪರಿಣಾಮವನ್ನು ಎದುರಿಸಿಯೂ ಚೀನಾವನ್ನು ಮಣಿಸಲು ತಾನು ಸಿದ್ಧ ಎಂಬ ಎಚ್ಚರಿಕೆಯನ್ನು ಭಾರತ ರವಾನಿಸಿತು. ಭಾರತದಲ್ಲಿ ಭಾರಿ ಹೂಡಿಕೆ ಮಾಡಿರುವ ಚೀನಾದ ಬೃಹತ್ ಕಂಪನಿಗಳಾದ ಬೈಟ್‌ಡ್ಯಾನ್ಸ್, ಅಲಿಬಾಬಾ ಹಾಗೂ ಟೆನ್ಸೆಂಟ್ ಗಳಿಗೆ ಭಾರತದ ಈ ಕ್ರಮದಿಂದ ಭಾರಿ ಆತಂಕವಾಗಿದೆ. ಈಗ ಆ್ಯಪ್‌ಗಳನ್ನಷ್ಟೇ ನಿಷೇಧಿಸಿರುವ ಭಾರತ ಸಂಪೂರ್ಣ ಬಾಗಿಲು ಮುಚ್ಚಿದರೆ ಇವು ಇಲ್ಲಿ ಹೂಡಿರುವ ಕೋಟ್ಯಂತರ ಹಣ ನೀರುಪಾಲಾಗುತ್ತದೆ. ಹೀಗಾಗಿ ಇವು ಚೀನಾ ಸರ್ಕಾರಕ್ಕೆ ಒತ್ತಡ ಹೇರಿದ್ದರೆ ಆಶ್ಚರ್ಯವಿಲ್ಲ. ಭಾರತದ ನಡೆಯನ್ನೇ ಇತರ ದೇಶಗಳು ಮಾದರಿಯಾಗಿ ಪರಿಗಣಿಸಿದರೆ ಏನು ಗತಿ ಎಂಬ ಭೀತಿ ಚೀನಾಕ್ಕೆ ಮೂಡಿತು. ಭಾರತದ ಕ್ರಮದ ಬೆನ್ನಲ್ಲೇ, ಚೀನಾ ಮೂಲದ ಹುವೈ ಮತ್ತಿತರ ಟೆಲಿಕಾಂ ಕಂಪನಿಗಳನ್ನು ಅಮೆರಿಕ ನಿಷೇಧಿಸಿತು. ಆಸ್ಟ್ರೇಲಿಯ, ಬ್ರಿಟನ್‌ಗಳು ಕೂಡ ಇದೇ ಕೂಗು ಎತ್ತಿದವು. ಚೀನಾ ಆತಂಕಕ್ಕೊಳಗಾಯಿತು. ಚೀನಾ ಇದರ ವಿರುದ್ಧ ವಿಶ್ವ ವಾಣಿಜ್ಯ ಸಂಸ್ಥೆಯಲ್ಲಿ ಕೇಸು ದಾಖಲಿಸಬಹುದು ಎಂದು ಕೆಲವು ತಜ್ಞರು ಹೇಳಿದರಾದರೂ, ಅಂಥದೇನೂ ನಡೆಯಲಿಲ್ಲ.

KAS,FDA,SDA,PSI-
KPSC Technical and Non Technical
ಜ್ಞಾನಗಂಗೋತ್ರಿಯಲ್ಲಿ ಆನ್‌ಲೈನ್ ತರಗತಿಗಳು
ತರಗತಿಗಳಿಗಾಗಿ JG's Online Classes ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ
ಹೆಚ್ಚಿನ ವಿವರಗಳಿಗಾಗಿ– www.iasjnana.com ಗೆ ಭೇಟಿ ನೀಡಿ
ಮೇಲಿನ ಎಲ್ಲಾ ಪರೀಕ್ಷೆಗಳಿಗೆ ಪರೀಕ್ಷಾ ಸರಣಿ
ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಪ್ರಾರಂಭಿಸಲಾಗಿದೆ
ಹೊಸ ಮಾದರಿಯೊಂದಿಗೆ ಪಿಎಸ್‌ಐ ಟೆಸ್ಟ್ ಸರಣಿ ಪ್ರಾರಂಭವಾಗಿದೆ
Contact- Jnanagangothri Academy,
Vijayanagar, B'lure
99163-99276; 080-41547999

15. 'ರೈಲ್ವೆ, ರಸ್ತೆ' ನಿರ್ಮಾಣ ಯೋಜನೆಯಿಂದಲೂ ಚೀನಾದ ಕಂಪನಿಗಳು ಕಿಕೌಟ್ :

- ಬೀಜಿಂಗ್ ಮೂಲದ ಎರಡು ಕಂಪನಿಗಳೊಂದಿಗೆ ಭಾರತೀಯ ರೈಲ್ವೆ ಮಾಡಿಕೊಂಡಿದ್ದ ಮೂಲಸೌಕರ್ಯ ಅಭಿವೃದ್ಧಿಯ 500 ಕೋಟಿ ರೂ. ಮೌಲ್ಯದ ಕಾಮಗಾರಿ ಒಪ್ಪಂದ ರದ್ದು ಮಾಡಿತು. ರಸ್ತೆ ಸಾರಿಗೆ, ಕಿರು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಲ್ಲೂ ಚೀನಾದ ಕಂಪನಿಗಳಿಗೆ ಅವಕಾಶ ನೀಡುವ ಪ್ರಸಕ್ತಿ ಇಲ್ಲ. ಈಗ ಜಾರಿಯಲ್ಲಿರುವ ಹೆದ್ದಾರಿ ಯೋಜನೆಗಳಲ್ಲೂ ಯಾವುದಾದರೂ ಕಂಪನಿ ಚೀನಾದ ಜೊತೆಗೆ ಜಂಟಿ ಒಪ್ಪಂದ ಹೊಂದಿದ್ದರೆ ಅದನ್ನು ಕೈ ಬಿಡಲಾಗುವುದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಘೋಷಿಸಿದರು.
- ಚೀನಾದ ಹಲವು ಕಂಪನಿಗಳು ಭಾರತದಲ್ಲಿ ಹೀಗೆ ಸಾವಿರಾರು ಕೋಟಿ ರೂ. ಹೂಡಿಕೆ ಮಾಡಿವೆ ಇವೆಲ್ಲವನ್ನೂ ಒಂದೇ ಸಲಕ್ಕೆ ಕಳೆದುಕೊಳ್ಳುವ ಭೀತಿ ಚೀನಾಕ್ಕೆ ಆವರಿಸಿತು.
- ಚೀನಾದಿಂದ ಆಮದಾದ ಸಾವಿರಾರು ಕಂಟೈನರ್‌ಗಳನ್ನು ಹೊತ್ತ ಹಡಗುಗಳು ಭಾರತದ ಬಂದರುಗಳಲ್ಲಿ ಎರಡು ವಾರದಿಂದ ಬೀಡುಬಿಟ್ಟಿದ್ದರೂ, ಇವುಗಳಿಂದ ಸಾಮಗ್ರಿ ಇಳಿಸಲು ಸರ್ಕಾರ ಅವಕಾಶ ನೀಡಲಿಲ್ಲ. ಇವು ಚೀನಾ, ಮಕಾವು, ಹಾಂಕಾಂಗ್ ಗಳಿಂದ ಬಂದ ಸಾಮಗ್ರಿಗಳು. ಇದರಲ್ಲಿ ಚೀನಾದ ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್ ಉಪಕರಣ, ಸಿದ್ಧ ಉಡುಪುಗಳು, ಸಿದ್ಧ ಆಹಾರ, ಔಷಧಗಳು ಮತ್ತಿತರ ಸಾಮಗ್ರಿಗಳಿವೆ.
- ಜರ್ಮನಿ, ಫ್ರಾನ್ಸ್, ಕೊರಿಯಾ ಮುಂತಾದ ಕಡೆಗಳಿಂದ ಚೀನಾ ಮಾರ್ಗವಾಗಿ ಬಂದಿರುವ ಸಾಮಗ್ರಿಗಳಿಗೂ ದೇಶದೊಳಗೆ ಬರಲು ಅನುಮತಿ ಸಿಕ್ಕಿಲ್ಲ. ಇದರಿಂದ ಆಯಾ ಕಂಪನಿಗಳಿಗೆ ಲಾಭದ ಪ್ರಮಾಣ ಕಡಿಮೆಯಾಗಿ ನಷ್ಟ ಹೆಚ್ಚುತ್ತ ಹೋಗುತ್ತಿದೆ. ಇತರ ದೇಶಗಳು ಚೀನಾದ ಮೂಲಕ ಭಾರತಕ್ಕೆ ಸಾಮಗ್ರಿ ಕಳಿಸಲು ಹಿಂದೇಟು ಹಾಕುತ್ತಿವೆ.

16. ವಾಯು ಮಾಲಿನ್ಯ ತಡೆಯಲು ರೈಲಿಗೆ ಸೌರ ವಿದ್ಯುತ್ ಬಳಕೆಗೆ ಬಿನಾ ಸ್ಥಾವರ ಕಾರ್ಯಾರಂಭ:

- ವಾಯು ಮಾಲಿನ್ಯ ತಡೆಯುವ ದಿಸೆಯಲ್ಲಿ ದಿಟ್ಟ ಹೆಜ್ಜೆ ಇರಿಸಿರುವ ಭಾರತೀಯ ರೈಲ್ವೆ ಮಧ್ಯಪ್ರದೇಶದ ಬಿನಾದಲ್ಲಿ 1.7 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರ ಸ್ಥಾಪಿಸಿದೆ. ರೈಲುಗಳ ಸಂಚಾರಕ್ಕೆ ಈ ವಿದ್ಯುತ್ ಬಳಕೆಯಾಗಲಿದೆ. ಈ ಮಹತ್ವಾಕಾಂಕ್ಷಿ ಸ್ಥಾವರ ಈಗಾಗಲೇ ಪೂರ್ಣಗೊಂಡಿದ್ದು ಪ್ರಾಯೋಗಿಕ ಉತ್ಪಾದನೆ ಆರಂಭಿಸಿದೆ. ಮುಂದಿನ 15 ದಿನಗಳಲ್ಲಿ ಪೂರ್ಣ ಪ್ರಮಾಣದ ಕಾರ್ಯಾರಂಭ ಮಾಡಲಿದೆ.
- ಇದರಿಂದ ಇಲಾಖೆಗೆ ವಾರ್ಷಿಕ 1.37 ಕೋಟಿ ರೂ. ವಿದ್ಯುತ್ ವೆಚ್ಚ ಉಳಿತಾಯವಾಗಲಿದೆ. ಸ್ಥಾವರದಿಂದ ಹರಿಯುವ 25,000 ವೋಲ್ಟ್ ಸೌರ ವಿದ್ಯುತ್ ಅನ್ನು ರೈಲ್ವೆ ಓವರ್‌ಹೆಡ್ ಲೈನ್‌ಗೆ ಜೋಡಿಸಲಾಗುವುದು. ಇದರಿಂದ ವೆಚ್ಚ ಉಳಿತಾಯದ ಜತೆಗೆ ಮಾಲಿನ್ಯ ನಿಯಂತ್ರಣವೂ ಸಾಧ್ಯವಾಗಲಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.
- ಕಳೆದ ವರ್ಷ ನವೆಂಬರ್‌ನಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಒಂದೇ ವರ್ಷದಲ್ಲಿ ಸ್ಥಾವರ ಕಾರ್ಯಾರಂಭಕ್ಕೆ ಸಿದ್ದಗೊಂಡಿದೆ. ರೈಲ್ವೆ ಎಂಜಿನಿಯರ್‌ಗಳ ಸಲಹೆ ಪಡೆದು ಬಿಎಚ್ ಇಎಲ್ ಇದನ್ನು ಸಂಪೂರ್ಣ ವಿನ್ಯಾಸಗೊಳಿಸಿದೆ. ಸಾರ್ವಜನಿಕ ಸಾರಿಗೆ ನೆಟ್‌ವರ್ಕ್ ಅನ್ನು ಇಂಗಾಲ ಮುಕ್ತಗೊಳಿಸಲು ನಿರ್ಧರಿಸಿ ರೂಪಿಸಿರುವ 'ನೆಟ್ ಜೀರೊ' ಯೋಜನೆಯಡಿ ರೈಲ್ವೆ ಇಲಾಖೆ ಈ ಕಾಮಗಾರಿಯನ್ನು ಪೂರ್ಣಗೊಳಿಸಿದೆ.

17. ಲಾಕ್‌ಡೌನ್ ಅವಧಿಯಲ್ಲಿ ಖಾತೆ ತೆರೆಯಲು ಆಗದಿದ್ದವರಿಗೆ ಸುಕನ್ಯಾ ಸಮೃದ್ಧಿ ನಿಯಮ ಸಡಿಲ ಮಾಡಲಾಗಿದೆ:

- ಲಾಕ್‌ಡೌನ್ ಅವಧಿಯಲ್ಲಿ ಸುಕನ್ಯಾ ಸಮೃದ್ಧಿ ಯೋಜನೆ ಅಡಿಯಲ್ಲಿ ಖಾತೆ ತೆರೆಯಲು ಆಗದಿದ್ದವರಿಗೆ ಅನು ಕೂಲ ಆಗುವಂತೆ ವಯೋಮಿತಿ ಅರ್ಹತೆ ನಿಯಮಗಳನ್ನು ಸಡಿಲಗೊಳಿಸಲಾಗಿದೆ.
- 2020 ಮಾರ್ಚ್ 25 ರಿಂದ ಜೂನ್ 30 ರೊಳಗೆ 10 ವರ್ಷ ಆದ ಹೆಣ್ಣು ಮಕ್ಕಳ ಹೆಸರಿನಲ್ಲಿ ಖಾತೆ ತೆರೆಯಲು ಜುಲೈ 31ರ ತನಕ ಕಾಲಾವಕಾಶ ವಿಸ್ತರಿಸಲಾಗಿದೆ. ಸಾಮಾನ್ಯ ಸಂದರ್ಭದಲ್ಲಿ 10 ವರ್ಷದ ನಂತರ ಖಾತೆ ತೆರೆಯಲು ಆಗುವುದಿಲ್ಲ. ಅಂಚೆ ಇಲಾಖೆ ಈ ಕುರಿತ ಸೂಚನೆ ಪ್ರಕಟಿಸಿದೆ.
- ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಶೇ. 7.6ರ ಬಡ್ಡಿ ಸಿಗುತ್ತದೆ. ಒಂದು ವರ್ಷದಲ್ಲಿ ಗರಿಷ್ಠ 1.5 ಲಕ್ಷ ರೂ. ಹೂಡಿಕೆ ಮಾಡಬಹುದು. ಒಟ್ಟಿಗೆಯೇ ಅಥವಾ ಕಂತುಗಳಲ್ಲಿ ಠೇವಣಿ ಇಡಬಹುದು.
- ಒಂದು ಹೆಣ್ಣು ಮಗುವಿನ ಹೆಸರಿನಲ್ಲಿ ಒಂದು ಖಾತೆಯಂತೆ ಇಬ್ಬರು ಪುತ್ರಿಯರಿಗೆ ತೆರೆಯಬಹುದು. ಖಾತೆ ತೆರೆದ ನಂತರ 15 ವರ್ಷದ ತನಕ ಠೇವಣಿ ಇಡಬಹುದು. 21 ವರ್ಷ ಆದನಂತರ ಖಾತೆ ಮುಚ್ಚಲಾಗುತ್ತದೆ. ಖಾತೆದಾರರು ಆನ್ ಲೈನ್ ಮೂಲಕ ಕೂಡ ಠೇವಣಿ ಪಾವತಿಸಬಹುದು. ಈ ಯೋಜನೆಗೆ ಹಣ ಹೂಡಿದವರು ಆದಾಯ ತೆರಿಗೆ ವಿನಾಯಿತಿ ಪಡೆಯಲೂ ಅವಕಾಶವಿದೆ.

18. ಖಾಸಗಿ ಉದ್ಯೋಗದಲ್ಲಿ ಸ್ಥಳೀಯರಿಗೆ ಶೇ. 75 ರಷ್ಟು ಮೀಸಲಿಗೆ ಹರಿಯಾಣ ನಿರ್ಧಾರ:

- ಕೊರೋನಾ ಸೋಂಕು ಹಾವಳಿಯಿಂದ ಕಾರ್ಮಿಕರ ಮರುವಲಸೆ ಮಹಾಸ್ಫೋಟ ಘಟಿಸಿರುವ ನಡುವೆಯೇ ಹರಿಯಾಣ ಸರ್ಕಾರವು ರಾಜ್ಯದ ಖಾಸಗಿ ಕಂಪನಿಗಳಲ್ಲಿ ಸ್ಥಳೀಯರಿಗೆ ಶೇ. 75ರಷ್ಟು ಮೀಸಲಾತಿ ಕಡ್ಡಾಯಗೊಳಿಸಿ ಸುಗ್ರೀವಾಜ್ಞೆ ಹೊರಡಿಸಲು ತೀರ್ಮಾನಿಸಿದೆ.

19. ಶ್ವಾಸಕೋಶ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ 100 ನೆಬ್ಯುಲೈಸೇಷನ್ ಕೊಠಡಿಗಳ ನಿರ್ಮಾಣ:

- ಜಪಾನ್‌ನ ಹೆಲ್ತ್ ಕೇರ್ ಬ್ರಾಂಡ್ ಆಗಿರುವ ಓಮ್ರಾನ್ ಹೆಲ್ತ್ ಕೇರ್ ಇಂಡಿಯಾ ಕಂಪನಿಯು ಲುಪಿನ್ ಲಿಮಿಟೆಡ್ ಸಹಯೋಗದೊಂದಿಗೆ 100 ಉಸಿರಾಟ ಸಮಸ್ಯೆ ನಿರ್ವಹಣೆ ಕೇಂದ್ರಗಳನ್ನು (ನೆಬ್ಯುಲೈಸೇಷನ್ ರೂಮ್) ಆರಂಭಿಸಲಿದೆ.
- ಅಸ್ತಮಾ, ದೀರ್ಘ ಕಾಲದ ಶ್ವಾಸಕೋಶ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಈ ಕೇಂದ್ರಗಳು ಕಾರ್ಯನಿರ್ವಹಿಸಲಿವೆ. ಉಸಿರಾಟ ಸಮಸ್ಯೆ, ಹೊಂದಿರುವ ರೋಗಿಗಳಿಗೆ ಈ ಕೊಠಡಿಗಳು ನೆರವಾಗಲಿವೆ ಎಂದು ಓಮ್ರಾನ್ ಹೇಳಿದೆ.

20. ವಿಶ್ವದ ಅತಿದೊಡ್ಡ ಕೋವಿಡ್ ಆರೈಕೆ ಕೇಂದ್ರ 'ಸರ್ದಾರ್ ಪಟೇಲ್ ಕೋವಿಡ್ ಆರೈಕೆ ಕೇಂದ್ರ' ವನ್ನು ದೆಹಲಿಯಲ್ಲಿ ಉದ್ಘಾಟಿಸಿದ್ದಾರೆ:

- ಛತರ್‌ಪುರದ ರಾಧಾ ಸ್ವಾಮಿ ಸತ್ಸಂಗ್ ಬಿಯಾಸ್‌ನಲ್ಲಿ ನಿರ್ಮಿಸಲಾಗಿರುವ ವಿಶ್ವದ ಅತಿದೊಡ್ಡ ಆರೈಕೆ ಕೇಂದ್ರ 'ಸರ್ದಾರ್ ಪಟೇಲ್ ಕೋವಿಡ್ ಆರೈಕೆ ಕೇಂದ್ರ' ವನ್ನು ದೆಹಲಿ ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಲ್ ಅವರು ಉದ್ಘಾಟಿಸಿದರು.
- ಈ ಆರೈಕೆ ಕೇಂದ್ರ ಒಟ್ಟು 10,000 ಹಾಸಿಗೆಗಳನ್ನು ಒಳಗೊಂಡಿದ್ದು, ಲಕ್ಷಣ ರಹಿತ ಕೊರೋನಾ ಸೋಂಕಿತರಿಗೆ

ಇಲ್ಲಿ ಚಿಕಿತ್ಸೆಯನ್ನು ನೀಡಲಾಗುವುದು. ಮನೆಯಲ್ಲಿ ಪ್ರತ್ಯೇಕ ವಾಸ ಮಾಡಲು ಸಾಧ್ಯವಾಗದಂತಹ ಲಕ್ಷಣ ರಹಿತ ಸೋಂಕಿತರಿಗೂ ಇಲ್ಲಿ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಲಾಗಿದೆ.

- ಈ ಆರೈಕೆ ಕೇಂದ್ರವು 1,700 ಅಡಿ ಉದ್ದ, 700 ಅಡಿ ಅಗಲ ಸರಿಸುಮಾರು 20 ಫುಟ್ಬಾಲ್ ಮೈದಾನಗಳಷ್ಟು ವಿಸ್ತಾರವಾಗಿದೆ. ಅಲ್ಲದೇ ಒಟ್ಟು 200 ಅಂಕಣಗಳನ್ನು ಒಳಗೊಂಡಿದ್ದು, ಇದರಲ್ಲಿ ತಲಾ 50 ಹಾಸಿಗೆಗಳನ್ನು ಹಾಕಲಾಗಿದೆ.
- ದೆಹಲಿ ಸರ್ಕಾರವು ಆಡಳಿತಾತ್ಮಕ ಬೆಂಬಲವನ್ನು ನೀಡಿದರೆ, ಇಂಡೋ–ಟಿಬೆಟನ್ ಗಡಿ ಪೊಲೀಸ್ ಪಡೆ (ಐಟಿಬಿಪಿ) ಆರೈಕೆ ಕೇಂದ್ರದ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸಲಿದೆ. ಕೇಂದ್ರದ ಕಾರ್ಯಗಳಲ್ಲಿ ರಾಧಾಸ್ವಾಮಿ ಸತ್ಸಂಗ್‌ನ ಸ್ವಯಂಸೇವಕರು ಕೂಡ ಕೈ ಜೋಡಿಸಲಿದ್ದಾರೆ.

21. ಕೇರಳ ಸರ್ಕಾರ ಮಾಸ್ಕ್ ಧರಿಸುವುದು ಕಡ್ಡಾಯವೆಂದು ಸುಗ್ರೀವಾಜ್ಞೆ ಹೊರಡಿಸಿದೆ:

- ಕೊರೋನಾ ಸೋಂಕು ಹೆಚ್ಚುತ್ತಿರುವ ಕಾರಣಕ್ಕೆ ಕೇರಳ ಸರ್ಕಾರವು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದ್ದು, ಮಾಸ್ಕ್ ಧರಿಸುವುದು ಹಾಗೂ ಹೊರರಾಜ್ಯಗಳಿಂದ ಕೇರಳಕ್ಕೆ ಬರುವವರು ಹೆಸರು ನೋಂದಾಯಿಸುವುದನ್ನು ಕಡ್ಡಾಯಗೊಳಿಸಿ ಸುಗ್ರೀವಾಜ್ಞೆ ಹೊರಡಿಸಿದೆ. ಈ ನಿಯಮಗಳನ್ನು ಮೀರಿದವರಿಗೆ ಎರಡು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶ ಇರುತ್ತದೆ.
- ಹೊಸ ತಿದ್ದುಪಡಿಯ ಪ್ರಕಾರ, ರಾಜ್ಯದ ನಾಗರಿಕರೂ ತಮ್ಮ ಕೆಲಸದ ಸ್ಥಳ ಅಥವಾ ಸಾರ್ವಜನಿಕ ಸ್ಥಳ ಮತ್ತು ವಾಹನಗಳಲ್ಲಿ ಕಡ್ಡಾಯವಾಗಿ ಮೂಗು ಹಾಗೂ ಬಾಯಿಯನ್ನು ಮುಚ್ಚಿಕೊಳ್ಳುವಂತೆ ಮಾಸ್ಕ್ ಧರಿಸಬೇಕು. ಪ್ರತಿಯೊಬ್ಬರೂ ಆರು ಅಡಿಗಳ ಅಂತರವನ್ನು ಕಾಪಾಡಿಕೊಳ್ಳಬೇಕು, ಹೊರರಾಜ್ಯ ಅಥವಾ ಹೊರದೇಶಗಳಿಂದ ಕೇರಳಕ್ಕೆ ಬರುವ ಪ್ರತಿಯೊಬ್ಬರೂ ವೆಬ್ ಆಧರಿತ 'ಕೋವಿಡ್–19 ಜಾಗೃತ ಇ–ವೇದಿಕೆ'ಯಲ್ಲಿ ತಮ್ಮ ವಿವರಗಳನ್ನು ತುಂಬಬೇಕು ಮತ್ತು ಪ್ರತ್ಯೇಕ ವಾಸವನ್ನು ಅನುಭವಿಸಬೇಕು.

22. ಮಾನವ ಹಕ್ಕುಗಳ ಮೇಲೆ ಕೋವಿಡ್–19 ಪ್ರಭಾವದ ಕುರಿತ ಅವಲೋಕನಕ್ಕಾಗಿ ಎನ್‌ಎಚ್‌ಆರ್‌ಸಿ ತಜ್ಞರ ಸಮಿತಿ ರಚಿಸಿದೆ:

- ಮಾನವ ಹಕ್ಕುಗಳ ಮೇಲೆ ಕೋವಿಡ್–19 ಪ್ರಭಾವದ ಕುರಿತ ಅವಲೋಕನಕ್ಕಾಗಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ಹನ್ನೊಂದು ಸದಸ್ಯರ ತಜ್ಞರ ಸಮಿತಿ ರಚಿಸಿದೆ.
- ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನದ ಅಧ್ಯಕ್ಷ ಡಾ. ಕೆ.ಎಸ್. ರೆಡ್ಡಿ ಮತ್ತು ಹಕ್ಕುಗಳ ಕಾರ್ಯಕರ್ತ ಮಾಜಾ ದಾರುವಾಲಾ ಅವರು ಈ ಸಮಿತಿಯಲ್ಲಿದ್ದಾರೆ.
- ವಿಶೇಷವಾಗಿ ತಳ ಸಮುದಾಯದ ಹಾಗೂ ದುರ್ಬಲ ವರ್ಗದವರ ಮೇಲೆ ಲಾಕ್‌ಡೌನ್‌ನಿಂದಾದ ಪರಿಣಾಮಗಳ ಕುರಿತು ಸಮಿತಿ ಅಧ್ಯಯನ ನಡೆಸಲಿದೆ.
- ದೇಶ ಅಥವಾ ವಿದೇಶದ ಯಾವುದೇ ಭಾಗದಲ್ಲಿ ಮಾನವ ಹಕ್ಕುಗಳ ರಕ್ಷಣೆಗೆ, ಲಾಕ್‌ಡೌನ್ ಪರಿಸ್ಥಿತಿ ನಿರ್ವಹಣೆಗೆ ತೆಗೆದುಕೊಂಡಿರುವ ಉತ್ತಮ ಕ್ರಮಗಳನ್ನು ಗಮನಿಸಲಿರುವ ಸಮಿತಿಯು, ಆಯೋಗಕ್ಕೆ ವರದಿಯನ್ನು ನೀಡಲಿದೆ.

23. ಗಲ್ವಾನ್ ಕಣಿವೆಯಲ್ಲಿ ಚೀನಾ ಸೈನಿಕರಿಗೆ ಶೀತಗಾಳಿ ಸವಾಲು:

- ಲಡಾಖ್ ವಲಯದ ವಾಸ್ತವ ಗಡಿ ನಿಯಂತ್ರಣಾ ರೇಖೆಯ ಸಂಘರ್ಷ ತಾಣ ಗಲ್ವಾನ್ ಕಣಿವೆಯಲ್ಲಿ ಬೀಡು ಬಿಟ್ಟಿರುವ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಗೆ ಈಗ ಮೈ ಕೊರೆಯುವಂತಹ ಥಂಡಿ ಹವಾಮಾನದ ಸವಾಲು ಎದುರಾಗಿದೆ.
- ಕಣಿವೆ ಭಾಗದ ವಾತಾವರಣದಲ್ಲಿ ತಾಪಮಾನ ದಿಢೀರ್ ಏರಿಕೆಯಾಗಿದ್ದು ಸುತ್ತಲಿನ ಹಿಮ ಶಿಖರಗಳು ಕರಗಿ ನೀರಾಗಿ ಹರಿಯತೊಡಗಿವೆ. ಇದರಿಂದ ಗಲ್ವಾನ್ ನದಿಗೆ ಹಿಮ ಬಂಡೆಗಳೇ ಹರಿದು ಬರುತ್ತಿದ್ದು ನೀರಿನ ಹರಿವಿನ ಮಟ್ಟ ಗರಿಷ್ಟ ಪ್ರಮಾಣದಲ್ಲಿ ಹೆಚ್ಚಳಗೊಂಡಿದೆ. ಇದರ ಪರಿಣಾಮ ಇಡೀ ಪ್ರದೇಶದಲ್ಲಿ ರಕ್ತ ಹೆಪ್ಪುಗಟ್ಟಿಸುವ ಚಳಿಯ ವಾತಾವರಣವಿದೆ.
- ಸಂಘರ್ಷ ನಡೆದ ತಾಣದಿಂದ 5 ಕಿ.ಮೀ. ದೂರದಲ್ಲಿ ಠಿಕಾಣಿ ಹೂಡಿರುವ ಚೀನಿ ಸೈನಿಕರು ಈಗ ಚಳಿ ತಾಳದೇ ತಲ್ಲಣಿಸುತ್ತಿದ್ದಾರೆ. ಅಕ್ಸಾಯ್ ಚಿನ್ ಪ್ರದೇಶದ ಮಡಿಲಲ್ಲಿ ಜನ್ಮತಳೆಯುವ ಗಲ್ವಾನ್, ಈ ದಿನಗಳಲ್ಲಿ ತಾಪಮಾನ ಏರಿಕೆಗೆ ಹಿಮ ಬಂಡೆಗಳು ಕರಗಿ ಉಕ್ಕಿಹರಿಯುವುದು ಸಾಮಾನ್ಯ. ಇದರಿಂದ ಇಡೀ ಪ್ರದೇಶ ಹೆಪ್ಪುಗಟ್ಟುವ ಚಳಿಯಿಂದ ಮುದುಡಿ ಹೋಗುತ್ತದೆ. ನದಿ ನೀರಿನ ಪ್ರವಾಹ ಚೀನಿ ಸೈನಿಕರ ಟೆಂಟ್‌ಗಳವರೆಗೆ ಚಾಚಿರುವುದು ಸ್ಯಾಟಲೈಟ್ ಚಿತ್ರಗಳಿಂದ ತಿಳಿದು ಬಂದಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಶತ್ರು ಸೈನಿಕರು ಅಲ್ಲಿಂದ ಜಾಗ ಖಾಲಿ ಮಾಡುವುದು ಅನಿವಾರ್ಯವಾಗುತ್ತದೆ

- ಜೂನ್ ರಂದು 15 ರಕ್ತಸಿಕ್ತ ಸೇನಾ ಸಂಘರ್ಷದ ಬಳಿಕ ಭಾರತ–ಚೀನಾ ನಡುವಿನ ಗಡಿ ಬಿಕ್ಕಟ್ಟು ಉಲ್ಬಣಿಸಿದೆ. ಶಮನಕ್ಕೆ ಮಿಲಿಟರಿ ಮಟ್ಟದ ಮಾತುಕತೆಗಳು ಮುಂದುವರಿದಿವೆ. ಈಗಾಗಲೇ ಮೂರು ಸುತ್ತಿನ ಸಂಧಾನ ಮುಗಿದಿದ್ದು ಗಡಿಯಿಂದ ಹಂತ ಹಂತವಾಗಿ ಸೇನೆ ವಾಪಸ್ ಕರೆಸಿಕೊಳ್ಳುವ ನಿರ್ಧಾರಕ್ಕೆ ಉಭಯ ಕಡೆಯ ಮುಖಂಡರು ಸಮ್ಮತಿಸಿದ್ದಾರೆ. ಆದರೂ ಸಂಘರ್ಷ ತಾಣ ಗಲ್ವಾನ್ ನಿಂದ ಒಂದೇ ಬಾರಿಗೆ ಎಲ್ಲಾ ಸೇನೆಯನ್ನು ಹಿಂಪಡೆಯದಿ ರುವ ಹಟಕ್ಕೆ ಬಿದ್ದಿರುವ ಚೀನಾ, ಈಗ ವ್ಯತಿರಿಕ್ತ ಹವಾಮಾನದ ದಾಳಿಯನ್ನು ಎದುರಿಸಬೇಕಾಗಿದೆ.

24. ಕೊರೋನಾ ಲಸಿಕೆ ಮುಂದಿನ ವರ್ಷ ಲಭ್ಯವಾಗಬಹುದು ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ತಿಳಿಸಿದೆ:

- ಕೊರೋನಾ ಸೋಂಕು ನಿಯಂತ್ರಿಸುವ ಲಸಿಕೆ 2021ರ ಆರಂಭದಲ್ಲಿ ಲಭ್ಯವಾಗಬಹುದು ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ತಿಳಿಸಿದೆ.
- ಆಗಸ್ಟ್ 15ರ ಒಳಗೆ ಲಸಿಕೆ ಲಭ್ಯವಾಗಬಹುದೆಂಬ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ವಿಶ್ವಾಸ ವ್ಯಕ್ತಪಡಿಸಿರುವಾಗಲೇ ಸಚಿವಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಆದರೆ, ಎರಡು ಭಾರತೀಯ ಕಂಪನಿಗಳು 'ಕೋವ್ಯಾಕ್ಸಿನ್' ಮತ್ತು 'ಝಿಕೋವ್ –ಡಿ' ಹೆಸರಿನಲ್ಲಿ ಕ್ಲಿನಿಕಲ್ ಟ್ರಯಲ್ಸ್ ಹಂತ ತಲುಪಿರುವುದು ಕೊರೋನಾ ಅಂತ್ಯಕ್ಕೆ ಮುನ್ನುಡಿ ಎಂದೂ ಸಚಿವಾಲಯ ವ್ಯಾಖ್ಯಾನಿಸಿದೆ.
- ಭಾರತ ಆರು ಕಂಪನಿಗಳು ಸೇರಿದಂತೆ ವಿಶ್ವಾದ್ಯಂತ 140 ಕಂಪನಿಗಳು ಕೊರೋನಾ ಲಸಿಕೆ ಅಭಿವೃದ್ಧಿಪಡಿಸುವ ಪ್ರಯತ್ನದಲ್ಲಿವೆ. ಆ ಪೈಕಿ 11 ಕಂಪನಿಗಳು ಕ್ಲಿನಿಕಲ್ ಟ್ರಯಲ್ಸ್ ಹಂತ ತಲುಪಿವೆ. ಬ್ರಿಟಿಷ್ ಕಂಪನಿ ಆಸ್ಟ್ರಾ ಝೆನೆಕಾದ AZD 1222 ಮತ್ತು ಅಮೆರಿಕದ ಮಾಡೆರ್ನಾ ಕಂಪನಿಯ ಎಂಆರ್ಎನ್ಎ 1273 ಲಸಿಕೆ ಉತ್ಪಾದನೆ ಸಂಬಂಧ ಭಾರತೀಯ ಕಂಪನಿಗಳ ಜತೆ ಒಪ್ಪಂದ ಏರ್ಪಟ್ಟಿದೆ.
- ಇವೆರಡೂ ಕಂಪನಿಗಳ ಲಸಿಕೆಗಳು ಕ್ರಮವಾಗಿ ಎರಡು ಮತ್ತು ಮೂರನೇ ಹಂತದ ಟ್ರಯಲ್‌ನಲ್ಲಿವೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ತಿಳಿಸಿದೆ. ಮೊದಲ ಎರಡು ಹಂತಗಳಲ್ಲಿ ಔಷಧದ ಸುರಕ್ಷತೆ ಮತ್ತು ಮೂರನೇ ಹಂತದಲ್ಲಿ ಔಷಧದ ಪರಿಣಾಮದ ಕುರಿತು ಪರೀಕ್ಷೆ ನಡೆಸಲಾಗುತ್ತದೆ.
- ಈ ನಡುವೆ, ಐ.ಸಿ.ಎಂ.ಆರ್. ನೀಡಿರುವ ಆಗಸ್ಟ್ 15ರ ಗಡುವಿನೊಳಗೆ ಲಸಿಕೆ ಅಭಿವೃದ್ಧಿಪಡಿಸಲು ವಿಜ್ಞಾನಿಗಳು ಹಗಲಿರುಳೂ ಶ್ರಮಿಸುತ್ತಿದ್ದಾರೆ ಎಂದು ಹೈದರಾಬಾದ್ ಮೂಲದ ಭಾರತ್ ಬಯೋಟೆಕ್ ಸಂಸ್ಥೆ ತಿಳಿಸಿದೆ. "ಯಾವುದೇ ಔಷಧದ ಪ್ರಯೋಗವು ಕನಿಷ್ಠ 6 ರಿಂದ 9 ತಿಂಗಳು ತೆಗೆದುಕೊಳ್ಳುತ್ತದೆ," ಎಂದು ಡಬ್ಲೂಎಚ್ಒ ಮುಖ್ಯ ವಿಜ್ಞಾನಿ ಸೌಮ್ಯ ಸ್ವಾಮಿನಾಥನ್ ಅಭಿಪ್ರಾಯಪಟ್ಟಿದ್ದಾರೆ.
- ಉಸಿರಾಟ ನಿರ್ವಹಣೆ ಕೇಂದ್ರ ಜಪಾನ್ ಮೂಲದ ಒಮ್ಯಾನ್ ಹೆಲ್ತ್‌ಕೇರ್ ಇಂಡಿಯಾ ಸಂಸ್ಥೆಯು ಲ್ಯುಪಿನ್ ಲಿಮಿಟೆಡ್ ಜತೆಗೂಡಿ ಉಸಿರಾಟ ಸಂಬಂಧಿ ಸಮಸ್ಯೆಗಳ ನಿರ್ವಹಣೆಗಾಗಿ ದೇಶದಲ್ಲಿ 100 ನೆಬ್ಯುಲೇಸೇಷನ್ ಕೇಂದ್ರಗಳನ್ನು ಆರಂಭಿಸಲು ನಿರ್ಧರಿಸಿದೆ.
- ಚೀನಾದಲ್ಲಿ ಈಗ ಬಬೋನಿಕ್ ಪ್ಲೇಗ್ ಪತ್ತೆಯಾಗಿದ್ದು ಆತಂಕದ ಸ್ಥಿತಿ ನಿರ್ಮಾಣಗೊಂಡಿದೆ.
- ಕೊರೋನಾ, ಹಂದಿ ಜ್ವರದಂತಹ ಮಹಾಮಾರಿಗಳ ಹಾವಳಿಯಿಂದ ತಲ್ಲಣಿಸಿರುವ ಚೀನಾದಲ್ಲಿ ಈಗ ಬಬೋನಿಕ್ ಪ್ಲೇಗ್ ಪತ್ತೆಯಾಗಿದ್ದು ಆತಂಕದ ಸ್ಥಿತಿ ನಿರ್ಮಾಣಗೊಂಡಿದೆ.
- ಸ್ವಾಯತ್ತ ಮಂಗೋಲಿಯಾದ ಬಯನುರ್ ಪ್ರದೇಶದಲ್ಲಿ ಈ ಮಾರಕ ಪ್ಲೇಗ್ ಪ್ರಕರಣಗಳು ದೃಢಪಟ್ಟಿವೆ.
- ಶಂಕಿತ ಪ್ರದೇಶಗಳಲ್ಲಿ ಹೈ ಅಲರ್ಟ್ ಘೋಷಣೆ ಮಾಡಲಾಗಿದೆ. ಸ್ವಲ್ಪ ಮೈಮರೆತರೂ ಇದೊಂದು ಮಾರಣಾಂತಿಕ ಸಾಂಕ್ರಾಮಿಕವಾಗಿ ದೇಶವನ್ನು ವ್ಯಾಪಿಸುತ್ತದೆ. ಇದರ ನಿಯಂತ್ರಣಕ್ಕೆ ಸರ್ಕಾರದ ಜತೆಗೆ ಜನ ಸಾಮಾನ್ಯರೂ ಕೂಡ ಕೈ ಜೋಡಿಸಬೇಕು, ಎಂದು ಚೀನಿ ಆರೋಗ್ಯ ಅಧಿಕಾರಿಗಳು ಎಚ್ಚರಿಸಿದ್ದಾರೆ. ಪಶ್ಚಿಮ ಮಂಗೋಲಿಯಾದ ಖೋವ್ದ್ ಪ್ರಾಂತ್ಯದಲ್ಲಿ ಜುಲೈ 1ರಂದು ಬಬೋನಿಕ್ ಪ್ಲೇಗ್‌ನ ಮೊದಲ ಎರಡು ಪ್ರಕರಣಗಳು ದೃಢಪಟ್ಟಿವೆ.
- ಕಾಡು ಇಲಿಗಳನ್ನು ತಿಂದ ಇಬ್ಬರು ಸೋದರರಲ್ಲಿ ಈ ಪ್ಲೇಗ್ ಕಾಣಿಸಿಕೊಂಡಿದೆ.

ತಲೆನೋವು, ವಾಂತಿಯೂ ಸೇರಿದಂತೆ ಹಲವು ಲಕ್ಷಣಗಳ ಸೇರ್ಪಡೆಯಾದ ಹೊಸ ಲಕ್ಷಣಗಳು :

1. ಚಳಿ
2. ಪದೇಪದೆ ಮೈ ನಡುಕ ಹಾಗೂ ಚಳಿ
3. ಸ್ನಾಯು ನೋವು
4. ತಲೆ ನೋವು
5. ವಾಕರಿಕೆ ಹಾಗೂ ವಾಂತಿ
6. ಅತಿಸಾರ

ಈ ಹಿಂದಿನ ಲಕ್ಷಣಗಳು

1. ಜ್ವರ
2. ಕೆಮ್ಮು
3. ಉಸಿರಾಟದಲ್ಲಿ ಏರುಪೇರು ಹಾಗೂ ತೀವ್ರ ಸಮಸ್ಯೆ
4. ಸುಸ್ತು
5. ಸ್ನಾಯು ಹಾಗೂ ಮೈ – ಕೈ ನೋವು
6. ಮೂಗು ಕಟ್ಟಿಕೊಳ್ಳುವುದು
7. ರುಚಿ ಹಾಗೂ ವಾಸನೆ ಗ್ರಹಣ ಶಕ್ತಿ ಕಡಿಮೆಯಾಗುವುದು

ಮಲೇರಿಯಾ, ಎಚ್ಐವಿ ಔಷಧ ಬಳಕೆಗೆ ವಿಶ್ವ ಆರೋಗ್ಯ ಸಂಸ್ಥೆ ತಡೆ ನೀಡಿದೆ:

- ಕೊರೋನಾ ಸೋಂಕಿತರ ಚಿಕಿತ್ಸೆಗೆ ಮಲೇರಿಯಾ ನಿರೋಧಕ ಔಷಧ ಹೈಡ್ರಾಕ್ಸಿಕ್ಲೊರೊಕ್ವಿನ್, ಎಚ್ಐವಿ ಚಿಕಿತ್ಸೆಯಲ್ಲಿ ಬಳಸುವ ಲೊಪಿನವಿರ್ ಮತ್ತು ರಿಟೋನವಿರ್ ಔಷಧಗಳ ಬಳಕೆಗೆ ವಿಶ್ವ ಆರೋಗ್ಯ ಸಂಸ್ಥೆ ತಡೆ ನೀಡಿದೆ. ಈ ಔಷಧಗಳ ಬಳಕೆಯಿಂದ ಕೊರೋನಾ ಸೋಂಕಿತರ ಸಾವಿನ ಪ್ರಮಾಣ ತಗ್ಗುವುದಿಲ್ಲ ಎನ್ನುವುದು ಪ್ರಾಥಮಿಕ ಅಧ್ಯಯನಗಳಿಂದ ಸಾಬೀತಾಗಿದೆ. ಹೀಗಾಗಿ ಚಿಕಿತ್ಸೆಯಲ್ಲಿ ಇವುಗಳ ಬಳಕೆಗೆ ತಡೆ ನೀಡಲಾಗಿದೆ, ಎಂದು ಡಬ್ಲ್ಯೂಎಚ್ಒ ವಿವರಿಸಿದೆ.

25. ಅಥ್ಲೆಟಿಕ್ಸ್ ಕೋಚಿಂಗ್ ವೀರ ಬಹಾದುರ್ ಸಿಂಗ್ ನಿವೃತ್ತಿ

- ಭಾರತೀಯ ಅಥ್ಲೆಟಿಕ್ಸ್ ಒಕ್ಕೂಟದಲ್ಲಿ 25 ವರ್ಷಗಳ ಕಾಲ ಅಥ್ಲೆಟಿಕ್ಸ್ ಕೋಚ್ ಆಗಿ ಕಾರ್ಯ ನಿರ್ವಹಿಸಿ, ಒಕ್ಕೂಟದ ಇತಿಹಾಸದಲ್ಲಿ ದಾಖಲೆ ಸೃಷ್ಟಿಸಿದ್ದ ಬಹಾದ್ದುರ್ ಸಿಂಗ್ ಹುದ್ದೆಯಿಂದ ನಿವೃತ್ತಿ ಪಡೆದುಕೊಂಡಿದ್ದಾರೆ.
- 1970 ಹಾಗೂ 80ರ ದಶಕದಲ್ಲಿ ಶಾಟ್‌ಪುಟ್ ಕ್ರೀಡಾಪಟುವಾಗಿದ್ದ ಬಹಾದುರ್ ಅವರು 1995 ರಲ್ಲಿ ಅಥ್ಲೆಟಿಕ್ಸ್ ಒಕ್ಕೂಟದ ಹಿರಿಯ ಕೋಚ್ ಆಗಿ ನೇಮಕಗೊಂಡಿದ್ದರು.
- 1946ರಲ್ಲಿ ಜನಿಸಿರುವ ಬಹಾದ್ದುರ್ ಅವರಿಗೆ 64 ವರ್ಷ. ಕೋವಿಡ್–19 ಹಾವಳಿಯ ಹಿನ್ನೆಲೆ ಯಲ್ಲಿ ಹಿರಿಯ ನಾಗರಿಕರ ಓಡಾಟಕ್ಕೆ ಸರ್ಕಾರ ನಿರ್ಬಂಧ ವಿಧಿಸಿರುವ ಹಿನ್ನೆಲೆಯಲ್ಲಿ ಅವರು ತಮ್ಮ ಸೇವೆಯನ್ನು ಮೊಟಕುಗೊಳಿಸುವಂತಾಗಿದೆ.
- 2010 ರಲ್ಲಿ ದಿಲ್ಲಿಯಲ್ಲಿ ನಡೆದ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಸಿಂಗ್ ನೇತೃತ್ವದಲ್ಲಿ ಪಾಲ್ಗೊಂಡಿದ್ದ ಭಾರತೀಯ ಅಥ್ಲೆಟಿಕ್ಸ್ ತಂಡ ಎರಡು ಚಿನ್ನ ಸೇರಿದಂತೆ 12 ಪದಕಗಳನ್ನು ಗೆದ್ದಿತ್ತು. 2018 ರಲ್ಲಿ ಜಕಾರ್ತದಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಎಂಟು ಚಿನ್ನ ಮತ್ತು 9 ಬೆಳ್ಳಿ ಸೇರಿದಂತೆ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಯಲ್ಲಿ ಭಾರತ 20 ಪದಕಗಳನ್ನು ಜಯಿಸಿದ್ದು, ಬಹಾದ್ದುರ್ ಅವರ ಕೋಚಿಂಗ್ ವೃತ್ತಿಯ ಸಾರ್ವಕಾಲಿಕ ಶ್ರೇಷ್ಠ ಪ್ರದರ್ಶನವಾಗಿದೆ.

26. ಅಥ್ಲೆಟಿಕ್ಸ್‌ಗೆ 100 ಹೊಸ ಲಾಂಛನ:

- ಭಾರತೀಯ ಅಥ್ಲೀಟ್‌ಗಳು ಒಲಿಂಪಿಕ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲಾರಂಭಿಸಿ ನೂರು ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಭಾರತೀಯ ಒಲಿಂಪಿಕ್ ಸಂಸ್ಥೆ (ಐ.ಒ.ಎ)
- ಬ್ಯಾಂಡಿಂಗ್ ಮತ್ತು ವಿಷುವಲ್ ಅನನ್ಯತೆಯನ್ನೊಳಗೊಂಡ ಸಾಂಸ್ಥಿಕ ಮತ್ತು ವಾಣಿಜ್ಯ ಲೋಗೊಗಳು ಸಮ್ಮಿಳಿತಗೊಂಡಿರುವ ಹೊಸ ಲಾಂಛನವೊಂದನ್ನು ಅನಾವರಣಗೊಳಿಸಿದೆ.
- 'ಭಾರತೀಯ ಒಲಿಂಪಿಕ್ಸ್ ಸಂಸ್ಥೆಯ ಹೊಸ ಲಾಂಛನ ನಮ್ಮ ದೇಶದ ಅನನ್ಯತೆ ಮತ್ತು ನಮ್ಮ ಕ್ರೀಡಾ ಮೌಲ್ಯಗಳ ಸಂಕೇತ'.

27. ಜಾಗತಿಕ ರಿಯಲ್ ಎಸ್ಟೇಟ್ ಪಾರದರ್ಶಕ ಸೂಚ್ಯಂಕದಲ್ಲಿ ಭಾರತ 34ನೇ ಸ್ಥಾನ:

- ಜಾಗತಿಕ ರಿಯಲ್ ಎಸ್ಟೇಟ್ ಪಾರದರ್ಶಕ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕವು ಈ ವರ್ಷ ಒಂದು ಹಂತ ಮೇಲೆ ಏರಿದೆ.
- ನಿಯಂತ್ರಣ ಕ್ರಮಗಳಲ್ಲಿನ ಸುಧಾರಣೆ, ಮಾರುಕಟ್ಟೆ ಕುರಿತ ಉತ್ತಮ ಮಾಹಿತಿ, ಅಭಿವೃದ್ಧಿ ಕುರಿತ ಪರಿಸರ ಕಾಳಜಿ ಪರಿಗಣನೆ ಮತ್ತಿತರ ಕ್ರಮಗಳಿಂದ ಎರಡು ವರ್ಷಗಳ ಹಿಂದೆ 35ನೇ ಸ್ಥಾನದಲ್ಲಿದ್ದ, ಭಾರತ ಈಗ 34ನೇ ಸ್ಥಾನಕ್ಕೆ ಏರಿಕೆಯಾಗಿದೆ.
- ರಿಯಲ್ ಎಸ್ಟೇಟ್ ವಲಯದ ಸುಧಾರಣೆಗಾಗಿ ಜಾರಿಗೆ ತಂದಿರುವ ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ 2016 (ರೇರಾ) ಮತ್ತು ಜಿ.ಎಸ್.ಟಿ ಬೇನಾಮಿ ವಹಿವಾಟು ನಿರ್ಬಂಧ (ತಿದ್ದುಪಡಿ) ಕಾಯ್ದೆ, ದಿವಾಳಿ ಸಂಹಿತೆ (ಐ.ಬಿ.ಸಿ) ಹಾಗೂ ಭೂ ದಾಖಲೆಗಳ ಡಿಜಿಟಲೀಕರಣವು ಈ ವಲಯದಲ್ಲಿ ಹೆಚ್ಚಿನ ಪಾರದರ್ಶಕತೆ ತಂದುಕೊಟ್ಟಿದೆ.
- ದೇಶದ ರಿಯಲ್ ಎಸ್ಟೇಟ್‌ನ ಹೂಡಿಕೆ ಬಗ್ಗೆ ಸಾಂಸ್ಥಿಕ ಹೂಡಿಕೆದಾರರಲ್ಲಿ ಹೆಚ್ಚು ಆಸಕ್ತಿ ಕಂಡು ಬರುತ್ತಿದೆ. ಸದ್ಯಕ್ಕೆ ದೇಶದ ರಿಯಲ್ ಎಸ್ಟೇಟ್ ಮಾರುಕಟ್ಟೆಯನ್ನು 'ಅರೆ ಪಾರದರ್ಶಕ ವಲಯ'ದಲ್ಲಿ ಇರಿಸಲಾಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಜೆ.ಎಲ್.ಎಲ್ ತಿಳಿಸಿದೆ.
- ಪಾರದರ್ಶಕ ಸೂಚ್ಯಂಕದ 99 ದೇಶಗಳ ಸಾಲಿನಲ್ಲಿ ಇಂಗ್ಲೆಂಡ್ ಮೊದಲ ಸ್ಥಾನದಲ್ಲಿ ಇದೆ. ನಂತರದ ಸ್ಥಾನದಲ್ಲಿ ಅಮೆರಿಕ, ಆಸ್ಟ್ರೇಲಿಯಾ, ಫ್ರಾನ್ಸ್, ಕೆನಡಾ, ನ್ಯೂಜಿಲೆಂಡ್, ನೆದರ್ಲೆಂಡ್, ಐರ್ಲೆಂಡ್, ಸ್ವೀಡನ್ ಮತ್ತು ಜರ್ಮನಿ ದೇಶಗಳಿವೆ.
- ಮೊದಲ 10 ದೇಶಗಳು ಗರಿಷ್ಠ ಪಾರದರ್ಶಕತೆಯ ಮತ್ತು 11 ರಿಂದ 33 ಸ್ಥಾನದಲ್ಲಿನ ದೇಶಗಳು ಪಾರದರ್ಶಕ ದೇಶಗಳೆಂದು ವರ್ಗೀಕರಿಸಲಾಗಿದೆ. ಪ್ರತಿ ಎರಡು ವರ್ಷಗಳಿಗೊಮ್ಮೆ ಈ ಸಮೀಕ್ಷೆ ನಡೆಯುತ್ತಿದೆ.

ಜಾಗತಿಕ ರಿಯಲ್ ಎಸ್ಟೇಟ್ ಪಾರದರ್ಶಕ ಸೂಚ್ಯಂಕದಲ್ಲಿ ಪಾರದರ್ಶಕತೆ ಸ್ಥಾನಮಾನ

- ಇಂಗ್ಲೆಂಡ್ – 1
- ಅಮೆರಿಕ – 2
- ಆಸ್ಟ್ರೇಲಿಯಾ –3
- ಚೀನಾ – 32
- ಭಾರತ – 34
- ಶ್ರೀಲಂಕಾ – 65
- ಪಾಕಿಸ್ತಾನ – 73

28. ಕೇಂದ್ರ ಸರ್ಕಾರ 'ಪರಿಸರ ನಿಯಮ ಕರಡು ಅಧಿಸೂಚನೆ–2020'ನ್ನು ಪ್ರಕಟಿಸಿದೆ:

- ಇಡೀ ದೇಶ ಕೊರೋನಾ ಅಬ್ಬರದಲ್ಲಿ ಮುಳುಗಿರುವಾಗಲೇ ಕೇಂದ್ರ ಸರ್ಕಾರ ಸದ್ದಿಲ್ಲದೇ ಪರಿಸರ ನಿಯಮಗಳ ಬದಲಾವಣೆಗೆ ಸಿದ್ಧತೆ ನಡೆಸಿದೆ. ಕೈಗಾರಿಕೆ, ರಸ್ತೆ ಸೇರಿದಂತೆ ಪ್ರಮುಖ ನಿರ್ಮಾಣ ಕಾರ್ಯಗಳನ್ನು ಪರಿಸರ ಪೂರ್ವಾನುಮತಿ ಇಲ್ಲದೇ ಆರಂಭಿಸುವುದಕ್ಕೆ ಪರಿಸರ ಪರಿಣಾಮ ವಿಶ್ಲೇಷಣೆ ತಿದ್ದುಪಡಿ ಕಾಯಿದೆ ಕರಡು ಅಧಿಸೂಚನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.ಈ ವಿವಾದಿತ ಕಾಯಿದೆ ತಿದ್ದುಪಡಿ ಕರಡನ್ನು ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದೆ.
- 2006ರಲ್ಲಿ ಜಾರಿಗೆ ತಂದ ಕಾಯಿದೆ ಪರಿಷ್ಕರಣೆಗೆ ಕೇಂದ್ರ ಸರ್ಕಾರ ಮುಂದಾಗಿದ್ದು ಸಾಧಕ–ಬಾಧಕಗಳ ಬಗ್ಗೆ ಈಗ ಚರ್ಚೆ ಆರಂಭಗೊಂಡಿದೆ. ಒಂದೊಮ್ಮೆ ಈ ಕಾಯಿದೆ ಜಾರಿಗೆ ಬಂದರೆ ಉಷ್ಣ ವಿದ್ಯುತ್ ಸ್ಥಾವರ, ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಾಣ, ಖನಿಜ ನಿಕ್ಷೇಪ ಪತ್ತೆ, ಮೂಲಸೌಕರ್ಯ ಯೋಜನೆ, ಕೈಗಾರಿಕಾ ಸ್ಥಾಪನೆಗೆ ಪರಿಸರ ಪೂರ್ವಾನುಮತಿ ಅಡ್ಡಿ ಕೊಂಚ ಸಡಿಲವಾಗಲಿದೆ. ಆದರೆ ಇದರಿಂದ ಪರಿಸರದ ಮೇಲೆ ಅಡ್ಡ ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದೆ.
- ಮೂಲಸೌಕರ್ಯ ಯೋಜನೆ ಆರಂಭಿಸುವುದಕ್ಕೆ 40 ವಿಚಾರಗಳಿಗೆ ವಿನಾಯಿತಿ ನೀಡಲಾಗಿದೆ
- ಕರಡು ಅಧಿಸೂಚನೆಯಲ್ಲಿ 40 ಸ್ವರೂಪದ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಯೋಜನೆ ಆರಂಭಿಸುವುದಕ್ಕೆ ಮುನ್ನ ಪರಿಸರ ಪೂರ್ವಾನುಮತಿ ಪಡೆಯುವುದಕ್ಕೆ ವಿನಾಯಿತಿ ನೀಡಲಾಗಿದೆ.
- ಒಂದೊಮ್ಮೆ ಈ ಕರಡು ಅಧಿಸೂಚನೆ ಕಾಯಿದೆ ರೂಪದಲ್ಲಿ ಅಸ್ತಿತ್ವಕ್ಕೆ ಬಂದರೆ 2016ರ ಅಪಾಯಕಾರಿ ತ್ಯಾಜ್ಯ ನಿಯಮ ಅನ್ವಯ ಪರವಾನಗಿ ಅಗತ್ಯವಾದ ಯೋಜನೆಗಳಿಗೂ ನಿರಾಯಾಸವಾಗಿ ಅನುಮತಿ ಲಭಿಸುತ್ತದೆ. ಈ ವಿನಾಯಿತಿಗಳ ಪಟ್ಟಿಯಲ್ಲಿ ಕೆಲ ಗುಡಿ ಕೈಗಾರಿಕೆಗಳು, ಕುಂಬಾರಿಕೆ ಘಟಕಗಳು, ಸೌರಶಕ್ತಿ ಪಾರ್ಕ್, 500 ಹೆಕ್ಟೇರ್ ವಿಸ್ತೀರ್ಣದ ಕೈಗಾರಿಕಾ ಎಸ್ಟೇಟ್, ಸತು, ತಾಮ್ರ, ಸೀಸ, ಆರ್ಸೆನಿಕ್, ವ್ಯಾಂಡೇನಿಯಮ್ ಆ್ಯಸಿಡ್ ಬ್ಯಾಟರಿ ಮರುಬಳಕೆ ಘಟಕಕ್ಕೆ ವಿನಾಯಿತಿ ಲಭಿಸಲಿದೆ.

ಯಾವುದಕ್ಕೆ ಬದಲಾವಣೆ ಮಾಡಲು ಉದ್ದೇಶಿಸಲಾಗಿದೆ

- ಪೂರ್ವಾನುಮತಿ ನಿಯಮವನ್ನು ತೆಗೆದು ಹಾಕುವ ಜತೆಗೆ 2006ರ ಪರಿಸರದ ಮೇಲಿನ ಪರಿಣಾಮ ವಿಶ್ಲೇಷಣೆ ಅಧಿನಿಯಮದಲ್ಲಿರುವ ಕೆಲ ಪ್ರಮುಖ ನಿಯಮಗಳಿಗೆ ಈ ಕರಡಿನಲ್ಲಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.
- ರಾಷ್ಟ್ರೀಯ ಭದ್ರತೆ ಹಾಗೂ ಸೇನೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ರೂಪಿಸುವ ಯೋಜನೆಗಳ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಅಗತ್ಯವಿಲ್ಲ.
- ಸಾರ್ವಜನಿಕ ಅಭಿಪ್ರಾಯ ಸಲ್ಲಿಸುವುದಕ್ಕೆ ಇದ್ದ 30 ದಿನಗಳ ಅವಕಾಶ 20 ದಿನಗಳಿಗೆ ಇಳಿಕೆ.
- ಸಾರ್ವಜನಿಕ ಅಭಿಪ್ರಾಯ ವಿಶ್ಲೇಷಣೆಗೆ ಜಿಲ್ಲಾಧಿಕಾರಿ ಅಥವಾ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧಿಶರನ್ನು ಮಾತ್ರ ನೇಮಕ ಮಾಡಬೇಕೆಂಬ ನಿಯಮ ಸಡಿಲ. ಬದಲಿಗೆ ಕೆಳ ಹಂತದ ಅಧಿಕಾರಿಗಳಿಂದ ವಿಶ್ಲೇಷಣೆ.
- ಸಾರ್ವಜನಿಕ ಅಭಿಪ್ರಾಯವನ್ನು ಪ್ರಾಧಿಕಾರಕ್ಕೆ ಸಲ್ಲಿಸುವ 8 ದಿನಗಳ ಅವಧಿ 5 ದಿನಕ್ಕೆ ಇಳಿಕೆ.
- ನಿಯಮ ಪಾಲನಾ ವರದಿಯನ್ನು ವರ್ಷಕ್ಕೊಮ್ಮೆ ಸಲ್ಲಿಸಿದರೆ ಸಾಕು.
- ಉಷ್ಣ ವಿದ್ಯುತ್ ಸ್ಥಾವರದಂಥ ಭಾರಿ ಉದ್ಯಮ ಆರಂಭಕ್ಕೂ ಪರಿಸರ ಪೂರ್ವಾನುಮತಿ ಬೇಡ ಎಂದು ಕರಡಿನಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ಭಾರಿ ಪ್ರಮಾಣದಲ್ಲಿ ದುಷ್ಪರಿಣಾಮ ಖಚಿತ.
- ಕೇಂದ್ರ ಪರಿಸರ ನಿಯಮ ಬದಲಾವಣೆ ಮಾಡಲು ನಡೆಸುತ್ತಿರುವ ಪ್ರಯತ್ನದ ಬಗ್ಗೆ ಅಲ್ಲಲ್ಲಿ ಮಾಹಿತಿ ಸುಳಿದಾಡಿದೆಯಾದರೂ ಕೊರೋನಾ ಅಬ್ಬರದ ಮಧ್ಯೆ ಕರಡು ಸಿದ್ಧಗೊಂಡಿರುವುದು ಅಷ್ಟೇನೂ ಗಮನ ಸೆಳೆದಿಲ್ಲ ಆದಾಗಿಯೂ ಅಲ್ಲಲ್ಲಿ ಚರ್ಚೆಗಳು ಆರಂಭಗೊಂಡಿದ್ದು ಕಾನೂನು ಹೋರಾಟದ ಬಗ್ಗೆಯೂ ಚಿಂತನೆ ನಡೆಯುತ್ತಿದೆ.

KAS,FDA,SDA,PSI-
KPSC Technical and Non Technical
ಜ್ಞಾನಗಂಗೋತ್ರಿಯಲ್ಲಿ ಆನ್‌ಲೈನ್ ತರಗತಿಗಳು
ತರಗತಿಗಳಿಗಾಗಿ JG's Online Classes ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ
ಹೆಚ್ಚಿನ ವಿವರಗಳಿಗಾಗಿ– www.iasjnana.com ಗೆ ಭೇಟಿ ನೀಡಿ
ಮೇಲಿನ ಎಲ್ಲಾ ಪರೀಕ್ಷೆಗಳಿಗೆ ಪರೀಕ್ಷಾ ಸರಣಿ
ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಪ್ರಾರಂಭಿಸಲಾಗಿದೆ
ಹೊಸ ಮಾದರಿಯೊಂದಿಗೆ ಪಿಎಸ್‌ಐ ಟೆಸ್ಟ್ ಸರಣಿ ಪ್ರಾರಂಭವಾಗಿದೆ
Contact- Jnanagangothri Academy,
Vijayanagar, B'lure
99163-99276; 080-41547999

29. ನಗರ ಮತ್ತು ಪಟ್ಟಣಗಳಿಗೆ ವಲಸೆ ಬರುವ ಕಾರ್ಮಿಕರಿಗೆ ಸರ್ಕಾರದಿಂದ ಅಗ್ಗದ ಬಾಡಿಗೆ ಮನೆ:

- ನಗರ ಮತ್ತು ಪಟ್ಟಣಗಳಿಗೆ ವಲಸೆ ಬರುವ ಕಾರ್ಮಿಕರಿಗೆ ಕಡಿಮೆ ದರದಲ್ಲಿ ಬಾಡಿಗೆ ವಸತಿ ಕಲ್ಪಿಸುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.
- ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಈ ಬಾಡಿಗೆ ವಸತಿ ಸಂಕೀರ್ಣಗಳನ್ನು (ಎ.ಆರ್.ಎಚ್.ಸಿ) ಒಟ್ಟು 600 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತದೆ. ಹಳ್ಳಿಗಳಿಂದ ನಗರಗಳಿಗೆ ಉದ್ಯೋಗ ನಿಮಿತ್ತ ವಲಸೆ ಬರುವ ಕಾರ್ಮಿಕರಿಗೆ ಕಡಿಮೆ ಬಾಡಿಗೆಗೆ ಈ ವಸತಿ ಸೌಕರ್ಯ ಸಿಗಲಿದೆ ಎಂದು ಸರ್ಕಾರ ಹೇಳಿದೆ.
- ಖಾಸಗಿ ಹಾಗೂ ಸಾರ್ವಜನಿಕ ಸಂಸ್ಥೆಗಳು ತಮ್ಮದೇ ಜಾಗದಲ್ಲಿ ಈ ಯೋಜನೆಯಡಿಯಲ್ಲಿ ವಸತಿ ಸಂಕೀರ್ಣಗಳನ್ನು ಅಭಿವೃದ್ಧಿಪಡಿಸಿದರೆ ಸರ್ಕಾರದಿಂದ ವಿಶೇಷ ಪ್ರೋತ್ಸಾಹ ಧನ.
- ಒಟ್ಟು 3.5 ಲಕ್ಷ ಮಂದಿಗೆ ಈ ಯೋಜನೆಯಿಂದ ಅನುಕೂಲವಾಗುವ ನಿರೀಕ್ಷೆ ಇದೆ.
- ಕಾರ್ಮಿಕರು ಮಾತ್ರವಲ್ಲದೆ ಗ್ರಾಮಾಂತರ ಪ್ರದೇಶಗಳಿಂದ ನಗರಗಳಿಗೆ ಬರುವ ವಿದ್ಯಾರ್ಥಿಗಳೂ ಪ್ರಯೋಜನ ಪಡೆಯಬಹುದು.
- ನಗರಗಳಲ್ಲಿ ವಲಸಿಗ ಕಾರ್ಮಿಕರ ವೆಚ್ಚ ಉಳಿತಾಯದ ಸಲುವಾಗಿ ಕೊಳಚೆ ಪ್ರದೇಶಗಳಲ್ಲಿ ಅಕ್ರಮ ಬಡಾವಣೆಗಳಲ್ಲಿ ವಾಸಿಸುತ್ತಾರೆ. ಇದರ ತಡೆಗೆ ಯೋಜನೆ ಸಹಾಯಕ.
- ಗರೀಬ್ ಕಲ್ಯಾಣ ಯೋಜನೆಯಡಿಯಲ್ಲಿ 81 ಕೋಟಿ ಜನರಿಗೆ ಉಚಿತ ಪಡಿತರ
- ಗರೀಬ್ ಕಲ್ಯಾಣ ಯೋಜನೆಯಡಿಯಲ್ಲಿ 81 ಕೋಟಿ ಮಂದಿ ಪಿ.ಡಿ.ಎಸ್ ಫಲಾನುಭವಿಗಳಿಗೆ ಉಚಿತವಾಗಿ ಆಹಾರ ಧಾನ್ಯ ವಿತರಿಸುವ ಯೋಜನೆಯನ್ನು ನವೆಂಬರ್ ತನಕ ವಿಸ್ತರಿಸಲಾಗಿದೆ.

ಉಜ್ವಲಾ ನೆರವು ಮುಂದುವರಿಕೆ:

- ಉಜ್ವಲಾ ಫಲಾನುಭವಿಗಳಿಗೆ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯ ಅಡಿಯಲ್ಲಿ ಸಿಗುತ್ತಿರುವ ಪ್ರಯೋಜನವನ್ನೂ ಜುಲೈ 1 ರಿಂದ ಮತ್ತೆ ಮೂರು ತಿಂಗಳಿಗೆ ವಿಸ್ತರಿಸಲಾಗಿದೆ. ಇದಕ್ಕಾಗಿ ಸರ್ಕಾರಕ್ಕೆ 13,500 ಕೋಟಿ ರೂ. ವೆಚ್ಚವಾಗಲಿದೆ.

30. ಭಾರತದಲ್ಲಿ ಬಂಡವಾಳ ಹೂಡಿಕೆ ಬಯಸುವ ಎಲ್ಲ ಅಂತರರಾಷ್ಟ್ರೀಯ ಕಂಪನಿ ಗಳಿಗೆ ಜಾಗತಿಕ ಹೂಡಿಕೆಗೆ ಆಹ್ವಾನ:

- ಹೊಸದಿಲ್ಲಿ ವಿಷ್ಯಾದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಿರುವ ಭಾರತವು ವಿಶ್ವದಲ್ಲೇ ಅತ್ಯಂತ ಮುಕ್ತ ವ್ಯವಸ್ಥೆಗಳಲ್ಲೊಂದಾಗಿದ್ದು, ಬಂಡವಾಳ ಹೂಡಿಕೆಗೆ ಪ್ರಶಸ್ತವಾಗಿದೆ ಎಂದು ಜಾಗತಿಕ ಕಂಪನಿಗಳಿಗೆ ಪ್ರಧಾನಿ ನರೇಂದ್ರ ಮೋದಿಯವರು ಆಹ್ವಾನ ನೀಡಿದ್ದಾರೆ.
- ಭಾರತೀಯ ಜಾಗತಿಕ ಸಪ್ತಾಹ 2020 ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, ಕೊರೋನಾ ವೈರಸ್ ಬಿಕ್ಕಟ್ಟು ಶಮನಕ್ಕೆ ವಿಧಿಸಿದ್ದ ಲಾಕ್‌ಡೌನ್ ಸಡಿಲವಾಗಿದ್ದು, ಈಗಾಗಲೇ ಆರ್ಥಿಕ ಚಟುವಟಿಕೆಗಳು ಚೇತರಿಸಿಕೊಂಡಿವೆ ಎಂದರು.
- "ಭಾರತದಲ್ಲಿ ಬಂಡವಾಳ ಹೂಡಿಕೆ ಬಯಸುವ ಎಲ್ಲ ಅಂತಾರಾಷ್ಟ್ರೀಯ ಕಂಪನಿಗಳಿಗೆ ಭಾರತದಲ್ಲಿ ರತ್ನಗಂಬಳಿಯ ಸ್ವಾಗತ ನೀಡಲಾಗುವುದು. ಭಾರತ ಅಗತ್ಯ ಇರುವ ಎಲ್ಲ ಸೌಕರ್ಯಗಳನ್ನು ಒದಗಿಸಲಿದೆ. ವಿಶ್ವದಲ್ಲಿ ವಿರಳ ರಾಷ್ಟ್ರಗಳಲ್ಲಿ ಮಾತ್ರ ದೊರೆಯುವ ಅನುಕೂಲ ಭಾರತದಲ್ಲಿ ಲಭ್ಯವಿದೆ".
- ಭಾರತವು ಈಗ ಹೂಡಿಕೆದಾರ ಸ್ನೇಹಿ ರಾಷ್ಟ್ರವಾಗಿ ಬದಲಾಗಿದೆ. ಸ್ಪರ್ಧಾತ್ಮಕವಾಗಿದೆ. ನಾನಾ ವಲಯಗಳಲ್ಲಿ ಇಲ್ಲಿ ಹೂಡಿಕೆ ಮಾಡಬಹುದು.
- ಕೃಷಿ ಕ್ಷೇತ್ರದಲ್ಲಿ ಇತ್ತೀಚಿನ ಸುಧಾರಣಾ ಕ್ರಮಗಳು ಹೂಡಿಕೆಗೆ ಹೇರಳ ಅವಕಾಶ ಸೃಷ್ಟಿಸಿದೆ. ಸ್ಟೋರೇಜ್ ಮತ್ತು ಲಾಜಿಸ್ಟಿಕ್ಸ್ ಇತ್ಯಾದಿ ವಲಯಗಳಲ್ಲಿ ಹೇರಳ ಅವಕಾಶ ಸೃಷ್ಟಿಯಾಗಿದೆ ಎಂದರು. ಕೋವಿಡ್ ಬಿಕ್ಕಟ್ಟಿನ ನಂತರ ಭಾರತೀಯ ಔಷಧ ವಲಯವು ದೇಶಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೇ ಅಮೂಲ್ಯ ಆಸ್ತಿ ಎಂಬುದು ಸಾಬೀತಾಗಿದೆ ಎಂದರು.

31. 89 ಆ್ಯಪ್ ತೆಗೆಯಲು ಭಾರತೀಯ ಸೇನೆ ತನ್ನ ಯೋಧರಿಗೆ ಸೂಚಿಸಿದೆ

- ಫೇಸ್‌ಬುಕ್, ಟ್ರೂಕಾಲರ್, ಪಬ್‌ಜಿ ಸೇರಿದಂತೆ 89 ಆ್ಯಪ್‌ಗಳನ್ನು ಸ್ಮಾರ್ಟ್‌ಫೋನ್‌ನಿಂದ ತೆಗೆದು ಹಾಕುವಂತೆ ಭಾರತೀಯ ಸೇನೆ ತನ್ನ ಯೋಧರಿಗೆ ಸೂಚಿಸಿದೆ.
- ಮಾಹಿತಿ ಸೋರಿಕೆಯಾಗದಂತೆ ತಡೆಗಟ್ಟುವ ನಿಟ್ಟಿನಲ್ಲಿ ಈ ಕ್ರಮಕ್ಕೆ ಕೈಗೊಳ್ಳಲಾಗಿದೆ.
- ಸಂದೇಶ ರವಾನಿಸುವ ವಿ–ಚಾಟ್, ವೈಬರ್ ಹಾಗೂ ನೆಟ್‌ವರ್ಕಿಂಗ್ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಸ್ನಾಪ್‌ಚಾಟ್ ಸೇರಿದಂತೆ 18 ವಿಭಾಗಗಳ ಮೇಲೆ ಸೇನೆ ನಿಗಾವಹಿಸಿದೆ.

32. ಭಾರತೀಯ ವಾಯುಪಡೆಗೆ ಅಪಾಚೆ, ಚಿನೂಕ್‌ನ ಹೆಲಿಕಾಪ್ಟರ್‌ಗಳನ್ನು ಅಮೆರಿಕದ ಹಸ್ತಾಂತರಿಸಿದೆ:

- ಒಪ್ಪಂದದಂತೆ ಅಮೆರಿಕದ ಬೋಯಿಂಗ್ ಸಂಸ್ಥೆಯು ಐದು ಅಪಾಚೆ ಹೆಲಿಕಾಪ್ಟರ್‌ಗಳನ್ನು ಭಾರತೀಯ ವಾಯುಪಡೆಗೆ ಹಸ್ತಾಂತರಿಸಿದೆ. ಇದರಿಂದಾಗಿ ಎಲ್ಲ 22 ಅಪಾಚೆ ಹೆಲಿಕಾಪ್ಟರ್‌ಗಳು ವಾಯುಪಡೆಗೆ ಸೇರ್ಪಡೆಯಾಗಿವೆ.
- ಜೊತೆಗೆ 15 ಚಿನೂಕ್ ಹೆವಿ ಲಿಫ್ಟ್ ಹೆಲಿಕಾಪ್ಟರ್‌ಗಳು ಕೂಡ ಕಳೆದ ಮಾರ್ಚ್‌ನಲ್ಲಿಯೇ ವಾಯುಪಡೆ ಸೇರಿವೆ. ಈ ಮೂಲಕ ಯುದ್ಧದ ಸಂದರ್ಭಗಳಲ್ಲಿ ದಾಳಿಗೆ ಮತ್ತು ಸರಕು, ಯೋಧರ ಸಾಗಣೆ ಕಾರ್ಯಾಚರಣೆಗೆ ಭಾರತೀಯ ವಾಯುಪಡೆಗೆ (ಐ.ಎ.ಎಫ್) ಭಾರಿ ಬಲ ಬಂದಂತಾಗಿದೆ. ಅಪಾಚೆ ಯುದ್ಧ ಬಳಕೆ ಹೆಲಿಕಾಪ್ಟರ್‌ನ ಆಧುನಿಕ ಶ್ರೇಣಿಯಾದ ಎ.ಎಚ್–64 ಹೊಂದಿರುವ ವಿಶ್ವದ 17 ರಾಷ್ಟ್ರಗಳ ಪೈಕಿ ಭಾರತ ಕೂಡ ಒಂದಾಗಿದೆ.
- ಎಲ್ಲ ಹವಾಮಾನಗಳಲ್ಲಿಯೂ ಹಗಲು–ರಾತ್ರಿ ಕಾರ್ಯನಿರ್ವಹಿಸುವ ಈ ಹೆಲಿಕಾಪ್ಟರ್‌ಗಳು ಗುಡ್ಡಗಾಡು ಪ್ರದೇಶಗಳಲ್ಲಿಯೂ ಹಾರಾಟ ನಡೆಸಬಲ್ಲವು.
- ಭಾರಿ ಶಸ್ತ್ರಾಸ್ತ್ರಗಳು, ಸೆನ್ಸರ್‌ಗಳು, ನೇವಿಗೇಟರ್‌ಗಳು, ದಾಳಿ ಮಾಡಬೇಕಾದ ಗುರಿಯ ಕುರಿತಾದ ಕ್ಷಣಕ್ಷಣ ವಿವರ ನೀಡುವ ವ್ಯವಸ್ಥೆ ಇದೆ.
- ಅಗ್ನಿ ನಿಯಂತ್ರಿಸುವ ರೆಡಾರ್ ಕೂಡ ಇದರಲ್ಲಿದೆ. ಇನ್ನು ಚಿನೂಕ್ ಹೆಲಿಕಾಪ್ಟರ್‌ಗಳು ವಿಶ್ವದಲ್ಲಿ ಅತ್ಯಂತ ವಿಶ್ವಾಸಾರ್ಹತೆ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಹೆಲಿಕಾಪ್ಟರ್‌ಗಳಾಗಿವೆ.

33. ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ 'ಚಿನ್ನದ ಹುಲಿ' ಕಾಣಿಸಿಕೊಂಡಿದೆ.

- ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ 'ಚಿನ್ನದ ಹುಲಿ' (ಗೋಲ್ಡನ್ ಟೈಗರ್) ಕಾಣಿಸಿಕೊಂಡಿದೆ.
- ಕಾಡಿನ ಹುಲಿಗಳ ಅಸಾಮಾನ್ಯ ಬಣ್ಣ ವಿರೂಪಕ್ಕೆ ಚಿನ್ನದ ಹುಲಿ ಒಂದು ಉದಾಹರಣೆ. ನಿಕಟ ಸಂಬಂಧಿ ಹುಲಿಗಳ ಮಿಲನದಿಂದಾದ ಸಂತಾನೋತ್ಪತ್ತಿಯಿಂದ ಹೀಗಾಗಿರಬಹುದು.
- ಹುಲಿಗಳ ಆವಾಸಸ್ಥಾನ ನಾಶ ಅಥವಾ ಪರಸ್ಪರ ಸಂಪರ್ಕ ಕಡಿತ ಇವೆ ಕೆಲವು ಕಾರಣಗಳಾಗಿವೆ. ಇರುವ ಸಂಖ್ಯೆಯಲ್ಲೇ ಸಂತಾನೋತ್ಪತ್ತಿ ನಡೆಯುವುದರಿಂದ ವಂಶವಾಹಿನಿಯಲ್ಲಿ ಈ ರೀತಿಯ ಬದಲಾವಣೆಗಳು ಕಂಡುಬರುತ್ತವೆ.
- ನಿಕಟ ಸಂಬಂಧದಲ್ಲಿಯೇ ಹೆಚ್ಚಿನ ಸಂತಾನೋತ್ಪತ್ತಿ ನಡೆಯುತ್ತಿರುವುದು ಅರಣ್ಯದಲ್ಲಿ ಹುಲಿಯ ಸಂತಾನ ಕಡಿಮೆಯಾಗುತ್ತಿದೆ ಎಂಬುದಕ್ಕೆ ಸೂಚನೆ.
- ಹಳದಿ ಮಿಶ್ರಿತ ಚರ್ಮ, ಕಪ್ಪು ಪಟ್ಟೆಗಳು, ಹೊಟ್ಟೆಯ ಭಾಗದಲ್ಲಿ ಬಿಳಿ ಪಟ್ಟೆಗಳು ಕಂಡುಬಂದಿವೆ. 2014ರಲ್ಲಿ ಕ್ಯಾಮರಾದಲ್ಲಿ ಈ ರೀತಿಯ ಹುಲಿಗಳು ಮೊದಲಿಗೆ ಸೆರೆಯಾಗಿದ್ದವು.
- ಹುಲಿಯ ಈ ಬಣ್ಣ ಮುಂದಿನ ಸಂತಾನಕ್ಕೆ ವರ್ಗಾವಣೆ ಯಾಗುತ್ತದೆಯೋ, ಇಲ್ಲವೋ ಎಂಬ ಸಂಶೋಧನೆ ಆಗಬೇಕಿದೆ.

34. 2030ರ ಅಂತ್ಯಕ್ಕೆ ರೈಲ್ವೆಯನ್ನು ಪೂರ್ಣ ಪ್ರಮಾಣದಲ್ಲಿ ಪರಿಸರ ಸ್ನೇಹಿಯನ್ನಾಗಿ ಪರಿವರ್ತನೆ ಮಾಡುವ ಗುರಿಯನ್ನು ರೈಲ್ವೆ ಇಲಾಖೆ ಹಾಕಿಕೊಂಡಿದೆ.

- ಬ್ರಾಡ್‌ಗೇಜ್‌ಗಳ ವಿದ್ಯುದೀಕರಣ ಯೋಜನೆ, ಇಂಗಾಲದ ಹೊರಸೂಸುವಿಕೆ ಪ್ರಮಾಣ ಕುಗ್ಗಿಸುವ ಕ್ರಮಗಳಿಗೆ ಆದ್ಯತೆ ನೀಡಲಿದೆ.
- ಈ ಕುರಿತು ಹೇಳಿಕೆ ನೀಡಿರುವ ರೈಲ್ವೆ ಇಲಾಖೆ, 2023ರ ಅಂತ್ಯದ ವೇಳೆಗೆ ದೇಶದಾದ್ಯಂತ ಎಲ್ಲ ಬ್ರಾಡ್‌ಗೇಜ್‌ಗಳ ವಿದ್ಯುದ್ದೀಕರಣ ಕಾರ್ಯವನ್ನು ಅಂತಿಮಗೊಳಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದೆ.
- ಇಂಧನ ಮಿತವ್ಯಯ ಕ್ರಮಗಳು, ಎಲ್ಲ ನಿಲ್ದಾಣಗಳಿಗೆ ಹಸಿರು ಪ್ರಮಾಣೀಕರಣ ಪಡೆಯುವುದು, ಬೋಗಿಗಳಲ್ಲಿ ಬಯೋ ಶೌಚಾಲಯಗಳ ಅಳವಡಿಕೆ, ಮರುಬಳಕೆ ಇಂಧನ ಮೂಲಗಳ ಬಳಕೆಗೆ ಪ್ರಾಮುಖ್ಯತೆ ನೀಡಲಾಗುವುದು ಎಂದು ಹೇಳಿದೆ. ಈ ಹೇಳಿಕೆ ಪ್ರಕಾರ, ಈಗಾಗಲೇ 40,000 ಕ್ಕೂ ಅಧಿಕ ಕಿ.ಮೀ. ಮಾರ್ಗಗಳಲ್ಲಿ ವಿದ್ಯುದ್ದೀಕರಣ ಯೋಜನೆ ಜಾರಿಯಾಗಿದೆ. ಇದು, ಒಟ್ಟು ಬ್ರಾಡ್‌ಗೇಜ್ ಮಾರ್ಗದ ಶೇ. 63ರಷ್ಟು ಇದಾಗಿದೆ.
- 2014–20ರ ಅವಧಿಯಲ್ಲಿ ಒಟ್ಟು 18,605 ಕಿ.ಮೀ. ಮಾರ್ಗ ವಿದ್ಯುದ್ದೀಕರಣವಾಗಿದೆ. 2009–14ರ ಅವಧಿಯಲ್ಲಿ 3,835 ಕಿ.ಮೀ. ವಿದ್ಯುದ್ದೀಕರಣ ಆಗಿತ್ತು.

35. ಜಗತ್ತಿನ ಅತ್ಯಂತ ಶ್ರೀಮಂತ ದೇಗುಲ ಎಂಬ ಖ್ಯಾತಿಯ ಕೇರಳದ ಪದ್ಮನಾಭಸ್ವಾಮಿ ದೇಗುಲ ಮತ್ತೆ ಸುದ್ದಿಯಲ್ಲಿದೆ:

- ಈ ದೇಗುಲದ ಆಡಳಿತವನ್ನು ರಾಜ್ಯ ಸರ್ಕಾರಕ್ಕೆ ವಹಿಸಬೇಕೇ ಅಥವಾ ತಿರುವಾಂಕೂರು ರಾಜಮನೆತನಕ್ಕೆ ವಹಿಸಬೇಕೇ ಎಂಬ ವಿವಾದವನ್ನು ಬಗೆಹರಿಸಿರುವ ಸುಪ್ರೀಂ ಕೋರ್ಟ್, 2011ರಲ್ಲಿ ಕೇರಳ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪರಿಷ್ಕರಿಸಿ, ದೇವಸ್ಥಾನದ ಆಡಳಿತ ಹಾಗೂ ಸಂಪತ್ತಿನ ಹಕ್ಕು ರಾಜಮನೆತನಕ್ಕೆ ಸೇರಿದ್ದು ಎಂದು ಹೇಳಿದೆ.
- ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ಮೌಲ್ಯದ ಚಿನ್ನಾಭರಣ ಮತ್ತು ಆಸ್ತಿ ಹೊಂದಿರುವ ಈ ದೇಗುಲ ನಿರ್ವಹಣೆಯ ವಿವಾದವು ದಶಕದಿಂದ ಇತ್ತು. ಅದು ಈಗ ಬಗೆಹರಿದಿದೆ.
- ಸಾಂಪ್ರದಾಯಿಕ ಕಾನೂನು ಪ್ರಕಾರ ಹಕ್ಕುಗಳು (ದೇವಸ್ಥಾನದ ಆರ್ಥಿಕ ವ್ಯವಹಾರಗಳ ನಿರ್ವಹಣೆ) ಕೊನೆಯ ರಾಜನ ಸಾವಿನ ನಂತರವೂ ಆತನ ಕುಟುಂಬದಲ್ಲೇ ಉಳಿಯುತ್ತವೆ ಎಂದು ಹೇಳುವ ಮೂಲಕ ಸುಪ್ರೀಂ ಕೋರ್ಟ್ ಯಾವುದೇ ಅನುಮಾನಕ್ಕೆ ಎಡೆ ಇಲ್ಲದಂತೆ ತಿರುವನಂಥಪುರದ ಪದ್ಮನಾಭಸ್ವಾಮಿ ದೇಗುಲವನ್ನು ತಿರುವಾಂಕೂರು ರಾಜಮನೆತನಕ್ಕೆ ಒಪ್ಪಿಸಿದೆ.

ಪ್ರಕರಣ ವಿಷಯ ಏನಿತ್ತೆಂದರೆ :

- ದೇಗುಲದ ಸಂಪತ್ತು ಯಾರಿಗೆ ಸೇರಬೇಕು ಮತ್ತು ಅದರ ನಿರ್ವಹಣೆ ಯಾರು ಮಾಡಬೇಕು ಎಂಬುದು ವಿವಾದದ ತಿರುಳು. ಹಾಗೆಯೇ, ತಿರುವಾಂಕೂರು ರಾಜಮನೆತನದ ಕೊನೆಯ ಆಡಳಿತಗಾರ ಚಿಥಿರಾ ತಿರುನಾಳ್ ಬಲರಾಮ ವರ್ಮ ಅವರ ಕಿರಿಯ ಸಹೋದರ ಉತ್ರಾಡಂ ತಿರುನಾಳ್ ಮಾರ್ತಾಂಡ ವರ್ಮ ಅವರಿಗೆ ದೇವಸ್ಥಾನ ಆಡಳಿತ ಸೇರಬೇಕೆ ಎಂಬ ವಿಷಯವನ್ನು ಈ ಪ್ರಕರಣ ಹೊಂದಿತ್ತು.
- 1991ರಲ್ಲಿ ಚಿಥಿರಾ ತಿರುನಾಳ ಬಲರಾಮ ಮಾರ್ತಾಂಡ ವರ್ಮ ಮೃತಪಟ್ಟ ಬಳಿಕ ಉತ್ರಾಡಂ ಮಾರ್ತಾಂಡ ವರ್ಮ ಅವರೇ ದೇವಸ್ಥಾನದ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದರು. ಆದರೆ ಇವರು 2013ರಲ್ಲಿ ಮರಣ ಹೊಂದಿದ್ದಾರೆ.
- ಇದೀಗ ಸುಪ್ರೀಂ ಕೋರ್ಟ್ ಆಡಳಿತಗಾರನ ಬಳಿಕವೂ ಒಡೆತನವು ರಾಜಮನೆತನದಲ್ಲಿ ಉಳಿದುಕೊಳ್ಳುತ್ತದೆ ಎಂದು ತೀರ್ಪು ನೀಡಿದೆ.
- ಪ್ರಾಚೀನ ಪದ್ಮನಾಭಸ್ವಾಮಿ ದೇವಾಲಯದ ಮಾಲೀಕತ್ವ ನಿಯಂತ್ರಣ ಮತ್ತು ನಿರ್ವಹಣೆಯನ್ನು ಪಡೆಯಲು ತಿರುವಾಂಕೂರು–ಕೊಚ್ಚಿನ್ ಹಿಂದೂ ಧಾರ್ಮಿಕ ಸಂಸ್ಥೆಗಳ ಕಾಯ್ದೆ 1950ರ ಪ್ರಕಾರ ಅರ್ಹ ಎಂದು ಹೇಳಿದೆ.

ಪದ್ಮನಾಭಸ್ವಾಮಿ ದೇವಾಲಯದ ವಿವಾದದ ಹಿನ್ನೆಲೆ:

- ರಾಜ ಚಿಥಿರಾ ತಿರುನಾಳ್ ದೇಗುಲದ ಗೋಪುರವನ್ನು ಚಿನ್ನದಿಂದ ನಿರ್ಮಿಸುವ ಇಚ್ಛೆ ಹೊಂದಿದ್ದರು. ಆದರೆ 1990ರಲ್ಲಿ ಅವರ ನಿಧನದ ನಂತರ ತಿರುನಾಳ್ ಮಾರ್ತಾಂಡ ವರ್ಮ ಈ ಕಾರ್ಯ ಕೈಗೆತ್ತಿಕೊಂಡರು.
- ಆಗ ರಹಸ್ಯ ಕೋಣೆಯಲ್ಲಿದ್ದ ಕೆಲವು ಚಿನ್ನಾಭರಣಗಳನ್ನು ಕರಗಿಸುವ ಕಾರ್ಯ ಕೈಗೆತ್ತಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಕೋಟ್ಯಂತರ ರೂ. ಮೌಲ್ಯದ ಚಿನ್ನ ಕಳ್ಳ ಸಾಗಣೆಯಾದ ಶಂಕೆ ವ್ಯಕ್ತವಾಯಿತು.
- 2007ರಲ್ಲಿ ರಹಸ್ಯ ಕೋಣೆಯಲ್ಲಿರುವ ಚಿನ್ನಾಭರಣಗಳನ್ನು ಪಟ್ಟಿ ಮಾಡುವ ಕುರಿತು ಆಡಳಿತ ಮಂಡಳಿ ನೋಟಿಸ್ ಜಾರಿ ಮಾಡಿತ್ತು. ಇದಕ್ಕಾಗಿ ಹರಿಕುಮಾರ್ ಎಂಬುವರನ್ನು ತಿರುವಾಂಕೂರು ರಾಜವಂಶಸ್ಥ ಮಾರ್ತಾಂಡ ನೇಮಿಸಿದರು.

- ಆದರೆ ಕಾನೂನು ಪ್ರಕಾರ ರಾಜ ಈ ನೇಮಕ ಮಾಡುವಂತಿಲ್ಲ ಎಂದು ಪ್ರಶ್ನಿಸಿ ಐ.ಪಿ.ಎಸ್. ಅಧಿಕಾರಿ ಟಿ.ಪಿ. ಸೌಂದರ್ ರಾಜನ್ ಕೇರಳ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.
- ರಾಜ ಮಾರ್ತಾಂಡ ವರ್ಮ ಅವರ ವಿರುದ್ಧವಾಗಿ ನ್ಯಾಯಾಲಯದಲ್ಲಿ ತೀರ್ಪು ಬಂದಿತು. ನಂತರ ಸುಪ್ರೀಂ ಕೋರ್ಟ್‌ನಲ್ಲಿ ಈ ಕಾನೂನು ಹೋರಾಟ ಮುಂದುವರಿಯಿತು.

ಪದ್ಮನಾಭಸ್ವಾಮಿ ದೇಗುಲದ ನೆಲಮಾಳಿಗೆಯಲ್ಲಿರುವ 'ಬಿ' ಕೋಣೆಯಲ್ಲಿ ಏನಿದೆ?

- ಪದ್ಮನಾಭಸ್ವಾಮಿ ದೇಗುಲದ ನೆಲಮಾಳಿಗೆಯಲ್ಲಿರುವ ಆರು ಕೋಣೆಗಳ ಪೈಕಿ 'ಬಿ' ಕೋಣೆಯನ್ನು ಇದುವರೆಗೂ ತೆರೆದಿಲ್ಲ.
- ವಾಸ್ತವದಲ್ಲಿ ಸುಪ್ರೀಂಕೋರ್ಟ್ ತಜ್ಞರ ಸಮಿತಿಯ ಉಪಸ್ಥಿತಿಯಲ್ಲಿ ಕೋಣೆಗಳನ್ನು ತೆರೆದು ಅದರಲ್ಲಿರುವ ಚಿನ್ನಾಭರಣ ಮತ್ತು ಆಸ್ತಿಯನ್ನು ದಾಸ್ತಾನು ಮಾಡುವಂತೆ ಸೂಚಿಸಿತ್ತು. ಅದರಂತೆ ಎಲ್ಲ ಕೋಣೆಗಳನ್ನು ತೆರೆದು ಲೆಕ್ಕ ಹಾಕಿದಾಗ ಅಂದಾಜು 90 ಸಾವಿರ ಕೋಟಿ ರೂಪಾಯಿ ಮೌಲ್ಯದ ಚಿನ್ನಾಭರಣಗಳಿರುವುದು ಪತ್ತೆಯಾಯಿತು. ಆದರೆ, 'ಬಿ' ಕೋಣೆಯನ್ನು ತೆರೆಯಲು ರಾಜಮನೆತನ ಸುಪ್ರೀಂ ಕೋರ್ಟ್ ಮುಂದೆ ಆಕ್ಷೇಪಿಸಿತು. 'ಬಿ' ಕೋಣೆಯನ್ನು ತೆರೆದರೆ ಅದರಿಂದ ರಾಜಮನೆತನಕ್ಕೆ ಶಾಪ ತಟ್ಟಲಿದೆ ಎಂದು ವಾದಿಸಿತು.
- ಜುಲೈ 13 ರಂದು ನೀಡಿದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, 'ಬಿ' ಕೋಣೆಯನ್ನು ತೆರೆಯುವುದು ಅಥವಾ ಬಿಡುವುದು ರಾಜಮನೆತನಕ್ಕೆ ಸೇರಿದ ನಿರ್ಧಾರವಾಗಿದೆ ಎಂದು ಹೇಳಿದೆ. ಒಂದು ಅಂದಾಜಿನ ಪ್ರಕಾರ, ಆ ಕೋಣೆಯಲ್ಲಿ ಹೇರಳವಾದ ಸಂಪತ್ತು ಇದೆ ಎಂದು ಹೇಳಲಾಗುತ್ತಿದೆ.

ಅಷ್ಟೊಂದು ಸಂಪತ್ತು ಬಂದಿದ್ದು ಹೇಗೆ?

- ಪದ್ಮನಾಭ ದೇವಾಲಯಕ್ಕೆ ಈ ಚಿನ್ನದ ಸಂಪತ್ತು ಹೇಗೆ ಕೂಡಿ ಬಂತು ಎಂಬ ಬಗ್ಗೆ ಅನೇಕ ವ್ಯಾಖ್ಯಾನಗಳಿವೆ. ತಂಜಾವೂರು ಅರಸರ ಆಳ್ವಿಕೆಗೊಳಪಟ್ಟಿದ್ದ ಈ ದೇವಾಲಯಕ್ಕೆ ಅನೇಕ ರಾಜರು, ಜನರು ಸಲ್ಲಿಸುತ್ತಿದ್ದ ಕಪ್ಪಕಾಣಿಕೆ, ಬೇರೆ ರಾಜರ ಮೇಲೆ ದಂಡೆತ್ತಿ ಹೋದಾಗ ಸಿಕ್ಕ ಸಂಪತ್ತು ಎಲ್ಲವನ್ನೂ ಇಲ್ಲಿ ಸಂಗ್ರಹಿಸಿಡಲಾಗಿತ್ತೆಂದು ಹೇಳಲಾಗುತ್ತಿದೆ. ತಂಜಾವೂರು ಅರಸರು ಕೂಡ ಈ ಸಂಪತ್ತನ್ನು ದುಂದು ವೆಚ್ಚ ಮಾಡದೇ ಬಚ್ಚಿಟ್ಟಿದ್ದರು ಎನ್ನಲಾಗಿದೆ.

ಅನಂತ ಪದ್ಮನಾಭಸ್ವಾಮಿ ದೇಗುಲ ನಿರ್ಮಿಸಿದವರು :

- ತಿರುವನಂತಪುರಂನಲ್ಲಿರುವ ವೈಷ್ಣವರ ಆರಾಧ್ಯ ದೈವ ಅನಂತ ಪದ್ಮನಾಭನ ದೇಗುಲ ನಿರ್ಮಿಸಿದ್ದು ತಿರುವಾಂಕೂರು ರಾಜವಂಶಸ್ಥರು, ತಿರುವಾಂಕೂರು ಸಂಸ್ಥಾನದ ಸ್ಥಾಪಕ ರಾಜ ಮಾರ್ತಾಂಡ ವರ್ಮ ಈ ದೇಗುಲ ನಿರ್ಮಾಣದಲ್ಲಿ ಮಹತ್ವದ ಪಾತ್ರವಹಿಸಿದ್ದ.
- ಈ ದೇಗುಲಕ್ಕೆ 8ನೇ ಶತಮಾನದಿಂದಲೂ ಇತಿಹಾಸ ಇದೆ. ಇದರ 100 ಅಡಿ ಎತ್ತರದ ಬೃಹತ್ ಗೋಪುರ ಸ್ಥಾಪನೆಯಾದದ್ದು 1566ನೇ ಇಸವಿಯಲ್ಲಿ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿರುವ ಈ ದೇಗುಲದ ಪ್ರಮುಖ ಆಕರ್ಷಣೆ ಪನ್ನಗ ಶಯನ ಅನಂತ ಪದ್ಮನಾಭ, ಏಕಶಿಲೆಯಲ್ಲಿರುವ ಈ ಅನಂತ ಶಯನನ್ನು ಮೂರು ಬಾಗಿಲುಗಳಿಂದ ದರ್ಶನ ಪಡೆಯಬೇಕು.

36. ತಮ್ನಾರ್ ಯೋಜನೆಗೆ ಗೋವಾದಲ್ಲೂ ತಕರಾರು

- ಧಾರವಾಡದ ನರೇಂದ್ರದಿಂದ ಗೋವಾಕ್ಕೆ ವಿದ್ಯುತ್ ಸಂಪರ್ಕ ಕಲಿಸುವ 'ಗೋವಾ ತಮ್ನಾರ್ ವಿದ್ಯುತ್ ಲೈನ್ ಯೋಜನೆ'ಗೆ ಕರ್ನಾಟಕದಲ್ಲಷ್ಟೇ ಅಲ್ಲ, ಗೋವಾದಲ್ಲೂ ವಿರೋಧ ವ್ಯಕ್ತವಾಗಿದೆ.
- ಸುಮಾರು 250 ಕೋಟಿ ರೂ. ವೆಚ್ಚದ ಈ ಉದ್ದೇಶಿತ ಯೋಜನೆಯಲ್ಲಿ ಛತ್ತೀಸ್‌ಗಢದ ತಮ್ನಾರ್‌ನಿಂದ ನರೇಂದ್ರಕ್ಕೆ ಸಂಪರ್ಕ ಕಲ್ಪಿಸಲು ನ್ಯಾಶನಲ್ ಗ್ರಿಡ್ ಮೂಲಕ ಗೋವಾಕ್ಕೆ ವಿದ್ಯುತ್ ಲೈನ್ ಎಳೆಯಲಾಗುತ್ತದೆ.
- 400 ಕೆ.ವಿ ಸಾಮರ್ಥ್ಯದ ಈ ಉದ್ದೇಶಿತ ವಿದ್ಯುತ್ ಲೈನ್, ಧಾರವಾಡ, ಬೆಳಗಾವಿ ಮತ್ತು ಉತ್ತರ ಕನ್ನಡದ ಅರಣ್ಯ ಪ್ರದೇಶದ ಮೂಲಕ ಹಾದುಹೋಗುತ್ತದೆ. ಈ ಮೂರೂ ಜಿಲ್ಲೆಗಳಿಂದ ಒಟ್ಟು 177 ಹೆಕ್ಟೇರ್‌ಗೂ ಹೆಚ್ಚು ಅರಣ್ಯ ನಾಶವಾಗಲಿದೆ.
- ಅದರಲ್ಲೂ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಕೆಲ ಭಾಗ. ಅಲ್ಲದೇ ಬೆಳಗಾವಿಯ ದಟ್ಟ ಅರಣ್ಯ ಪ್ರದೇಶಗಳಲ್ಲಿ ಲೈನ್ ಹಾದು ಹೋಗಲಿರುವ ಹಿನ್ನೆಲೆಯಲ್ಲಿ ಪರಿಸರವಾದಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಗೋವಾದಲ್ಲಿ ವಿರೋಧ ಏಕೆ?

- ತಮ್ನಾರ್ ವಿದ್ಯುತ್ ಲೈನ್ ಯೋಜನೆ ಗೋವಾದ **"ಭಗವಾನ್ ಮಹಾವೀರ ವನ್ಯಜೀವಿಧಾಮ"** ಮತ್ತು **"ಮೋಲೆಮ್ ರಾಷ್ಟ್ರೀಯ ಉದ್ಯಾನ"** ಗಳ ಮೂಲಕ ಹಾದು ಹೋಗಲಿದೆ. ಇದರಿಂದ ಅಲ್ಲಿನ ಅಪರೂಪದ ಅರಣ್ಯ ಸಂಪತ್ತಿಗೆ ಹಾನಿಯಾಗಲಿದೆ ಎಂಬುದು ಗೋವಾದ ಟಿ.ಟಿ.ಜಿ.ಎ (ಟ್ರಾವೆಲ್ ಆಂಡ್ ಟೂರಿಸಂ ಅಸೋಸಿಯೇಶನ್ ಆಫ್ ಗೋವಾ) ಸಂಸ್ಥೆಯ ಆರೋಪ.
- ಪ್ರವಾಸೋದ್ಯಮವೇ ಪ್ರಮುಖ ಆದಾಯವಾಗಿರುವ ಗೋವಾದಲ್ಲಿ ಈ ಎರಡೂ ಸ್ಥಳಗಳು ಪ್ರಮುಖ ಪ್ರವಾಸಿ

ತಾಣಗಳಾಗಿವೆ. ಇಲ್ಲಿನ ಪರಿಸರಕ್ಕೆ ಹಾನಿಯಾದರೆ ಪ್ರವಾಸೋದ್ಯಮಕ್ಕೆ ಹಿನ್ನಡೆಯಾಗಲಿದೆ ಎಂಬುದು ಟಿ.ಟಿ.ಜಿ.ಎ ಸಂಸ್ಥೆಯ ಆತಂಕವಾಗಿದೆ.

- ಈ ಹಿನ್ನೆಲೆಯಲ್ಲಿ ಟಿ.ಟಿ.ಜಿ.ಎ ಸಂಸ್ಥೆಯ ಅಧ್ಯಕ್ಷರು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವರಿಗೆ ಪತ್ರ ಬರೆದು ಯೋಜನೆ ಜಾರಿಗೊಳಿಸದಂತೆ ಮನವಿ ಮಾಡಿರುವುದಾಗಿ ವರದಿಯಾಗಿದೆ.

37. ಭಾರತದಲ್ಲಿ ಅಪೌಷ್ಟಿಕತೆ ಪ್ರಮಾಣ ಭಾರಿ ಇಳಿಕೆ, ಬೊಜ್ಜಿನ ಸಮಸ್ಯೆ ಏರಿಕೆ:

- ಭಾರತದಲ್ಲಿ ಅಪೌಷ್ಟಿಕತೆಯಿಂದ ಬಳಲುವವರ ಸಂಖ್ಯೆ ಗಣನೀಯ ಇಳಿಮುಖವಾಗಿದೆ.ಇದೇ ವೇಳೆ ಬೊಜ್ಜಿನ ಸಮಸ್ಯೆಗೆ ಸಿಲುಕಿರುವ ಯುವಜನರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಜಾಗತಿಕ ಆಹಾರ ಭದ್ರತೆ ಹಾಗೂ ಪೋಷಣೆ ಕುರಿತ ವರದಿಯಲ್ಲಿ ಈ ಸಂಗತಿ ಪ್ರಸ್ತಾಪಿಸಲಾಗಿದೆ.
- ಕಳೆದು 15 ವರ್ಷಗಳಲ್ಲಿ 6 ಕೋಟಿ ಭಾರತೀಯರು ಅಪೌಷ್ಟಿಕತೆಯ ತೊಂದರೆಯಿಂದ ಹೊರ ಬಂದಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ.
- 2004–06ರ ಅವಧಿಯಲ್ಲಿ 24.9 ಕೋಟಿ ಭಾರತೀಯರು (ಶೇ. 21.7) ಅಪೌಷ್ಟಿಕತೆಯಿಂದ ಬಳಲುತ್ತಿದ್ದರೆ, 2017–19ರ ಅವಧಿಯಲ್ಲಿ ಅಂತಹವರ ಸಂಖ್ಯೆ 18.9 ಕೋಟಿಗೆ (ಶೇ. 14) ಇಳಿಕೆಯಾಗಿದೆ ಎಂದು ವಿಶ್ವ ಸಂಸ್ಥೆಹೇಳಿದೆ. ಈ ಸಮೀಕ್ಷೆಯ ವರದಿಯು ಜಾಗತಿಕ ಮಟ್ಟದಲ್ಲಿ ಆಹಾರ ಭದ್ರತೆ ಹಾಗೂ ಅಪೌಷ್ಟಿಕತೆಯ ಕುರಿತು ನಡೆಸುವ ವಿಶ್ವಾಸಾರ್ಹ ವರದಿಯಾಗಿದೆ.

38. ರಾಮ ಜನ್ಮಭೂಮಿ ಹಕ್ಕು ಪ್ರತಿಪಾದಿಸಿ ಭಿಕ್ಕುಗಳ ಧರಣಿ

- ರಾಮ ಜನ್ಮಭೂಮಿ ಪ್ರದೇಶವು ಬೌದ್ಧರ ಸ್ಥಳವಾಗಿತ್ತು ಎಂದು ಬೌದ್ಧ ಭಿಕ್ಕುಗಳು ಪ್ರತಿಪಾದಿಸಿದ್ದಾರೆ. ಜನ್ಮಭೂಮಿ ಸ್ಥಳದಲ್ಲಿ ಯುನೆಸ್ಕೊದಿಂದ (ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ) ಉತ್ಖನನ ನಡೆಯಬೇಕು ಎಂದು ಆಗ್ರಹಿಸಿ ಅವರು ಉಪವಾಸ ಮತ್ತು ಧರಣಿ ನಡೆಸಿದ್ದಾರೆ.

39. ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣ ಇಳಿಕೆ :

- ತಾಯಂದಿರ ಮರಣ ಎಂದರೆ ಗರ್ಭಿಣಿಯ ಅಥವಾ ಬಸುರಿನ ಮುಕ್ತಾಯದ 42 ದಿನಗಳಲ್ಲಿ ಮಹಿಳೆಯರ ಸಾವು
- ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣ ಕಳೆದ 3 ವರ್ಷಗಳಲ್ಲಿ ಪ್ರತಿ ಒಂದು ಲಕ್ಷಕ್ಕೆ 108 ರಿಂದ 92ಕ್ಕೆ ಇಳಿಕೆಯಾಗಿದೆ. 2015 ರಿಂದ 2017ಕ್ಕೆ ಹೋಲಿಸಿದರೆ 2016 ರಿಂದ 2018ರ ನಡುವೆ ಶೇ. 5.2ರಷ್ಟು ಕಡಿಮೆಯಾಗಿದೆ.
- ಆದರೆ, ದಕ್ಷಿಣ ಭಾರತದ ರಾಜ್ಯಗಳಿಗೆ ಹೋಲಿಸಿದರೆ ಬಾಣಂತಿಯರ ಸಾವು ಕರ್ನಾಟಕದಲ್ಲಿ ಅತಿ ಹೆಚ್ಚು. ಆಂಧ್ರಪ್ರದೇಶ (65),ತೆಲಂಗಾಣ (63), ತಮಿಳುನಾಡು (60) ಮತ್ತು ಕೇರಳ (43)
- ವಿಶ್ವ ಆರೋಗ್ಯ ಸಂಸ್ಥೆಯು 2030ರ ವೇಳೆಗೆ ಈ ಸಂಖ್ಯೆಯನ್ನು ಪ್ರತಿ ಲಕ್ಷಕ್ಕೆ 70ಕ್ಕೆ ಇಳಿಸುವ ಗುರಿ ಹೊಂದಿದೆ. ಗರ್ಭಿಣಿಯರು ಮತ್ತು ಬಾಣಂತಿಯರ ಆರೈಕೆ ವಿಚಾರದಲ್ಲಿ ರಾಜ್ಯವು ಇನ್ನೂ ಸಾಕಷ್ಟು ಸುಧಾರಣೆ ಕ್ರಮಗಳೊಂದಿಗೆ ಕ್ರಮಿಸಬೇಕಿದೆ.
- ರಿಜಿಸ್ಟಾರ್ ಜನರಲ್ ಆಫ್ ಇಂಡಿಯಾ ಜುಲೈನಲ್ಲಿ ಬಿಡುಗಡೆ ಮಾಡಿರುವ ಅಂಕಿ ಅಂಶದಲ್ಲಿನ ಮಾಹಿತಿ ಬಹಿರಂಗವಾಗಿದೆ.
- ರಕ್ತ ಹೀನತೆ ಮತ್ತು ರಕ್ತ ಸ್ರಾವವೂ ತಾಯಿ ಮರಣ ಪ್ರಮಾಣಕ್ಕೆ ಪ್ರಮುಖ ಅಂಶಗಳಾಗಿವೆ. ಹೆರಿಗೆ ನೋವು ಕಾಣಿಸಿಕೊಂಡ ಒಂದು ತಾಸಿನಲ್ಲಿ ಹೆರಿಗೆ ಸೌಲಭ್ಯ ಸಿಗಬೇಕು. ಆದರೆ, ಹಳ್ಳಿ ಮತ್ತು ತಾಲೂಕುಗಳಿಂದ ನಗರ ಪ್ರದೇಶಗಳಿಗೆ ಹೆರಿಗೆಗಾಗಿ ಕರೆತರುತ್ತಿದ್ದಾರೆ. ಈ ಅವಧಿಯಲ್ಲಿ ಗರ್ಭಿಣಿಯರು ಸಮಸ್ಯೆ ಎದುರಿಸುತ್ತಾರೆ. ಇದನ್ನು ನಿಯಂತ್ರಿಸಲು ತಾಲೂಕು ಮಟ್ಟದಲ್ಲಿ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲೇ ತಜ್ಞ ಹೆರಿಗೆ ವೈದ್ಯರು ಸಿಸೇರಿಯನ್ ಹೆರಿಗೆ ಮಾಡಲು ಬೇಕಾದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.
- ಇನ್ನೆರಡು ವರ್ಷಗಳಲ್ಲಿ ಜಾಗತಿಕ ಗುರಿ ಮುಟ್ಟುವ ಯೋಜನೆಗಳು ಈಗಾಗಲೇ ಮಾಡಿಕೊಳ್ಳಲಾಗಿದೆ. ತಾಯಿ ಮರಣ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಕರ್ನಾಟಕದಲ್ಲಿ ಕಡಿಮೆ ಇದೆ.
- ಉತ್ತಮ ಹೆರಿಗೆ ಸೇವೆಯ ಕುರಿತಾಗಿ ರಾಜ್ಯದ 124 ಹೆರಿಗೆ ಆಸ್ಪತ್ರೆಗಳನ್ನು ಪ್ರಮಾಣೀಕರಿಸಬೇಕಾಗಿದ್ದು, ಈಗಾಗಲೇ 14 ಪ್ರಮಾಣೀಕರಿಸಲಾಗಿದೆ. ಇನ್ನುಳಿದ ಹೆರಿಗೆ ಆಸ್ಪತ್ರೆಗಳನ್ನು 2021ರ ವೇಳೆಗೆ ಉನ್ನತೀಕರಿಸಿ ಪ್ರಮಾಣೀಕರಿಸಲಾಗುತ್ತದೆ.

40. 2048ರಲ್ಲಿ ಭಾರತದ ಜನಸಂಖ್ಯೆ 160 ಕೋಟಿ!

- ವಿಶ್ವದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಅಗ್ರ ರಾಷ್ಟ್ರಗಳಲ್ಲಿ 2ನೇ ಸ್ಥಾನದಲ್ಲಿರುವ ಭಾರತದಲ್ಲಿ ಮುಂದಿನ 28 ವರ್ಷಗಳಲ್ಲಿ ಜನಸಂಖ್ಯೆಯಲ್ಲಿ ತೀವ್ರ ಏರಿಕೆ ದಾಖಲಾಗಲಿದೆ.
- ಸದ್ಯ 138 ಕೋಟಿ ಇರುವ ಜನಸಂಖ್ಯೆ 2048ಕ್ಕೆ 160 ಕೋಟಿ ಮುಟ್ಟಲಿದೆ. ಆದರೆ ನಂತರದ ದಿನಗಳಲ್ಲಿ ಶೇ. 32ರಷ್ಟು ಇಳಿಕೆ ಕಂಡು 2100ರ ಹೊತ್ತಿಗೆ 109 ಕೋಟಿಗೆ ಕುಸಿಯಲಿದೆ.
- ಹಾಗೆಯೇ ದೇಶದಲ್ಲಿನ ದುಡಿಯುವ ವಯಸ್ಕರ ಸಂಖ್ಯೆ 2017ರಲ್ಲಿ 76 ಕೋಟಿ ಇದ್ದುದು 2100ರ ಹೊತ್ತಿಗೆ 57.8 ಕೋಟಿಗೆ ಇಳಿಕೆಯಾಗಲಿದೆ. ನೆರೆಯ ಚೀನಾದಲ್ಲಿ 2017ರಲ್ಲಿ 95 ಕೋಟಿಯಷ್ಟಿದ್ದ ದುಡಿಯುವ ಸಾಮರ್ಥ್ಯದ ವಯಸ್ಕರ ಪ್ರಮಾಣ 2100ರವರೆಗೆ 35.7 ಕೋಟಿಗೆ ಕುಸಿಯಲಿದೆ.

- ಈ ಮುನ್ಸೂಚನೆಯನ್ನು ವಾಷಿಂಗ್ಟನ್ ವಿಶ್ವವಿದ್ಯಾಲಯದ Institute of Health Metrics and Evaluation ನೀಡಿದೆ.
- ಈಗ ಅಧಿಕ ಜನಸಂಖ್ಯೆ ಹೊಂದಿರುವ ರಾಷ್ಟ್ರಗಳು
- ಚೀನಾ 143 ಕೋಟಿ
- ಭಾರತ 138 ಕೋಟಿ
- ಅಮೆರಿಕ 33 ಕೋಟಿ
- ಇಂಡೋನೇಷ್ಯಾ 27 ಕೋಟಿ
- ಪಾಕಿಸ್ತಾನ 22 ಕೋಟಿ

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

41. ಸೈಬರ್ ಧಾಳಿ ವಿರುದ್ಧ ಭಾರತ ಮತ್ತು ಇಸ್ರೇಲ್ ಸಂಯುಕ್ತ ಹೋರಾಟ:

- ಇಸ್ರೇಲ್‌ನ ನ್ಯಾಷನಲ್ ಸೈಬರ್ ನಿರ್ದೇಶನಾಲಯದ ಮಹಾ ನಿರ್ದೇಶಕ ಯಿಗಲ್ ಉನ್ನಾ ಹಾಗೂ ಇಸ್ರೇಲ್ ನಲ್ಲಿರುವ ಭಾರತದ ರಾಯಭಾರಿ ಸಂಜೀವ್ ಶುಕ್ಲಾ ಸೈಬರ್ ಭದ್ರತೆಯಲ್ಲಿ ಪರಸ್ಪರ ಸಹಕಾರ ಹೆಚ್ಚಿಸುವ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.
- ಭಾರತವು ಈಗಾಗಲೇ ಇಸ್ರೇಲ್ ಜತೆಗೆ ರಕ್ಷಣೆ, ವಿಜ್ಞಾನ–ತಂತ್ರಜ್ಞಾನ, ಕೃಷಿ ಸೇರಿ ಹಲವು ಕ್ಷೇತ್ರಗಳಲ್ಲಿ ಸಹಕಾರದ ಒಪ್ಪಂದ ಮಾಡಿಕೊಂಡಿದೆ.
- ಸೈಬರ್ ಭದ್ರತೆ ಕುರಿತು ಪರಸ್ಪರ ತಂತ್ರಜ್ಞಾನ ಹಾಗೂ ಮಾಹಿತಿ ವಿನಿಮಯ ಸಹಕಾರವನ್ನು ಹೊಸ ಒಪ್ಪಂದದ ಮೂಲಕ ಮತ್ತಷ್ಟು ವಿಸ್ತರಿಸಿಕೊಂಡಿದೆ.

42. ಫಿಂಗರ್–4 ತೊರೆಯಲ್ಲವೆಂದ ಚೀನಾ :

- ಪೂರ್ವ ಲಡಾಖ್‌ನಲ್ಲಿ ಭಾರತ ಮತ್ತು ಚೀನಾ ನಡುವಿನ ಉದ್ವಿಗ್ನತೆ ಶಮನವಾಗುತ್ತಿದೆ ಎನ್ನುವಾಗಲೇ ಮತ್ತೊಮ್ಮೆ ಹೊಸ ವಿವಾದ ತೆಗೆದಿದೆ.
- ವಿವಾದಿತ ಫಿಂಗರ್ 4 ಪ್ರದೇಶದಿಂದ ಹಿಂದೆ ಸರಿಯುವುದಿಲ್ಲ ಎಂದು ಚೀನಾ ಹೇಳಿದೆ. ಈ ಹಿನ್ನೆಲೆಯಲ್ಲಿ ಭಾರತ ಗಡಿಯಲ್ಲಿ ಹೈ ಅಲರ್ಟ್ ಘೋಷಿಸಿದ್ದು, ಗಡಿ ಭಾಗದಲ್ಲಿ ಟ್ಯಾಂಕ್‌ಗಳ ನಿಯೋಜನೆಯನ್ನು ಹೆಚ್ಚಿಸಿದೆ.

43. ಸಮರಾಭ್ಯಾಸ ನಡೆಸಿ ತೈವಾನ್ ಶಕ್ತಿ ಪ್ರದರ್ಶನ:

- ಚೀನಾ ಮತ್ತು ತೈವಾನ್ ನಡುವಿನ ಪರಿಸ್ಥಿತಿ ದಿನೇ ದಿನೇ ಬಿಗಡಾಯಿಸುತ್ತಿದೆ. ಈ ನಡುವೆ ತೈವಾನ್ ಸಮರಾಭ್ಯಾಸದ ಮೂಲಕ ತನ್ನ ಶಕ್ತಿ ಪ್ರದರ್ಶಿಸಿದೆ.
- ತೈಚುಂಗ್‌ನ ದ್ವೀಪವೊಂದರ ಕಡಲ ತೀರದ ಬಳಿ ತೈವಾನ್ ಸೇನೆ ಸಮರಾಭ್ಯಾಸ ನಡೆಸಿದ್ದು, ಯುದ್ಧ ವಿಮಾನಗಳು ಸಮುದ್ರದತ್ತ ಗುಂಡು ಮತ್ತು ಬಾಂಬ್ ಸಿಡಿಸಿದವು. ಹೆಲಿಕಾಪ್ಟರ್ ಮೂಲಕ ನೀರಿಗೆ ಕ್ಷಿಪಣಿ ಉಡಾಯಿಸಲಾಯಿತು. ಈ ಮೂಲಕ ತೈವಾನ್ ಸೇನೆ ತನ್ನ ಬಲ ಪ್ರದರ್ಶಿಸಿದೆ.

44. ನ್ಯಾ. ರವಿ ವಿ ಮಳಿಮಠ ಉತ್ತರಾಖಂಡ ಸಿ.ಜೆ.

- ಕರ್ನಾಟಕ ಮೂಲದ ನ್ಯಾಯಮೂರ್ತಿ ರವಿ.ವಿ.ಮಳಿಮಠ ಅವರನ್ನು ಉತ್ತರಾಖಂಡ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ.
- 25.5.1962 ರಂದು ಜನಿಸಿದ ಇವರು 28.1.1987 ರಂದು ವಕೀಲಿ ವೃತ್ತಿಯನ್ನು ಬೆಂಗಳೂರಿನಲ್ಲಿ ಆರಂಭಿಸಿದರು. ಸಂವಿಧಾನ, ಅಪರಾಧ, ನಾಗರಿಕ, ಕಾರ್ಮಿಕ ಮತ್ತು ಸೇವೆ ವಿಷಯಗಳ ಮೊಕದ್ದಮೆಗಳಲ್ಲಿ ಪರಿಣಿತಿ ಪಡೆದಿದ್ದಾರೆ.
- ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 18.2.2008 ರಂದು ಹೆಚ್ಚುವರಿ ನ್ಯಾಯಾಧೀಶ ಮತ್ತು 17.2.2010 ರಂದು ಖಾಯಂ ನ್ಯಾಯಾಧೀಶರೆಂದು ನೇಮಕ ಆದರು. ಇವರು 5.3.2020 ರಂದು ಉತ್ತರಾಖಂಡ ಉಚ್ಚ ನ್ಯಾಯಾಲಯಕ್ಕೆ ವರ್ಗಾವಣೆಗೊಂಡರು.
- ಹಾಲಿ ಮುಖ್ಯ ನ್ಯಾಯಮೂರ್ತಿ ರಮೇಶ್ ರಂಗನಾಥನ್ ಜುಲೈ 28 ರಂದು ನಿವೃತ್ತಿ ಹೊಂದಲಿರುವುದರಿಂದ ಎರಡನೇ ಹಿರಿಯ ನ್ಯಾಯಮೂರ್ತಿ ಆಗಿರುವ ರವಿ ಮಳಿಮಠ್ ಅವರಿಗೆ ಸಿ.ಜೆ. ಹುದ್ದೆಗೆ ಪದೋನ್ನತಿ ನೀಡಲಾಗಿದೆ.

45. ತ್ಯಾಜ್ಯ ಇಂಧನ ಬಳಕೆ ನಿಯಂತ್ರಣಕ್ಕೆ ಸೂಚನೆ:

- ತೈಲ ಸಂಸ್ಕರಣಾ ಘಟಕಗಳಿಂದ ತ್ಯಾಜ್ಯ ರೂಪದಲ್ಲಿ ಬರುವ ಪೆಟ್‌ಕೋಕ್, ಘನ ಇಂಗಾಲ, ಮತ್ತು ಕುಲುಮೆ ಎಣ್ಣೆಯನ್ನುಉದ್ದಿಮೆಗಳಲ್ಲಿ ಇಂಧನವಾಗಿ ಬಳಸದಂತೆ ವಿಧಿಸಿರುವ ನಿರ್ಬಂಧವು ಕಟ್ಟುನಿಟ್ಟಾಗಿ ಜಾರಿಗೆ ಬರುವಂತೆ ನೋಡಿಕೊಳ್ಳಬೇಕುಎಂದು ರಾಷ್ಟ್ರೀಯ ಹಸಿರು ಪೀಠ ಹೇಳಿದೆ.
- ಕೆಲವು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಆದೇಶ ಸರಿಯಾಗಿ ಪಾಲನೆಯಾಗುತ್ತಿಲ್ಲ ಎಂದು ಪೀಠದ ಅಧ್ಯಕ್ಷ, ನ್ಯಾಯಮೂರ್ತಿ ಆದರ್ಶಕುಮಾರ್ ಗೋಯಲ್ ಈ ನಿರ್ದೇಶನ ನೀಡಿದ್ದಾರೆ.
- ರಾಷ್ಟ್ರ ರಾಜಧಾನಿ ಪ್ರದೇಶದ ಉದ್ದಿಮೆಗಳಲ್ಲಿ ಈ ವಸ್ತುಗಳನ್ನುಇಂಧನವಾಗಿ ಬಳಸುವುದರ ಮೇಲೆ ಈ ನಿಷೇಧ

ವಿಧಿಸಿ ಸುಪ್ರೀಂ ಕೋರ್ಟ್ ಹಿಂದೆ ಆದೇಶ ನೀಡಿದ್ದಲ್ಲದೆ, ಇತರ ರಾಜ್ಯಗಳಲ್ಲೂ ಇದನ್ನು ಜಾರಿಗೆತರುವಂತೆ ಸೂಚಿಸಿತ್ತು.

- ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ ಅಧಿಕಾರವನ್ನು ಬಳಸಿ, ಅಗತ್ಯ ನಿರ್ದೇಶನಗಳನ್ನು ನೀಡುವ ಮೂಲಕ ಈ ಆದೇಶವನ್ನು ಜಾರಿಗೆ ತರಬೇಕು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ನಾಲ್ಕು ತಿಂಗಳೊಳಗೆ ವರದಿ ಸಲ್ಲಿಸಬೇಕು ಎಂದು ಪೀಠ ಹೇಳಿದೆ.
- 2021ರ ಜನವರಿ 25ಕ್ಕೆ ಮುಂದಿನ ವಿಚಾರಣೆಯನ್ನು ನಡೆಸುವುದಾಗಿಯೂ ತಿಳಿಸಿದೆ.

46. ನೌಕಾ ಪಡೆಯಿಂದ ಬಿರುಸಿನ ಸಮರಾಭ್ಯಾಸ :

- ಗಡಿ ತಂಟೆ ವಿಷಯದಲ್ಲಿ ದಿನಕ್ಕೊಂದು ಹೇಳಿಕೆ ಬದಲಿಸುತ್ತಿರುವ ಚೀನಾ ವಿರುದ್ಧ ಭಾರತ ಕಟು ಎಚ್ಚರದ ಕ್ರಮಗಳನ್ನು ಕೈಗೊಂಡಿದೆ.
- ಯಾವುದೇ ಘಳಿಗೆ ಎದುರಾಬಹುದಾದ ಭದ್ರತಾ ಸವಾಲಿಗೆ ಎದೆಯೊಡ್ಡಲು ನಿರ್ಧರಿಸಿರುವ ಭಾರತ, ಅಂಡಮಾನ್ ನಿಕೋಬಾರ್ ದ್ವೀಪ ಪ್ರದೇಶದಲ್ಲಿ ನೌಕಾ ಸಮರಾಭ್ಯಾಸವನ್ನು ಬಿರುಸುಗೊಳಿಸಿದೆ.
- ಪ್ರಮುಖ ಎಲ್ಲಾ ಯುದ್ಧ ನೌಕೆಗಳು ಹಾಗೂ ಸಾಧನ ಸಲಕರಣೆಗಳು ಈ ಸಮರಾಭ್ಯಾಸದಲ್ಲಿ ಬಳಕೆಯಾಗುತ್ತಿವೆ.
- ಶಾಂತಿ ಮಾತುಕತೆ ನಡುವೆಯೇ ಡೆಪ್‌ಸಂಗ್ ಬಯಲಿನಿಂದ ದೌಲತ್ ಬೇಗ್ ಓಲ್ಡಿ ಪ್ರದೇಶದವರೆಗಿನ ಗಡಿ ಭಾಗದಲ್ಲಿ ಚೀನಾ ಸೇನಾ ಪಡೆಗಳು ಜಮಾವಣೆಗೊಳ್ಳತೊಡಗಿವೆ, ಜತೆಗೆ ಟೆಂಟ್ ನಿರ್ಮಾಣದಂತಹ ಹಲವು ಕಾಮಗಾರಿ ಕೈಗೊಂಡಿವೆ. ಇದಕ್ಕೆ ಭಾರತ ತೀವ್ರ ಪ್ರತಿರೋಧ ವ್ಯಕ್ತಪಡಿಸಿದೆ. ಗಡಿಯಲ್ಲಿ ಮೇ 5ರ ಮೊದಲಿನ ವಾತಾವರಣ ನೆಲೆಸಬೇಕು ಎನ್ನುವುದು ಭಾರತದ ಒತ್ತಾಯವಾಗಿದೆ.

47. ಚೀನಾ ಮೂಗುದಾರಕ್ಕೆ ಕೇಂದ್ರದ ಮೋದಿ–ಅಬೆ ತಂತ್ರ:

- ಸಮಾನ ಶತ್ರುವಾದ ಚೀನಾವನ್ನು ಹಣಿಯಲು, ಭಾರತ–ಜಪಾನ್ ಹೊಸ ತಂತ್ರಗಳಿಗಾಗಿ ಹುಡುಕಾಟ ನಡೆಸಿವೆ.
- ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಶಿಂಜೋ ಅಬೆ ನಡುವೆ ಬರುವ ಅಕ್ಟೋಬರ್‌ನಲ್ಲಿ ಆನ್‌ಲೈನ್ ಶೃಂಗಸಭೆ ಏರ್ಪಡಿಸುವ ಚಿಂತನೆ ನಡೆದಿದ್ದು, ಇಬ್ಬರು ಗಣ್ಯರು ಚೀನಾ ಪ್ರಾಬಲ್ಯ ಹತ್ತಿಕ್ಕುವ ವಿಷಯವನ್ನೇ ಪ್ರಧಾನವಾಗಿ ಚರ್ಚಿಸುವ ಸಾಧ್ಯತೆ ಇದೆ.
- ಮೋದಿ–ಅಬೆ ವಾರ್ಷಿಕ ಶೃಂಗಸಭೆ ಕಳೆದ ಡಿಸೆಂಬರ್‌ನಲ್ಲಿಯೇ ನಡೆಯಬೇಕಿತ್ತು. ಅದಕ್ಕೆ ಅಸ್ಸಾಂನ ಗುವಾಹಟಿ ಸ್ಥಳ ನಿಗದಿಯಾಗಿತ್ತು. ಆದರೆ ಹಠಾತ್ ಭುಗಿಲೆದ್ದ ಪೌರತ್ವ ತಿದ್ದುಪಡಿ ಕಾಯ್ದೆ (ಸಿ.ಎ.ಎ.) ವಿರೋಧಿ ಪ್ರತಿಭಟನೆಯಿಂದ ಸಭೆ ಮುಂದೂಡಿಕೆಯಾಗಿತ್ತು. ಆ ಬಳಿಕ ಕೊರೋನಾ ಸೋಂಕು ಹಾವಳಿ ಶುರುವಾದದ್ದರಿಂದ ಅನಿಶ್ಚಿತಾವಧಿಗೆ ಮಾತುಕತೆ ಮುಂದಕ್ಕೆ ಹೋಗಿತ್ತು.
- ಈಗ ಮುಖಾ ಮುಖಿ ಭೇಟಿ ಬದಲು ವಿಡಿಯೊ ಕಾನ್ಫರೆನ್ಸ್ ಮೂಲಕ ಅಕ್ಟೋಬರ್‌ನಲ್ಲಿ ಶೃಂಗ ಸಭೆ ಏರ್ಪಡಿಸಲು ಚಿಂತನೆ ನಡೆದಿದೆ.
- ಚೀನಾಕ್ಕೆ ತನ್ನ ಮಗ್ಗಲಿನ ಯಾವೊಂದು ರಾಷ್ಟ್ರದ ಜತೆಗೂ ಸೌಹಾರ್ದಯುತವಾದ ಸ್ನೇಹ ಸಂಬಂಧ ಇಲ್ಲ. ಭಾರತದ ಜತೆ ಭೂ ಗಡಿ ತಗಾದೆ ಇಟ್ಟುಕೊಂಡಿದ್ದರೆ ಅತ್ತ ಜಪಾನ್, ತೈವಾನ್, ಫಿಲಿಪ್ಪೈನ್ಸ್ ಆದಿಯಾಗಿ ಹಲವು ರಾಷ್ಟ್ರಗಳ ಜತೆ ಜಲ ಗಡಿಗಳ ಜಗಳ ಕಾಯುತ್ತಿದೆ.
- ಕಮ್ಯುನಿಸ್ಟ್ ರಾಷ್ಟ್ರದ ಈ ವಿಸ್ತರಣಾವಾದದ ದುರಾಸೆಗೆ ಕಡಿವಾಣ ಹಾಕುವುದಕ್ಕಾಗಿ ಜಪಾನ್ ಪ್ರಧಾನಿ ಶಿಂಜೋ ಅಬೆ ಅವರು ಬಲವಾದ ಸೂತ್ರಗಳನ್ನು ಪ್ರಸ್ತಾಪಿಸಿದ್ದಾರೆ.
- ಇಂಡೊಫೆಸಿಪಿಕ್ ವಲಯದ ಭದ್ರತೆಯನ್ನು ಪ್ರಧಾನವಾಗಿಟ್ಟುಕೊಂಡು ಅವರು, 'ಚತುರ್ಭುಜ ಭದ್ರತಾ ಸಂಧಾನ' ಶುರು ಮಾಡಿದ್ದಾರೆ. ಅಮೆರಿಕ, ಜಪಾನ್, ಭಾರತ ಮತ್ತು ಆಸ್ಟ್ರೇಲಿಯಾ ಒಳಗೊಂಡ 'ಸ್ಕಾಡ್' ಕೂಟಕ್ಕೆ ವಿಸ್ತರಣಾವಾದ ಕಡಿವಾಣವೇ ಮುಖ್ಯ ಅಜೆಂಡಾವಾಗಿದೆ.
- ಭಾರತ–ಜಪಾನ್ ಶೃಂಗದಲ್ಲೂ ಪ್ರಾದೇಶಿಕ ಭದ್ರತೆಯೇ ಪ್ರಧಾನ ಚರ್ಚೆ ವಿಷಯವಾಗಲಿದೆ. ಶಸ್ತ್ರಾಸ್ತ್ರ ಹಂಚಿಕೆ, ಗಡಿಯಾಚೆಗಿನ ಸೇವೆಯಂತಹ ಹಲವು ಮಹತ್ವದ ಒಪ್ಪಂದಗಳಿಗೆ ಸಹಿ ಹಾಕುವ ಸಾಧ್ಯತೆ ಇದೆ.

48. 2023ರ ಮಾರ್ಚ್‌ನಿಂದ ಖಾಸಗಿ ರೈಲು ಸೇವೆ :

- ಪ್ರಸ್ತಾವಿತ ಖಾಸಗಿ ರೈಲುಗಳ ಸೇವೆ 2023ರ ಮಾರ್ಚ್‌ನಿಂದ ಆರಂಭವಾಗಲಿದೆ.
- ಖಾಸಗಿ ರೈಲುಗಳ ಕಾರ್ಯಾಚರಣೆ ವಿಳಂಬವಾಗಲಿದೆ ಮತ್ತು ಇದು 2024ರ ಮಾರ್ಚ್‌ನಿಂದ ಮಾತ್ರ ಆರಂಭಗೊಳ್ಳಲಿದೆ ಎಂಬ ವರದಿಯ ಹಿನ್ನೆಲೆಯಲ್ಲಿ ಸಚಿವಾಲಯವು ಈ ಸ್ಪಷ್ಟೀಕರಣ ನೀಡಿದೆ.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

49. ರಾಮ ಮಂದಿರ ವಿನ್ಯಾಸದಲ್ಲಿ ಬದಲಾವಣೆ:

- ಉದ್ದೇಶಿತ ರಾಮಮಂದಿರದ ಎತ್ತರ 161 ಅಡಿಗಳಿಗೆ ಎತ್ತರಿಸಲಾಗುವುದು. ಈ ಹಿಂದೆ 128 ಅಡಿ ಎಂದು ನಿರ್ಧರಿಸಲಾಗಿತ್ತು.
- 5 ಗೋಪುರಗಳನ್ನು ಭವ್ಯ ಮಂದಿರ ಹೊಂದಲಿದೆ. ಮುಂಚಿನ ವಿನ್ಯಾಸದಲ್ಲಿ 2 ಗೋಪುರ ಎನ್ನಲಾಗಿತ್ತು.
- ಮಂದಿರ ನಿರ್ಮಾಣ ಮತ್ತು 20 ಎಕರೆ ವಿಸ್ತೀರ್ಣದ ರಾಮ ಜನ್ಮಭೂಮಿ ಪ್ರದೇಶದ ಅಭಿವೃದ್ಧಿಗೆ ಅಗತ್ಯವಿರುವ ಅಂದಾಜು ವೆಚ್ಚ1000 ಕೋಟಿ ರೂ.ಇದರಲ್ಲಿ ಮಂದಿರ ನಿರ್ಮಾಣಕ್ಕೆ 300 ಕೋಟಿ ರೂ. ವೆಚ್ಚವಾಗಲಿದೆ.
- 10 ಕೋಟಿ ಭಾರತೀಯರನ್ನು ಸಂಪರ್ಕಿಸಿ ನಿಧಿ ಸಂಗ್ರಹಕ್ಕೆ ಟ್ರಸ್ಟ್ ತೀರ್ಮಾನಿಸಿದೆ. ಮುಂಗಾರು ಮುಗಿದ ಬಳಿಕ ಈ ಅಭಿಯಾನ ಶುರುವಾಗಲಿದೆ. ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯ ನೆರವು ಪಡೆಯಲೂ ಉದ್ದೇಶಿಸಲಾಗಿದೆ.
- ಮಂದಿರ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಇಟ್ಟುಕೊಂಡಿರುವ ಗುರಿ 3 ರಿಂದ 3.5 ವರ್ಷ.

50. ರಾಜ್ಯಕ್ಕೆ 804 ಕೋಟಿ ರೂ. ಅನುದಾನ:

- ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೈರ್ಮಲ್ಯ ಯೋಜನೆಗಳಿಗಾಗಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 804 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ.
- 15ನೇ ಹಣಕಾಸು ಆಯೋಗದ ಶಿಫಾರಸ್ಸು ಆಧರಿಸಿ 2020–2021ರ ಹಣಕಾಸು ವರ್ಷದಲ್ಲಿ ರಾಜ್ಯಕ್ಕೆ ಈ ಅನುದಾನವನ್ನು ನೀಡಲಾಗಿದೆ.
- ಪಂಚಾಯತ್ ರಾಜ್ ಮತ್ತು ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯ ಹಾಗೂ ಜಲಶಕ್ತಿ ಸಚಿವಾಲಯದ ಶಿಫಾರಸ್ಸಿನ ಮೇರೆಗೆ ಎಲ್ಲ 28 ರಾಜ್ಯಗಳ 2.63 ಲಕ್ಷ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿನ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಒಟ್ಟು 15,187 ಕೋಟಿ ರೂ ಬಿಡುಗಡೆ ಮಾಡಲಾಗಿದೆ.
- ಈ ಹಣವನ್ನು ಬಯಲು ಮುಕ್ತ ಶೌಚಾಲಯ, ಕುಡಿಯುವ ನೀರು ಸರಬರಾಜು, ಮಳೆ ನೀರು ಸಂಗ್ರಹ ಮತ್ತು ನೀರಿನ ಮರುಬಳಕೆ ಯೋಜನೆಗೆ ಬಳಸಿಕೊಳ್ಳಬೇಕು. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈ ಕಾರ್ಯಗಳು ಈಗಾಗಲೇ ಪೂರ್ಣಗೊಂಡಿದ್ದರೆ, ಈ ಹಣವನ್ನು ಇತರ ಅಭಿವೃದ್ಧಿ ಕಾರ್ಯಗಳಿಗೆ ಬಳಸುವಂತೆ ಪಂಚಾಯತ್ ರಾಜ್ ಸಚಿವಾಲಯ ತಿಳಿಸಿದೆ.
- ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ 2020–21ರ ಅವಧಿಯಲ್ಲಿ ಒಟ್ಟು 60,750 ಕೋಟಿ ರೂ ಅನುದಾನವನ್ನು ಬಿಡುಗಡೆ ಮಾಡುವಂತೆ 15ನೇ ಹಣಕಾಸು ಆಯೋಗವು ತನ್ನ ಮಧ್ಯಂತರ ವರದಿಯಲ್ಲಿ ಶಿಫಾರಸ್ಸು ಮಾಡಿದೆ. ಇದನ್ನು ಕೇಂದ್ರ ಸರ್ಕಾರ ಅಂಗೀಕರಿಸಿದ್ದು ಇಷ್ಟು ದೊಡ್ಡ ಮೊತ್ತದ ಅನುದಾನವನ್ನು ಒಂದು ವರ್ಷದಲ್ಲಿ ಹಂಚಿಕೆ ಮಾಡಿರುವುದು ಇದೇ ಮೊದಲು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

51. ದೇಶದ ಸೋಶಿಯಲ್ ಮೀಡಿಯಾ ಸೂಪರ್ ಆ್ಯಪ್:

- ಸಂದೇಶ ರವಾನೆ, ಪ್ರತಿಭಾ ಪ್ರದರ್ಶನ, ಸ್ನೇಹಿತರ ಸಂಪರ್ಕ, ವಿಡಿಯೊ ಕಾನ್ಫರೆನ್ಸ್, ಉತ್ಪನ್ನಗಳ ಪ್ರದರ್ಶನ, ಖರೀದಿ, ಮಾರಾಟ, ಹಣ ರವಾನೆ, ಬಿಲ್ ಪಾವತಿ ಹೀಗೆ ದಿನ ನಿತ್ಯದ ಎಲ್ಲ ಕೆಲಸಗಳಿಗೂ ನೆರವಾಗುವ ಬಹೋಪಯೋಗಿ ಸೂಪರ್ ಆ್ಯಪ್ 'ಎಲಿಮೆಂಟ್ಸ್' ಅನ್ನು ದೇಶದ ಪ್ರತಿಷ್ಠಿತ ಸುಮೇರು ಸಾಫ್ಟ್‌ವೇರ್ ಸೆಲ್ಯೂಷನ್ಸ್ ಸಂಸ್ಥೆ ಪರಿಚಯಿಸಿದೆ.
- ಸಂಪೂರ್ಣ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಸೂಪರ್ ಆ್ಯಪ್ ಲೋಕಾರ್ಪಣೆಗೊಂಡ ಕೆಲವೇ ದಿನಗಳಲ್ಲಿ ಹತ್ತು ಲಕ್ಷಕ್ಕೂ ಅಧಿಕ ಜನರು ಡೌನ್ಲೋಡ್ ಮಾಡಿಕೊಂಡಿದ್ದಾರೆ.
- ಭಾರತದ ಒಟ್ಟು ಸಂಪತ್ತು 28.75 ಲಕ್ಷ ಕೋಟಿ ಅಮೆರಿಕನ್ ಡಾಲರ್ ತಲುಪಿರುವ ಈ ಸಮಯದಲ್ಲಿ 56 ಕೋಟಿ ಅಂತರ್ಜಾಲ ಬಳಕೆದಾರರು ದೇಶದಲ್ಲಿದ್ದಾರೆ. ಈ ಅಂತರ್ಜಾಲ ಬಳಕೆದಾರರಲ್ಲಿ ಸುಮಾರು 50 ಕೋಟಿ ಜನ ಸಾಮಾಜಿಕ ಜಾಲತಾಣ ಬಳಸುತ್ತಿದ್ದು, ಬಹುತೇಕ ಜಾಲತಾಣಗಳ ಒಡೆತನ ವಿದೇಶೀ ಕಂಪ□ಗಳ ವಶದಲ್ಲಿದೆ.
- ಎಲಿಮೆಂಟ್ಸ್ ಎಂಬ ಸಾಮಾಜಿಕ ಜಾಲತಾಣ ಮಾಧ್ಯಮವನ್ನು ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 1000 ಐ.ಟಿ. ಪರಿಣತ ಸ್ವಯಂ ಸೇವಕರು ಅಲ್ಪ ಸಮಯದಲ್ಲಿ ವಿನ್ಯಾಸಗೊಳಿಸಿ ಸಾಧನೆ ಮೆರೆದಿದ್ದಾರೆ.
- ಟಾಟಾ ಟೆಲಿಕಮ್ಯೂನಿಕೇಷನ್ಸ್ ಸಹಯೋಗದಲ್ಲಿ ಇದೀಗ ಭಾರತದಲ್ಲಿ ಪರಿಚಾಲನೆಯಲ್ಲಿರುವ ಎಲಿಮೆಂಟ್ಸ್ ಆ್ಯಪ್ ಅನ್ನು ಕನ್ನಡ, ಹಿಂದಿ, ಮರಾಠಿ, ಬಂಗಾಲಿ, ತಮಿಳು, ತೆಲುಗು, ಮಲೆಯಾಳಿ ಮತ್ತು ಗುಜರಾತಿ ಭಾಷೆಗಳ ಮೂಲಕವೂ ಬಳಸಬಹುದು.

52. ಮುಂದಿನ ವರ್ಷ ಜೂನ್ ಗೆ ಸುರಂಗ ಮಾರ್ಗ ಪೂರ್ಣ:

- ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಿಂದ ಕಾರ್ಗಿಲ್‌ಗೆ ಸಂಪರ್ಕ ಕಲ್ಪಿಸುವ ಸರ್ವಋತು ಸುರಂಗ ಮಾರ್ಗವಾದ 'ಝಡ್–ಮೋಡ್' ನಿರ್ಮಾಣ ಕಾಮಗಾರಿ 2021ರ ಜೂನ್ ವೇಳೆಗೆ ಮುಕ್ತಾಯಗೊಳ್ಳಲಿದೆ.
- ರಕ್ಷಣಾ ದೃಷ್ಟಿಯಿಂದ ಈ ಮಾರ್ಗ ವ್ಯೂಹಾತ್ಮಕವಾದುದಾಗಿದೆ. ಅಂದಾಜು 2,379 ಕೋಟಿ ರೂ. ವೆಚ್ಚದಲ್ಲಿ 'ಝಡ್ ಮೋಡ್' ಸುರಂಗ ಮಾರ್ಗನಿರ್ಮಾಣ ಕೈಗೊಳ್ಳಲಾಗಿದೆ. 6 ಕಿ.ಮೀ. ಉದ್ದದ ರಸ್ತೆ, ಎರಡು ದೊಡ್ಡ ಸೇತುವೆಗಳು, ಒಂದು ಸಣ್ಣ ಸೇತುವೆ ನಿರ್ಮಾಣ ಇದರ ಭಾಗವಾಗಿದೆ.
- ಇದರೊಂದಿಗೆ "ಝೋಜಿ–ಲಾ" ಯೋಜನೆ ಕೂಡ ಸಾಗುತ್ತಿದ್ದು 14.15 ಕಿ.ಮೀ. ಉದ್ದನೆಯ ಸುರಂಗ ಮಾರ್ಗ ನಿರ್ಮಿಸಲಾಗುತ್ತಿದೆ. ಇವುಗಳ ನಿರ್ಮಾಣ ಪೂರ್ಣಗೊಂಡ ನಂತರ ಜಮ್ಮು–ಕಾಶ್ಮೀರ, ಲಡಾಖ್ ನಡುವೆ ಸಂಚಾರ ಸುಗಮವಾಗಲಿದೆ. ಪ್ರತಿಕೂಲ ಹವಾಮಾನದಲ್ಲೂ ಶೀಘ್ರವಾಗಿ ಶ್ರೀನಗರದಿಂದ ಕಾರ್ಗಿಲ್ ಮತ್ತು ಲಡಾಖ್‌ಗೆ ತಲುಪಲು ನೆರವಾಗಲಿದೆ.

53. ಈಶಾನ್ಯ ಭಾರತಕ್ಕೆ ಚೀನಾ ಶಸ್ತ್ರಾಸ್ತ್ರ: ಮುಖ್ಯಾಂಶಗಳು

- ಚೀನಾದಿಂದ ಭಾರತಕ್ಕೆ ಶಸ್ತ್ರಾಸ್ತ್ರಗಳ ಕಳ್ಳಸಾಗಣೆ ಶಂಕೆ
- ಮ್ಯಾನ್ಮಾರ್ ಭದ್ರತಾ ಸಂಸ್ಥೆಗಳಿಂದಲೂ ಮಾಹಿತಿ ಕೋರಿದ ಕೇಂದ್ರ ಸರ್ಕಾರ
- ಚೀನಾದಲ್ಲಿ ತಯಾರಿಸಲಾದ ಮತ್ತು ಮ್ಯಾನ್ಮಾರ್‌ಗೆ ಕಳ್ಳಸಾಗಣೆ ಮಾಡುತ್ತಿದ್ದ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಈಚೆಗೆ ವಶಕ್ಕೆ ಪಡೆದ ಥಾಯ್ಲೆಂಡ್ ಸೇನೆಯಿಂದ ಭಾರತವು ಹೆಚ್ಚಿನ ಮಾಹಿತಿಯನ್ನು ಕೋರಿದೆ.
- ಈಶಾನ್ಯ ಭಾರತದ ಬಂಡುಕೋರ ಸಂಘಟನೆಗಳಿಗೆ ಈ ಶಸ್ತ್ರಾಸ್ತ್ರಗಳು ಪೂರೈಕೆಯಾಗುತ್ತಿದ್ದವೇ ಎಂಬುದನ್ನು ಪತ್ತೆ ಮಾಡಲು ಭಾರತ ಮುಂದಾಗಿದೆ.
- ಥಾಯ್ಲೆಂಡ್–ಮ್ಯಾನ್ಮಾರ್ ಗಡಿಯಲ್ಲಿ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಸಾಗಿಸುತ್ತಿದ್ದವರನ್ನು ಈಚೆಗೆ ಥಾಯ್ಲೆಂಡ್ ಸೈನಿಕರು ವಶಕ್ಕೆ ಪಡೆದಿದ್ದರು. ಥಾಯ್ಲೆಂಡ್‌ನ ಇಬ್ಬರು ಮತ್ತು ಮ್ಯಾನ್ಮಾರ್‌ನ ಇಬ್ಬರು ಪ್ರಜೆಗಳನ್ನು ಸೇನೆಯು ಬಂಧಿಸಿತ್ತು. ಬಂಧಿತರಿಂದ ಭಾರಿ ಪ್ರಮಾಣದಲ್ಲಿ ಎ.ಕೆ.47 ರೈಫಲ್‌ಗಳು, ಸ್ವಯಂಚಾಲಿತ ಮೆಷಿನ್‌ಗನ್‌ಗಳು, ಟ್ಯಾಂಕ್ ನಿರೋಧಕ ಮೈನ್‌ಗಳು, ಗ್ರೆನೇಡ್‌ಗಳು ಮತ್ತು ಮದ್ದುಗುಂಡುಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು.
- ಈ ಶಸ್ತ್ರಾಸ್ತ್ರಗಳನ್ನು ಚೀನಾದಲ್ಲಿ ತಯಾರಿಸಲಾಗಿದೆ ಎಂದು ಥಾಯ್ ಸೇನೆ ಹೇಳಿತ್ತು.
- ಈ ಕಳ್ಳಸಾಗಣೆ ಪ್ರಕರಣದ ಬಗ್ಗೆ ಹೆಚ್ಚಿನ ವಿವರಗಳನ್ನು ಹಂಚಿಕೊಳ್ಳಿ ಎಂದು ಭಾರತ ಸರ್ಕಾರವು ಥಾಯ್ಲೆಂಡ್ ಮತ್ತು ಮ್ಯಾನ್ಮಾರ್ ಸರ್ಕಾರಕ್ಕೆ ಪತ್ರ ಬರೆದಿದೆ.
- ಭಾರತದ ಭದ್ರತಾಸಂಸ್ಥೆಗಳ ಅಧಿಕಾರಿಗಳು ಈ ಬಗ್ಗೆ ಈಗಾಗಲೇ ಎರಡೂ ದೇಶಗಳ ಭದ್ರತಾ ಅಧಿಕಾರಿಗಳ ಜತೆ ಮಾತನಾಡಿದ್ದಾರೆ ಎಂದು ಮೂಲಗಳು ಹೇಳಿವೆ.
- 'ಮ್ಯಾನ್ಮಾರ್‌ನ ಬಂಡುಕೋರ ಸಂಘಟನೆಗಳಾದ ಅರಾಕನ್ ಆರ್ಮಿ ಅಥವಾ ಕಚಿನ್ ಇಂಡಿಪೆಂಡೆನ್ಸ್ ಆರ್ಮಿ ಈ ಶಸ್ತ್ರಾಸ್ತ್ರಗಳನ್ನು ಖರೀದಿಸಿರುವ ಸಾಧ್ಯತೆ ಇದೆ ಎಂದು ಪ್ರಾಥಮಿಕ ತನಿಖೆ ಹೇಳುತ್ತದೆ' ಎಂದು ಮ್ಯಾನ್ಮಾರ್ ಹೇಳಿದೆ.
- ಶಸ್ತ್ರಾಸ್ತ್ರಗಳನ್ನು ಎಲ್ಲಿ ತಯಾರಿಸಲಾಗಿದೆ, ಅವುಗಳ ಕಳ್ಳಸಾಗಣೆಗೆ ಬಳಸಿದ ಮಾರ್ಗಗಳು ಮತ್ತು ಮ್ಯಾನ್ಮಾರ್‌ನಲ್ಲಿ ಯಾವ ಜಾಗಕ್ಕೆ ಈ ಶಸ್ತ್ರಾಸ್ತ್ರಗಳನ್ನು ಸಾಗಿಸಲಾಗುತ್ತಿತ್ತು ಎಂಬುದರ ಮತ್ತಷ್ಟು ವಿವರಗಳನ್ನು ನೀಡುವಂತೆ ಭಾರತವು ಕೇಳಿಕೊಂಡಿದೆ.

ಶಸ್ತ್ರಾಸ್ತ್ರ ತರಬೇತಿ: ಭಾರತ ಕಳವಳ

- ಈಶಾನ್ಯ ಭಾರತ ರಾಜ್ಯಗಳ ಹಲವು ಬಂಡುಕೋರ ಸಂಘಟನೆಗಳಿಗೆ ಮ್ಯಾನ್ಮಾರ್‌ನ ಬಂಡುಕೋರ ಸಂಘಟನೆಗಳು ಈ ಹಿಂದೆ ಶಸ್ತ್ರಾಸ್ತ್ರ ತರಬೇತಿ ನೀಡಿದ್ದವು. ಶಸ್ತ್ರಾಸ್ತ್ರಗಳ ಪೂರೈಕೆಯನ್ನೂ ಮಾಡಿದ್ದವು. ಹೀಗಾಗಿ, ಈಗ ವಶಕ್ಕೆ ಪಡೆಯಲಾಗಿರುವ ಶಸ್ತ್ರಾಸ್ತ್ರಗಳನ್ನು ಈಶಾನ್ಯ ಭಾರತಕ್ಕೆ ಸಾಗಿಸುವ ಉದ್ದೇಶ ಇತ್ತೇ ಎಂಬುದನ್ನು ಪತ್ತೆ ಮಾಡಬೇಕಿದೆ ಎಂದು ಭಾರತದ ಭದ್ರತಾ ಸಂಸ್ಥೆಗಳು ಹೇಳಿವೆ.
- ಭಾರತದ ಈಶಾನ್ಯ ರಾಜ್ಯಗಳ ಬಂಡುಕೋರ ಸಂಘಟನೆಗಳಿಗೆ ಚೀನಾ ಈ ಹಿಂದೆ ಬೆಂಬಲ ಮತ್ತು ನೆರವು ನೀಡಿತ್ತು. ಅಸ್ಸಾಂ, ನಾಗಾಲ್ಯಾಂಡ್, ಮಣಿಪುರ ಮತ್ತು ಮಿಜೋರಾಂನ ಬಂಡುಕೋರ ಸಂಘಟನೆಗಳು ಸರ್ಕಾರದ ಜತೆ ಶಾಂತಿ ಮಾತುಕತೆ ನಡೆಸುತ್ತಿವೆ. ಇಂತಹ ಸಂದರ್ಭದಲ್ಲಿ ಮತ್ತೆ ಸಂಘರ್ಷವನ್ನು ಸೃಷ್ಟಿಸಲು ಚೀನಾ ಪ್ರಯತ್ನಿಸುತ್ತಿದೆಯೇ ಎಂಬುದು ಭದ್ರತಾ ಸಂಸ್ಥೆಗಳ ಮುಂದೆ ಈಗ ಇರುವ ಪ್ರಶ್ನೆಯಾಗಿದೆ.
- ಚೀನಾದ ಗುಪ್ತಚರ ಸಂಸ್ಥೆಯು ಈ ಬಂಡುಕೋರ ಸಂಘಟನೆಗಳ ಜತೆ ಈ ಹಿಂದೆ ಸಂಪರ್ಕದಲ್ಲಿ ಇತ್ತು ಎಂಬುದು ಹಲವು ಬಾರಿ ಸಾಬೀತಾಗಿದೆ. 2004ರಲ್ಲಿ ಅಸ್ಸಾಂನ ಉಲ್ಫಾ ಉಗ್ರರಿಗೆ ಚೀನಾದಿಂದ ಶಸ್ತ್ರಾಸ್ತ್ರ ಕಳ್ಳಸಾಗಣೆ ಆಗುತ್ತಿತ್ತು.
- ಬಾಂಗ್ಲಾದೇಶದ ಚಿತ್ತಗಾಂಗ್ ಬಂದರಿನಲ್ಲೇ ಅದನ್ನು ತಡೆದು, ವಶಕ್ಕೆ ಪಡೆಯಲಾಗಿತ್ತು. ಈಗ ಮತ್ತೆ ಇಂತಹ ಪ್ರಯತ್ನಗಳು ನಡೆಯುತ್ತಿವೆಯೇ ಎಂಬುದರ ಬಗ್ಗೆ ಭದ್ರತಾ ಸಂಸ್ಥೆಗಳು ಶಂಕೆ ವ್ಯಕ್ತಪಡಿಸಿವೆ.

54. ಗ್ರಾಮಗಳಲ್ಲಿ ಗಣಕ ಲಭ್ಯತೆ:

- ನಗರ ಮತ್ತು ಗ್ರಾಮಗಳ ಮಧ್ಯೆ ಮತ್ತೊಂದು ಕಂದಕ
- ಶೇ. 4% ಗ್ರಾಮೀಣ ಮನೆಗಳು ಮಾತ್ರ ಗಣಕ ಹೊಂದಿವೆ.
- ನಗರಗಳು ಶೇ. 23%ರಷ್ಟು ಗಣಕ ಹೊಂದಿವೆ.
- ಪ್ರಾಥಮಿಕ ಶಾಲೆಗಳು 92.7% ಗ್ರಾಮೀಣರಿಗೆ ಮತ್ತು 87.2% ನಗರದವರಿಗೆ ಒಂದು ಕಿ.ಮಿ. ವ್ಯಾಪ್ತಿಯಲ್ಲಿ ಲಭ್ಯ ಇವೆ.
- ಮಾಧ್ಯಮಿಕ ಶಾಲೆಗಳು 38% ಗ್ರಾಮೀಣರಿಗೆ ಮತ್ತು 70% ನಗರ ವಾಸಿಗಳಿಗೆ ಲಭ್ಯ.
- 7 ವರ್ಷಕ್ಕೆ ಮೇಲ್ಪಟ್ಟ ಮಕ್ಕಳ ರಾಷ್ಟ್ರೀಯ ಸರಾಸರಿ ಸಾಕ್ಷರತೆ 77.7%
- 7 ವರ್ಷಕ್ಕೆ ಮೇಲ್ಪಟ್ಟ ಗ್ರಾಮಿಣ ಮಕ್ಕಳ ಸಾಕ್ಷರತೆ 73.5%
- 7 ವರ್ಷಕ್ಕೆ ಮೇಲ್ಪಟ್ಟ ನಗರದ ಮಕ್ಕಳ ಸಾಕ್ಷರತೆ 87.7%
- ಅಂತರಜಾಲ ಲಭ್ಯತೆ 15% ಗ್ರಾಮೀಣ ವಿದ್ಯಾರ್ಥಿಗಳಿಗೆ ಮತ್ತು 42% ನಗರ ವಿದ್ಯಾರ್ಥಿಗಳಿಗೆ ಲಭ್ಯ.
- 15 ರಿಂದ 29 ವಯಸ್ಸಿನ ವಿದ್ಯಾರ್ಥಿಗಳಲ್ಲಿ 24% ಗ್ರಾಮೀಣ ಮತ್ತು 56% ನಗರದ ವಿದ್ಯಾರ್ಥಿಗಳು ಗಣಕ ಸಾಕ್ಷರತೆ ಹೊಂದಿದ್ದಾರೆ.
- ಗ್ರಾಮೀಣ ವಿದ್ಯಾರ್ಥಿಗಳು ಕಿರಿಯ ಮಾಧ್ಯಮಿಕ ಶಾಲೆಗೆ ವಾರ್ಷಿಕ ರೂ. 5,856 ಮತ್ತು ಹಿರಿಯ ಮಾಧ್ಯಮಿಕ ಶಾಲೆಗೆ ರೂ. 9,148 ಖರ್ಚು ಮಾಡುತ್ತಾರೆ.
- ನಗರ ವಿದ್ಯಾರ್ಥಿಗಳು ಕಿರಿಯ ಮಾಧ್ಯಮಿಕ ಶಾಲೆಗೆ ವಾರ್ಷಿಕ ರೂ.17518 ಮತ್ತು ಹಿರಿಯ ಮಾಧ್ಯಮಿಕ ಶಾಲೆಗೆ ರೂ.23,832 ಖರ್ಚು ಮಾಡುತ್ತಾರೆ.
- ರಾಷ್ಟ್ರೀಯ ಸಾಂಖಿಕ ಕಛೇರಿ ನಡೆಸಿದ ಸಮೀಕ್ಷೆಯಲ್ಲಿ ತಿಳಿದು ಬಂದಿವೆ.
- ಸಮೀಕ್ಷೆಯಲ್ಲಿ 1.1. ಲಕ್ಷ ಮನೆಗಳ 1.5 ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದರು.

55. ರಾಮ ಮಂದಿರಕ್ಕೆ ಭೂಮಿ ಪೂಜೆ:

- ಆಗಸ್ಟ್ 5 ರಂದು ಅಯೋಧ್ಯೆ ರಾಮಮಂದಿರಕ್ಕಾಗಿ ಭೂಮಿ ಪೂಜೆ.
- ಐದು ಬೆಳ್ಳಿಯ ಇಟ್ಟಿಗೆಗಳನ್ನು ಗರ್ಭಗೃಹದ ಅಡಿಪಾಯದಲ್ಲಿ ಪ್ರಧಾನಿ ಮೋದಿ ಇಡುವರು.

56. ಆತ್ಮವಿಶ್ವಾಸದ ವಿದೇಶಾಂಗ ನೀತಿ: ಜೈಶಂಕರ್

- ಭಾರತ ಬೆಳೆಯಬೇಕಾದರೆ ಅತಿ ಎಚ್ಚರಿಕೆಯ ವಿದೇಶಾಂಗ ನೀತಿ ಬಿಡಬೇಕು.
- ಭಾರತ ಅಲಿಪ್ತ ನೀತಿಯಿಂದ ದೂರ ಬಂದು ಬಹಳ ದಿನಗಳಾದವು ಎಂದಿದ್ದಾರೆ.
- ಅಲಿಪ್ತ ನೀತಿ 50–60ರ ದಶಕಗಳಿಗೆ ಸೂಕ್ತವಾಗಿತ್ತು.
- ಇಂದು ವಿಶ್ವದ ಸಮಸ್ಯೆಗಳಿಗೆ ರಾಷ್ಟ್ರಗಳು ಪರಿಹಾರಕ್ಕಾಗಿ ಭಾರತದ ನಾಯಕತ್ವ ಬಯಸುತ್ತವೆ. ಆದ್ದರಿಂದ ಭಾರತ ಜಾಗತಿಕ ಸಮುದ್ರ ಮಾರ್ಗ ರಕ್ಷಣೆ, ಸಂವಹನ ಸರಳತೆ, ಭಯೋತ್ಪಾದನೆ ವಿರುದ್ಧ ಹೋರಾಟ ಮತ್ತು ಜಾಗತಿಕ ತಾಪಮಾನ ನಿಯಂತ್ರಣದಂತಹ ವಿಷಯಗಳಲ್ಲಿ ತನ್ನ ಕೊಡುಗೆ ನೀಡಬೇಕಾಗಿದೆ.
- ಭಾರತ ಆತ್ಮ ವಿಶ್ವಾಸದಿಂದ ವಿಶ್ವದ ಬೆಳವಣಿಗೆಗಳಲ್ಲಿ ತನ್ನ ಪಕ್ಷ ನಿರೂಪಿಸಿ ಮುನ್ನುಗ್ಗಬೇಕು ಎಂದು ಅವರು ಹೇಳಿದ್ದಾರೆ.

57. ಹೃಷಿಕೇಶ್ ಐ.ಐ.ಎಂ.ಬಿ. ನಿರ್ದೇಶಕ:

- ಬೆಂಗಳೂರಿನ ಭಾರತೀಯ ಪ್ರಬಂಧನ ಸಂಸ್ಥೆಯ (ಐ.ಐ.ಎಂ.ಬಿ.) ನಿರ್ದೇಶಕರಾಗಿ ಪ್ರೊ. ಹೃಷಿಕೇಶ್ ಟಿ. ಕೃಷ್ಣನ್ ಅಧಿಕಾರ ಸ್ವೀಕರಿಸಿದರು.
- ಇಂದೋರ್‌ನ ಐ.ಐ.ಎಂ.ನ ನಿರ್ದೇಶಕರಾಗಿ ಅವರು ಕಾರ್ಯನಿರ್ವಹಿಸಿದ್ದರು.

58. ಕುತ್ತಿಗೆಗೆ ಸೋಂಕು ನಿವಾರಕ ಕಾರ್ಡ್:

- 'ವೈರಸ್ ಶಟ್ Out Card' ಕುತ್ತಿಗೆಯಲ್ಲಿ ನೇತುಹಾಕಿಕೊಂಡರೆ ಸೋಂಕು ಬರುವುದಿಲ್ಲ.
- ಭಾರತದಲ್ಲಿ ಅಮೆಜಾನ್, ಫ್ಲಿಪ್‌ಕಾರ್ಟ್ ಸೇರಿದಂತೆ ಹಲವು ಆನ್‌ಲೈನ್ ಮೂಲಕ ಈ 'ನೆಕ್ಲೇಸ್' ಭರ್ಜರಿ ಮಾರಾಟವಾಗುತ್ತಿದೆ. ಇದು ಕೊರೋನಾ ನಿವಾರಿಸುತ್ತಿದೆ ಎಂಬ ವಂಚನೆ ನಡೆಯುತ್ತಿದೆ.
- ಜಪಾನ್ ಹಾಗೂ ಚೀನಿ ಮೂಲದ ವೈರಸ್ ಶಟ್ ಔಟ್ ಕಾರ್ಡ್‌ಗಳು ಮೇಲ್ನೋಟಕ್ಕೆ ಗುರುತಿನ ಚೀಟಿಯಂತಿದ್ದು, ಹಲವರ ಕುತ್ತಿಗೆಯಲ್ಲಿ ಕಾಣಿಸಿಕೊಳ್ಳುತ್ತಿದೆ. ಸೋಂಕು ನಿವಾರಣೆ ನಂಬಿಕೆಯಿಂದ ಸಾಕಷ್ಟು ಮಂದಿ ಖರೀದಿಸುತ್ತಿದ್ದಾರೆ.
- **ಏನಿದು ಶಟ್ ಔಟ್ ಕಾರ್ಡ್**? ಇದರ ಹೆಸರು 'ವೈರಸ್ ಶಟ್ ಔಟ್ ಕಾರ್ಡ್'. ಇದು ಜಪಾನ್‌ನಲ್ಲಿ ಮೊದಲು ತಯಾರಾಗಿದೆ. ಇದರಲ್ಲಿ ಕ್ಲೋರಿನ್ ಡಿಯಾಕ್ಸೈಡ್ ತುಂಬಲ್ಪಟ್ಟಿರುತ್ತದೆ. ಇದರಿಂದಾಗಿ ಸೋಂಕಿತರು ಪಕ್ಕದಲ್ಲಿ ಸೀನಿದರೂ ಕೂಡ ಕುತ್ತಿಗೆಯಲ್ಲಿರುವ ಕಾರ್ಡ್ ತಡೆಯುತ್ತದೆ ಎನ್ನುವುದು ಮಾರಾಟಗಾರರ ಮಾಹಿತಿ.
- **ಭಾರತದಲ್ಲಿ ಭರ್ಜರಿ ಮಾರಾಟ:** ಸೋಂಕಿನಿಂದಾಗಿ ಹೆದರಿರುವ ಮಂದಿ ಹಿಂದೆ ಮುಂದೆ ಯೋಚಿಸದೆ ಇವುಗಳನ್ನು ತರಿಸಿಕೊಳ್ಳುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಎರಡು ಕಾರ್ಡ್‌ಗಳ ಒಂದು ಪ್ಯಾಕೆಟ್‌ಗೆ 220 ರೂ. ಗಳಿಂದ 250 ರೂ. ಪಡೆದರೆ, ಹಲವು ಶಾಪ್‌ಗಳಲ್ಲಿ ಒಂದು ಕಾರ್ಡ್‌ಗೆ 500 ರೂ. ಗಳಿಗೂ ಹೆಚ್ಚು ವಸೂಲಿ ಮಾಡಲಾಗುತ್ತಿದೆ.

- **ಹಲವು ದೇಶಗಳಲ್ಲಿ ನಿಷೇಧ:** ಇದರಿಂದ ಕೊರೋನಾ ಸೋಂಕು ಬರುವುದಿಲ್ಲ ಎನ್ನುವುದು ಎಲ್ಲಿಯೂ ಸಾಬೀತಾಗಿಲ್ಲ. ಈ ಕಾರ್ಡ್‌ಗಳ ಮಾರಾಟದ ವಿರುದ್ಧ ಹಾಂಗ್‌ಕಾಂಗ್, ಅಮೆರಿಕಾ, ಫಿಲಿಫೀನ್ಸ್ ಮುಂತಾದ ದೇಶಗಳಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲಾಗಿದೆ.
- **ಅಮೆಜಾನ್‌ನಲ್ಲಿ ನಿಷೇಧ:** ಬೇರೆ ದೇಶಗಳಲ್ಲಿ ಅಮೆಜಾನ್, ಫ್ಲಿಪ್‌ಕಾರ್ಟ್ ಮುಂತಾದ ಆನ್‌ಲೈನ್ ಮಾರಾಟ ಸಂಸ್ಥೆಗಳು ವೈರಸ್ ಶಟ್‌ಔಟ್ ಮಾರಾಟವನ್ನು ಕೈ ಬಿಟ್ಟಿದೆ. ಫೇಸ್‌ಬುಕ್ ಕೂಡ ಬ್ಯಾನ್ ಮಾಡಿದೆ. ಆದರೆ, ಭಾರತದಲ್ಲಿ ಭರದಿಂದ ಮಾರಾಟವಾಗುತ್ತಿದೆ.

59. ಟಾಟಾ ಕುಟುಂಬಕ್ಕೆ ಟ್ರಸ್ಟ್ ಮೇಲೆ ವಿಶೇಷ ಹಕ್ಕಿಲ್ಲ:

- ಟಾಟಾ ಟ್ರಸ್ಟ್ ಮೇಲೆ ಟಾಟಾ ಮನೆತನಕ್ಕೆ ಯಾವುದೇ ವಿಶೇಷ ಹಕ್ಕು ಇಲ್ಲ, ಟಾಟಾ ಮನೆತನದ ಹೊರಗಿನ ವ್ಯಕ್ತಿಯೂ ಭವಿಷ್ಯದಲ್ಲಿ ಟ್ರಸ್ಟ್ ಅಧ್ಯಕ್ಷರಾಗಬಹುದು ಎಂದು ಟ್ರಸ್ಟ್‌ನ ಮುಖ್ಯಸ್ಥ ರತನ್ ಟಾಟಾ ಹೇಳಿದ್ದಾರೆ.
- ಮಿಸ್ತ್ರಿ ಕುಟುಂಬದ ನಿಯಂತ್ರಣದಲ್ಲಿರುವ ಸೈರಸ್ ಇನ್ವೆಸ್ಟ್‌ಮೆಂಟ್ಸ್ ಎಂಬ ಕಂಪನಿಯೊಂದು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ರತನ್ ವಿವರಣೆ ನೀಡಿದ್ದಾರೆ.
- "ಟಾಟಾ ಟ್ರಸ್ಟ್ ಅಥವಾ ಟಾಟಾ ಸನ್ಸ್ ಇರಬಹುದು, ಇವುಗಳಲ್ಲಿ ಟಾಟಾ ಕುಟುಂಬಕ್ಕೆ ಯಾವುದೇ ಸ್ಥಾಪಿತ ಹಿತಾಸಕ್ತಿ ಇಲ್ಲ," ಎಂದು ತಿಳಿಸಿದ್ದಾರೆ.
- ಟಾಟಾ ಸಮೂಹದ ಪ್ರವರ್ತಕ ಸಂಸ್ಥೆಯಾದ ಟಾಟಾ ಸನ್ಸ್‌ನಲ್ಲಿ ಟಾಟಾ ಕುಟುಂಬ ಕೇವಲ ಶೇ. 3ರಷ್ಟು ಷೇರು ಪಾಲನ್ನು ಹೊಂದಿದೆ.
- ಕುಟುಂಬದ ಸದಸ್ಯರಿಗೆ ವಿಶೇಷಾಧಿಕಾರ ನೀಡಿಲ್ಲ ಎಂದು ರತನ್ ತಿಳಿಸಿದ್ದಾರೆ. ಈಗ ನಟರಾಜನ್ ಚಂದ್ರಶೇಖರನ್ ಅವರು ಟಾಟಾ ಸನ್ಸ್ ಅಧ್ಯಕ್ಷರು.

ಏನಿದು ಟಾಟಾ ಟ್ರಸ್ಟ್?

- ಟಾಟಾ ಟ್ರಸ್ಟ್ ಅನ್ನು 1892ರಲ್ಲಿ ಜಮಶೆಡ್ ಜಿ ಟಾಟಾ ಸ್ಥಾಪಿಸಿದರು.
- ಟಾಟಾ ಟ್ರಸ್ಟ್ ಆರೋಗ್ಯ, ಶಿಕ್ಷಣ, ನೈರ್ಮಲ್ಯ, ಜಲ ಸಂರಕ್ಷಣೆ, ಸಾಮಾಜಿಕ ನ್ಯಾಯ, ಪರಿಸರ, ಡಿಜಿಟಲ್ ವಲಯಗಳಲ್ಲಿ ನೆರವು ಒದಗಿಸುತ್ತದೆ.
- ಟಾಟಾ ಸನ್ಸ್ ಬಹುಪಾಲು ಷೇರು ಮಾಲೀಕತ್ವವನ್ನು (ಶೇ.66) ಟಾಟಾ ಟ್ರಸ್ಟ್ ಹೊಂದಿದೆ.

ಏನಿದು ಟಾಟಾ ಸನ್ಸ್?

- ಟಾಟಾ ಸಮೂಹದ ಪ್ರವರ್ತಕ ಸಂಸ್ಥೆಯೇ ಟಾಟಾ ಸನ್ಸ್, ಸಾಮಾನ್ಯವಾಗಿ ಟಾಟಾ ಸಮೂಹದ ಅಧ್ಯಕ್ಷರೇ ಟಾಟಾ ಸನ್ಸ್ ಅಧ್ಯಕ್ಷರೂ ಆಗಿರುತ್ತಾರೆ. ಟಾಟಾ ಸನ್ಸ್ ಅನ್ನುವುದು ಟಾಟಾ ಸಮೂಹದ ಕಂಪನಿಗಳಲ್ಲಿ ಹಣ ಹೂಡುತ್ತದೆ.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

60. ನೂತನ 45 ರಾಜ್ಯಸಭಾ ಸದಸ್ಯರಿಂದ ಪ್ರಮಾಣ:

- ಇತ್ತೀಚೆಗೆ ರಾಜ್ಯಸಭೆಗೆ ಆಯ್ಕೆಯಾದ ನೂತನ 45 ಸದಸ್ಯರಿಗೆ ಉಪರಾಷ್ಟ್ರಪತಿ ಹಾಗೂ ಸಭಾಪತಿ ವೆಂಕಯ್ಯ ನಾಯ್ಡುರವರು ಪ್ರಮಾಣವಚನ ಬೋಧಿಸಿದರು.
- 46 ಸದಸ್ಯರ ಪೈಕಿ 36 ಮಂದಿ ಮೊದಲ ಬಾರಿಗೆ ರಾಜ್ಯಸಭೆ ಪ್ರವೇಶಿಸಿದ್ದಾರೆ. ಈ ಪೈಕಿ ಜ್ಯೋತಿ ರಾಜೇ ಸಿಂಧಿಯಾ ಮತ್ತು ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಮುಖರು. ಮಧ್ಯಪ್ರದೇಶದಿಂದ ಜ್ಯೋತಿ ರಾಜೇ ಸಿಂಧಿಯಾ ಆಯ್ಕೆಯಾದರು.
- ಇನ್ನು 12 ಮಂದಿ ಸದಸ್ಯರು ಮರು ಆಯ್ಕೆಯಾಗಿದ್ದು, ಆ ಪೈಕಿ ಎನ್.ಸಿ.ಪಿ. ವರಿಷ್ಠ ಶರದ್ ಪವಾರ್, ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್, ಕೇಂದ್ರ ಸಚಿವ ರಾಮದಾಸ್ ಅಠಾವಳೆ ಪ್ರಮುಖರಾಗಿದ್ದಾರೆ.
- ರಾಜ್ಯಸಭಾ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಗೊಂಡ ಮಲ್ಲಿಕಾರ್ಜುನ ಖರ್ಗೆ ಮತ್ತು ನಾಮಕರಣಗೊಂಡ ಬೆಳಗಾವಿ ಜಿಲ್ಲೆ ಮೂಡಲಗಿಯ ಈರಣ್ಣ ಕಡಾಡಿ ಅವರು ಕನ್ನಡದಲ್ಲಿಯೇ ಪ್ರಮಾಣ ವಚನ ಸ್ವೀಕರಿಸಿದರು.

61. ಕಾಕ್ರಪಾರ ಅಣುಸ್ಥಾವರ 3ನೇ ಘಟಕ ನಿರ್ಮಾಣಕ್ಕೆ ಪ್ರಧಾನಿ ಶ್ಲಾಘನೆ :

- ಗುಜರಾತಿನ 'ಕಾಕ್ರಪಾರ ಪರಮಾಣು ವಿದ್ಯುತ್ ಸ್ಥಾವರ'ದ ಮೂರನೇ ಘಟಕ ದೇಶೀಯವಾಗಿ ನಿರ್ಮಾಣಗೊಂಡಿದ್ದು ಉತ್ಪಾದನೆಗೆ ಸಜ್ಜುಗೊಂಡಿದೆ.

- 700 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಘಟಕ ನಿರ್ಮಾಣ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿದೆ.
- ಈ ಸ್ಥಾವರವು ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಎನ್.ಪಿ.ಸಿ.ಐ.ಎಲ್.) ಅಡಿ ಕಾರ್ಯ ನಿರ್ವಹಿಸುತ್ತಿದೆ. ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆ ಜತೆಗೆ ಹೊಸದಾಗಿ ನ್ಯೂಕ್ಲಿಯರ್ ಪವರ್ ಪ್ಲಾಂಟ್‌ಗಳಿಂದ 9000 ಮೆಗಾ ವ್ಯಾಟ್ ಉತ್ಪಾದಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

62. 30 ಸೆಕೆಂಡ್ ನಲ್ಲಿ ಕೊರೋನಾ ಫಲಿತಾಂಶ:

- ಕೇವಲ 30 ಸೆಕೆಂಡ್‌ಗಳಲ್ಲಿ ಫಲಿತಾಂಶ ನೀಡುವ ಕೊರೋನಾ ತಪಾಸಣೆ ಕಿಟ್ ಅಭಿವೃದ್ಧಿ ಪಡಿಸುವುದಕ್ಕಾಗಿ ಹಿರಿಯ ವಿಜ್ಞಾನಿಗಳ ತಂಡವನ್ನು ಭಾರತಕ್ಕೆ ಕಳುಹಿಸಿಕೊಡಲು ಇಸ್ರೇಲ್ ನಿರ್ಧರಿಸಿದೆ.
- ಮುಖ್ಯ ವಿಜ್ಞಾನಿ ಕೆ. ವಿಜಯ ರಾಘವನ್ ಮತ್ತು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧ ಸಂಸ್ಥೆ (ಡಿ.ಆರ್.ಡಿ.ಒ.) ವಿಜ್ಞಾನಿಗಳೊಂದಿಗೆ ಈ ತಂಡವು ತಪಾಸಣೆ ಕಿಟ್ ಆವಿಷ್ಕಾರದಲ್ಲಿ ತೊಡಗಿಕೊಳ್ಳಲಿದೆ.

63. ಭಾರತೀಯ ವಿಜ್ಞಾನಿ ಮಹಿಳಾ ಅಧಿಕಾರಿಗಳಿಗೆ ಶಾಶ್ವತ ಆಯೋಗ:

- ಸೇನೆಯಲ್ಲಿ ಮಹಿಳಾ ಅಧಿಕಾರಿಗಳಿಗೂ ಕಮಾಂಡಿಂಗ್ ಹುದ್ದೆಗಳನ್ನು ನೀಡುವ ನಿಟ್ಟಿನಲ್ಲಿ ಶಾಶ್ವತ ಆಯೋಗದ ವ್ಯಾಪ್ತಿಗೆ ತರಲು ಅನುಮತಿ ನೀಡಿ ರಕ್ಷಣಾ ಸಚಿವಾಲಯ ಆದೇಶ ಹೊರಡಿಸಿದೆ.
- ತ್ವರಿತ ಸೇವಾ ನಿಯೋಜನೆ (ಎಸ್.ಎಸ್.ಸಿ.) ಅಡಿಯಲ್ಲಿ ನೇಮಕಗೊಂಡ ಸೇನೆಯ ಎಲ್ಲಾ ಮಹಿಳಾ ಅಧಿಕಾರಿಗಳನ್ನು ಶಾಶ್ವತ ಆಯೋಗದ ವ್ಯಾಪ್ತಿಗೆ ತರಬೇಕು ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ಮಹತ್ವದ ತೀರ್ಪಿನ ಭಾಗವಾಗಿ ಈ ಬೆಳವಣಿಗೆ ನಡೆದಿದೆ.
- ಭಾರತೀಯ ಸೇನೆಯಲ್ಲಿ ತಾರತಮ್ಯ ತೋರದೆ ಮಹಿಳಾ ಅಧಿಕಾರಿಗಳಿಗೂ ಕಮಾಂಡರ್ ಸ್ಥಾನ ನೀಡಬೇಕು. ಅವರನ್ನು ಶಾಶ್ವತ ಆಯೋಗದ ವ್ಯಾಪ್ತಿಗೆ ತರಬೇಕು. ಲಿಂಗ ತಾರತಮ್ಯ ಹೋಗಲಾಡಿಸಬೇಕು. ಮಹಿಳಾ ಅಧಿಕಾರಿ ಗಳಿಗೆ ಹೆಚ್ಚಿನ ಅಧಿಕಾರ ಕೇಂದ್ರ ಸರ್ಕಾರವು ತನ್ನ ಮನಃಸ್ಥಿತಿ ಬದಲಿಸಿಕೊಳ್ಳಬೇಕು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು.
- ತ್ವರಿತ ಸೇವಾ ನಿಯೋಜನೆಯಡಿ ಸೇನೆಯ 10 ವಿಭಾಗಗಳಲ್ಲಿ ಎಲ್ಲಾ ಮಹಿಳಾ ಅಧಿಕಾರಿಗಳಿಗೆ ಈ ಆದೇಶದ ಲಾಭ ದಕ್ಕಲಿದೆ.
- ವಾಯು ರಕ್ಷಣೆ, ಸಿಗ್ನಲ್ ಎಂಜಿನಿಯರ್, ಎಲೆಕ್ಟ್ರಾನಿಕ್ಸ್ ಮತ್ತು ಮೆಕ್ಯಾನಿಕಲ್ ಎಂಜಿನಿಯರಿಂಗ್, ಆರ್ಮಿ ಸರ್ವಿಸ್ ಕಾರ್ಪ್ಸ್ ಮತ್ತು ಬೇಹುಗಾರಿಕೆ ವಿಭಾಗಗಳಲ್ಲಿ ಕೆಲಸ ಮಾಡುವ ಮಹಿಳಾ ಅಧಿಕಾರಿಗಳು ಶಾಶ್ವತ ಆಯೋಗದ ವ್ಯಾಪ್ತಿಗೆ ಬರಲಿದ್ದಾರೆ.

64. ಉನ್ನತ ಶಿಕ್ಷಣ ಭಾರತದಲ್ಲೇ ಅವಕಾಶ ಕಲ್ಪಿಸಲು ಸಮಿತಿ:

- ವಿದೇಶಗಳಲ್ಲಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತಿದ್ದ ವಿದ್ಯಾರ್ಥಿಗಳು ಕೋವಿಡ್– 19 ಕಾರಣದಿಂದಾಗಿ ಭಾರತಕ್ಕೆ ವಾಪಾಸಾಗಿದ್ದು, ಅವರು ಭಾರತದಲ್ಲಿ ವಿದ್ಯಾಭ್ಯಾಸ ಮುಂದುವರಿಸುವ ಸಾಧ್ಯತೆಗಳ ಕುರಿತು ಪರಿಶೀಲಿಸಲು ಕೇಂದ್ರ ಸರ್ಕಾರ ಸಮಿತಿಯೊಂದನ್ನು ರಚಿಸಿದೆ.
- ವಿಶ್ವವಿದ್ಯಾಲಯ ಅನುದಾನ ಆಯೋಗದ (ಯು.ಜಿ.ಸಿ.) ಅಧ್ಯಕ್ಷ ಡಿ.ಪಿ.ಸಿಂಗ್ ನೇತೃತ್ವದಲ್ಲಿ ಈ ಸಮಿತಿ ರಚನೆಯಾಗಿದ್ದು, ಇದರಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅಧ್ಯಕ್ಷರು, ಐ.ಐ.ಟಿ.ಗಳ ನಿರ್ದೇಶಕರು ಇದ್ದಾರೆ.
- ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳ, ಹೊಸ ಪಠ್ಯಕ್ರಮಗಳ ಸೇರ್ಪಡೆ, ವಿದೇಶಗಳಲ್ಲಿ ಇರುವ ಖ್ಯಾತ ಪ್ರಾಧ್ಯಾಪಕರಿಂದ ಆನ್‌ಲೈನ್‌ನಲ್ಲಿ ಶಿಕ್ಷಣ ಮುಂತಾದ ಸಾಧ್ಯತೆಗಳ ಬಗ್ಗೆ ಈ ಸಮಿತಿಯು ಪರಿಶೀಲನೆ ನಡೆಸಿ ವರದಿ ತಯಾರಿಸಿ, 15 ದಿನದೊಳಗಾಗಿ ಈ ಸಮಿತಿಯು ಕೇಂದ್ರಕ್ಕೆ ವರದಿ ಸಲ್ಲಿಸಲಿದೆ.
- 2019ರಲ್ಲಿ ಅಂದಾಜು 7.5 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ, ಭಾರತದಿಂದ ವಿದೇಶಗಳಿಗೆ ತೆರಳಿದ್ದು, ಈ ಪೈಕಿ ಹಲವರು ಕೋವಿಡ್–19 ಪಿಡುಗು ವ್ಯಾಪಿಸಲು ಆರಂಭವಾದ ಬಳಿಕ ಭಾರತಕ್ಕೆ ವಾಪಸಾಗಿದ್ದಾರೆ.

65. ಸರ್ಕಾರಿ ಟೆಂಡರ್‌ಗಳಲ್ಲಿ ಚೀನಾ ಕಂಪನಿಗಳಿಗೆ ಇನ್ನು ಮುಂದೆ ನಿರ್ಬಂಧ:

- ಗಡಿ ಸಂಘರ್ಷ ನಿರತ ಚೀನಾ ಸೇರಿದಂತೆ ಕೆಲ ರಾಷ್ಟ್ರಗಳ ಕಂಪನಿಗಳನ್ನು ಸರ್ಕಾರಿ ಟೆಂಡರ್ ಪ್ರಕ್ರಿಯೆಗಳಲ್ಲಿ ದೂರವಿಡುವ ಉದ್ದೇಶದಿಂದ ಕೇಂದ್ರ ಸರ್ಕಾರ ನಿಯಮಾವಳಿಗಳನ್ನು ಬದಲಿಸಿದೆ.
- ಸರ್ಕಾರವು ಸಾರ್ವಜನಿಕ ಹಣಕಾಸು–2017ರ ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಿದ್ದು, ಭಾರತದೊಂದಿಗೆ ಗಡಿಯನ್ನು ಹಂಚಿಕೊಂಡಿರುವ ರಾಷ್ಟ್ರಗಳ ಬಿಲ್ಡರ್‌ಗಳು

ಸರ್ಕಾರಿ ಟೆಂಡರ್‌ಗಳಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿ ಕೆಲವು ನಿರ್ಬಂಧಗಳನ್ನು ವಿಧಿಸಿದೆ.

66. ಭಾರತ ವಿರುದ್ದ ಜೈವಿಕ ಸಮರ:

- ಭಾರತದ ವಿರುದ್ದ ಸದಾಕಾಲ ವಿವಾದ ತೆಗೆಯುವ ಚೀನಾ ಮತ್ತು ಪಾಕಿಸ್ತಾನದ ಸೇನೆಗಳು ಭಾರತದ ಮೇಲೆ ಜೈವಿಕ ಸಮರ ಸಾರುವ ಗೌಪ್ಯ ಒಪ್ಪಂದವೊಂದಕ್ಕೆ ಸಹಿ ಹಾಕಿವೆ.
- ಮೂರು ವರ್ಷಗಳಲ್ಲಿ ತಮ್ಮ ಜೈವಿಕ ಸಮರದ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳಲು ಪರಸ್ಪರ ಸಹಕಾರ, ಆ್ಯಂಥ್ರಾಕ್ಸ್ ಮಹಾಮಾರಿ ಬಗ್ಗೆ ಹೆಚ್ಚು ಸಂಶೋಧನೆಗೆ ಒತ್ತು ನೀಡಲಿವೆ.
- ಪಾಕಿಸ್ತಾನದ ಐ.ಎಸ್.ಐ. ಗುಪ್ತಚರ ಸಂಸ್ಥೆ ಇದರ ನಿಗಾ ವಹಿಸುತ್ತಿದೆ. ಎಂದು ಆನ್‌ಲೈನ್ ಸುದ್ದಿ ಸಂಸ್ಥೆ 'ಕ್ಲಾಕ್ಸನ್' ವರದಿ ಮಾಡಿದೆ.
- ಕೊರೋನಾವನ್ನು ವಿಶ್ವಕ್ಕೆ ಪಸರಿಸಿದ ಕುಖ್ಯಾತಿ ಹೊಂದಿರುವ ಚೀನಾದವುಹಾನ್ ನಗರದಲ್ಲಿನ ವೈರಾಲಜಿ ಲ್ಯಾಬ್ ಮತ್ತು ಪಾಕ್ ಮಿಲಿಟರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (ಡಿಸ್ಟೋ) ಒಪ್ಪಂದ ಮಾಡಿಕೊಂಡಿದ್ದು ಸಾಂಕ್ರಾಮಿಕ ರೋಗಗಳ ಜೈವಿಕ ನಿಯಂತ್ರಣ ವಿಚಾರವಾಗಿ ವಿಸ್ತೃತ ಸಂಶೋಧನೆ ನಡೆ.
- ಥಾಕ್ಸ್ ಎಂಬ ಅಪಾಯಕಾರಿ ಸೋಂಕಿನ ಮೂಲವಾದ ಬ್ಯಾಸಿಲಸ್ ಆಂಥ್ರಾಸಿಸ್ ಎಂಬ ಬ್ಯಾಕ್ಟೀರಿಯಾದ ಸಾಮ್ಯತೆ ಹೊಂದಿರುವ 'ಬ್ಯಾಸಿಲಸ್ ಥುರಿನ್‌ಜೀನ್ ಸಿಸ್' (ಬಿ.ಟಿ.) ಪ್ರತ್ಯೇಕಿಸುವ ಪರೀಕ್ಷೆಯನ್ನು ಈಗಾಗಲೇ ಯಶಸ್ವಿಯಾಗಿ ನಡೆಸಲಾಗಿದೆ ಎನ್ನಲಾಗಿದೆ.
- ಚೀನೆ ವಾಪಸಾತಿ ಮುಖ್ಯವೆಂದ ಭಾರತ
- ವಾಸ್ತವಿಕ ಗಡಿ ರೇಖೆ (ಎಲ್.ಎ.ಸಿ.) ಯಿಂದ ಉಭಯ ದೇಶಗಳೂ ಸೇನೆಯನ್ನು ಸಂಪೂರ್ಣ ವಾಪಸ್ ಕರೆಸಿಕೊಂಡರೆ ಮಾತ್ರವೇ ದ್ವಿಪಕ್ಷೀಯ ಮಾತುಕತೆಯನ್ನು ಮುಂದುವರಿಸಲು ಸಾಧ್ಯ ಎಂದು ಭಾರತ ಸ್ಪಷ್ಟಪಡಿಸಿದೆ.
- ಈವರೆಗಿನ ಮಾತುಕತೆ ವೇಳೆ ಎರಡೂ ದೇಶಗಳು ಸೇನೆ ವಾಪಸಾತಿಗೆ ಸಮ್ಮತಿಸಿವೆ. ಶಾಂತಿ ನೆಲೆಸಲು ಈ ಕ್ರಮ ಅನಿವಾರ್ಯ ಎಂಬುದನ್ನು ಒಪ್ಪಿಕೊಂಡಿವೆ. ಎರಡೂ ದೇಶಗಳು ಅದಕ್ಕೆ ಬದ್ಧವಾಗಿ ನಡೆದುಕೊಳ್ಳುವುದು ಅಗತ್ಯವಾಗಿದೆ, ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಅಮೆರಿಕ ವಿರುದ್ದ ಸೇಡು:

- ಬೂಸ್ಟನ್‌ನಲ್ಲಿನ ಚೀನಾದ ರಾಯಭಾರ ಕಚೇರಿಯನ್ನು ಶಾಶ್ವತವಾಗಿ ಮುಚ್ಚುವಂತೆ ಅಮೆರಿಕ ಆದೇಶಿಸಿದ್ದಕ್ಕೆ ಪ್ರತಿಯಾಗಿ ಚೆಂಗ್ಡುವಿನಲ್ಲಿನ ಅಮೆರಿಕ ರಾಯಭಾರ ಕಚೇರಿಯನ್ನು ಮುಚ್ಚುವಂತೆ ಚೀನಾ ಆದೇಶ.
- ತಾವು ಚೀನಾದ ಮಿಲಿಟರಿಯಲ್ಲಿದ್ದೇವೆ ಎಂದು ಸಂಗತಿ ಗೌಪ್ಯವಾಗಿಟ್ಟು, ನಕಲಿ ದಾಖಲೆಗಳನ್ನು ನೀಡಿ ಶೈಕ್ಷಣಿಕ ವೀಸಾ ಪಡೆದು ಅಮೆರಿಕದ ಮಹತ್ವದ ಯೋಜನೆಗಳ ಬಗ್ಗೆ ಬೇಹುಗಾರಿಗೆ ನಡೆಸುತ್ತಿದ್ದಾರೆ ಎಂದು ನಾಲ್ವರು ಚೀನಾ ಪ್ರಜೆಗಳ ವಿರುದ್ಧ ಅಮೆರಿಕ ಆರೋಪ ಮಾಡಿ ಮೂವರನ್ನು ಬಂಧಿಸಿದೆ.

ಉಚ್ಚಾಟನೆ

- ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಟೀಕಿಸಿದ್ದಕ್ಕಾಗಿ 69 ವರ್ಷದ ಕಮ್ಯುನಿಸ್ಟ್ ನಾಯಕ ರೆನ್ ಝಿಕ್ವಿಯಾಂಗ್ ಪಕ್ಷದಿಂದ ಉಚ್ಚಾಟನೆ.

67. ಔಷಧ ಉತ್ಪಾದನೆ ಸ್ವಾವಲಂಬನೆ ಯೋಜನೆಗೆ ಚಾಲನೆ:

- ಔಷಧ ಮತ್ತು ವೈದ್ಯಕೀಯ ಸಲಕರಣೆಗಳ ದೇಶಿ ಉತ್ಪಾದನೆಗೆ ಉತ್ತೇಜನ ನೀಡುವ ನಾಲ್ಕು ಪ್ರಮುಖ ಯೋಜನೆಗಳಿಗೆ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಶ್ರೀ. ಡಿ.ವಿ. ಸದಾನಂದ ಗೌಡ ಹೊಸ ಚಾಲನೆ ನೀಡಿದರು.

68. ಚೀನಾದ ಇನ್ನೂ 47 ಆ್ಯಪ್‌ಗಳ ನಿಷೇಧ:

- ಟಿಕ್ ಟಾಕ್ ಲೈಟ್, ಹೆಲೊ ಲೈಟ್, ಶೇರ್ ಇಟ್ ಲೈಟ್, ಬಿಗೊ ಲೈವ್ ಲೈಟ್, ವಿಎಫ್‌ವೈ ಲೈಟ್ ಸೇರಿದಂತೆ ಚೀನಾದ ಒಟ್ಟು 47 ಆ್ಯಪ್‌ಗಳ ಮೇಲೆ ಕೇಂದ್ರ ಸರ್ಕಾರವು ಸೋಮವಾರ ನಿಷೇಧ ಹೇರಿದೆ. ಇದರಿಂದ ಒಟ್ಟು 10 ಆ್ಯಪ್‌ಗಳನ್ನು ನಿಷೇಧಿಸಿದಂತಾಗಿದೆ.
- ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಭೌಮತೆಗೆ ಧಕ್ಕೆ ತರುತ್ತಿವೆ ಎಂಬ ಕಾರಣ ನೀಡಿ ಸರ್ಕಾರವು ಜೂನ್ 29ರಂದು 59 ಆ್ಯಪ್‌ಗಳನ್ನು ನಿಷೇಧಿಸಿತ್ತು. ಇದರಲ್ಲಿ ಟಿಕ್ ಟಾಕ್, ಶೇರ್ ಇಟ್, ಹೆಲೊ, ವಿ–ಚಾಟ್ ಆ್ಯಪ್‌ಗಳು ಸೇರಿದ್ದವು. ಈಗ ನಿಷೇಧಿಸಿರುವ ಆ್ಯಪ್‌ಗಳನ್ನು ಈ ಮೊದಲೇ ಬ್ಲಾಕ್ ಮಾಡಲಾಗಿತ್ತು.

69. ಹವಾಮಾನ ಮುನ್ಸೂಚನೆ ಪಡೆಯಲು ಮೌಸಮ್ ಆ್ಯಪ್:

- ನಗರಗಳನ್ನು ಆಧರಿಸಿ ಹವಾಮಾನ ಮುನ್ಸೂಚನೆ ನೀಡುವ ಮೊಬೈಲ್ ಆ್ಯಪ್ 'ಮೌಸಮ್' ಅನ್ನು ಭೂ ವಿಜ್ಞಾನ ಸಚಿವ ಹರ್ಷವರ್ಧನ್ ಅವರು ಅನಾವರಣಗೊಳಿಸಿದರು.
- ಇಂಟರ್‌ನ್ಯಾಷನಲ್ ಕಾರ್ಪ್ಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಫಾರ್ ಸೆಮಿ–ಏರಿಡ್ ಟ್ರಾಪಿಕ್ಸ್ (ಐಸಿಆರ್‌ಐಎಸ್‌ಎಟಿ) ಹಾಗೂ ಪುಣೆಯ ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಟ್ರಾಫಿಕಲ್ ಮೆಟ್ರಾಲಜಿ (ಐಐಟಿಎಮ್) ಹಾಗೂ ಇಂಡಿಯಾ ಮೆಟರಲಾಜಿಕಲ್ ಡಿಪಾರ್ಟ್‌ಮೆಂಟ್ (ಐಎಮ್‌ಡಿ) ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದೆ.
- ಮೌಸಮ್ ಆ್ಯಪ್ ಗೂಗಲ್ ಪ್ಲೇ ಹಾಗೂ ಆ್ಯಪ್ ಸ್ಟೋರ್‌ನಲ್ಲಿ ಲಭ್ಯವಿದೆ. ದೇಶದ ಸುಮಾರು 200 ನಗರಗಳ ಹವಾಮಾನ ವರದಿಯಲ್ಲಿ ಈ ಆ್ಯಪ್ ನೀಡಲಿದ್ದು, ಉಷ್ಣತೆ, ಆದ್ರತೆ ಹಾಗೂ ಗಾಳಿಯ ವೇಗ ಹಾಗೂ ದಿಕ್ಕನ್ನು ತಿಳಿಸಲಿದೆ.
- ದಿನಕ್ಕೆ ಎಂಟು ಬಾರಿ ಈ ಆ್ಯಪ್‌ನ ಮಾಹಿತಿ ಅಪ್‌ಡೇಟ್ ಆಗಲಿದೆ. ಇದರಲ್ಲಿ ಹವಮಾನದಲ್ಲಿನ ತೀವ್ರ ಏರುಪೇರಿನ ಬಗ್ಗೆ ಮಾಹಿತಿ ನೀಡುವ ಸೌಲಭ್ಯವೂ ಇದೆ. ಈ ಆ್ಯಪ್‌ನಲ್ಲಿ ದೇಶದ 450 ನಗರಗಳ ಮುಂದಿನ ಏಳು ದಿನಗಳ ಹವಾಮಾನ ಮಾಹಿತಿಯೂ ಲಭ್ಯವಿರಲಿದ್ದು, ಪ್ರತಿ 24 ಗಂಟೆಗಳಿಗೆ ಅಪ್ ಡೇಟ್ ಆಗಲಿದೆ

70. ಅಂಚೆ ಇಲಾಖೆ, ಗ್ರಾಮೀಣ ಬ್ಯಾಂಕ್ ವಿಲೀನಕ್ಕೆ ಚಿಂತನೆ:

- ನಷ್ಟದಲ್ಲಿರುವ ಅಂಚೆ ಇಲಾಖೆ (ಇಂಡಿಯಾ ಪೋಸ್ಟ್) ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳನ್ನು ಕೇಂದ್ರ ಸರ್ಕಾರವು ವಿಲೀನಗೊಳಿಸುವ ಸಾಧ್ಯತೆ ಇದೆ. ಇವೆರಡನ್ನೂ ವಿಲೀನಗೊಳಿಸಿ ಪೂರ್ಣ ಪ್ರಮಾಣದ ಸಾರ್ವಜನಿಕ ಬ್ಯಾಂಕ್ ಆಗಿಸುವ ಸಾಧ್ಯತೆ ಇದೆ.
- ಪ್ರ ್ತಾಪದ ಪ್ರಕಾರ ಕೇಂದ್ರ ಸರ್ಕಾರ, ಆರಂಭಿಕ ಹಂತದ ಪರಿಶೀಲನೆಯಲ್ಲಿದ್ದು, ಪ್ರವರ್ತಕ ಕಂಪನಿಯೊಂದರ ಮೂಲಕ ಇವುಗಳ ನಿಯಂತ್ರಣವನ್ನು ಹೊಂದಲಿದೆ. ಅಂಚೆ ಇಲಾಖೆಯ ಪೋಸ್ಟ್ ಪೇಮೆಂಟ್ ಬ್ಯಾಂಕ್ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (ಆರ್‌ಆರ್‌ಬಿ) ಈ ಪ್ರವರ್ತಕ ಕಂಪನಿಯ ಅಧೀನ ಸಂಸ್ಥೆಗಳಾಗಲಿವೆ.
- ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳಿಂದ ಸರ್ಕಾರ ಮತ್ತು ಸಾರ್ವಜನಿಕ ಬ್ಯಾಂಕ್‌ಗಳು ತಮ್ಮ ಬಂಡವಾಳವನ್ನು ಹಿಂತೆಗೆದುಕೊಳ್ಳಲಿವೆ. ಅಥವಾ ನಗದೀಕರಿಸಲಿವೆ. ಅಂಚೆ ಇಲಾಖೆ ನಷ್ಟದಲ್ಲಿರುವುದರಿಂದ ಅದನ್ನು ಉಳಿಸಲು ಗ್ರಾಮೀಣ ಬ್ಯಾಂಕ್ ಜತೆ ವಿಲೀನಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎನ್ನಲಾಗಿದೆ.
- ಅಂಚೆ ಇಲಾಖೆ 2019–20ರಲ್ಲಿ 18,255 ಕೋಟಿ ರೂ. ನಿವ್ವಳ ನಷ್ಟಕ್ಕೀಡಾಗಿತ್ತು. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳೂ ನಷ್ಟದಲ್ಲಿವೆ. ಗ್ರಾಮೀಣ ಬ್ಯಾಂಕ್‌ಗಳ 90 ಪರ್ಸೆಂಟ್‌ಗೂ ಅಧಿಕ ಸಾಲವು ಕೃಷಿ, ಎಂಎಸ್‌ಎಂಇ, ಶಿಕ್ಷಣ, ವಸತಿ ವಲಯಕ್ಕೆ ವಿತರಣೆಯಾಗುತ್ತದೆ.

71. ಹಿಮಾಚಲ ಪ್ರದೇಶದಲೂ ಗಡಿ ವಿವಾದಕ್ಕೆ ಚೀನಾ ಯತ್ನ :

- ಪೂರ್ವ ಲಡಾಖ್‌ನಿಂದ ತನ್ನ ಸೇನೆಯನ್ನು ವಾಪಸ್ ಪಡೆದುಕೊಳ್ಳದೆ, ಚೀನಾವು ಈಗ ಹಿಮಾಚಲ ಪ್ರದೇಶದಲ್ಲಿಯೂ ಗಡಿ ತಕರಾರು ತೆಗೆಯಲು ಮುಂದಾಗಿದೆ.
- 1962 ರಿಂದ ಹಿಮಾಚಲ ಪ್ರದೇಶ ಗಡಿಯಲ್ಲಿ ಚೀನಾ ಸೇನೆ ಅಕ್ರಮ ಚಟುವಟಿಕೆಗಳನ್ನು ನಡೆಸಿದ ಉದಾಹರಣೆಗಳು ಇಲ್ಲ.
- ಹಿಮಾಚಲ ಪ್ರದೇಶಲ್ಲಿ ಚೀನಾ ಆಕ್ರಮಿತ ಟಿಬೆಟ್‌ನೊಂದಿಗೆ (ಸಿಒಟಿ) ಒಟ್ಟು 260 ಕಿ.ಮೀ ಗಡಿ ರೇಖೆಯಿದೆ. ಇದರಲ್ಲಿ 140 ಕಿ.ಮೀ. ಕಿನೌರ್ ಜಿಲ್ಲೆಯ ವ್ಯಾಪ್ತಿಯಲ್ಲಿದ್ದರೆ, ಸ್ಪಿತಿ ಹಾಗೂ ಲಹೌಲ್ ಜಿಲ್ಲೆಯ ವ್ಯಾಪ್ತಿಯಲ್ಲಿ 80 ಕಿ.ಮೀ ಗಡಿಯಿದೆ.
- ಗಡಿಯಲ್ಲಿನ ಪರಿಸ್ಥಿತಿ ಶಾಂತವಾಗಿದ್ದರೂ, ಗಡಿಯಾಚೆ ಚೀನಾ ಸೇನೆಗೆ ಸೇರಿದ ವಾಹನಗಳ ಓಡಾಟ ಹೆಚ್ಚಾಗಿದೆ, ಎಂದು ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸ್ ಪಡೆಯು ಕೇಂದ್ರ ಗೃಹ ಸಚಿವಾಲಯಕ್ಕೆ ಮಾಹಿತಿ ರವಾನಿಸಿದೆ.

ಚೀನಾದಿಂದ ರಸ್ತೆ ನಿರ್ಮಾಣ:

- ಇತ್ತೀಚೆಗೆ ಭಾರತೀಯ ಗಡಿ ಭದ್ರತಾ ಸಿಬ್ಬಂದಿಯು ಕುದುರೆಗಳು ಹಾಗೂ ಪೋರ್ಟರ್ ಗಳ ಮೂಲಕ 22 ಕಿ.ಮೀ. ಯಾಚೆಗಿನ ಹಿಮಚ್ಛಾದಿತ ಗಡಿ ಪ್ರದೇಶಕ್ಕೆ ಹೋಗಿ ಪರಿಶೀಲನೆ ನಡೆಸಿತ್ತು. ಈ ವೇಳೆ ಭಾರತೀಯ ಗಡಿಯತ್ತ ಚೀನಾ ಸೇನೆಯು 20 ರಸ್ತೆ ನಿರ್ಮಾಣ ಮಾಡುತ್ತಿರುವುದು ಪತ್ತೆಯಾಗಿತ್ತು

72. ಭಾರತಕ್ಕೆ ರಫೇಲ್ ಬಲ:

- ಯುದ್ಧ ವಿಮಾನ ಖರೀದಿಗೆ ಫ್ರಾನ್ಸ್ ಭಾರತದ ನಡುವೆ ಒಪ್ಪಂದ ಏರ್ಪಟ್ಟ ನಾಲ್ಕು ವರ್ಷಗಳ ಬಳಿಕ ಮೊದಲ ತಂಡದಲ್ಲಿ ಐದು ವಿಮಾನಗಳು ಭಾರತಕ್ಕೆ ಬರುತ್ತಿವೆ. ಇನ್ನು ಐದು ವಿಮಾನಗಳನ್ನು ಫ್ರಾನ್ಸ್‌ನಲ್ಲಿ ತರಬೇತಿಗೆ ಬಳಸಿಕೊಳ್ಳಲಾಗುತ್ತಿದೆ.
- ಲಡಾಖ್‌ನಲ್ಲಿ ಭಾರತ–ಚೀನಾ ನಡುವೆ ಗಡಿ ಸಮಸ್ಯೆ ಉಂಟಾಗಿರುವ ಸಮಯದಲ್ಲೇ, ಬಲಿಷ್ಠ ವಿಮಾನಗಳು ವಾಯುಪಡೆಗೆ ಸೇರ್ಪಡೆಯಾಗುತ್ತಿರುವುದು ದೇಶದ ಸಾಮರ್ಥ್ಯಕ್ಕೆ ಬಲ ತುಂಬಿದೆ. ಆಗಸ್ಟ್ ಮಧ್ಯಭಾಗದಲ್ಲಿ ವಿಮಾನಗಳ ಔಪಚಾರಿಕ ಸೇರ್ಪಡೆ ಕಾರ್ಯಕ್ರಮ ನಡೆಯಲಿದೆ ಎಂದು ವಾಯುಪಡೆ ವಕ್ತಾರರು ತಿಳಿಸಿದ್ದಾರೆ.

ಲಡಾಖ್ ಗಡಿಗೆ ರಫೇಲ್?

- ಚೀನಾ ಗಡಿಯ ಲಡಾಖ್ ವಲಯದ ವಾಸ್ತವ ಗಡಿ ನಿಯಂತ್ರಣ ರೇಖೆಯಲ್ಲಿ ರಫೇಲ್ ವಿಮಾನವನ್ನು ನಿಯೋಜಿಸಲಾಗುತ್ತದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.
- 36 ವಿಮಾನಗಳ ಪೈಕಿ 30 ವಿಮಾನಗಳು ಯುದ್ಧ ಸನ್ನದ್ಧ ಸ್ಥಿತಿಯಲ್ಲಿರಲಿವೆ. ಉಳಿದ 6 ವಿಮಾನಗಳು ತರಬೇತಿ ನೀಡಲಿವೆ.
- ರಫೇಲ್ ವಿಮಾನಗಳ ಮತ್ತೊಂದು ಪಡೆಯು ಪಶ್ಚಿಮ ಬಂಗಾಳದ ಹಾಶಿಮಾರ ವಾಯುನೆಲೆಯಲ್ಲಿ ನೆಲೆಗೊಳ್ಳಲಿದ್ದು, ಒಂಬತ್ತು ತಿಂಗಳ ತರಬೇತಿ ಬಳಿಕ ಸೇವೆಗೆ ಬರಲಿದೆ.
- ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಕಳೆದ ಡಿಸೆಂಬರ್‌ನಲ್ಲಿ ಫ್ರಾನ್ಸ್‌ಗೆ ಭೇಟಿ ನೀಡಿದ್ದ ವೇಳೆ ಮೊದಲ ರಫೇಲ್ ಯುದ್ಧ ವಿಮಾನವನ್ನು ಹಸ್ತಾಂತರ ಮಾಡಲಾಗಿತ್ತು.
- ಭಾರತ–ಫ್ರಾನ್ಸ್ ನಡುವೆ ಯುದ್ಧ ವಿಮಾನ ಖರೀದಿ ಒಪ್ಪಂದಕ್ಕೆ ಸುದೀರ್ಘ ಇತಿಹಾಸವಿದೆ. ತೂಫಾನಿಸ್, ಮಿಸ್ಟರೆ, ಜಾಗ್ವಾರ್, ಮಿರಾಜ್ ಯುದ್ಧ ವಿಮಾನಗಳ ಬಳಿಕ ಇದೀಗ ಹೊಸ ಸೇರ್ಪಡೆ.

<u>ರಫೇಲ್‌ನ ವಿಶೇಷತೆಗಳು</u>

- ಜಗತ್ತಿನ ಅತ್ಯಾಧುನಿಕ ಯುದ್ಧವಿಮಾನ ಎಂಬ ಖ್ಯಾತಿ
- ಅತ್ಯಂತ ಶಕ್ತಿಶಾಲಿ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯುವ ಸಾಮರ್ಥ್ಯ
- ಹಲವು ಗುರಿಗಳನ್ನು ಏಕಕಾಲದಲ್ಲಿ ನಾಶಪಡಿಸುವ ಶಕ್ತಿ
- ಅಣ್ವಸ್ತ್ರ ಸಿಡಿತಲೆಯ ಕ್ಷಿಪಣಿಗಳನ್ನು ಉಡ್ಡಯನ ಮಾಡುವ ಬಲ
- ಒಂದು ರಫೇಲ್, ವೈರಿ ಪಡೆಯ ಹಲವು ಯುದ್ಧ ವಿಮಾನಗಳಿಗೆ ಸಮ

ಈ ಉಪಕರಣದಲ್ಲಿ ಏನೇನಿವೆ?

- ಆಗಸದಿಂದ ನೆಲಕ್ಕೆ ದಾಳಿಯಿಡುವ ಸಾಮರ್ಥ್ಯದ ಫ್ರೆಂಚ್ ಹ್ಯಾಮರ್ (Highly Agile and Manoeuvrable Munition Extended Range)
- ಆಗಸದಿಂದ ಆಗಸಕ್ಕೆ ಚಿಮ್ಮುವ ಕ್ಷಿಪಣಿ ಕ್ರೂಸ್ ಕ್ಷಿಪಣಿ
- ಇಸ್ರೇಲ್ ನಿರ್ಮಿತ ಹೆಲ್ಮೆಟ್
- ರೇಡಾರ್ ಮುನ್ನೆಚ್ಚರಿಕೆ ರಿಸೀವರ್
- ಜಾಮರ್
- 10–ಗಂಟೆಗಳ ಹಾರಾಟದ ದತ್ತಾಂಶ ರೆಕಾರ್ಡಿಂಗ್
- ಇನ್ಫ್ರಾ–ರೆಡ್ ಸರ್ಚ್ ಮತ್ತು ಟ್ರ್ಯಾಕಿಂಗ್ ವ್ಯವಸ್ಥೆ
- ಇಸ್ರೇಲ್ ಸ್ಪೈಸ್ 2000 ಬಾಂಬ್
- 59,000 ಕೋಟಿ 36 ರಫೇಲ್ ವಿಮಾನಗಳ ಖರೀದಿ ಮೊತ್ತ
- 2021 ಎಲ್ಲ 36 ವಿಮಾನಗಳ ಪೂರೈಕೆ ಪೂರ್ಣಗೊಳ್ಳುವ ವರ್ಷ
- ವಿವಾದದ ಕೇಂದ್ರ ಬಿಂದು ರಫೇಲ್, ರಫೇಲ್ ಯುದ್ಧ ವಿಮಾನ ಖರೀದಿ ವಿಚಾರವು ವಿವಾದದ ಸ್ವರೂಪ ಪಡೆದಿದ್ದು 2016ರಲ್ಲಿ, ಹಿಂದಿನ ಯುಪಿಎ ಸರ್ಕಾರವು 126 ರಫೇಲ್ ಖರೀದಿಗೆ ಫ್ರಾನ್ಸ್ ಜೊತೆ ಒಪ್ಪಂದ ಮಾಡಿಕೊಂಡಿತ್ತು. ಆದರೆ ಅದು ಕಾರ್ಯರೂಪಕ್ಕೆ ಬರುವಲ್ಲಿ ವಿಳಂಬವಾಯಿತು.
- ಮೋದಿ ಅವರು ಪ್ರಧಾನಿಯಾದ ಬಳಿಕ ಹಳೆ ಒಪ್ಪಂದ ರದ್ದುಗೊಳಿಸಿ, 36 ವಿಮಾನಗಳ ಖರೀದಿಗೆ ಹೊಸ ಒಪ್ಪಂದ ಮಾಡಿಕೊಂಡರು. ಯುಪಿಎ ಅವಧಿಯಲ್ಲಿ 526 ಕೋಟಿಗೆ ಒಂದು ವಿಮಾನ ಎಂದು ನಿಗದಿಯಾಗಿತ್ತು. ಆದರೆ ಎನ್‌ಡಿಎ ಅವಧಿಯಲ್ಲಿ ಅದು 1,555 ಕೋಟಿ ರೂ. ಗೆ ಏರಿತು.
- ಫ್ರಾನ್ಸ್‌ನ ಡಾಸೋ ಏವಿಯೇಷನ್‌ನ ಭಾರತೀಯ ಪಾಲುದಾರ ಸಂಸ್ಥೆಯಾಗಿ ರಿಲಯನ್ಸ್ ಡಿಫೆನ್ಸ್ ಆಯ್ಕೆಯಾಗಿತ್ತು. ರೂ. 59 ಸಾವಿರ ಕೋಟಿಯ ಈ ಖರೀದಿ ಒಪ್ಪಂದದಲ್ಲಿ ಸರ್ಕಾರಿ ಸ್ವಾಮ್ಯದ ಎಚ್‌ಎಎಲ್ ಬದಲಿಗೆ ಅನಿಲ್ ಅಂಬಾನಿ ಮಾಲೀಕತ್ವದ ಸಂಸ್ಥೆಯನ್ನು ಸಹಭಾಗಿಯಾಗಿ ಆಯ್ಕೆ ಮಾಡಿರುವುದರಲ್ಲಿ ಅಕ್ರಮ ನಡೆದಿದೆ ಎಂದು ವಿರೋಧ ಪಕ್ಷ ಕಾಂಗ್ರೆಸ್ ಆರೋಪಿಸುತ್ತಿದೆ.
- ರಫೇಲ್ ದಾಖಲೆಗಳು ಕಳವಾಗಿವೆ ಎಂಬ ಪ್ರಕರಣವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಖರೀದಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು 2019ರ ನವೆಂಬರ್‌ನಲ್ಲಿ ಕೋರ್ಟ್, ಅರ್ಜಿಗಳನ್ನು ವಜಾಗೊಳಿಸಿತ್ತು.

73. ಹೊಸ ಶೈಕ್ಷಣಿಕ ನೀತಿ ಜಾರಿ:

- ರಾಷ್ಟ್ರೀಯ ಶಿಕ್ಷಣ ನೀತಿ–2020 ಪ್ರಾಥಮಿಕ, ಮಾಧ್ಯಮಿಕ ಮತ್ತು ಪದವಿ ಪೂರ್ವ ಶಿಕ್ಷಣ ಪದ್ಧತಿಯನ್ನು ಆಮೂಲಾಗ್ರ ಮಾನವ ಸಂಪನ್ಮೂಲ ಸಚಿವಾಲಯ ಪರಿಷ್ಕರಿಸಲಿದೆ.

ನಮ್ಮ ಹಿಂದಿನ ಶಿಕ್ಷಣ ನೀತಿ

ಸ್ವಾತಂತ್ರ್ಯಪೂರ್ವ ಶಿಕ್ಷಣ ಹೇಗಿತ್ತು?

- ಭಾರತದಲ್ಲಿ ಶಿಕ್ಷಣ ವ್ಯವಸ್ಥೆಗೆ ತಳಹದಿ ಹಾಕಿದವನು ಬ್ರಿಟಿಷ್ ಅಧಿಕಾರಿ ಮೆಕಾಲೆ ಎಂಬ ವಾದವಿದೆ. ಆದರೆ, ಭಾರತದಲ್ಲಿ ಸಾವಿರಾರು ವರ್ಷಗಳಿಂದ ಬೆಳೆದು ಬಂದ ಪರಿಪಕ್ವವಾದ ಶಿಕ್ಷಣ ವ್ಯವಸ್ಥೆಯಿತ್ತು.
- ಬ್ರಿಟಿಷರ ಆಡಳಿತ ಕಾಲದಲ್ಲಿ ಇಲ್ಲಿದ್ದ ಗುರುಕುಲ ಪದ್ಧತಿ ಅಳಿಸಿಹೋಯಿತು. ಮೆಕಾಲೆ ಪದ್ಧತಿಗೆ ಪೂರ್ವದಲ್ಲಿದ್ದ ಗುರುಕುಲ ಪದ್ಧತಿಯಲ್ಲಿ ಎಲ್ಲರಿಗೂ ಶಿಕ್ಷಣ ನೀಡಲಾಗುತ್ತಿತ್ತು. ಅಂದಿನ ಕಾಲೇಜುಗಳ ಪಠ್ಯದಲ್ಲಿ ವೇದಗಳ ಜೊತೆಗೆ ರಘುವಂಶ, ಕುಮಾರ ಸಂಭವ, ತರ್ಕಶಾಸ್ತ್ರ, ಕಾವ್ಯ, ಸಿದ್ಧಾಂತ–ಕೌಮುದಿಗಳ ಜೊತೆಗೆ ದ್ರಾವಿಡ ವೇದವನ್ನೂ ಕಲಿಸಲಾಗುತ್ತಿತ್ತು.
- ಕರ್ನಾಟಕದ ಬಳ್ಳಾರಿ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಗಣಿತ, ಸಂಸ್ಕೃತ, ಕನ್ನಡಗಳ ಜೊತೆಗೆ ವಿಶ್ವಕರ್ಮ ಪುರಾಣ, ಚನ್ನಬಸವೇಶ್ವರ ಪುರಾಣ, ಬೇತಾಳ ಪಂಚವಿಂಶತಿ, ಗಿರಿಜಾ ಕಲ್ಯಾಣ, ಪಂಚತಂತ್ರ, ಕನಕದಾಸರ ಮೋಹನ ತರಂಗಿಣಿ, ಶಬ್ದಮಣಿ ದರ್ಪಣ, ರಾಮಾಯಣ, ಭಾಗವತ, ಮಹಾಭಾರತ ಇತ್ಯಾದಿ ಕಲಿಯುತ್ತಿದ್ದರು ಎನ್ನುವ ದಾಖಲೆಗಳು ಸಿಕ್ಕಿವೆ. ಈ ವಿವರಗಳೆಲ್ಲ ಧರ್ಮಪಾಲ್ ಅವರ 'ದಿ ಬ್ಯೂಟಿಫುಲ್ ಟೀ' ಕೃತಿಯಲ್ಲಿವೆ. ಬ್ರಿಟಿಷ್ ಮ್ಯೂಸಿಯಂನಲ್ಲಿದ್ದ ಭಾರತೀಯ ದಾಖಲೆಗಳ ಆಧಾರದಲ್ಲಿ ಈ ಕೃತಿ ರಚನೆಯಾಗಿದೆ.
- ನಳಂದಾ, ತಕ್ಷಶಿಲಾ ಮುಂತಾದ ಬೃಹತ್ ವಿಶ್ವ ವಿದ್ಯಾಲಯಗಳಲ್ಲಿ ವೇದ, ವಿಜ್ಞಾನ, ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸೆ, ಬಿಲ್ವಿದ್ಯೆ, ಕೃಷಿ, ತತ್ವಜ್ಞಾನ, ಯೋಗ, ತರ್ಕ, ಮೀಮಾಂಸೆ, ವ್ಯಾಕರಣಗಳನ್ನು ಕಲಿಸಲಾಗುತ್ತಿತ್ತು.

ಮೆಕಾಲೆಯ ಶಿಕ್ಷಣ ನೀತಿ

- ಈಸ್ಟ್ ಇಂಡಿಯಾ ಕಂಪನಿಯ ಭಾರತ ಸರ್ಕಾರವನ್ನು ಆಳಲು ಬಂದಿದ್ದ ಬ್ರಿಟಿಷ್ ಅಧಿಕಾರಿ ಮೆಕಾಲೆ, ಭಾರತೀಯ ಸ್ಥಳೀಯ ಶಾಲಾ ಪದ್ಧತಿಯನ್ನು ಕೊನೆಗಾಣಿಸಿ, ಭಾರತೀಯರನ್ನು 'ನಾಗರಿಕ' ರನ್ನಾಗಿಸುವ ಹೊಸ ಶಿಕ್ಷಣ ಪದ್ಧತಿಗೆ ನಾಂದಿ ಹಾಡಿದ.
- 1842ರ ಬಳಿಕ ಬ್ರಿಟಿಷ್ ಶಿಕ್ಷಣ ಪದ್ಧತಿಯ ಸ್ಕೂಲುಗಳು ಆರಂಭವಾದವು. ಇಂಗ್ಲಿಷ್ ಪ್ರಮುಖ ಸ್ಥಾನ ಪಡೆಯಿತು. ಅರೇಬಿಯನ್ ಗಣಿತ, ಇಂಗ್ಲಿಷ್ ಗದ್ಯ– ಕಾವ್ಯ, ಸ್ಥಳೀಯ ಭಾಷೆಗಳಲ್ಲೂ ಬ್ರಿಟಷ್ ಮಾದರಿ ಪಠ್ಯಗಳ ಕಲಿಕೆ ಆರಂಭವಾಯಿತು.

ಶಿಕ್ಷಣ ಆಯೋಗಗಳು

- ಭಾರತೀಯ ಸಂವಿಧಾನ, ಶಿಕ್ಷಣ ಪಡೆಯುವ ಪ್ರತಿಯೊಬ್ಬ ಪ್ರಜೆಯ ಹಕ್ಕನ್ನು ಎತ್ತಿ ಹಿಡಿಯಿತು. ಪ್ರತಿಯೊಬ್ಬನಿಗೂ ಶಿಕ್ಷಣವನ್ನು ಕಡ್ಡಾಯಗೊಳಿಸಿದೆ. ಅದನ್ನು ಜಾರಿಗೊಳಿಸಲು, ಸ್ವತಂತ್ರ ಭಾರತದಲ್ಲಿ ಮೂರು ಶಿಕ್ಷಣ ಆಯೋಗಗಳು ರಚನೆಯಾದವು. ಮೊದಲನೆಯದು 1948ರ ವಿಶ್ವವಿದ್ಯಾಲಯ ಶಿಕ್ಷಣ ಆಯೋಗ ಹಾಗೂ ಎರಡನೆಯದು 1952ರ ಮಾಧ್ಯಮಿಕ ಶಿಕ್ಷಣ ಆಯೋಗ. ಮೊದಲ ಆಯೋಗ ಕೋರ್ಸ್‌ಗಳ ರಚನೆ, ಕಲಿಕೆಯ ಮಾಧ್ಯಮ ಇತ್ಯಾದಿಗಳ ಬಗ್ಗೆ ಗಮನ ಕೊಟ್ಟಿತು. ಎರಡನೆಯದು ಪ್ರೌಢ ಹಾಗೂ ಪ್ರಶಿಕ್ಷಣಗಳ ಕಡೆಗೆ ಹೆಚ್ಚಿನ ಗಮನ ನೀಡಿತು. 1964–66ರ ಶಿಕ್ಷಣ ಆಯೋಗ ಇಡೀ ದೇಶದ ಶಿಕ್ಷಣ ವಲಯಕ್ಕೆ ಒಂದು ಸ್ವರೂಪವನ್ನು ರಚಿಸಿಕೊಟ್ಟಿತು. ಇದರ ವರದಿಯ ಆಧಾರದಲ್ಲೇ 1968ರ ಶಿಕ್ಷಣ ನೀತಿ ರೂಪುಗೊಂಡಿತು.

ಮೊದಲ ಶಿಕ್ಷಣ ನೀತಿ (1968)

- 1968ರಲ್ಲಿ ದೇಶದ ಮೊದಲ ಶಿಕ್ಷಣ ನೀತಿಯನ್ನು ಆಗಿನ ಪ್ರಧಾನಿ ಇಂದಿರಾ ಗಾಂಧಿ ಘೋಷಿಸಿದರು. ಇದನ್ನು 'ಕ್ರಾಂತಿಕಾರಿ ಮರು ರಚನೆ' ಎಂದು ಕರೆದರು.
- 14 ವರ್ಷದವರೆಗಿನ ಎಲ್ಲ ಮಕ್ಕಳಿಗೆ ಕಡ್ಡಾಯ ಶಿಕ್ಷಣ, ಶಿಕ್ಷಕರಿಗೆ ಸಮರ್ಪಕ ಶಿಕ್ಷಣ, ಸ್ಥಳೀಯ ಭಾಷೆಗಳ ಕಲಿಕೆಗೆ ಒತ್ತು, ಶಿಕ್ಷಣದಲ್ಲಿ ಸಂಸ್ಕೃತದ ಅಳವಡಿಕೆ, ರಾಷ್ಟ್ರೀಯ ಆದಾಯದ ಆರು ಶೇಕಡದಷ್ಟನ್ನು ಶಿಕ್ಷಣ ಕ್ಷೇತ್ರಕ್ಕಾಗಿ ಬಳಕೆ ಮಾಡುವುದು ಮುಂತಾದವು ಈ ನೀತಿಯ ಪ್ರಮುಖ ಅಂಶಗಳಾಗಿದ್ದವು.
- ತ್ರಿಭಾಷಾ ಸೂತ್ರ ಇದರಲ್ಲಿದ್ದ ಮಹತ್ವದ ಹಾಗೂ ಪರಿಣಾಮಕಾರಿ ಅಂಶ. ಇದರ ಪ್ರಕಾರ ಪ್ರತಿ ರಾಜ್ಯವೂ ಮೂರು ಭಾಷೆಗಳ ಶಿಕ್ಷಣ ನೀಡಬೇಕು. ಹಿಂದಿ ರಾಜ್ಯಗಳಲ್ಲಿ ಹಿಂದಿ, ಇಂಗ್ಲಿಷ್ ಹಾಗೂ ಇನ್ನೊಂದು ಭಾರತೀಯ ಭಾಷೆ (ದಕ್ಷಿಣ ಭಾರತದ ಭಾಷೆಗೆ ಆದ್ಯತೆ); ಹಿಂದಿಯೇತರ ರಾಜ್ಯಗಳಲ್ಲಿ ಹಿಂದಿ, ಇಂಗ್ಲಿಷ್ ಹಾಗೂ ಸ್ಥಳೀಯ ಭಾಷೆ.

ಎರಡನೇ ಶಿಕ್ಷಣ ನೀತಿ (1986)

- 1985ರ ಜನವರಿಯಲ್ಲಿ ಆಗಿನ ಪ್ರಧಾನ ಮಂತ್ರಿ ರಾಜೀವ್ ಗಾಂಧಿ, ನೂತನ ಶಿಕ್ಷಣ ನೀತಿಯನ್ನು ಘೋಷಿಸಿದರು. 'ಮಹಿಳೆಯರು, ಶೋಷಿತರು ಸೇರಿದಂತೆ ಶಿಕ್ಷಣವನ್ನು ಎಲ್ಲರಿಗೂ ಸಮಾನವಾಗಿ ತಲುಪಿಸುವುದು' ಈ ನೀತಿಯ ಪ್ರಧಾನ ಆದ್ಯತೆಯಾಗಿತ್ತು.
- ಸ್ಕಾಲರ್‌ಶಿಪ್‌ಗಳನ್ನು ವಿಸ್ತರಿಸುವುದು, ವಯಸ್ಕರ ಶಿಕ್ಷಣವನ್ನು ಉತ್ತೇಜಿಸುವುದು, ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಂದ ಹೆಚ್ಚು ಶಿಕ್ಷಕರನ್ನು ತರುವುದು, ಬಡ ಕುಟುಂಬಗಳು ಮಕ್ಕಳನ್ನು ಶಾಲೆಗೆ ಕಳುಹಿಸುವಂತಾಗಲು ಭತ್ಯೆ, ಹೊಸ ಸಂಸ್ಥೆಗಳ ಸ್ಥಾಪನೆ, ವಸತಿನಿಲಯಗಳ ಹೆಚ್ಚಳ ನಡೆದವು.

- ಪ್ರಾಥಮಿಕ ಶಾಲೆಗಳನ್ನು ದೇಶಾದ್ಯಂತ ಹೆಚ್ಚಿಸಲು 'ಆಪರೇಶನ್ ಬ್ಲ್ಯಾಕ್‌ಬೋರ್ಡ್' ಆರಂಭಿಸಲಾಯಿತು. ಮುಕ್ತ ವಿಶ್ವವಿದ್ಯಾಲಯಗಳನ್ನು ವಿಸ್ತರಿಸಲಾಯಿತು.

ಶಿಕ್ಷಣ ನೀತಿ ಪರಿಷ್ಕರಣೆ (1992)

- 1992ರಲ್ಲಿ ಪಿ.ವಿ. ನರಸಿಂಹರಾವ್ ಸರ್ಕಾರ ನೂತನ ಶಿಕ್ಷಣ ನೀತಿಯನ್ನು ಪರಿಷ್ಕರಿಸಿತು. 2005ರಲ್ಲಿ ಮನಮೋಹನ್ ಸಿಂಗ್ ಸರ್ಕಾರ ಇದನ್ನು ಜಾರಿಗೆ ತಂದಿತು. ಇದನ್ನು 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ಎಂದು ಕರೆಯಲಾಯಿತು. ದೇಶದ ಎಲ್ಲ ವೃತ್ತಿಪರ ಮತ್ತು ತಾಂತ್ರಿಕ ಕಾರ್ಯಕ್ರಮಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ರೂಪಿಸಲಾಯಿತು.
- ಹೊಸ ಭಾರತಕ್ಕೆ ಹೊಸ ಶಿಕ್ಷಣ ನೀತಿಯ ದಿಕ್ಸೂಚಿ
- ಸಾರ್ವತ್ರೀಕರಣಗೊಂಡ ಪ್ರಾಥಮಿಕ, ಪ್ರೌಢ ಶಿಕ್ಷಣ
- ಹಿಂದಿನ ಪದ್ಧತಿ: 10+2
- ಬದಲಿಗೆ: 5+3+3+4
- ರಾಷ್ಟ್ರೀಯ ಶಿಕ್ಷಣ ನೀತಿ–2020 ಪ್ರಾಥಮಿಕ, ಮಾಧ್ಯಮಿಕ ಮತ್ತು ಪದವಿ ಪೂರ್ವ ಶಿಕ್ಷಣ ಪದ್ಧತಿಯನ್ನು ಆಮೂಲಾಗ್ರ ಪರಿಷ್ಕರಿಸಲಿದೆ. ಹೊಸ ನೀತಿಯ ಪ್ರಕಾರ 10+2 ಪದ್ಧತಿಯನ್ನು 5+3+3+4 ಆಗಿ ಬದಲಿಸಲಾಗಿದೆ.
- ಅಂದರೆ, ಮೊದಲ ಐದು ವರ್ಷದ ಶಿಕ್ಷಣವನ್ನು 'ಮೂಲಭೂತ ಶಿಕ್ಷಣ' ಹಂತ ಎಂದು ಪರಿಗಣಿಸಲಾಗುತ್ತದೆ. ಇದರಲ್ಲಿ ಪೂರ್ವ ಪ್ರಾಥಮಿಕದ ಮೂರು ವರ್ಷ ಹಾಗೂ 1ನೇ ಹಾಗೂ 2ನೇ ತರಗತಿಗಳನ್ನು ಸೇರಿಸಲಾಗಿದೆ. ಮುಂದಿನ ಮೂರು ವರ್ಷ (3 ರಿಂದ 5ನೇ ತರಗತಿ)ಗಳು ಸಿದ್ಧತಾ ಹಂತವಾಗಿದ್ದರೆ, ನಂತರದ 3 ವರ್ಷ(6 ರಿಂದ 8ನೇ ತರಗತಿ) ಮಧ್ಯಮ ಹಂತದ ಶಿಕ್ಷಣವಾಗಿರುತ್ತದೆ. ಕೊನೆಯ ನಾಲ್ಕು ವರ್ಷಗಳು (9 ರಿಂದ 12ನೇ ತರಗತಿ) ಪ್ರೌಢ ಶಿಕ್ಷಣ ಹಂತವಾಗಿರುತ್ತದೆ. ಇದರೊಂದಿಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸಲಾಗಿದೆ.
- ಮೊದಲ 5 ವರ್ಷ ಮೂಲಭೂತ ಹಂತ
- ನಂತರದ 3 ವರ್ಷ ಸಿದ್ಧತಾ ಹಂತ
- ನಂತರದ 3 ವರ್ಷ ಮಧ್ಯಮ ಹಂತ
- ಕೊನೆಯ 5 ವರ್ಷ ಪ್ರೌಢ ಹಂತ
- 5ನೇ ತರಗತಿ ತನಕ ಆ ಮಾತೃಭಾಷೆಯಲ್ಲೇ ಶಿಕ್ಷಣ
- ಸಾಧ್ಯವಿದ್ದಲ್ಲಿ ಕನಿಷ್ಠ 5ನೇ ತರಗತಿಯವರೆಗೂ ಮಾತೃಭಾಷೆ, ಪ್ರಾದೇಶಿಕ ಅಥವಾ ಸ್ಥಳೀಯ ಭಾಷೆಯಲ್ಲೇ ಶಿಕ್ಷಣ ನೀಡಬೇಕು ಮತ್ತು ಅದನ್ನು 8ನೇ ತರಗತಿ ಅಥವಾ ಅದಕ್ಕಿಂತ ಹೆಚ್ಚಿನ ತರಗತಿಯವರೆಗೂ ವಿಸ್ತರಿಸಬಹುದು.
- ಹಾಗೆಯೇ, 'ಭಾರತೀಯ ಭಾಷೆಗಳು' ಫನ್ ಪ್ರಾಜೆಕ್ಟ್ ಅಥವಾ ಚಟುವಟಿಕೆಯನ್ನು ಪ್ರತಿ ವಿದ್ಯಾರ್ಥಿಗೆ ನೀಡಬೇಕು. ತ್ರಿಭಾಷಾ ಸೂತ್ರದಡಿ ಕಲಿಕೆ ಸಾಗಬೇಕು. ಹಾಗೆಯೇ, ಕನ್ನಡವೂ ಸೇರಿದಂತೆ ಎಲ್ಲ ಶಾಸ್ತ್ರೀಯ ಭಾಷೆಗಳು ಲಭ್ಯವಾಗಿರಬೇಕು.

ಸಮಗ್ರ ಪ್ರಗತಿ ಕಾರ್ಡ್:

- ಸ್ವ ಮೌಲ್ಯಮಾಪನ, ಮಗುವಿನ ಮೌಲ್ಯಮಾಪನ ಮತ್ತು ಶಿಕ್ಷಕರ ಮೌಲ್ಯಮಾಪನವು ಮಕ್ಕಳ ಪ್ರಗತಿ ಕಾರ್ಡ್‌ನಲ್ಲಿ ಅಡಕವಾಗಿರಬೇಕು.
- ಶಾಲಾ ವರ್ಷಗಳಲ್ಲಿ ಮಕ್ಕಳ ಬೆಳವಣಿಗೆಯ ಟ್ರ್ಯಾಕ್ ದಾಖಲಿಸಲು ಮತ್ತು ಮಕ್ಕಳಿಗೆ ತಮ್ಮ ವೃತ್ತಿ ಆಯ್ಕೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧರಿತ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗುವುದು.

ಪಠ್ಯದಲ್ಲಿ ಸ್ಥಳೀಯತೆಗೆ ಆದ್ಯತೆ

- ಎಲ್ಲ ಪಠ್ಯಪುಸ್ತಕಗಳು ಅಗತ್ಯವಾಗಿರುವ ಮುಖ್ಯ ವಿಷಯವನ್ನು ಒಳಗೊಂಡಿರಬೇಕು ಮತ್ತು ಸ್ಥಳೀಯ ಹಾಗೂ ಸಂದರ್ಭದ ಅಗತ್ಯಕ್ಕೆ ಅನುಗುಣವಾಗಿ ಪಠ್ಯವನ್ನು ರೂಪಿಸಬೇಕು.
- ದೀಕ್ಷಾ ಡಿಜಿಟಲ್ ವೇದಿಕೆ ಉಚಿತ ಆವೃತ್ತಿ ಲಭ್ಯತೆಯೊಂದಿಗೆ ಕೈಗೆಟುಕುವ, ಉತ್ತಮ ಗುಣಮಟ್ಟದ ಪಠ್ಯ ಪುಸ್ತಕಗಳನ್ನು ಒದಗಿಸಲಾಗುವುದು.
- ಪ್ರತಿ ವರ್ಷ ಇಲ್ಲ ಪರೀಕ್ಷೆ – ಹಾಲಿ ವ್ಯವಸ್ಥೆಯಲ್ಲಿ ಪ್ರತಿ ವರ್ಷ ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ. ಹೊಸ ನೀತಿಯ ಪ್ರಕಾರ 3, 5 ಮತ್ತು 8ನೇ ತರಗತಿಗೆ ಮಾತ್ರ ಪರೀಕ್ಷೆ ಇರಲಿದೆ. ಉಳಿದ ವರ್ಷ ತರಗತಿಗಳ ಮೌಲ್ಯಮಾಪನವು ನಿಯಮಿತ ಮತ್ತು ರಚನಾತ್ಮಕ ಶೈಲಿಯದ್ದಾಗಿರುತ್ತದೆ. ಅಂದರೆ, ಸ್ಪರ್ಧಾತ್ಮಕ ಆಧರಿತ, ಕಲಿಕಾ ಉತ್ತೇಜನ ಮತ್ತು ಅಭಿವೃದ್ಧಿ, ವಿಶ್ಲೇಷಣೆ, ವಿಮರ್ಶಾತ್ಮಕ ಚಿಂತನೆ ಮತ್ತು ಪರಿಕಲ್ಪನೆಯಂಥ ಸ್ಪಷ್ಟತೆಯನ್ನು ಮೂಡಿಸುವ ಅತ್ಯುತ್ತಮ ಕೌಶಲ್ಯದ ಶಿಕ್ಷಣವನ್ನು ಇದು ಒದಗಿಸುತ್ತದೆ.
- ತ್ರಿಭಾಷಾ ಸೂತ್ರ, ಸಂಸ್ಕೃತಕ್ಕೆ ಆದ್ಯತೆ – ತ್ರಿಭಾಷಾ ಸೂತ್ರದ ಅನ್ವಯ ಶಾಲೆಯಲ್ಲಿ ಶಿಕ್ಷಣ ನೀಡಬೇಕು. ವಿಶೇಷವಾಗಿ ಸಂಸ್ಕೃತ ಐಚ್ಛಿಕ ಭಾಷೆಯಾಗಿ ಎಲ್ಲ ಶಾಲೆಗಳಲ್ಲಿ ಲಭ್ಯ ಇರಬೇಕು. ಇದು ಉನ್ನತ ಶಿಕ್ಷಣಕ್ಕೂ ಅನ್ವಯ. ಸಂಸ್ಕೃತ ವಿಶ್ವ ವಿದ್ಯಾಲಯಗಳೂ ಸಂಸ್ಕೃತಕ್ಕೆ ಮಾತ್ರವೇ ಸೀಮಿತವಾಗದೇ ಬಹುಕೋರ್ಸ್‌ಗಳನ್ನು ಕಲಿಸಬೇಕು.

ಬೋರ್ಡ್ ಎಕ್ಸಾಮ್ ಪದ್ಧತಿ ಪರಿಷ್ಕರಣೆ

- 10 ಮತ್ತು 12ನೇ ತರಗತಿಗಳಿಗೆ ಮಾತ್ರ ಬೋರ್ಡ್ ಎಕ್ಸಾಮ್ ಇರುತ್ತದೆ. ಹಾಗೆಯೇ, ಈ ಪರೀಕ್ಷೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ತರಲಾಗುತ್ತಿದೆ.
- ಸಿಬಿಎಸ್‌ಇಯಲ್ಲಿ ಗಣಿತ ಇರುವಂತೆ ಎಲ್ಲ ಕೋರ್ಸ್‌ಗಳನ್ನು ಎರಡು ಭಾಷೆಗಳಲ್ಲಿ ನೀಡಲಾಗುತ್ತದೆ. ರಾಜ್ಯಗಳಲ್ಲೂ ಬೋರ್ಡ್ ಪರೀಕ್ಷೆಗಳು ಜ್ಞಾನಾಧಾರಿತ ಪರೀಕ್ಷೆಗಳಾಗಿರಲಿವೆ ಹೊರತು ಕಲಿಕೆಯ ಉದ್ದೇಶ ಮಾತ್ರವೇ ಆಗಿರುವುದಿಲ್ಲ.

- ಪ್ರತಿ ವಿಷಯವೂ ಆಬ್ಜಿಕ್ಟಿವ್ ಮತ್ತು ವಿವರಣಾತ್ಮಕ ಪರೀಕ್ಷೆ ಹೊಂದಿರುತ್ತದೆ.
- 6ನೇ ಕ್ಲಾಸ್ ನಿಂದಲೇ ಕೋಡಿಂಗ್
- ಗಣಿತದ ಪರಿಕಲ್ಪನೆಗಳು, ವೈಜ್ಞಾನಿಕ ವಿಚಾರಗಳು ಈ ಶಿಕ್ಷಣದ ಭಾಗವಾಗಿರಲಿವೆ.
- ಸಹ ಪಠ್ಯಗಳಾದ ಕ್ರೀಡೆ, ವೃತ್ತಿಪರ, ಕಲೆ, ವಾಣಿಜ್ಯ, ವಿಜ್ಞಾನ ಸೇರಿ ಎಲ್ಲವೂ ಇದೇ ಹಂತದಲ್ಲಿರಲಿವೆ. ಹಾಗಾಗಿ ವಿದ್ಯಾರ್ಥಿಗಳು ತಮ್ಮ ಆಯ್ಕೆಯನುಸಾರವಾಗಿ ವಿಷಯಗಳನ್ನು ತೆಗೆದುಕೊಳ್ಳಬಹುದು. ಹಾಗೆಯೇ 6ನೇ ತರಗತಿಯಿಂದಲೇ ಕೋಡಿಂಗ್ ಕಲಿಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ.

ಲೋಕ ವಿದ್ಯಾ

- ಭಾರತದಲ್ಲಿ ಲೋಕ ವಿದ್ಯಾ ಜ್ಞಾನ ಅಭಿವೃದ್ಧಿ ಪಡಿಸಿ, ಎಲ್ಲಾ ವಿದ್ಯಾರ್ಥಿಗಳಿಗೂ ಲಭ್ಯವಾಗುವಂತೆ ಮಾಡಲಾಗುವುದು.
- ವೃತ್ತಿಪರ ವಿಷಯ ಕೌಶಲ್ಯ 6 ರಿಂದ 8ನೇ ತರಗತಿಯ ಎಲ್ಲ ಮಕ್ಕಳಿಗೆ ಸ್ಥಳೀಯ ವೃತ್ತಿಪರ ಕೌಶಲ್ಯದ ಜ್ಞಾನ ನೀಡಲಾಗುವುದು. ಅಂದರೆ, ಬಡಿಗ, ಮಾಲಿ, ಕುಂಬಾರ, ಕಲಾವಿದ ಇತ್ಯಾದಿ ಕೌಶಲ್ಯಗಳನ್ನು ಅಭಿವೃದ್ದಿಪಡಿಸಲಾಗಿದೆ.

ಉನ್ನತ ಶಿಕ್ಷಣದಲ್ಲಿ ಬದಲಾವಣೆ

- ಡ್ರಾಪೌಟ್ ಆದ್ರೂ ಸಿಗುತ್ತೆ ಸರ್ಟಿಫಿಕೇಟ್
- ಹೊಸ ಶಿಕ್ಷಣ ನೀತಿಯಲ್ಲಿ ಪದವಿ ಪೂರ್ವ ಮತ್ತು ಪದವಿ ಶಿಕ್ಷಣವು ವಿಲೀನವಾಗಲಿದ್ದು, ಶಿಕ್ಷಣವು 3 ಅಥವಾ 4, ವರ್ಷಗಳ ಅವಧಿಯದ್ದಾಗಿರುತ್ತದೆ. ಇಲ್ಲಿ ವಿದ್ಯಾರ್ಥಿಗಳು ಪೂರ್ಣ ಕೋರ್ಸ್ ಮುಗಿಸದೆ ಮಧ್ಯದಲ್ಲಿ ಕೋರ್ಸ್‌ನಿಂದ ನಿರ್ಗಮಿಸಬಹುದು. ಆದರೆ ಇದನ್ನು ಕೋರ್ಸ್ ಅಪೂರ್ಣ ಎಂದು ಪರಿಗಣಿಸುವುದಿಲ್ಲ.
- 1 ವರ್ಷ ಪೂರೈಸಿದ ಬಳಿಕ ವೃತ್ತಿಪರ ಶಿಕ್ಷಣ ಸೇರಿದಂತೆ ಅವರು ಆಯ್ಕೆ ಮಾಡಿಕೊಂಡಿದ್ದ ವಿಷಯದಲ್ಲಿ ಪ್ರಮಾಣ ಪತ್ರ ನೀಡಲಾಗುತ್ತದೆ. ವಿದ್ಯಾರ್ಥಿ 2 ವರ್ಷ ಪೂರೈಸಿದರೆ ಡಿಪ್ಲೋಮಾ ಪ್ರಮಾಣ ಪತ್ರ ದೊರೆಯಲಿದೆ.
- 3 ವರ್ಷ ಪೂರೈಸಿದರೆ ಪದವಿ ಪ್ರಮಾಣ ಪತ್ರ ದೊರೆಯಲಿದೆ.
- ವಿದ್ಯಾರ್ಥಿಯು ಐಚ್ಛಿಕವಾಗಿ 4 ವರ್ಷದ ಡಿಗ್ರಿಯನ್ನೂ ಆಯ್ದುಕೊಳ್ಳಬಹುದು.

ಶೈಕ್ಷಣಿಕ ಕ್ರೆಡಿಟ್ ಬ್ಯಾಂಕ್ ಸ್ಥಾಪನೆ

- ಹೊಸ ಶಿಕ್ಷಣ ನೀತಿಯಡಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಅವರು ಗಳಿಸಿದ ಕ್ರೆಡಿಟ್‌ಗಳ ಮೂಲಕ ಅಳೆಯಲಾಗುತ್ತದೆ. ವಿವಿಧ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಗಳಿಸಿದ ಕ್ರೆಡಿಟ್‌ಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲು 'ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್' (ಎಬಿಸಿ) ಸ್ಥಾಪನೆಯಾಗಲಿದೆ. ಇದರಲ್ಲಿ ಸಂಗ್ರಹವಾದ ಕ್ರೆಡಿಟ್ ಸ್ಕೋರ್‌ಗಳನ್ನು ಬೇರೊಂದು ವಿಷಯದಲ್ಲಿ ಗಳಿಸಿದ ಸ್ಕೋರ್ ಜತೆ ಸೇರಿಸಲು ಅಥವಾ ಬೇರೊಂದು ವಿಷಯಕ್ಕೆ ವರ್ಗಾವಣೆ ಮಾಡಲು ಸಾಧ್ಯವಿದ್ದು, ಅಂತಿಮ ವರ್ಷದ ಡಿಗ್ರಿಗೆ ಅವುಗಳನ್ನು ಒಟ್ಟಾರೆಯಾಗಿ ಪರಿಗಣಿಸಲಾಗುವುದು.

ಬಹು ವಿಷಯಗಳ ಶಿಕ್ಷಣಕ್ಕೆ ಆದ್ಯತೆ

- ಪ್ರಸ್ತುತ ಒಂದೇ ವಿಷಯದಲ್ಲಿ ಶಿಕ್ಷಣ ನೀಡುತ್ತಿರುವ ಶೈಕ್ಷಣಿಕ ಸಂಸ್ಥೆಗಳು (ಉದಾ: ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ತಾಂತ್ರಿಕ ವಿವಿಗಳು) ಇನ್ನು ಮುಂದೆ ಇರುವುದಿಲ್ಲ. ಇವು ಸಹ ಬಹುವಿಷಯಗಳ ಶಿಕ್ಷಣ ಸಂಸ್ಥೆಗಳಾಗಿ ಮಾರ್ಪಡಾಗಲಿವೆ. ಈ ಎಲ್ಲಾ ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಗಳು 2030ರ ವೇಳೆಗೆ ಬಹು ವಿಷಯಗಳ ಶೈಕ್ಷಣಿಕ ಸಂಸ್ಥೆಗಳಾಗಿ ಬದಲಾಗಬೇಕೆಂಬ ಗುರಿಯನ್ನು ನೀಡಲಾಗಿದೆ.

'ಎಂಫಿಲ್'ಗೆ ತಿಲಾಂಜಲಿ

- ಇನ್ನು ಮುಂದೆ ಎಂಫಿಲ್ ರದ್ದಾಗಲಿದೆ. ಪದವಿ ಪೂರ್ವ ಶಿಕ್ಷಣ 3 ಅಥವಾ ನಾಲ್ಕು ವರ್ಷಗಳು ಇರಲಿದ್ದು, 1 ಅಥವಾ 2 ವರ್ಷಗಳ ಸ್ನಾತಕೋತ್ತರ ಪದವಿ ಇರಲಿದೆ. ಏಕೀಕೃತ 5 ವರ್ಷದ ಬ್ಯಾಚಲರ್/ಮಾಸ್ಟರ್ ಡಿಗ್ರಿ ಆಯ್ಕೆಯೂ ಲಭ್ಯವಾಗಲಿದೆ.

ಜಿಲ್ಲೆಗೊಂದು ಬಹು ವಿಷಯ ಕಾಲೇಜು

- 2030ರ ವೇಳೆಗೆ ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ದೊಡ್ಡ ಮಟ್ಟದ ಬಹು ವಿಷಯಗಳ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ.
- 2040ರ ವೇಳೆಗೆ ದೇಶದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಬಹು–ವಿಷಯಗಳ ಶಿಕ್ಷಣ ಸಂಸ್ಥೆಗಳಾಗಿ ಮಾರ್ಪಡಿಸಿ, ಪ್ರತಿಯೊಂದು ವಿಷಯದಲ್ಲೂ ಕನಿಷ್ಟ 3000 ವಿದ್ಯಾರ್ಥಿಗಳನ್ನು ಹೊಂದಿರುವಂತೆ ಮಾಡುವ ಗುರಿ ಇರಿಸಿಕೊಳ್ಳಲಾಗಿದೆ.

ಕೇಂದ್ರೀಯ ನಿಯಂತ್ರಕ ವ್ಯವಸ್ಥೆ

- ಎಲ್ಲಾ ಉನ್ನತ ಶೈಕ್ಷಣಿಕ ಸಂಸ್ಥೆಗಳನ್ನು ನಿಯಂತ್ರಿಸಲು ಯುಜಿಸಿ ಮಾದರಿಯಲ್ಲಿ 'ಭಾರತೀಯ ಉನ್ನತ ಶಿಕ್ಷಣ ಮಂಡಳಿ' (ಎಚ್‌ಇಸಿಐ) ಸ್ಥಾಪನೆಯಾಗಲಿದೆ. ಶಿಕ್ಷಕರ ತರಬೇತಿ ಸೇರಿದಂತೆ ಎಲ್ಲಾ ರೀತಿಯ ಶಿಕ್ಷಣಕ್ಕೆ ಇದು ಏಕ ಗವಾಕ್ಷಿ ನಿಯಂತ್ರಣ ಪ್ರಾಧಿಕಾರವಾಗಿರುತ್ತದೆ.
- ಸಾಮಾನ್ಯ ಪ್ರವೇಶ ಪರೀಕ್ಷೆ ಎಲ್ಲಾ ವಿವಿಗಳಲ್ಲಿ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಏಕ ರೀತಿಯ ಸಾಮಾನ್ಯ ಪರೀಕ್ಷೆಯನ್ನು ನಡೆಸಲಿದೆ. ಆದರೆ ಆಯಾ ವಿಷಯಗಳಿಗೆ ತಕ್ಕಂತೆ ವಿಭಿನ್ನ ಪ್ರಶ್ನೆ ಪತ್ರಿಕೆಗಳನ್ನು ಒದಗಿಸಲಿದೆ.
- ಇನ್ನು ಆರ್ಟ್ಸ್, ಕಾಮರ್ಸ್ ಸೈನ್ಸ್ ಮಧ್ಯೆ ಗೋಡೆ ಇಲ್ಲ
- ಹೊಸ ಶಿಕ್ಷಣ ನೀತಿಯು, ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುವುದಕ್ಕೆ ಒತ್ತು ನೀಡುವುದಲ್ಲದೆ, ಯಾವುದೇ ವಿದ್ಯಾರ್ಥಿ ತನ್ನ ಶೈಕ್ಷಣಿಕ ಹಿನ್ನೆಲೆಯನ್ನು ಲೆಕ್ಕಿಸದೆ ಯಾವುದೇ

ವಿಷಯವನ್ನು ಓದಲು ಅವಕಾಶ ನೀಡುತ್ತದೆ. ಅಂದರೆ ಎಂಜಿನಿಯರಿಂಗ್ ವಿದ್ಯಾರ್ಥಿಯು ಇತಿಹಾಸ ಓದಬಹುದು. ಕಲಾ ವಿಭಾಗದ ವಿದ್ಯಾರ್ಥಿಯು ಭೌತಶಾಸ್ತ್ರ ಅಥವಾ ಗಣಿತವನ್ನು ಒಂದು ವಿಷಯವಾಗಿ ಆಯ್ದುಕೊಳ್ಳಬಹುದು.

ಪಠ್ಯ ಗಣನೀಯ ಇಳಿಕೆ

- **ಮುಖ್ಯವಾದ ವಿಷಯ:** ಎಲ್ಲ ವಿಷಯಗಳ ಪಠ್ಯವು ಅಗತ್ಯವಾದ ಬಹುಮುಖ್ಯವಾದ್ದನ್ನು ಮಾತ್ರ ಹೊಂದಿರಬೇಕು.
- **ವಿಮರ್ಶಾತ್ಮಕ ಚಿಂತನೆ:** ಸಮಗ್ರ ಶಿಕ್ಷಣಕ್ಕೆ ವಿಮರ್ಶಾತ್ಮಕ ಚಿಂತನೆ, ತನಿಖೆ, ಸಂಶೋಧನೆ, ಚರ್ಚೆ ಮತ್ತು ವಿಶ್ಲೇಷಣಾತ್ಮಕ ಆಧರಿತ ಬೋಧನೆ ಹಾಗೂ ಕಲಿಕಾ ಪದ್ಧತಿಗಳ ಅಳವಡಿಕೆ.
- **ಸಂವಾದಿ ತರಗತಿಗಳು:** ಸಂವಾದಿ ಬೋಧನೆಯು ಪಠ್ಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಕೇಳುವ ಪದ್ಧತಿಗೆ ಉತ್ತೇಜನ ನೀಡುತ್ತದೆ.
- **ಪ್ರಯೋಗಾತ್ಮಕ ಕಲಿಕೆ:** ತರಗತಿಯಲ್ಲಿ ತಮಾಷೆ, ರಚನಾತ್ಮಕ, ಸಹಯೋಗ ಮತ್ತು ಪರಿಶೋಧನಾತ್ಮಕ ಚಟುವಟಿಕೆಗಳ ಮೂಲಕ ಪ್ರಯೋಗಾತ್ಮಕ ಕಲಿಕೆ ಮತ್ತು ವಿದ್ಯಾರ್ಥಿಯ ಕಲಿಕೆಯ ಆಳವನ್ನು ಹೆಚ್ಚಿಸುವುದು.
- ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲೂ ಕಲೆ, ಸಂಗೀತ, ನೃತ್ಯ, ಸಾಹಿತ್ಯ ಸೇರಿ ಬಹುವಿಷಯಗಳ ಬೋಧನೆ.
- ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸಲು 100 ವಿದೇಶಿ ಕಾಲೇಜುಗಳಿಗೆ ಅನುಮತಿ
- ಸಂಶೋಧನೆಗೆ ಆದ್ಯತೆ ನೀಡಲು ಉನ್ನತ ಶಿಕ್ಷಣ ಸಂಸ್ಥೆಗಳ ಮರು ವರ್ಗೀಕರಣ
- 2035ರ ವೇಳೆಗೆ 50% ಸರಾಸರಿ ದಾಖಲಾತಿ ಅನುಪಾತ
- ಶಿಕ್ಷಣ ನೀತಿಯ ತಿರುಳು
- ತಂತ್ರಜ್ಞಾನ ಕೇಂದ್ರಿತ ಶಿಕ್ಷಣ ವ್ಯವಸ್ಥೆ
- 12ನೇ ಕ್ಲಾಸ್‌ವರೆಗೂ ಕಡ್ಡಾಯ, ಉಚಿತ ಶಿಕ್ಷಣ, ಉನ್ನತ ಶಿಕ್ಷಣ ವ್ಯವಸ್ಥೆ ನಿಯಂತ್ರಣಕ್ಕೆ ಪ್ರಾಧಿಕಾರ
- ಶಾಲಾ ಶುಲ್ಕಕ್ಕೆ ಗರಿಷ್ಠ ಮಿತಿ ನಿಗದಿ
- ಕಲೆಯಲ್ಲೂ ವಿಜ್ಞಾನ, ವಿಜ್ಞಾನದಲ್ಲೂ ಕಲೆ
- ಗುಣಮಟ್ಟ ನಿಯಂತ್ರಣಕ್ಕೆ ಆದ್ಯತೆ
- ಹೊಸ ಶಿಕ್ಷಣ ನೀತಿಗಾಗಿ ಶಾಲೆಗಳ ಗುಣಮಟ್ಟವನ್ನೂ ಎತ್ತರಿಸಬೇಕಾಗಿದೆ. ಖಾಸಗಿ ಶಾಲೆಗಳ ಗುಣಮಟ್ಟಕ್ಕೂ ಮಾನದಂಡಗಳು ನಿಗದಿಯಾಗಲಿವೆ. ಇದರ ಮೇಲೆ ನಿಗಾ ಇಡಲು ಪ್ರಾಧಿಕಾರ ರಚನೆಯಾಗಲಿದೆ.
- ಎಲ್ಲ ಶಾಲೆಗಳು ಕನಿಷ್ಠ ವೃತ್ತಿಪರ ಮತ್ತು ಗುಣಮಟ್ಟದ ಮಾನದಂಡಗಳನ್ನು ಅನುಸರಿಸಲೇಬೇಕು, ಕೇಂದ್ರೀಯ ವಿದ್ಯಾಲಯಗಳನ್ನು ಹೊರತುಪಡಿಸಿ ಎಲ್ಲ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಗುಣಮಟ್ಟ ಆಗಾಗ ಪರಿಶೀಲನೆ
- ದಾನಿಗಳು ಶಾಲೆ ನಡೆಸುವುದಿದ್ದರೆ ಬೆಂಬಲ ನೀಡಲಾಗುತ್ತದೆ.

ಹೊಸ ನೀತಿ ಅನುಷ್ಠಾನದ ಹಂತಗಳು

2021–22

- ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ನಿರ್ಮಾಣ (ಎನ್‌ಎಸ್‌ಎಫ್‌ಎಸ್‌ಇ)
- ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ವಿನ್ಯಾಸ

2022–23

- ಶಿಕ್ಷಕರಿಗೆ ರಾಷ್ಟ್ರೀಯ ವೃತ್ತಿಪರ ಗುಣಮಟ್ಟದ ಸಾಮಾನ್ಯ ಮಾರ್ಗದರ್ಶಿ ಸೂತ್ರ ಜಾರಿ (ಎನ್‌ಪಿಎಸ್‌ಟಿ)

2025–26

- ಶಾಲೆಗಳಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ಕನಿಷ್ಠ ಶೇ. 50ರಷ್ಟು ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣಕ್ಕೆ ತೆರೆದುಕೊಳ್ಳಬೇಕು
- 3 ನೇ ತರಗತಿಯಿಂದ ಎಲ್ಲ ಕಲಿಯುವವರಿಗೆ ಪ್ರಾಥಮಿಕ ಶಾಲೆಗಳಲ್ಲಿ ಸಾರ್ವತ್ರಿಕ ಅಡಿಪಾಯದ ಸಾಕ್ಷರತೆಯನ್ನು ಸಾಧಿಸುವುದು.

2029–30

- ಕನಿಷ್ಟ ಪದವಿ ಅರ್ಹತೆಯೊಂದಿಗೆ ಶಿಕ್ಷಕರ ಶಿಕ್ಷಣವನ್ನು ನಿಧಾನವಾಗಿ ಬಹು ವಿಷಯ ಕಲಿಕೆಯ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ಮಾರ್ಪಡಿಸಲಾಗುವುದು.
- ಎಲ್ಲ ಟೀಚರ್ ಎಜುಕೇಷನ್ ಇನ್ಸ್‌ಟಿಟ್ಯೂಷನ್‌ಗಳನ್ನು ಬಹುವಿಷಯ ಕಲಿಕೆಯ ಸಂಸ್ಥೆಗಳಾಗಿ ಬದಲಿಸಲಾಗುವುದು.

2040

- ಹೊಸ ಶಿಕ್ಷಣ ನೀತಿಯ ಪೂರ್ಣ ಅನುಷ್ಠಾನ ಮತ್ತು ಜಾರಿಗೊಳಿಸಲಾದ ನೀತಿಯ ಸಮಗ್ರ ವಿಮರ್ಶಾತ್ಮಕ ಅಧ್ಯಯನ.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

74. ಬೆಂಗಳೂರು–ಚೆನ್ನೈ ನಡುವೆ ಹೈಸ್ಪೀಡ್ ಬುಲೆಟ್ ರೈಲು:

- ಹೈಸ್ಪೀಡ್ ಬುಲೆಟ್ ರೈಲು ಬೆಂಗಳೂರು–ಮೈಸೂರು–ಚೆನ್ನೈ ನಡುವೆ ಓಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಈ

ಸಂಬಂಧ ಶೀಘ್ರದಲ್ಲಿಯೇ ಭೂ ಸ್ವಾಧೀನ ಪ್ರಕ್ರಿಯೆ ಆರಂಭಗೊಳ್ಳಲಿದೆ.

- ದೇಶಾದ್ಯಂತ ಏಳು ಹೈಸ್ಪೀಡ್ ರೈಲ್ವೆ ಕಾರಿಡಾರ್‌ಗಳಲ್ಲಿ ಬುಲೆಟ್ ರೈಲು ಓಡಿಸುವ ಸಂಬಂಧ ರೈಲ್ವೆ ಸಚಿವಾಲಯ ಚಿಂತನೆ ನಡೆಸಿದ್ದು, ಯೋಜನಾ ವರದಿ ಸಿದ್ಧಪಡಿಸುತ್ತಿದೆ.
- ಈ ಸಂಬಂಧ ಗ್ರೀನ್ ಫೀಲ್ಡ್ ಎಕ್ಸ್‌ಪ್ರೆಸ್ ವೇ ಮಾರ್ಗದ ಪಕ್ಕದ ಲಿಯೇ ಬುಲೆಟ್ ರೈಲು ಮಾರ್ಗ ನಿರ್ಮಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಹೆಚ್ಚುವರಿ ಭೂ ಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲಿದೆ.
- ಸಾರಿಗೆ ಸಚಿವ ನಿತಿನ್ ಗಡ್ಕರಿ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಚಿವರ ಗುಂಪಿನ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಹೆದ್ದಾರಿ ಮಾರ್ಗದ ಉದ್ದಕ್ಕೂ ಪಕ್ಕದಲ್ಲಿಯೇ ರೈಲು ಹಳಿ ನಿರ್ಮಾಣಕ್ಕೆ 10–15 ಮೀಟರ್ (ಅಗಲ) ಹೆಚ್ಚುವರಿ ಭೂ ಸ್ವಾಧಿನ ಕೈಗೊಳ್ಳಲು ಎನ್‌ಎಚ್‌ಎಐಗೆ ಅಧಿಕಾರವಿದೆ. ರೈಲ್ವೆ ಸಚಿವಾಲಯದಿಂದ ಪ್ರಸ್ತಾವನೆ ಕುರಿತು ಪತ್ರ ಬಂದಿದ್ದು ಈ ಬಗ್ಗೆ ಸಮಾಲೋಚನೆ ನಡೆಸಲಾಗುತ್ತಿದೆ ಎಂದು ಎನ್.ಎಚ್.ಎ.ಐ. ಮುಖ್ಯಸ್ಥ ಎಸ್.ಎಸ್. ಸಂಧು ಹೇಳಿದ್ದಾರೆ.
- ಉದ್ದೇಶಿತ 7 ಮಾರ್ಗಗಳು
- ಚೆನ್ನೈ–ಬೆಂಗಳೂರು–ಮೈಸೂರು
- ದಿಲ್ಲಿ–ನೊಯ್ಡಾ–ಆಗ್ರಾ–ಲಖನೌ ವಾರಾಣಸಿ
- ವಾರಾಣಸಿ–ಪಾಟ್ನಾ–ಹೌರಾ
- ದಿಲ್ಲಿ–ಜೈಪುರ–ಉದಯಪುರ–ಅಹಮದಾಬಾದ್
- ದಿಲ್ಲಿ–ಚಂಡೀಗಢ– ಲೂಧಿಯಾನ–ಜಲಂಧರ್–ಅಮೃತಸರ
- ಮುಂಬಯಿ–ನಾಸಿಕ್–ನಾಗಪುರ
- ಮುಂಬಯಿ–ಪುಣೆ–ಹೈದರಾಬಾದ್

75. ಭಾರತ–ಮ್ಯಾನ್ಮಾರ್ ಗಡಿಯಲ್ಲಿ ಉಗ್ರ ದಾಳಿ, 3 ಯೋಧರು ಹುತಾತ್ಮ

- ಭಾರತ–ಮ್ಯಾನ್ಮಾರ್ ಗಡಿಯಲ್ಲಿನ ಮಣಿಪುರದ ಛಾಂದೇಲ್ ಜಿಲ್ಲೆ ಬಳಿ ಉಲ್ಫಾ ಉಗ್ರರು ಮತ್ತು ನಾಗಾ ಬಂಡುಕೋರರು ನಡೆಸಿದ ದಾಳಿಯಲ್ಲಿ ಅಸ್ಸಾಂ ರೈಫಲ್ಸ್‌ನ ಮೂವರು ಯೋಧರು ಹುತಾತ್ಮರಾಗಿದ್ದಾರೆ.
- ಗಡಿಯಿಂದ ಕೇವಲ 3 ಕಿ.ಮೀ ದೂರದ ಖೊಂಗ್ಚಾಲ್‌ನಲ್ಲಿ ಘಟನೆ ಜರುಗಿದೆ. ಅಸ್ಸಾಂ ರೈಫಲ್ಸ್ ನೆಲೆಯಿಂದ 2 ಕಿ.ಮೀ ದೂರದ ಸಾಜಿಕ್ ತಂಪಕ್ ಗ್ರಾಮದಲ್ಲಿ ಯೋಧರನ್ನು ಗುರಿಯಾಗಿಸಿ ಮೊದಲು ಉಗ್ರರು ಐಇಡಿ ಸ್ಫೋಟಿಸಿದ್ದಾರೆ. ಬಳಿಕ ಯೋಧರು ಕೂಡ ಪ್ರತಿದಾಳಿಯಾಗಿ ಗುಂಡು ಹಾರಿಸಿದ್ದಾರೆ.
- ಉಲ್ಫಾ–ಐ, ರೆವಲ್ಯೂಷನರಿ ಪೀಪಲ್ಸ್ ಫ್ರಂಟ್ (ಆರ್‌ಪಿಎಫ್) ಮತ್ತು ಮಣಿಪುರ ನಾಗಾ ಪೀಪಲ್ಸ್ ಫ್ರಂಟ್ (ಎಂಎನ್‌ಪಿಎಫ್) ಜಂಟಿಯಾಗಿ ದಾಳಿ ನಡೆಸಿದ್ದು ಹತ್ಯೆಯ ಹೊಣೆಯನ್ನು ಕೂಡ ಹೊತ್ತುಕೊಂಡಿವೆ.
- ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಗಲ್ವಾನ್ 20 ಹುತಾತ್ಮರ ಹೆಸರು
- ಪೂರ್ವ ಲಡಾಖ್‌ನಲ್ಲಿ ಜೂನ್ 15ರಂದು ಚೀನಾ ನಡೆಸಿದ ಗಡಿ ವಿವಾದದ ಮಾರಾಮಾರಿಗೆ ಹುತಾತ್ಮರಾದ ಭಾರತೀಯ ಸೇನೆಯ 20 ಯೋಧರಿಗೆ ಗೌರವ ಸೂಚಕವಾಗಿ ಅವರ ಹೆಸರುಗಳನ್ನು ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಕೆತ್ತನೆ ಮಾಡಲು ತೀರ್ಮಾನಿಸಲಾಗಿದೆ.
- ಈ ಮಾರಾಮಾರಿಯಲ್ಲಿ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯ 35ಕ್ಕೂ ಅಧಿಕ ಸೈನಿಕರು ಮೃತರಾಗಿದ್ದರೂ ಕ್ಸಿ ಜಿನ್‌ಪಿಂಗ್ ನೇತೃತ್ವದ ಸರ್ಕಾರ ಇದನ್ನು ಅಧಿಕೃತವಾಗಿ ಬಹಿರಂಗಪಡಿಸಿಲ್ಲ.

76. ಜಯಾ ಜೇಟ್ಲಿ ಸೇರಿದಂತೆ ಮೂವರಿಗೆ 4 ವರ್ಷ ಜೈಲು :

- ರಕ್ಷಣಾ ಇಲಾಖೆಯ ಒಪ್ಪಂದಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಸಮತಾ ಪಕ್ಷದ ಮಾಜಿ ಅಧ್ಯಕ್ಷೆ ಜಯಾ ಜೇಟ್ಲಿ ಹಾಗೂ ಇತರ ಇಬ್ಬರಿಗೆ ದಿಲ್ಲಿ ನ್ಯಾಯಾಲಯ ನಾಲ್ಕು ವರ್ಷ ಜೈಲು ಶಿಕ್ಷೆ ವಿಧಿಸಿದೆ.
- ಸಮತಾ ಪಕ್ಷದ ಸದಸ್ಯರಾಗಿದ್ದ ಗೋಪಾಲ್ ಪಚೆರ್‌ವಾಲ್ ಮತ್ತು ನಿವೃತ್ತ ಮೇಜರ್ ಜನರಲ್ ಎಸ್.ಪಿ. ಮುರುಗೈ ಅವರು ಶಿಕ್ಷೆಗೊಳಗಾದ ಇತರೆ ಇಬ್ಬರು ಅಪರಾಧಿಗಳು. ನಾಲ್ವರೂ ಅಪರಾಧಿಗಳಿಗೆ ನ್ಯಾಯಾಲಯ ತಲಾ 1 ಲಕ್ಷ ರೂ. ದಂಡವನ್ನೂ ವಿಧಿಸಿದೆ.
- 2000–01ರ ರಕ್ಷಣಾ ವ್ಯವಹಾರಕ್ಕೆ ಸಂಬಂಧಿಸಿದ ಅವ್ಯವಹಾರವನ್ನು ತೆಹಲ್ಕಾ ಪತ್ರಿಕೆಯು 'ಆಪರೇಷನ್ ವೆಸ್ಟ್ ಎಂಡ್' ಕುಟುಕು ಕಾಲ್ಯಾಚರಣೆಯಲ್ಲಿ ಬಯಲು ಮಾಡಿತ್ತು.

ಜಯಾ ಜೇಟ್ಲಿ ಯಾರು?

- ಜಯಾ ಜೇಟ್ಲಿ ಶಿಮ್ಲಾ ಮೂಲದವರು. ಮಾಜಿ ಕೇಂದ್ರ ಸಚಿವ ಜಾರ್ಜ್ ಫರ್ನಾಂಡಿಸ್ ಆಪ್ತರು.
- 1984ರ ಸಿಖ್ ಗಲಭೆ ಬಳಿಕ ಜಯಾ ರಾಜಕೀಯ ರಂಗ ಪ್ರವೇಶಿಸಿದ್ದರು. 1984ರಲ್ಲಿ ಜನತಾ ಪಕ್ಷವನ್ನು ಸೇರಿದ್ದರು. ಆದರೆ ಪಕ್ಷ ಇಬ್ಭಾಗವಾಗುವ ಮೂಲಕ ಜನತಾ ದಳ

ಹುಟ್ಟಿಕೊಂಡಿತ್ತು. ಕೊನೆಗೆ ಜಯಾ ಮತ್ತು ಜಾರ್ಜ್ ಫರ್ನಾಂಡಿಸ್ ಜಂಟಿಯಾಗಿ ಸಮತಾ ಪಕ್ಷವನ್ನು ಸ್ಥಾಪಿಸಿದ್ದರು.

- ಭ್ರಷ್ಟಾಚಾರ ಪ್ರಕರಣ ಬಯಲಾದ ಬಳಿಕ 2002ರಲ್ಲಿ ಜಯಾ ಸಮತಾ ಪಕ್ಷದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದಿದ್ದರು.
- ಜಾರ್ಜ್ ಫರ್ನಾಂಡಿಸ್ ಅವರ ಭೇಟಿಗೆ ಕುಟುಂಬ ಸದಸ್ಯರು ಅವಕಾಶ ನೀಡದಿದ್ದಾಗ ಜಯಾ ಅವರು ಕೋರ್ಟ್ ಮೆಟ್ಟಿಲೇರಿದ್ದರು. ಕೋರ್ಟ್ ಆದೇಶದ ಮೇರೆಗೆ ಅನುಮತಿ ದೊರೆತರೂ ಅಷ್ಟರಲ್ಲಿ ಜಾರ್ಜ್ ಅವರು ಯಾರನ್ನೂ ಗುರುತಿಸಲಾರದ ಮರೆಗುಳಿ ಸಮಸ್ಯೆಗೆ ತುತ್ತಾಗಿದ್ದರು.

ಏನಿದು ಅಪರೇಷನ್ ವೆಸ್ಟ್ ಎಂಡ್?

- 2001ರಲ್ಲಿ ಕಾರ್ಗಿಲ್ ಯುದ್ಧದ ಬಳಿಕ ರಕ್ಷಣಾ ಇಲಾಖೆಯಲ್ಲಿ ನಡೆದಿದ್ದ ಶವಪೆಟ್ಟಿಗೆ ಹಗರಣ ಸೇರಿದಂತೆ ಹಲವು ಕರ್ಮಕಾಂಡಗಳನ್ನು ತೆಹಲ್ಕಾ ಪತ್ರಿಕೆ ಕುಟುಕು ಕಾರ್ಯಾಚರಣೆ ಮೂಲಕ ಸರಣಿಯಾಗಿ ಬಯಲಿಗೆಳೆದಿತ್ತು. ಆಗಿನ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರು ಶವಪೆಟ್ಟಿಗೆ ಹಗರಣದಲ್ಲಿ ಸಿಲುಕಿ ರಾಜೀನಾಮೆ ನೀಡಿದ್ದರು.

77. 370 ಚೀನಿ ವಸ್ತುಗಳಿಗೆ ಕ್ವಾಲಿಟಿ ಫಿಲ್ಟರ್:

- ಸುಮಾರು 370 ಚೀನಿ ಉತ್ಪನ್ನಗಳಿಗೆ ಗುಣಮಟ್ಟ ಮಾನದಂಡದ ಮೂಲಕ ತಡೆ ವಿಧಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಮೂಲಕ ಚೀನಾಗೆ ಮೂರನೇ ಹೊಡೆತವನ್ನು ಕೇಂದ್ರ ಸರ್ಕಾರ ನೀಡಿದೆ. ಚೀನಾವನ್ನು ರಾಜತಾಂತ್ರಿಕ ಹಾಗೂ ವಾಣಿಜ್ಯ ಮಾರ್ಗಗಳ ಮೂಲಕ ಮಣಿಸುವ ನಿಟ್ಟಿನಲ್ಲಿ ದೃಢ ನಿರ್ಧಾರ ಕೈಗೊಂಡಿದೆ.
- ಕಳೆದ ವರ್ಷವೇ 370 ವಸ್ತುಗಳ ವಿಭಾಗಗಳನ್ನು ಪಟ್ಟಿ ಮಾಡಲಾಗಿದ್ದು, ಇವುಗಳನ್ನು ಮುಂದಿನ ಮಾರ್ಚ್ ಒಳಗಾಗಿ ಭಾರತೀಯ ಮಾನದಂಡಗಳ ಸುಪರ್ದಿಗೆ ತರಲಾಗುವುದು ಎಂದು ವಾಣಿಜ್ಯ ಸಚಿವಾಲಯ ಹೇಳಿದೆ.
- ಆತ್ಮ ನಿರ್ಭರ ಭಾರತ್ ಯೋಜನೆಯನ್ನು ಚುರುಕುಗೊಳಿಸಿ, ಆಮದನ್ನು ಕಡಿಮೆ ಮಾಡಿ ರಫ್ತು ಹೆಚ್ಚಿಸುವ ಗುರಿ ಸಾಧನೆಗೂ ಈ ಕ್ರಮ ನೆರವಾಗಲಿದೆ ಎಂದು ಹೇಳಲಾಗಿದೆ.
- ಇತ್ತೀಚೆಗಷ್ಟೇ 47 ಚೀನಾ ಆ್ಯಪ್‌ಗಳನ್ನು ಕೇಂದ್ರ ಸರ್ಕಾರವು ನಿಷೇಧಿಸಿತ್ತು.
- ಚೀನಾ ದೇಶವು ಭಾರತಕ್ಕೆ ಆಮದು ಮಾಡುವ ವಸ್ತುಗಳು ನಮ್ಮ ದೇಶ ಹೊಂದಿರುವ ನಿಗದಿತ ಗುಣಮಟ್ಟ ಮಾನದಂಡಕ್ಕೆ (ಇಂಡಿಯನ್ ಸ್ಟ್ಯಾಂಡರ್ಡ್) ಅನುಗುಣವಾಗಿರಬೇಕು. ಗುಣಮಟ್ಟ ಕಡಿಮೆಯಿದ್ದರೇ, ಆ ಉತ್ಪನ್ನಗಳಿಗೆ ಸರ್ಕಾರವು ತಡೆಯೊಡ್ಡುತ್ತದೆ. ಕಳಪೆ ಮಾಲನ್ನು ಭಾರತದ ಮಾರುಕಟ್ಟೆಗೆ ಸುರಿಯುವ ಚೀನಾ ಯತ್ನಕ್ಕೆ ಇದರಿಂದ ಹೊಡೆತ ಬೀಳಲಿದೆ.
- ಗುಣಮಟ್ಟ ಪರಾಮರ್ಶೆ ಈಗ 5 ಪಟ್ಟು ಏರಿಕೆ
- ಬೇರೆ ದೇಶಗಳಿಂದ ಭಾರತಕ್ಕೆ ಆಮದಾಗುವ ಉತ್ಪನ್ನಗಳ ಗುಣಮಟ್ಟ ಪರೀಕ್ಷೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಪ್ರಮುಖ ಬಂದರುಗಳ ಬಳಿ ಈ ನಿಟ್ಟಿನಲ್ಲಿ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ನಿಗಾ ಪ್ರಕ್ರಿಯೆ ಚುರುಕುಗೊಂಡಿದೆ ಎಂದು ಬ್ಯುರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ (ಬಿಐಎಸ್) ಇಲಾಖೆಯ ಪ್ರಧಾನ ನಿರ್ದೇಶಕ ಪ್ರಮೋದ್ ಕುಮಾರ್ ತಿವಾರಿ ತಿಳಿಸಿದ್ದಾರೆ.

ಯಾವ ಕಳಪೆ ವಸ್ತುಗಳಿಗೆ ತಡೆ?

- ಆಟಿಕೆ ಸಾಮಾನು
- ಸ್ಟೀಲ್ ಬಾರ್
- ಟೆಲಿಕಾಂ ಸಲಕರಣೆಗಳು
- ಗ್ರಾಹಕ ಬಳಕೆಯ ಎಲೆಕ್ಟ್ರಾನಿಕ್ಸ್ ವಸ್ತುಗಳು
- ಕಾಗದ ಮತ್ತು ರಬ್ಬರ್
- ಭಾರೀ ಯಂತ್ರೋಪಕರಣಗಳು
- ಸ್ಟೀಲ್ ಟ್ಯೂಬ್
- ಗಾಜು ಮತ್ತು ಇತರೆ ವಸ್ತುಗಳು.

KAS,FDA,SDA,PSI-
KPSC Technical and Non Technical
ಜ್ಞಾನಗಂಗೋತ್ರಿಯಲ್ಲಿ ಆನ್‌ಲೈನ್ ತರಗತಿಗಳು
ತರಗತಿಗಳಿಗಾಗಿ JG's Online Classes ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ
ಹೆಚ್ಚಿನ ವಿವರಗಳಿಗಾಗಿ– www.iasjnana.com ಗೆ ಭೇಟಿ ನೀಡಿ
ಮೇಲಿನ ಎಲ್ಲಾ ಪರೀಕ್ಷೆಗಳಿಗೆ ಪರೀಕ್ಷಾ ಸರಣಿ
ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಪ್ರಾರಂಭಿಸಲಾಗಿದೆ
ಹೊಸ ಮಾದರಿಯೊಂದಿಗೆ ಪಿಎಸ್‌ಐ ಟೆಸ್ಟ್ ಸರಣಿ ಪ್ರಾರಂಭವಾಗಿದೆ
Contact- Jnanagangothri Academy,
Vijayanagar, B'lure
99163-99276; 080-41547999

ಅಂತರ–ರಾಷ್ಟ್ರೀಯ

1. ಭಾರತಕ್ಕೆ ಫ್ರಾನ್ಸ್ ಸೇನೆ ಬೆಂಬಲ:

- ಭಾರತ–ಚೀನಾ ಗಡಿಯಲ್ಲಿ ಉದ್ಭವಿಸಿರುವ ಸೇನಾ ಸಂಘರ್ಷ ಸಹಜ ವಾತಾವರಣ ಮರುಕಳಿಸದೇ ಮುಂದುವರಿದಿದೆ. ಇದರ ನಡುವೆಯೇ ಫ್ರಾನ್ಸ್ ಅಗತ್ಯ ಬಿದ್ದರೆ ಭಾರತಕ್ಕೆ ಸಶಸ್ತ್ರ ವಡೆಗಳನ್ನು ಕಳುಹಿಸಿಕೊಡುವುದಾಗಿ ಫ್ರಾನ್ಸ್ ರಕ್ಷಣಾ ಸಚಿವೆ ಫ್ಲಾರೆನ್ಸ್ ಪಾರ್ಲೆ ಪತ್ರದಲ್ಲಿ ತಿಳಿಸಿದ್ದಾರೆ.
- ಫ್ರಾನ್ಸ್ ದಶಕಗಳಿಂದಲೂ ಭಾರತೀಯ ವಾಯುಪಡೆಗೆ ಅತ್ಯಾಧುನಿಕ ಯುದ್ಧಾಸ್ತ್ರಗಳನ್ನು ಪೂರೈಸುತ್ತ ಬಂದಿದೆ. ಆರು ರಫೇಲ್ ಯುದ್ಧ ವಿಮಾನಗಳನ್ನು ಜುಲೈ 27ರ ಒಳಗೆ ಹಸ್ತಾಂತರಿಸುವುದಾಗಿಯೂ ವಾಗ್ದಾನ ಮಾಡಿದೆ.
- ಅಮೆರಿಕ, ರಷ್ಯಾ, ಜಪಾನ್ ಮತ್ತು ಐರೋಪ್ಯ ರಾಷ್ಟ್ರಗಳು ಈಗಾಗಲೇ ಭಾರತಕ್ಕೆ ತಮ್ಮ ಬೆಂಬಲ ಸೂಚಿಸಿವೆ.

ಫಲ ನೀಡದ ಮಾತುಕತೆ:

- ಗಡಿ ಶಾಂತಿ ಮರು ಸ್ಥಾಪನೆಯ ಪ್ರಯತ್ನವಾಗಿ ಭಾರತ–ಚೀನಾ ನಡುವೆ ಮತ್ತೊಂದು ಸುತ್ತಿನ ಲೆಫ್ಟಿನೆಂಟ್ ಜನರಲ್‌ಗಳ ಮಟ್ಟದ ಮಾತುಕತೆ ನಡೆಯಿತು. ಸೇನಾ ಜಮಾವಣೆಯನ್ನು ಪ್ರಾಮಾಣಿಕವಾಗಿ ಗಡಿಯಿಂದ ಹಿಂಪಡೆಯುವ, ಅದಕ್ಕಾಗಿ ಅನುಸರಿಸಬೇಕಾದ ರೂಪುರೇಷೆಗಳನ್ನು ಸಿದ್ದಪಡಿಸುವ ಕುರಿತು ಈ ಸಭೆಯಲ್ಲಿ ಸಮಾಲೋಚನೆ ನಡೆಯಿತು.

2. ಅಮೆರಿಕ–ಭಾರತ ರಕ್ಷಣಾ ಬಂಧ ಬಲಪಡಿಸುವ ವಿಧೇಯಕ ಮಂಡನೆ:

- ರಕ್ಷಣಾ ಕ್ಷೇತ್ರದಲ್ಲಿ ಭಾರತ ಮತ್ತು ಅಮೆರಿಕ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಮಹತ್ವದ ವಿಧೇಯಕವೊಂದು ಅಮೆರಿಕ ಸಂಸತ್‌ನ ಮೇಲ್ಮನೆಯಾದ ಸೆನೆಟ್‌ನಲ್ಲಿ ಮಂಡನೆಯಾಗಿದೆ. ಆಡಳಿತಾರೂಢ ರಿಪಬ್ಲಿಕನ್ ಪಕ್ಷದ ಸಂಸದ ಜಾನ್ ಕೊರಿನ್ ಮತ್ತು ಪ್ರತಿಪಕ್ಷ ಡೆಮಾಕ್ರಟಿಕ್ ಪಾರ್ಟಿಯ ಮಾರ್ಕ್ ವಾರ್ನರ್ ಅವರು 'ನ್ಯಾಷನಲ್ ಡಿಫೆನ್ಸ್ ಅಥರೈಸೇಷನ್ ಆಕ್ಟ್ (ಎನ್‌ಡಿಎಎ–2021)' ವಿಧೇಯಕ ಮಂಡಿಸಿದ್ದು, ಇದು ಮುಂದಿನ ದಿನಗಳಲ್ಲಿ ಭಾರತ–ಅಮೆರಿಕ ನಡುವಿನ ರಕ್ಷಣಾ ಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಲಿದೆ.
- ಸಂಸದರಾದ ಮಾರ್ಕ್ ವಾರ್ನರ್ ಹೌಸ್ ಇಂಟೆಲಿಜೆನ್ಸ್ ಸಮಿತಿ ಉಪಾಧ್ಯಕ್ಷರಾಗಿದ್ದರೆ, ಜಾನ್ ಕೊರಿನ್ ರಿಪಬ್ಲಿಕ್ ಪಕ್ಷದ ವಿಪ್ ಆಗಿದ್ದಾರೆ. ಇವರಿಬ್ಬರೂ ಭಾರತ ಕುರಿತು ನೀತಿ ನಿರ್ಧಾರಗಳನ್ನು ಕೈಗೊಳ್ಳುವ ಸಂಸತ್ತಿನ ವಿಶೇಷ ಸಮಿತಿಯ ಪ್ರಮುಖ ಸದಸ್ಯರು ಎಂಬುದು ಗಮನಾರ್ಹ. ಐದನೇ ಪೀಳಿಗೆಯ ಯುದ್ಧ ವಿಮಾನಗಳ ಖರೀದಿ ಹಾಗೂ ಅಭಿವೃದ್ಧಿ ಮತ್ತು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿಗೆ ಜಂಟಿ ಯೋಜನೆಗಳನ್ನು ಕೈಗೊಳ್ಳಲು ಈ ಉದ್ದೇಶಿತ ವಿಧೇಯಕ ನೆರವಾಗಲಿದೆ.
- ಪ್ರಾದೇಶಿಕ ಭದ್ರತೆ ಉತ್ತೇಜಿಸಲು ಮತ್ತು ಸಾಮಾನ್ಯ ಹಿತಾಸಕ್ತಿ ರಕ್ಷಿಸಲು ಭಾರತ, ಜಪಾನ್, ಆಸ್ಟ್ರೇಲಿಯಾ ಹಾಗೂ ಅಮೆರಿಕ ನಡುವಿನ ಕ್ವಾಡ್ರಿಲ್ಯಾಟ್ರಲ್ (ಚತುಷ್ಕೋನ) ವ್ಯೂಹಾತ್ಮಕ ರಕ್ಷಣಾ ಯೋಜನೆಗೂ ಅನುಕೂಲವಾಗಲಿದೆ.

3. ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಡೆಮಾಕ್ರಟಿಕ್ ಪಾರ್ಟಿಯ ಅಭ್ಯರ್ಥಿ 'ಜೋ ಬಿಡೆನ್' ಅವರ ಡಿಜಿಟಲ್ ಚುನಾವಣಾ ಪ್ರಚಾರ ತಂಡದ ಮುಖ್ಯಸ್ಥರಾಗಿ ಭಾರತೀಯ ಮೂಲದ ಅಮೆರಿಕನ್ ಮೇಧಾ ರಾಜ್ ನೇಮಕ

- ಕೋವಿಡ್–19 ಕಾರಣದಿಂದಾಗಿ, ಈ ಬಾರಿ ಅಮೆರಿಕ ಅಧ್ಯಕ್ಷೀಯ ಚುನಾವಣೆ ಪ್ರಚಾರ ಸಂಪೂರ್ಣ ಡಿಜಿಟಲ್ ವೇದಿಕೆಗಳಲ್ಲೇ ನಡೆಯಲಿರುವ ಹಿನ್ನೆಲೆಯಲ್ಲಿ, ಮೇಧಾ ಅವರ ಪಾತ್ರ ಮಹತ್ವ ಪಡೆದಿದೆ. ಮೇಧಾ ರಾಜ್ ಅವರು ಸಾಮಾಜಿಕ ಮಾಧ್ಯಮಗಳಿಂದ ಹಿಡಿದು ಎಲ್ಲಾ ಡಿಜಿಟಲ್ ವಿಭಾಗಗಳಲ್ಲೂ ಜೋ ಬಿಡೆನ್ ಕುರಿತು ಪ್ರಚಾರ ನಡೆಸಿ ಮತದಾರರ ಮನ ಗೆಲ್ಲುವ ಹೊಣೆ ಹೊತ್ತಿದ್ದಾರೆ.

4. 15 ದೇಶಗಳಿಗೆ ಯೂರೋಪ್ ಬಾಗಿಲು ಮುಕ್ತ :

- **ಕೋವಿಡ್–19** ಕಾರಣದಿಂದಾಗಿ ಕಳೆದ ನಾಲ್ಕು ತಿಂಗಳಿಂದ ನಲುಗಿದ್ದ ಯೂರೋಪ್ ರಾಷ್ಟ್ರಗಳು ಈಗ ಸಂಪೂರ್ಣ ಚೇತರಿಸಿಕೊಂಡಿದ್ದು, ಭಾರತ ಮತ್ತು ಚೀನಾ ಹೊರತು ಪಡಿಸಿ ವಿಶ್ವದ 15 ದೇಶಗಳ ಪ್ರವಾಸಿಗರಿಗೆ ತಮ್ಮ ಬಾಗಿಲನ್ನು ಮುಕ್ತಗೊಳಿಸಿವೆ. ಕೊರೋನಾ ಹಾವಳಿಯಿಂದ ಮುಕ್ತವಾಗಿರುವ ಅಥವಾ ಸಂಪೂರ್ಣವಾಗಿ ಗುಣಮುಖ ಹೊಂದಿರುವ 15 ದೇಶಗಳ ಪ್ರವಾಸಿಗರನ್ನು ಒಳ ಬಿಟ್ಟುಕೊಳ್ಳಲು ಯೂರೋಪ್ ಒಕ್ಕೂಟದ ಸಭೆ ನಿರ್ಧರಿಸಿದೆ. ಜುಲೈ 1 ರಿಂದ ಈ ಹೊಸ ನಿಯಮ ಚಾಲ್ತಿಗೆ ಬರಲಿದೆ. ಭಾರತ, ಇಂಗ್ಲೆಂಡ್, ರಷ್ಯಾ, ಬ್ರೆಜಿಲ್, ಚೀನಾ ಸೇರಿದಂತೆ ಹಲವು ರಾಷ್ಟ್ರಗಳನ್ನು ಈ ಪಟ್ಟಿಯಿಂದ ದೂರ ಇರಿಸಲಾಗಿದೆ.

5. ಚೀನಾದಲ್ಲಿ ಮತ್ತೊಂದು ವೈರಸ್ ಹಾವಳಿ:

- ಜಗತ್ತೇ ಕೊರೋನಾ ವೈರಸ್ ಸೋಂಕಿನಿಂದ ತತ್ತರಿಸುತ್ತಿರುವ ಸಮಯದಲ್ಲಿ ಚೀನಾದಲ್ಲಿ ಮತ್ತೊಂದು ಅಪಾಯಕಾರಿ ವೈರಸ್ ಕಾಣಿಸಿಕೊಂಡಿದೆ. ಹಂದಿಗಳೇ ವೈರಸ್ ವಾಹಕಗಳಾಗಿದ್ದು, ಮನುಷ್ಯನಿಗೂ ಈ ವೈರಸ್ ಸೋಂಕು ತಗುಲಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.
- ಈ ವೈರಸ್‌ಗೆ ವಿಜ್ಞಾನಿಗಳು 'ಜಿ4 ಇಎ ಎಚ್1ಎನ್1' ಎಂದು ಹೆಸರಿಸಿದ್ದಾರೆ. ಹಂದಿ ಸಾಕಾಣಿಕೆ ಕಾರ್ಮಿಕರ ಬಗ್ಗೆ

2011– 2018 ನಡುವೆ ಅಧ್ಯಯನ ನಡೆಸಿ, ಸಂಗ್ರಹಿಸಿದ ಅಂಕಿ–ಅಂಶಗಳನ್ನು ಪರಿಶೀಲಿಸಿದಾಗ ಈ ವೈರಸ್ ಅವರಲ್ಲಿ ಪತ್ತೆಯಾಗಿದ್ದು ಕಂಡುಬರುತ್ತದೆ ಎಂದು ಪ್ರೊಸೀಡಿಂಗ್ಸ್ ಆಫ್ ದಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ನಿಯತಕಾಲಿಕದಲ್ಲಿ ಪ್ರಕಟವಾದ ವರದಿಯಲ್ಲಿ ಹೇಳಲಾಗಿದೆ.

KAS,FDA,SDA,PSI-
KPSC Technical and Non Technical
ಜ್ಞಾನಗಂಗೋತ್ರಿಯಲ್ಲಿ ಆನ್‌ಲೈನ್ ತರಗತಿಗಳು
ತರಗತಿಗಳಿಗಾಗಿ JG's Online Classes ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ
ಹೆಚ್ಚಿನ ವಿವರಗಳಿಗಾಗಿ– www.iasjnana.com ಗೆ ಭೇಟಿ ನೀಡಿ
ಮೇಲಿನ ಎಲ್ಲಾ ಪರೀಕ್ಷೆಗಳಿಗೆ ಪರೀಕ್ಷಾ ಸರಣಿ
ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಪ್ರಾರಂಭಿಸಲಾಗಿದೆ
ಹೊಸ ಮಾದರಿಯೊಂದಿಗೆ ಪಿಎಸ್‌ಐ ಟೆಸ್ಟ್ ಸರಣಿ ಪ್ರಾರಂಭವಾಗಿದೆ
Contact- Jnanagangothri Academy,
Vijayanagar, B'lure
99163-99276; 080-41547999

6. ಕೋವಿಡ್–19 ಎರಡನೇ ಅಲೆ : ಪೂರ್ಣಾವಧಿ ಉದ್ಯೋಗ ಕುತ್ತು

- ಪ್ರಸಕ್ತ ವರ್ಷದ ದ್ವಿತೀಯಾರ್ಧದಲ್ಲಿ ಒಂದು ವೇಳೆ ಕೋವಿಡ್-19 ಪಿಡುಗಿನ ಎರಡನೇ ಅಲೆ ಕಂಡು ಬಂದರೆ ವಿಶ್ವದಾದ್ಯಂತ 2020ರ ನಾಲ್ಕನೇ ತ್ರೈಮಾಸಿಕದಲ್ಲಿ ಶೇ. 11.9ರಷ್ಟು ಕೆಲಸದ ಅವಧಿ ನಷ್ಟವಾಗಲಿದ್ದು ಇದು 34 ಕೋಟಿ ಪೂರ್ಣಾವಧಿ ಉದ್ಯೋಗಗಳ ನಷ್ಟಕ್ಕೆ ಸಮನಾಗಿರುತ್ತದೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ಎಚ್ಚರಿಸಿದೆ.
- 2020ರಲ್ಲಿ ಜಾಗತಿಕ ಕಾರ್ಮಿಕ ಮಾರುಕಟ್ಟೆಯ ಪುನಶ್ಚೇತನದ (ಉದ್ಯೋಗ ಅವಕಾಶಗಳ ಹೆಚ್ಚಳ) ಅನಿಶ್ಚಿತತೆ ಮುಂದುವರೆಯಲಿದೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ 'ಕೋವಿಡ್–19 ಮತ್ತು ಕೆಲಸದ ಜಗತ್ತಿನ ಮೇಲಿನ ನಿಗಾ' ಕುರಿತ ವರದಿಯಲ್ಲಿ ತಿಳಿಸಲಾಗಿದೆ.
- 2020ರ ಮೊದಲಾರ್ಧದಲ್ಲಿನ ವಿಶ್ವದಾದ್ಯಂತ ಕೆಲಸದ ಗಂಟೆಗಳ ನಷ್ಟವು ಈ ಮೊದಲಿನ ಅಂದಾಜಿಗಿಂತ ತೀವ್ರವಾಗಿ ಹೆಚ್ಚಳಗೊಂಡಿದೆ. ದ್ವಿತೀಯಾರ್ಧದಲ್ಲಿ ಆರ್ಥಿಕ ಪರಿಸ್ಥಿತಿಯಲ್ಲಿ ಎಷ್ಟೇ ಸುಧಾರಣೆ ಕಂಡು ಬಂದರೂ, ಪಿಡುಗಿನ ಮುಂಚಿನ ಅವಧಿಯ ಹಂತಕ್ಕೆ ತಲುಪಲು ಸಾಧ್ಯವಾಗುವುದಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.
- ನಿರಾಶಾದಾಯಕ ಪರಿಸ್ಥಿತಿ ಮಧ್ಯೆಯೇ, ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧವು ಭಾರಿ ಸವಾಲಿನಿಂದ ಕೂಡಿರಲಿದೆ. ಮೊದಲಾರ್ಧದಲ್ಲಿನ ಸಂಕಷ್ಟದ ಪರಿಸ್ಥಿತಿಯಿಂದ ಅನೇಕ ಪಾಠ ಕಲಿತು ಆರ್ಥಿಕ ಚಟುವಟಿಕೆಗಳಿಗೆ ಸಾಕಷ್ಟು ಉತ್ತೇಜನ ದೊರೆತಿದೆ. ಆದರೂ, ವರ್ಷಾರ್ಧದಲ್ಲಿ, 2019ರ ನಾಲ್ಕನೇ ತ್ರೈಮಾಸಿಕದಲ್ಲಿನ ಉದ್ಯೋಗ ಅವಕಾಶಗಳಿಗೆ ಹೋಲಿಸಿದರೆ, ವಿಶ್ವದಾದ್ಯಂತ ಶೇ. 11.9ರಷ್ಟು ಕೆಲಸದ ಗಂಟೆಗಳು ಇಲ್ಲವೆ 34 ಕೋಟಿ ಪೂರ್ಣಾವಧಿ ಉದ್ಯೋಗಗಳು ನಷ್ಟವಾಗಲಿವೆ.
- ಕೋವಿಡ್ ಪಿಡುಗಿನ ಎರಡನೇ ಅಲೆ ಕಂಡು ಬರುವ ಸಾಧ್ಯತೆ ಮತ್ತು ಮತ್ತೆ ಜಾರಿಗೆ ಬರಲಿರುವ ಆರ್ಥಿಕ ಚಟುವಟಿಕೆಗಳ ಮೇಲಿನ ನಿರ್ಬಂಧಗಳಿಂದಾಗಿ ಜಾಗತಿಕ ಅರ್ಥ ವ್ಯವಸ್ಥೆಯ ಚೇತರಿಕೆಯು ಮುಂಬರುವ ದಿನಗಳಲ್ಲಿ ಗಮನಾರ್ಹವಾಗಿ ನಿಧಾನಗೊಳ್ಳಲಿದೆ.
- ಒಂದು ವೇಳೆ ಕಾರ್ಮಿಕರ ಚಟುವಟಿಕೆಗಳು ತೀವ್ರವಾಗಿ ಚೇತರಿಕೆ ದಾಖಲಿಸಿ ಅದರಿಂದ ಬೇಡಿಕೆ ಹೆಚ್ಚಳವಾಗಿ ಉದ್ಯೋಗ ಅವಕಾಶಗಳು ಸೃಷ್ಟಿಯಾಗುವ ಅಸಾಧಾರಣ ಆಶಾದಾಯಕ ಸಂದರ್ಭದಲ್ಲಿಯೂ ಕೆಲಸದ ಗಂಟೆಗಳ ಜಾಗತಿಕ ನಷ್ಟವು ಶೇ. 1.2ಕ್ಕೆ (3.4 ಕೋಟಿ ಪೂರ್ಣಾವಧಿ ಉದ್ಯೋಗ ನಷ್ಟ) ಇಳಿಯಲಿದೆ.
- ಮುಂದಿನ ಆರು ತಿಂಗಳಲ್ಲಿ ಚೇತರಿಕೆಯ ಮರು ಸಾಧ್ಯತೆಗಳ ಪೈಕಿ, ಯಾವುದೇ ಸಂದರ್ಭದಲ್ಲಿಯೂ ಉದ್ಯೋಗ ಮಾರುಕಟ್ಟೆಯಲ್ಲಿ ಲಾಕ್‌ಡೌನ್ ಮುಂಚಿನ ಪರಿಸ್ಥಿತಿ ಕಂಡು ಬರುವುದಿಲ್ಲ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಹಾ ನಿರ್ದೇಶಕ ಗಾಯ್ ರೈಡರ್ ಹೇಳಿದ್ದಾರೆ.
- ಉದ್ಯೋಗ ಅವಕಾಶಗಳಲ್ಲಿ ಸ್ಥಿರತೆ ಸಾಧಿಸಲು ಆರೋಗ್ಯ, ಆರ್ಥಿಕತೆ ಮತ್ತು ಸಾಮಾಜಿಕ ವಲಯಗಳಲ್ಲಿ ಸಮತೋಲನ ಸಾಧಿಸುವ ಅಗತ್ಯ ಇದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮಹಿಳಾ ಉದ್ಯೋಗಿಗಳ ಸಂಕಷ್ಟ:

- ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ದುಡಿಯುವ ವಸತಿ, ಆಹಾರ, ಮಾರಾಟ ಮತ್ತು ತಯಾರಿಕೆ ಕ್ಷೇತ್ರಗಳು ಕೋವಿಡ್–19 ಪಿಡುಗಿನಿಂದ ತೀವ್ರವಾಗಿ ಬಾಧಿತವಾಗಿವೆ. ವಿಶ್ವದಾದ್ಯಂತ ಉದ್ಯೋಗ ನಿರತ ಮಹಿಳೆಯರಲ್ಲಿ ಶೇ. 40ರಷ್ಟು (51 ಕೋಟಿ) ಈ ನಾಲ್ಕು ವಲಯಗಳಲ್ಲಿ ದುಡಿಯುತ್ತಿದ್ದಾರೆ.
- ಆರೋಗ್ಯ, ಸಮಾಜ ಸೇವಾ ವಲಯ ಮತ್ತು ಮನೆಗೆಲಸದಲ್ಲಿ ದುಡಿಯುವ ಮಹಿಳೆಯರು ಸೋಂಕಿಗೆ ಗುರಿಯಾಗುವ, ವರಮಾನಕ್ಕೆ ಎರವಾಗುವ ಅಪಾಯ ಎದುರಿಸುತ್ತಿದ್ದಾರೆ.

7. ದಕ್ಷಿಣ ಚೀನಾ ಸಮುದ್ರಕ್ಕೆ ಅಮೆರಿಕ ಯುದ್ಧ ನೌಕೆಗಳು ರವಾನೆ:



- ಮಿತ್ರ ರಾಷ್ಟ್ರಗಳೊಂದಿಗೆ ಸಮರಾಭ್ಯಾಸಕ್ಕಾಗಿ ದಕ್ಷಿಣ ಚೀನಾ ಸಮುದ್ರಕ್ಕೆ ಅಮೆರಿಕವು ಎರಡು ಅಣುಶಕ್ತಿ ಚಾಲಿತ ವಿಮಾನ ವಾಹಕ ಯುದ್ಧನೌಕೆಗಳನ್ನು ಕಳುಹಿಸಿಕೊಟ್ಟಿದೆ.
- ಭಾರತ ಸೇರಿದಂತೆ ಸುತ್ತಲಿನ ದೇಶಗಳೊಂದಿಗೆ ಸಂಘರ್ಷಕ್ಕಿಳಿದಿರುವ ಚೀನಾಕ್ಕೆ ಅಮೆರಿಕ ಈ ಮೂಲಕ ಸ್ಪಷ್ಟ ಸಂದೇಶ ರವಾನಿಸಿದೆ.
- ಯುಎಸ್ಎಸ್ ನಿಮಿಟ್ಸ್ ಮತ್ತು ಯು.ಎಸ್.ಎಸ್. ರೊನಾಲ್ ರೀಗನ್ ಯುದ್ಧನೌಕೆಗಳು ತೈವಾನ್ ಮತ್ತು ಲುಝೊನ್ ದ್ವೀಪಗಳ ನಡುವಣ ಲುಝೊನ್ ಕೊಲ್ಲಿಯನ್ನು ದಾಟಿದೆ ಎಂದು ಅಮೆರಿಕದ ಮಾಧ್ಯಮಗಳು ವರದಿ ಮಾಡಿವೆ.

8. ವಿಶ್ವ ಆರೋಗ್ಯ ಸಂಸ್ಥೆಗೆ ವಿದಾಯ ಹೇಳಿದ ಅಮೆರಿಕ:

- ವಿಶ್ವಸಂಸ್ಥೆಯು ಸಂಸ್ಥೆಯು ತನ್ನ ನಿಯಮಾವಳಿ ಪ್ರಕಾರ ನಿಸ್ಪಕ್ಷಪಾತವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಚೀನಾದ ಪಕ್ಷಪಾತಿಯಾಗಿ ವರ್ತಿಸುತ್ತಿದೆ. ಕಳೆದ ಡಿಸೆಂಬರ್ ನಲ್ಲೇ ಚೀನಾದ ವುಹಾನ್‌ನಲ್ಲಿ ಕೊರೋನಾ ಪತ್ತೆಯಾಗಿತ್ತು. ಆದರೆ ಅದನ್ನು ಡಬ್ಲ್ಯು.ಎಚ್.ಒ ಗೆ ತಿಳಿಸಲು ತಡಮಾಡಿತು. ನಂತರವೂ ಡಬ್ಲ್ಯು.ಎಚ್.ಒ ವಿಶ್ವದ ಮುಂದೆ ಇದರ ವಾಸ್ತವ ಚಿತ್ರಣವನ್ನು ಬಿಡಿಸಿಡಲೇ ಇಲ್ಲ.
- ಇದು ಮಾನವರಿಂದ ಮಾನವರಿಗೆ ಹರಡುವುದಿಲ್ಲ ಎಂದು ಚೀನಾ ಹೇಳಿದ್ದನ್ನೇ ತಾನೂ ಸಾರಿತು.
- ಜನವರಿ ಅಂತ್ಯಕ್ಕೆ ಸೋಂಕು ಬಿಗಡಾಯಿಸಲು ಆರಂಭಿಸಿದ ಬಳಿಕ ಇದು ಸಾಂಕ್ರಾಮಿಕ ಎಂದು ಒಪ್ಪಿಕೊಂಡಿತು. ಮೊದಲು ಇದೊಂದು 'ಎಂಡೆಮಿಕ್' (ಸೋಂಕು) ಎಂದಿತು. ನಂತರ 'ಪ್ಯಾಂಡೆಮಿಕ್' (ಸಾಂಕ್ರಾಮಿಕ) ಎಂದು ಒಪ್ಪಿಕೊಂಡಿತು.
- ಚೀನಾದ ಮೇಲೆ ಶಿಸ್ತುಕ್ರಮ ಕೈಗೊಳ್ಳಬೇಕು ಎಂಬ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯದ ಮಾತುಗಳನ್ನು ಮಾನ್ಯ ಮಾಡಲಿಲ್ಲ. ಡಬ್ಲ್ಯು.ಎಚ್.ಒ ಕಡೆಯಿಂದ ತನಿಖೆ ನಡೆಸಬೇಕು ಎಂದಾಗಲೂ ಅದನ್ನು ದೃಢವಾಗಿ ಚೀನಾದ ಮೇಲೆ ಒತ್ತಾಯಿಸಲಿಲ್ಲ. ಹೀಗಾಗಿ ಚೀನಾ ಪಕ್ಷಪಾತಿಯಾದ ಡಬ್ಲ್ಯು.ಎಚ್.ಒ. ದಲ್ಲಿ ತಾನು ಯಾಕಿರಬೇಕು ಎಂದಿದೆ.

ಡಬ್ಲ್ಯು.ಎಚ್.ಒ ಇದಕ್ಕೆ ನೀಡಿದ ಸಮರ್ಥನೆ:

- ಸೋಂಕಿನ ಬಗ್ಗೆ ವಿಜ್ಞಾನಿಗಳು ಪ್ರಯೋಗಾತ್ಮಕ ಪ್ರತಿಪಾದನೆಯ ಮೂಲಕ ಎನನ್ನು ಹೇಳುತ್ತಾರೋ ಅದನ್ನೇ ವಿಶ್ವ ಆರೋಗ್ಯ ಸಂಸ್ಥೆ ಮಾನ್ಯ ಮಾಡುತ್ತದೆ. ಅದರಲ್ಲಿ ಅಮೆರಿಕ ಸೇರಿದಂತೆ ಎಲ್ಲ ದೇಶಗಳ ತಜ್ಞರೂ ಇದ್ದಾರೆ.
- ಡಬ್ಲ್ಯು.ಎಚ್.ಒ ಎಲ್ಲ ದೇಶ ಸೇರಿದ, ಎಲ್ಲ ದೇಶಗಳ ದೇಣಿಗೆಯಿಂದ ನಡೆಯುವ ಸ್ವಾಯತ್ತ ಸಂಸ್ಥೆ. ಕೊರೋನಾ ಸೋಂಕಿನ ಗಂಭೀರತೆ ಅರಿವಾದ ಕೂಡಲೇ ಅದರ ಕುರಿತ ಮಾರ್ಗಸೂಚಿಗಳನ್ನು ಸಿದ್ದಪಡಿಸಿ ಎಲ್ಲ ದೇಶಗಳಿಗೆ ನೀಡಲಾಗಿದೆ. ಅದರ ಅನುಷ್ಠಾನ ಆಯಾ ದೇಶಗಳಿಗೆ ಸೇರಿದ್ದು.ಇಲ್ಲಿ ಚೀನಾ ಪರ, ಅಮೆರಿಕ ವಿರೋಧ ಎಂಬುದೇನಿಲ್ಲ – ಇದು ಡಬ್ಲ್ಯು.ಎಚ್.ಒ.ದ ಸಮರ್ಥನೆ.

ಡಬ್ಲ್ಯು.ಎಚ್.ಒದ ಸಾಧನೆಯೇನು

- ಬಡ ಹಾಗೂ ದುರ್ಬಲ ಆರೋಗ್ಯ ಸನ್ನಿವೇಶಗಳಿರುವ ಹಲವು ದೇಶಗಳಲ್ಲಿ ಸಾರ್ವಜನಿಕ ಆರೋಗ್ಯ ಸ್ಥಿತಿ ಉತ್ತಮಗೊಳ್ಳುವಂತೆ ಹಲವು ಕಾರ್ಯಕ್ರಮಗಳನ್ನು ಡಬ್ಲ್ಯು.ಎಚ್.ಒ ಕೈಗೊಂಡಿದೆ.
- ಉದಾಹರಣೆಗೆ ಆಫ್ರಿಕ ಹಾಗೂ ದಕ್ಷಿಣ ಅಮೆರಿಕದ ದೇಶಗಳಲ್ಲಿ ಎಚ್.ಐ.ವಿ ಹರಡತೊಡಗಿದಾಗ ಅದರ ಬಗ್ಗೆ ಅರಿವು ಮೂಡಿಸುವ ಹಾಗೂ ತಡೆಯುವ ಕೆಲಸ ಮಾಡಿತು.
- ಸಿಡುಬು ರೋಗವನ್ನು ನಿರ್ಮೂಲನ ಮಾಡುವಲ್ಲಿ ಡಬ್ಲ್ಯು.ಎಚ್.ಒ ಕೊಡುಗೆಯಿದೆ. ಎರಡು ದಶಕಗಳ ನಿರಂತರ ಹೋರಾಟದ ಬಳಿಕ 1979ರಲ್ಲಿ 'ವಿಶ್ವಸಿಡುಬು ಮುಕ್ತ' ಎಂದು ಆರೋಗ್ಯ ಸಂಸ್ಥೆ ಘೋಷಿಸಿತು. ಮಲೇರಿಯಾ, ಕ್ಷಯ, ಏಡ್ಸ್ ಮುಂತಾದ ಕಾಯಿಲೆಗಳಿಗೆ ಔಷಧ, ಲಸಿಕೆ ಸಿದ್ಧಪಡಿಸಲು ನೆರವಾಯಿತು.
- ದಡಾರದ ಕುರಿತು ಡಬ್ಲ್ಯು.ಎಚ್.ಒ ನಡೆಸಿದ ಹೋರಾಟದ ಫಲವಾಗಿ ಅದರಿಂದಾಗುವ ಸಾವುಗಳು 68% ರಷ್ಟು ಇಳಿದಿವೆ.
- 1988ರಲ್ಲಿ ಪೋಲಿಯೋ ನಿರ್ಮೂಲನ ಕಾರ್ಯಕ್ರಮಗಳನ್ನು ಆರಂಭಿಸಿದ್ದು, ಅದರ ಲಸಿಕೆ ಕಾರ್ಯಕ್ರಮಗಳು ಈಗಲೂ ನಡೆಯುತ್ತಿವೆ.
- ಎಬೋಲಾ ರೋಗಕ್ಕೆ ಲಸಿಕೆ ಆವಿಷ್ಕರಿಸಲು ನೆರವಾಗಿದೆ.

ಡಬ್ಲ್ಯು.ಎಚ್.ಒ ಟೀಮ್

- ಪ್ರಸ್ತುತ ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷತೆಯನ್ನು ಭಾರತ ವಹಿಸಿದೆ. ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಇದರ ಅಧ್ಯಕ್ಷರಾಗಿದ್ದಾರೆ.
- ವಿಜ್ಞಾನಿ ಮೈಕೆಲ್ ರಾನ್, ಆರೋಗ್ಯ ತುರ್ತು ಪರಿಸ್ಥಿತಿ ಕಾರ್ಯಕ್ರಮದ ಕಾರ್ಯಕಾರಿ ನಿರ್ದೇಶಕರು.
- ಭಾರತೀಯ ವಿಜ್ಞಾನಿ ಸೌಮ್ಯ ಸ್ವಾಮಿನಾಥನ್ ಮುಂತಾದವರು ಮುಖ್ಯ ವಿಜ್ಞಾನಿಗಳ ಬಳಗದಲ್ಲಿದ್ದಾರೆ.

9. ಸೇನೆ ವಾಪಸ್‌ಗೆ ಬದ್ಧವೆಂದ ಚೀನಾ:

- ವಾಸ್ತವ ಗಡಿ ರೇಖೆ (ಎಲ್.ಎ.ಸಿ) ಬಳಿ ಸೈನಿಕರ ಸಂಘರ್ಷವನ್ನು ಸಂಪೂರ್ಣ ತಪ್ಪಿಸಲು ಬದ್ಧವಾಗಿರುವುದಾಗಿ ಭಾರತ ಮತ್ತು ಚೀನಾ ಪುನುರಚ್ಚರಿಸಿವೆ.
- ಭಾರತ–ಚೀನಾ ಗಡಿ ವ್ಯವಹಾರಗಳ ಕುರಿತಾದ 'ಸಲಹೆ ಮತ್ತು ಸಮನ್ವಯಕ್ಕಾಗಿ ಕಾರ್ಯಕಾರಿ ವ್ಯವಸ್ಥೆಯ 16ನೇ ಸಭೆಯಲ್ಲಿ ಈ ಒಮ್ಮತ ವ್ಯಕ್ತಪಡಿಸಲಾಗಿದೆ.
- 'ದ್ವಿಪಕ್ಷೀಯ ಸಂಬಂಧಗಳ ಸಮಗ್ರ ಅಭಿವೃದ್ಧಿಗೆ ಗಡಿ ಪ್ರದೇಶಗಳಲ್ಲಿ ಶಾಂತಿ ಅತ್ಯಗತ್ಯ', ಎಂದು ಸಭೆಯಲ್ಲಿ ಉಭಯ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದಾರೆ.
- ಮಾತುಕತೆಯ ಭಾಗವಾಗಿ ಗಲ್ವಾನ್ ಕಣಿವೆ, ಗೊಗ್ರಾ ಮತ್ತು ಹಾಟ್‌ಸ್ಪ್ರಿಂಗ್ ಈ ಮೂರೂ ಸಂಘರ್ಷದ ಪ್ರದೇಶಗಳಲ್ಲಿ ಭಾರತ ಮತ್ತು ಚೀನಾ ಎರಡೂ ಕಡೆಯಿಂದ ಬಫರ್ ಜೋನ್‌ಗಳನ್ನು ನಿರ್ಮಿಸಲಾಗಿದೆ. ಫಿಂಗರ್ 4 ಪ್ರದೇಶದಿಂದಲೂ ಕ್ರಮೇಣ ಯೋಧರ ಸಂಖ್ಯೆ ಇಳಿಮುಖವಾಗುತ್ತಿದೆ.

10. ಕೊರೋನಾ ಆತಂಕದ ನಡುವೆ ಸಿಂಗಾಪುರದಲ್ಲಿ ಮತದಾನ:



- ಕೊರೋನಾ ಭೀತಿ ನಡುವೆಯೂ ಫೇಸ್ ಮಾಸ್ಕ್ ಗಳು, ಗ್ಲೌಸ್‌ಗಳನ್ನು ತೊಟ್ಟು ಸಾರ್ವತ್ರಿಕ ಚುನಾವಣೆಯಲ್ಲಿ ಸಿಂಗಾಪುರ ಜನತೆ ಹುರುಪಿನಿಂದ ಮತದಾನದಲ್ಲಿ ಭಾಗವಹಿಸಿದ್ದಾರೆ.
- ಸಮೀಕ್ಷೆಗಳ ಪ್ರಕಾರ ಆಡಳಿತಾರೂಢ ಪೀಪಲ್ಸ್ ಆ್ಯಕ್ಷನ್ ಪಾರ್ಟಿ (ಪಿ.ಎ.ಪಿ) ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ.

11. ಚೀನಾ ಕೊರೋನಾ ಗಂಭೀರತೆಯ ಸತ್ಯ ಮುಚ್ಚಿಟ್ಟಿದ್ದು ನಿಜ ಎಂದು ಹಾಂಕಾಂಗ್‌ನ ವೈರಾಣು ತಜ್ಞೆ 'ಲೀ ಮೆಂಗ್ ಯಾನ್' ಹೇಳಿದ್ದಾರೆ

- ಕೊರೋನಾದ ಗಂಭೀರತೆ ಗೊತ್ತಿದ್ದರೂ ಚೀನಾ ಜಾಗತಿಕ ಸಮುದಾಯದಿಂದ ಅದನ್ನು ಮುಚ್ಚಿಟ್ಟಿದ್ದು ನಿಜ ಎಂದು ಹಾಂಕಾಂಗ್ ಮೂಲದ ವೈರಾಣು ತಜ್ಞೆ ಲೀ ಮೆಂಗ್ ಯಾನ್ ಹೇಳಿದ್ದಾರೆ.
- ಸದ್ಯ ಅಮೆರಿಕದಲ್ಲಿರುವ ಲೀ ಅವರು 2019ರ ಡಿಸೆಂಬರ್‌ನಲ್ಲಿಯೇ ಚೀನಾದಲ್ಲಿ ಕೊರೋನಾ ಸಾಂಕ್ರಾಮಿಕ ಸ್ವರೂಪ ತಳೆದಿತ್ತು. ಆ ಬಗ್ಗೆ ನಾನು ನಡೆಸುತ್ತಿದ್ದ ಸಂಶೋಧನೆಯನ್ನು ಉದ್ದೇಶಪೂರ್ವಕವಾಗಿ ಹಿರಿಯ ಸಂಶೋಧಕರು ನಿರ್ಲಕ್ಷಿಸುತ್ತಿದ್ದರು.
- ನಾನು ಕೆಲಸ ಮಾಡುತ್ತಿದ್ದ ವಿಶ್ವವಿದ್ಯಾಲಯವೊಂದರ ಪ್ರಯೋಗಾಲಯಕ್ಕೆ ವಿಶ್ವ ಆರೋಗ್ಯ ಸಂಸ್ಥೆಯ ಮಾನ್ಯತೆ ಇತ್ತು. ಈ ಪ್ರತಿಷ್ಠೆ ಹಾಳಾಗುವುದು ಹಿರಿಯರಿಗೆ ಬೇಡವಾಗಿತ್ತು. ಜತೆಗೆ ಕೊರೋನಾ ಬಗ್ಗೆ ಗೌಪ್ಯವಾಗಿರುವಂತೆ ಅವರ ಮೇಲೆ ಚೀನಾ ಸರ್ಕಾರದಿಂದ ಒತ್ತಡವಿತ್ತು.
- ಕೊರೋನಾ ಸಂಶೋಧನೆ ಹಿಂದೆ ಬಿದ್ದ ಕಾರಣ ಚೀನಾದಿಂದ ಬಂಧನಕ್ಕೆ ಒಳಗಾಗುವ ಸುಳಿವು ಸಿಕ್ಕ ಹಿನ್ನೆಲೆಯಲ್ಲಿ ಏ. 28 ರಂದು ಯಾನ್, ಹಾಂಕಾಂಗ್ ತೊರೆದು ಅಮೆರಿಕಕ್ಕೆ ತೆರಳಿದ್ದಾರೆ.

12. ವಿಶ್ವದ ನಂ.1, ನಂ.2 ಶ್ರೀಮಂತ ಮಹಿಳೆಯರು:

- ಫ್ರೆಂಚ್ ಲೇಖಕಿ ಫ್ರಾಂಕೋಯಿಸ್ ಬೆಟೆನ್ ಕೋರ್ಟ್ ಮೇಯರ್ಸ್ ಅವರು ವಿಶ್ವದ ಶ್ರೀಮಂತ ಮಹಿಳೆ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
- ತಾಯಿಯ ಆಸ್ತಿಗೆ ಉತ್ತರಾಧಿಕಾರಿಯಾಗಿರುವ ಇವರ ಒಟ್ಟು ಸಂಪತ್ತು 65.1 ಶತಕೋಟಿ ಡಾಲರ್ (4.94 ಲಕ್ಷ ಕೋಟಿ ರೂ.),
- ಅಮೆಜಾನ್ ಮಾಲೀಕ ಜೆಫ್ ಬಿಟೋಸ್‌ಗೆ ವಿಚ್ಛೇದನ ನೀಡಿ ದೊಡ್ಡ ಮೊತ್ತದ ಪರಿಹಾರ ಮೊತ್ತ ಪಡೆದಿದ್ದ ಮ್ಯಾಕೆಂಜಿ

ಬಿಟೋಸ್ 63.2 ಶತಕೋಟಿ ಡಾಲರ್ ಸಂಪತ್ತನ್ನು ಹೊಂದಿದ್ದಾರೆ. ಇವರು ಅಮೆರಿಕಾದ ಕಾದಂಬರಿಗಾರ್ತಿ ಮತ್ತು ಉದಾರಿಯಾಗಿಯೂ ಪರಿಚಿತರು.

- ಉದ್ಯಮಿಗಳಾದ ಆಲೈಸ್ ವಾಲ್ಟನ್ 57.1 ಶತಕೋಟಿ ಡಾಲರ್, ಜೂಲಿಯಾ ಕೋಚ್ 51.4 ಶತಕೋಟಿ ಡಾಲರ್ ಸಂಪತ್ತನ್ನು ಹೊಂದಿದ್ದಾರೆ. ವಿಶ್ವದ ಸಿರಿವಂತ ಮಹಿಳೆಯರಲ್ಲಿ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿದ್ದಾರೆ. ಸಿರಿವಂತ ಕುಟುಂಬದ ಉತ್ತರಾಧಿಕಾರಿ ಜಾಕ್ವೆಲಿನ್ ಮಾರ್ಸ್ 37.2 ಶತಕೋಟಿ ಡಾಲರ್ ಸಂಪತ್ತಿನ ಒಡತಿ.

13. ಆನ್‌ಲೈನ್ ತರಗತಿಗಳಿಂದ ಭಾರತದ ವಿದ್ಯಾರ್ಥಿಗಳಿಗೆ ಆತಂಕ:

- ಕ್ಯಾಂಪಸ್‌ನಲ್ಲೇ ಬೊಧನೆ ಆರಂಭಿಸುವ ಬದಲು ವಿಶ್ವವಿದ್ಯಾಲಯಗಳು ಆನ್‌ಲೈನ್ ತರಗತಿಗಳನ್ನು ಮುಂದುವರಿಸಿದರೆ ಅಲ್ಲಿ ಕಲಿಯುತ್ತಿರುವ ವಿದೇಶಿ ವಿದ್ಯಾರ್ಥಿಗಳು ತಮ್ಮ ದೇಶಕ್ಕೆ ಮರಳಬೇಕಾಗುತ್ತದೆ ಅಥವಾ ಗಡಿಪಾರಾಗಬೇಕಾಗುತ್ತದೆ ಎಂದು ಅಮೆರಿಕದ ವಲಸೆ ಪ್ರಾಧಿಕಾರ ಹೇಳಿದೆ.
- ಇದರಿಂದಾಗಿ ಅಮೆರಿಕದಲ್ಲಿ ಶಿಕ್ಷಣ ಪಡೆಯುತ್ತಿರುವ ಭಾರತದ ಸಾವಿರಾರು ವಿದ್ಯಾರ್ಥಿಗಳಿಗೆ ಸಂಕಷ್ಟ ಎದುರಾಗಿದೆ. ಅಮೆರಿಕವು ಒಂದು ವೇಳೆ ಇಂಥ ಕ್ರಮ ಕೈಗೊಂಡರೆ ನಾವು ಮಧ್ಯದಲ್ಲೇ ಶಿಕ್ಷಣವನ್ನು ಕೊನೆಗೊಳಿಸಿ ಸ್ವದೇಶಕ್ಕೆ ಮರಳಬೇಕಾಗುತ್ತದೆ, ಮತ್ತೆ ವಿಶ್ವವಿದ್ಯಾಲಯಕ್ಕೆ ಬರಲು ಅವಕಾಶ ಲಭಿಸುವುದೇ ಎಂಬ ಖಚಿತತೆ ಇಲ್ಲ. ನಾವು ಪಡೆದ ಶಿಕ್ಷಣ ಸಾಲವನ್ನು ತುಂಬುವುದು ಹೇಗೆ? ನಮ್ಮ ಉದ್ಯೋಗದ ಗತಿ ಏನು? ಎಂದೆಲ್ಲ ಅಲ್ಲಿ ಶಿಕ್ಷಣ ಪಡೆಯುತ್ತಿರುವ ಭಾರತೀಯ ವಿದ್ಯಾರ್ಥಿಗಳು ಪ್ರಶ್ನಿಸಿದ್ದಾರೆ.
- ವಲಸೆ ಪ್ರಾಧಿಕಾರ ಹೊರಡಿಸಿರುವ ಈ ಆದೇಶವನ್ನು ರದ್ದುಪಡಿಸುವಂತೆ ಒತ್ತಾಯಿಸಿ ಹಾರ್ವರ್ಡ್ ಯುನಿವರ್ಸಿಟಿ, ಮಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಜಾನ್ಸ್ ಹಾಪ್ರಿನ್ಸ್ ಯುನಿವರ್ಸಿಟಿ ಮುಂತಾದವು ಈಗಾಗಲೇ ನ್ಯಾಯಾಲಯದ ಮೆಟ್ಟಿಲೇರಿವೆ.
- ಭಾರತದ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ ಅವರೂ ಅಮೆರಿಕದ ಅಧಿಕಾರಿಗಳ ಜತೆಗೆ ಆನ್‌ಲೈನ್ ಸಭೆ ನಡೆಸಿ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈ ಬಗ್ಗೆ ಈವರೆಗೂ ಯಾವುದೇ ತೀರ್ಮಾನಗಳು ಆಗದಿರುವುದು ವಿದ್ಯಾರ್ಥಿಗಳ ಆತಂಕ ಹೆಚ್ಚುವಂತೆ ಮಾಡಿದೆ.
- ಇತ್ತೀಚಿನ ವರದಿಯ ಪ್ರಕಾರ ಅಮೆರಿಕದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ 1,94,556 ಮಂದಿ ಭಾರತೀಯ ಮೂಲದ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. ಕೊರೋನಾ ಕಾರಣದಿಂದಾಗಿ ಅಮೆರಿಕದ ವಿಶ್ವ ವಿದ್ಯಾಲಯಗಳು ಮಾರ್ಚ್ ತಿಂಗಳಿಂದ ಕ್ಯಾಂಪಸ್ ಅನ್ನು ಮುಚ್ಚಿ, ಆನ್‌ಲೈನ್ ತರಗತಿಗಳನ್ನು ಆರಂಭಿಸಿದ್ದವು.

14. ಅಯೋಧ್ಯೆ ನೇಪಾಳದಲ್ಲಿದೆ ಎಂದು ನೇಪಾಳ ಪ್ರಧಾನಿ ಕೆ.ಪಿ. ಶರ್ಮಾ ಓಲಿ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ:

- ಭಾರತ ವಿರೋಧಿ ಹೇಳಿಕೆಯಿಂದ ಸುದ್ದಿಯಲ್ಲಿರುವ ನೇಪಾಳ ಪ್ರಧಾನಿ ಕೆ.ಪಿ. ಶರ್ಮಾ ಓಲಿ, ಇನ್ನೊಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ, ನಿಜವಾದ ಅಯೋಧ್ಯೆ ಭಾರತದಲ್ಲಿ ಇಲ್ಲ. ನೇಪಾಳದಲ್ಲಿ ಇದೆ.
- ಕಠ್ಮಂಡು ಸಮೀಪದ ಸಣ್ಣ ಹಳ್ಳಿಯೇ ಅಯೋಧ್ಯೆ. ಶ್ರೀರಾಮ ನೇಪಾಳಿಯೇ ಹೊರತು ಭಾರತೀಯ ಅಲ್ಲ' ಎಂದಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.
- ಭಾರತದ ಲಿಪುಲೆಖ್, ಲಿಂಫಿಯಾಧುರ ಮತ್ತು ಕಾಲಾಪಾನಿಗಳು ತನ್ನದೆಂದು ನೇಪಾಳ ವಾದಿಸಿದೆ. ದೇಶದ ಭಾವನೆಗಳಿಗೆ ಘಾಸಿ ಮಾಡುತ್ತಿವೆ ಎಂದು ಆರೋಪಿಸಿ ದೂರದರ್ಶನ ಹೊರತುಪಡಿಸಿ ಬೇರೆಲ್ಲ ಭಾರತೀಯ ಖಾಸಗಿ ವಾಹಿನಿಗಳ ಪ್ರಸಾರವನ್ನು ನೇಪಾಳದಲ್ಲಿ ನಿಷೇಧಿಸಿತ್ತು.

15. ಚೀನಾದ ಗಡಿ ವಿವಾದಗಳು:

- ಪೂರ್ವ ಲಡಾಖ್‌ನ ಗಲ್ವಾನ್ ಕಣಿವೆ, ಪ್ಯಾಂಗೊಂಗ್ ತ್ಸೊ ಸರೋವರ ಹಾಗೂ ವಾಸ್ತವ ಗಡಿ ನಿಯಂತ್ರಣ ರೇಖೆ (ಎಲ್.ಎ.ಸಿ) ಬಳಿ ಸೈನಿಕರು, ಶಸ್ತ್ರಾಸ್ತ್ರ ಜಮಾವಣೆ ಮಾಡಲು ಚೀನಾ ಸೇನೆ ತಿಂಗಳ ಹಿಂದೆಯೇ ವ್ಯಾಪಕ ಸಿದ್ಧತೆ ನಡೆಸಿತ್ತು. ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಇದಕ್ಕೆ ಆದೇಶ ನೀಡಿದ್ದರು ಎಂಬ ಮಾಹಿತಿ ಬಹಿರಂಗವಾಗಿದೆ.
- ಗಲ್ವಾನ್ ಕಣಿವೆ ಮತ್ತು ಪ್ಯಾಂಗೊಂಗ್ ತ್ಸೊ ಸರೋವರ ಬಳಿ ಮೇ ಮೊದಲ ವಾರದಲ್ಲಿ ಭಾರತ–ಚೀನಾ ಸೈನಿಕರ ಮಧ್ಯೆ ನಡೆದ ಘರ್ಷಣೆ ವ್ಯವಸ್ಥಿತ ಕೃತ್ಯ, ಚೀನಾ ಸೇನೆ ತುಕಡಿಗಳು ಜನವರಿ ಅಂತ್ಯ ಮತ್ತು ಫೆಬ್ರವರಿ ಮೊದಲ ವಾರದಲ್ಲೇ ಎಲ್.ಎ.ಸಿ ಬಳಿ ಇರಿಸಲಾರಂಭಿಸಿದ್ದವು.
- ವಿಸ್ತರಣಾವಾದಿಯಾದ ಚೀನಾ ಗಡಿ ಒತ್ತುವರಿ ಮಾಡಲು ಎಲ್.ಎ.ಸಿ ಬಳಿ ಸಾವಿರಾರು ಕಿ.ಮೀ. ಉದ್ದದವರೆಗೂ ಸೇನೆಯನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿತ್ತು.
- ತಾನು ವಾದಿಸುವ ಗಡಿಯನ್ನು ಪರಿಪೂರ್ಣವಾಗಿ ಸ್ವಾಧೀನಕ್ಕೆ ಪಡೆದುಕೊಂಡು ಅಧಿಕೃತಗೊಳಿಸುವುದು ಚೀನಾದ ಉದ್ದೇಶವಾಗಿತ್ತು. ಆದರೆ, ಚೀನಾದ ಈ ಉದ್ಧಟತವನ್ನು ಭಾರತದ ಸೈನಿಕರು ತಡೆದ ಕಾರಣ ಮೇ ಮೊದಲ ವಾರದಲ್ಲಿ ಘರ್ಷಣೆ ಉಂಟಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಲ್ಲೆಲ್ಲಿ ವಿಸ್ತರಣೆ ?

- ಗಲ್ವಾನ್ ಕಣಿವೆಯಲ್ಲಿ ಉಭಯ ದೇಶಗಳು ತಾತ್ಕಾಲಿಕವಾಗಿ ಗುರುತಿಸಿದ್ದ ಬಫರ್ ವಲಯದಲ್ಲಿ ಕೆಲವು ನಿರ್ಮಾಣಗಳನ್ನು ಮಾಡುವ ಮೂಲಕ ಚೀನಾ ಸೇನೆ ಗಡಿಯನ್ನು ಪಶ್ಚಿಮದಲ್ಲಿ ಒಂದು ಕಿ.ಮೀ. ಒತ್ತುವರಿ ಮಾಡಿತ್ತು.

- ಪ್ಯಾಂಗೊಂಗ್ ತ್ಸೊ ಸರೋವರವು ಭಾರತ ಮತ್ತು ಟಿಬೆಟ್ ಗಡಿಯಲ್ಲಿ ಅತಿ ಎತ್ತರ ಪ್ರದೇಶದಲ್ಲಿದೆ. ಈ ಪ್ರದೇಶವನ್ನು 1 ರಿಂದ 8 ರವರೆಗೆ ಫಿಂಗರ್ ಹೆಸರಿನಲ್ಲಿ ಗುರುತಿಸಲಾಗಿದೆ.
- ಭಾರತದ ಸೇನೆ ಹೇಳುವಂತೆ ಮೊದಲು ಫಿಂಗರ್ 8ರವರೆಗೂ ಭಾರತದ ಯೋಧರು ಗಸ್ತು ತಿರುಗುತ್ತಿದ್ದರು. ಆದರೆ, ಚೀನಾ ಸೇನೆ 5 ರಿಂದ 8ರ ವರೆಗಿನ ಪಾಯಿಂಟ್‌ಗಳನ್ನು ಒತ್ತುವರಿ ಮಾಡಿಕೊಂಡು ಅನೇಕ ನಿರ್ಮಾಣ ಕಾರ್ಯ, ರಸ್ತೆಗಳನ್ನು ಮಾಡಿಕೊಂಡಿದೆ. ಫಿಂಗರ್ 4ನೇ ಪಾಯಿಂಟ್ ಮೇಲೂ ಕಣ್ಣುಹಾಕಿತು. ಈ ವೇಳೆಯಲ್ಲೇ ಅಲ್ಲಿ ಘರ್ಷಣೆ ಸಂಭವಿಸಿತು.

16. ಇಸ್ರೇಲ್‌ನಿಂದ ಕ್ಷಿಪಣಿ ಖರೀದಿಗೆ ನಿರ್ಧಾರ :

- ಚೀನಾ ಮತ್ತು ಪಾಕಿಸ್ತಾನದ ಗಡಿಯಲ್ಲಿ ಪದೇ ಪದೆ ಉದ್ವಿಗ್ನ ಪರಿಸ್ಥಿತಿ ಹಿನ್ನೆಲೆಯಲ್ಲಿ ಸೇನೆಯನ್ನು ಬಲಿಷ್ಠಗೊಳಿಸಲು ಭಾರತ ನಿರ್ಧರಿಸಿದ್ದು, ಇದಕ್ಕಾಗಿ ಇಸ್ರೇಲ್‌ನಿಂದ ಮತ್ತಷ್ಟು ಅತ್ಯಾಧುನಿಕ ಶಸ್ತ್ರಾಸ್ತ್ರ ಖರೀದಿಸಲಿದೆ.
- 200 ಕ್ಕೂ ಹೆಚ್ಚು ಆ್ಯಂಟಿ–ಟ್ಯಾಂಕ್ ಕ್ಷಿಪಣಿಗಳು, 12 ಸ್ಪೈಕ್ ಲಾಂಚರ್‌ಗಳನ್ನು ಖರೀದಿಸಲು ಸೇನೆ ಪ್ರಸ್ತಾವನೆ ಸಲ್ಲಿಸಿದೆ. ಚೀನಾದ ಜತೆ ಸಂಘರ್ಷದ ಬಳಿಕ ಸರ್ಕಾರ ತುರ್ತು ಶಸ್ತ್ರಾಸ್ತ್ರ ಖರೀದಿಗೆ 500 ಕೋಟಿ ರೂ. ಮೀಸಲಿರಿಸಿದ್ದು, ಇದೇ ನಿಧಿಯನ್ನು ಬಳಸಿಕೊಳ್ಳಲಾಗುತ್ತದೆ.

17. ಚಬಹರ್ ಬಂದರು ಯೋಜನೆಯಿಂದ ಭಾರತ ಹೊರಕ್ಕೆ :

- ಮಹತ್ವಾಕಾಂಕ್ಷೆಯ ಚಬಹರ್ ಬಂದರು ಯೋಜನೆಯಿಂದ ಭಾರತವನ್ನು ಕೈಬಿಡಲು ಇರಾನ್ ನಿರ್ಧರಿಸಿದೆ.
- ಈ ಯೋಜನೆಯ ಭಾಗವಾಗಿ ಚಬಹರ್ ಬಂದರಿನಿಂದ ಜಹೆದನ್‌ವರೆಗೂ ತಾನೇ ಹಣ ಹೂಡಿ ರೈಲು ಮಾರ್ಗ ನಿರ್ಮಿಸಲು ಇರಾನ್ ತೀರ್ಮಾನಿಸಿದೆ.
- ಸಹಯೋಗ ಒಪ್ಪಂದಕ್ಕೆ ಸಹಿ ಹಾಕಿ ನಾಲ್ಕು ವರ್ಷ ಕಳೆದರೂ, ಭಾರತದಿಂದ ನಿಧಿ ಪೂರೈಕೆ ಆಗದ ಕಾರಣ ಮತ್ತು ಯೋಜನೆ ಚಾಲನೆಗೆ ಸಹಕಾರ ದೊರೆಯದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಂಡಿದ್ದಾಗಿ ಇರಾನ್ ಹೇಳಿದೆ.
- ಯೋಜನೆಯು 2022ರ ಮಾರ್ಚ್ ವೇಳೆಗೆ ಅಂತ್ಯಗೊಳ್ಳಲಿದ್ದು, ಭಾರತದ ಯಾವುದೇ ನೆರವಿಲ್ಲದೆಯೇ ಇರಾನ್ ರೈಲ್ವೆ ಇಲಾಖೆಯು ರೈಲು ಮಾರ್ಗ ನಿರ್ಮಾಣ ಕೈಗೊಳ್ಳಲಿದೆ.
- ಚೀನಾದ ಜತೆ 400 ಶತಕೋಟಿ ಡಾಲರ್ ಮೌಲ್ಯದ 25 ವರ್ಷಗಳ ಅವಧಿಯ ಆರ್ಥಿಕ ಮತ್ತು ಭದ್ರತಾ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿದ ಬೆನ್ನಲ್ಲೇ ಚಬಹರ್ ಯೋಜನೆಯಿಂದ ಭಾರತವನ್ನು ಇರಾನ್ ಕೈ ಬಿಟ್ಟಿರುವುದು ಗಮನಾರ್ಹ.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

18. 300 ಕೋಟಿ ರೂ. ವರೆಗಿನ ರಕ್ಷಣಾ ಸಾಮಗ್ರಿ ನೇರ ಖರೀದಿಗೆ ಸಮ್ಮತಿ:

- ಪೂರ್ವ ಲಡಾಖ್‌ನಲ್ಲಿ ಚೀನಾ ಸೈನಿಕರ ಅತಿಕ್ರಮಣ ಬಿಕ್ಕಟ್ಟು ಶಾಂತಗೊಂಡ ಬೆನ್ನಲ್ಲೇ 'ರಕ್ಷಣಾ ಸಾಮಗ್ರಿ ಖರೀದಿ ಆಯೋಗ' ವು ಶಸ್ತ್ರಾಸ್ತ್ರ ಖರೀದಿ ಪ್ರಕ್ರಿಯೆ ಸರಳಗೊಳಿಸಿದೆ ಮತ್ತು ತಗುಲುವ ಸಮಯ ಕಡಿತಗೊಳಿಸಿದೆ.
- ಭಾರತೀಯ ಸೇನೆಯ ಮೂರು ಅಂಗಗಳಾದ ಭೂ ಸೇನೆ, ನೌಕಾಸೇನೆ ಮತ್ತು ವಾಯು ಸೇನೆ ಗಳಿಗೆ ಬದಲಾಗುವ ಸನ್ನಿವೇಶಕ್ಕೆ ಅನುಗುಣವಾಗಿ 300 ಕೋಟಿ ರೂ. ವರೆಗಿನ ಕಾರ್ಯಾಚರಣೆ ವೆಚ್ಚ, ಬಂಡವಾಳ ಸಾಮಗ್ರಿ, ಮದ್ದು–ಗುಂಡು ಇತ್ಯಾದಿ ಗಳಿಗೆ ತಾವೇ ನೇರ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಕೊಡಲಾಗಿದೆ.
- ಗರಿಷ್ಠ 300 ಕೋಟಿ ರೂ. ಗಳವರೆಗಿನ ಒಪ್ಪಂದಗಳ ಸಂಖ್ಯೆಗಳ ಮೇಲೆ ಯಾವುದೇ ಮಿತಿ ಹೇರಿಲ್ಲ. ಎಷ್ಟು ಬೇಕಾದರೂ ಒಪ್ಪಂದಗಳನ್ನು ಮಾಡಿಕೊಳ್ಳಬಹುದು.
- ಜೊತೆಗೆ ಸಾಮಗ್ರಿ ಬೇಡಿಕೆಯನ್ನು ಪೂರೈಕೆ ಒಪ್ಪಂದಕ್ಕೆ ಹಂತಕ್ಕೆ ತರಲು 6 ತಿಂಗಳು ಮತ್ತು ಸಾಮಗ್ರಿ ಸರಬರಾಜು ಸೇನೆಗೆ ತಲುಪಲು 12 ತಿಂಗಳು ಗರಿಷ್ಠ ಕಾಲ ಮಿತಿ ವಿಧಿಸಲಾಗಿದೆ.
- ರಷ್ಯಾದಿಂದ 21 ಮಿಗ್–29 ಯುದ್ಧವಿಮಾನಗಳು, ಎಚ್.ಎ.ಎಲ್. ನಿಂದ 12 ಹೊಸ ಸುಖೋಯ್–30 ಯುದ್ಧ ವಿಮಾನಗಳ ಖರೀದಿ ಸೇರಿದಂತೆ 38,900 ಕೋಟಿ ರೂ. ಮೊತ್ತದ ಸಮರ ಸಾಧನಗಳನ್ನು ಕೊಳ್ಳಲು ಜುಲೈ 2ರಂದು ಡಿ.ಎ.ಸಿ. ಸಮ್ಮತಿ ಸೂಚಿಸಿತ್ತು. ಈ ಪೈಕಿ ದೇಶೀಯ ಶಸ್ತ್ರಾಸ್ತ್ರ ತಯಾರಕರಿಗೆ 31,130 ಕೋಟಿ ರೂ. ಮೊತ್ತದ ಪೂರೈಕೆಗೆ ಅವಕಾಶ ನೀಡಲಾಗಿತ್ತು.

- ತುರ್ತು ಅಗತ್ಯಕ್ಕಾಗಿ ಅಮೇರಿಕದಿಂದ 72,000 ಸಿಗ್ ಸೌರ್ ಅಸಾಲ್ಟ್ ರೈಫಲ್ ಖರೀದಿಗೆ ಕಳೆದ ವರ್ಷವೇ ಒಪ್ಪಂದ ಮಾಡಲಾಗಿದೆ.

19. ಹೂಡಿಕೆ ಹೆಚ್ಚಳಕ್ಕೆ ಭಾರತ ಐರೋಪ್ಯ ಒಕ್ಕೂಟ ಸಂಕಲ್ಪ:

- ಪರಸ್ಪರ ವ್ಯಾಪಾರ, ಹೂಡಿಕೆ ಹೆಚ್ಚಳಕ್ಕೆ ಒತ್ತು ನೀಡಲು ಭಾರತ ಮತ್ತು 27 ರಾಷ್ಟ್ರಗಳ ಐರೋಪ್ಯ ಒಕ್ಕೂಟ (ಇ.ಯು.) ನಿರ್ಧರಿಸಿವೆ. ಉನ್ನತ ಮಟ್ಟದ ಸಭೆ ನಡೆಸಿ, ಅಗತ್ಯ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿವೆ.
- ವರ್ಚುಯಲ್ ಶೃಂಗ ಸಭೆಯಲ್ಲಿ ಭಾರತದ ಆತ್ಮನಿರ್ಭರ ಅಭಿಯಾನ ಬಗ್ಗೆ ಇ.ಯು. ಪ್ರತಿನಿಧಿಗಳಿಗೆ ವಿವರಿಸಿದ ಪ್ರಧಾನಿ ಮೋದಿ ರಕ್ಷಣೆ, ಪರಮಾಣು ಶಕ್ತಿ, ಸಂಶೋಧನೆ, ಸೈಬರ್ ಸುರಕ್ಷತೆ ಮತ್ತು ಆರೋಗ್ಯ ಸೇವೆಗಳ ಅಭಿವೃದ್ಧಿಗೆ ಜಂಟಿಯಾಗಿ ಶ್ರಮಿಸುವುದಕ್ಕೆ ಕರೆ ನೀಡಿದರು.

ಗಡಿ ತಂಟೆ ಪ್ರಸ್ತಾಪ:

- ಪೂರ್ವ ಲಡಾಖ್‌ನಲ್ಲಿ ನಡೆದ ಚೀನಾದ ಅತಿಕ್ರಮಣ ಯತ್ನ, ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಾಗ್ಗೆ ಪಾಕಿಸ್ತಾನದಿಂದ ಅಕ್ರಮ ನುಸುಳುವಿಕೆ ಜತೆಗೆ ಭಯೋತ್ಪಾದನೆಗೆ ಕುಮ್ಮಕ್ಕು ನೀಡಲಾಗುತ್ತಿರುವ ವಿಷಯಗಳನ್ನು ಪ್ರಧಾನಿ ಮೋದಿ ಐರೋಪ್ಯ ರಾಷ್ಟ್ರಗಳ ಗಮನಕ್ಕೆ ತಂದರು.

ಕೌಶಲ್ಯ ಉನ್ನತೀಕರಣ ಮಂತ್ರ

- ಸದ್ಯದ ಪರಿಸ್ಥಿತಿಯಲ್ಲಿ ಉದ್ದಿಮೆಗಳ ವಾತಾವರಣ ತೀವ್ರವಾಗಿ ಬದಲಾಗುತ್ತಿದ್ದು, ನಾವುಗಳು ಮಾರುಕಟ್ಟೆಯ ಬೇಡಿಕೆಗಳಿಗೆ ತಕ್ಕಂತೆ ನಮ್ಮಲ್ಲಿ ಕೌಶಲ್ಯ ರೂಪಿಸಿ ಕೊಳ್ಳುವಿಕೆ, ಇರುವ ಕೌಶಲ್ಯದ ಮರುರೂಪಿಸಿಗೊಳ್ಳುವಿಕೆ ಮತ್ತು ಹೊಸ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವ ಉನ್ನತೀಕರಣ ಪ್ರಕ್ರಿಯೆಗೆ ಒಳಗಾಗಲೇಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.
- ವಿಶ್ವ ಕೌಶಲ್ಯ ದಿನಾಚರಣೆ ಅಂಗವಾಗಿ ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೌಶಲ್ಯ ಎನ್ನುವುದಕ್ಕೆ ಸಮಯದ ಮಿತಿಯಿಲ್ಲ. ದಿನಕಳೆದಂತೆ ಕೌಶಲ್ಯ ಅಭಿವೃದ್ಧಿಯಾಗುತ್ತಾ ಇತರರಿಂದ ನಿಮ್ಮನ್ನು, ವಿಭಿನ್ನವಾಗಿಸುತ್ತದೆ', ಎಂದು ಹೇಳಿದರು.
- ನೌಕಾಪಡೆ ಕ್ಷೇತ್ರಕ್ಕೆ ಅಗತ್ಯವಾದ ಕೌಶಲ್ಯಗಳಿಗೆ ಒತ್ತು ನೀಡಿ ಅದರ ಹೆಚ್ಚಳಕ್ಕೆ ಗಮನಹರಿಸಿದಲ್ಲಿ ವಿಶ್ವಕ್ಕೆ ಭಾರತದಿಂದ ಲಕ್ಷಾಂತರ ನಾವಿಕರನ್ನು ಕಳುಹಿಸಿಕೊಡ ಬಹುದು ಎಂದರು.

20. ಚೀನಾದ 'ಮುತ್ತಿನ ಹಾರ'ದ ವಿರುದ್ಧ ಭಾರತದ 'ವಜ್ರಗಳ ಹಾರ'

- ಭಾರತದ ಸುತ್ತ ಭೌಗೋಳಿಕ ರಾಜಕೀಯ ಪ್ರಭಾವ ಹೆಚ್ಚಿಸಿಕೊಳ್ಳುವಲ್ಲಿ ನಿರತವಾಗಿದೆ ಚೀನಾ.
- ಭಾರತದ ಭೌಗೋಳಿಕ ಸರಹದ್ದಿನಲ್ಲಿರುವ ಮಿತ್ರ ರಾಷ್ಟ್ರಗಳನ್ನು ಒಂದೊಂದಾಗಿ ತನ್ನ ಬುಟ್ಟಿಗೆ ಹಾಕಿಕೊಳ್ಳುತ್ತಿದೆ. ಭಾರತದ ಸುತ್ತಲಿನ ಹಲವು ರಾಷ್ಟ್ರಗಳಲ್ಲಿ ಬಂದರನ್ನು ನಿರ್ಮಿಸುತ್ತಾ, ವ್ಯೂಹಾತ್ಮಕ ಮಾರ್ಗವನ್ನು ಸೃಷ್ಟಿಸಿಕೊಳ್ಳುವ 'ಮುತ್ತಿನಹಾರ' (string of pearls) ಯೋಜನೆಯನ್ನು ಜಾರಿಗೊಳಿಸಿರುವ ಚೀನಾ, ಬಡ ರಾಷ್ಟ್ರಗಳು ತನ್ನ ಪರವಾಗಿ ವಾಲುವಂತೆ ನೋಡಿಕೊಳ್ಳಲು ಸಾಲದ ಆಮಿಷವನ್ನೂ ಒಡ್ಡುತ್ತಿದೆ.

ಭಾರತದ 'ವಜ್ರಗಳ ಹಾರ'

- ಚೀನಾದ 'ಮುತ್ತಿನಹಾರ' ಕ್ಕೆ ಪ್ರತಿಯಾಗಿ ಭಾರತ ರೂಪಿಸಿದ ಯೋಜನೆಯೇ ವಜ್ರಗಳ ಕಂಠೀಹಾರ.
- ಚೀನಾದ ಸುತ್ತಲಿನ ದೇಶಗಳ ಜತೆ ಮಿಲಿಟರಿ ಸಹಭಾಗಿತ್ವ ಸಾಧಿಸಿದ ಜಾಲವಿದು. ಇರಾನ್, ಸಿಷೆಲ್ಸ್, ಇಂಡೋನೇಷ್ಯಾ, ಸಿಂಗಪುರ, ವಿಯೆಟ್ನಾಂ, ಜಪಾನ್, ಮಂಗೋಲಿಯಾದ ನೆರವು ಪಡೆದು ಈ ಜಾಲವನ್ನು ರೂಪಿಸಲಾಗಿದೆ. ಇರಾನ್‌ನಲ್ಲಿ ಬಂದರು ಅಭಿವೃದ್ಧಿಪಡಿಸಿದ್ದಲ್ಲದೆ, ಉಳಿದೆಡೆ ಮಿತ್ರರಾಷ್ಟ್ರಗಳ ಬಂದರು ಬಳಕೆಗೆ ಅವಕಾಶ ಮಾಡಿಕೊಳ್ಳಲಾಗಿದೆ. ಆದರೆ ಇರಾನ್ ಈಗ ಇದರಿಂದ ದೂರವಾಗಿದೆ.

ಇರಾನ್

- ಚೀನಾದ ಸ್ಟ್ರಿಂಗ್ ಆಫ್ ಪರ್ಲ್‌ಗೆ ಇರಾನ್ ಹೊಸ ಸೇರ್ಪಡೆ. ಇರಾನ್ ಮತ್ತು ಚೀನಾ 25 ವರ್ಷಗಳ ಆರ್ಥಿಕ ಒಪ್ಪಂದಕ್ಕೆ ಸಹಿ ಹಾಕುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಈ ಒಪ್ಪಂದಕ್ಕೂ ಮುನ್ನ ಚೀನಾ ಈಗಾಗಲೇ ಇರಾನ್‌ಗೆ 400 ಬಿಲಿಯನ್ ಡಾಲರ್ (ಅಂದಾಜು 30 ಲಕ್ಷ ಕೋಟಿ) ನೆರವನ್ನು ನೀಡಿದೆ. ಇದಕ್ಕೆ ಪ್ರತಿಯಾಗಿ ಛಾಬಹಾರ್ ಬಂದರಿನಲ್ಲಿ ಚೀನಾದ ಸರಕುಗಳಿಗೆ 'ಶೂನ್ಯ ಸುಂಕ'ದ ಸೌಲಭ್ಯ ನೀಡಲು, ಬಂದರಿನ ಸಮೀಪ ತೈಲಾಗಾರ ಮತ್ತು ಮತ್ತೊಂದು ಕಿರು ಬಂದರು ಅಭಿವೃದ್ಧಿಪಡಿಸಲು ಎರಡೂ ದೇಶಗಳು ಒಪ್ಪಂದ ಮಾಡಿಕೊಳ್ಳಲಿವೆ.
- ಚಬಹಾರ್ ಬಂದರನ್ನು ಭಾರತವು 13700 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿತ್ತು. ಈ ಬಂದರಿನಿಂದ ಅಫ್ಘಾನಿಸ್ತಾನದ ಗಡಿಯವರೆಗೆ ರೈಲುಮಾರ್ಗವನ್ನು ತನ್ನದೇ ಖರ್ಚಿನಲ್ಲಿ ನಿರ್ಮಿಸಲು ಭಾರತ ಒಪ್ಪಂದ ಮಾಡಿಕೊಂಡಿತ್ತು. ಮಧ್ಯ ಏಷ್ಯಾಗೆ ಮತ್ತು ಅಫ್ಘಾನಿಸ್ತಾನಕ್ಕೆ ಇರಾನ್ ಮೂಲಕ ಹಡಗು–ರೈಲು–ರಸ್ತೆ ಸಂಪರ್ಕ ನಿರ್ಮಿಸುವುದು ಭಾರತದ ಉದ್ದೇಶವಾಗಿತ್ತು.
- ಆದರೆ, ಇರಾನ್ ಕಳೆದ ವಾರವಷ್ಟೇ ರೈಲು ಮಾರ್ಗವನ್ನು ತಾನೇ ನಿರ್ಮಿಸುವುದಾಗಿ ಹೇಳಿದೆ. ರೈಲ್ವೆ ಯೋಜನೆಗೆ ಹಣಕಾಸು ಒದಗಿಸಲು ಭಾರತ ವಿಳಂಬ ಧೋರಣೆ ಅನುಸರಿಸಿತು ಎಂಬುದು ಇರಾನ್ ವಾದ.

- ಆದರೆ, ಇರಾನ್ ಮೇಲೆ ಅಮೆರಿಕ ಆರ್ಥಿಕ ನಿರ್ಬಂಧ ಹೇರಿದ್ದನ್ನು ನೆನಪಿಸಿರುವ ಭಾರತ, ಇರಾನ್‌ನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ ಎಂದು ವಾದಿಸಿದೆ.
- ಅಮೆರಿಕದಿಂದ ಆರ್ಥಿಕ ದಿಗ್ಬಂಧನಕ್ಕೆ ಒಳಗಾಗಿದ್ದ ಇರಾನ್, ಕೇವಲ ರೈಲ್ವೆ ಯೋಜನೆಯೊಂದಕ್ಕೆ ಇಷ್ಟು ಹಣವನ್ನು ವೆಚ್ಚ ಮಾಡುತ್ತಿರುವುದು ಅಚ್ಚರಿಗೆ ಕಾರಣವಾಗಿದೆ.
- ಚೀನಾ–ಇರಾನ್ ದೀರ್ಘಾವಧಿಯ ಆರ್ಥಿಕ–ಸೇನಾ ಸಹಭಾಗಿತ್ವವೇ ಇದಕ್ಕಿರುವ ಕಾರಣ ಎನ್ನಲಾಗುತ್ತಿದೆ. ಒಂದು ವೇಳೆ ಈ ಒಪ್ಪಂದ ಕಾರ್ಯರೂಪಕ್ಕೆ ಬಂದರೆ, ಪಶ್ಚಿಮ ಏಷ್ಯಾ ಪ್ರದೇಶದ ಭೌಗೋಳಿಕ ರಾಜಕೀಯ ಮತ್ತು ಕಾರ್ಯತಂತ್ರದ ಚಿತ್ರಣವೇ ಸಂಪೂರ್ಣ ಬದಲಾಗಲಿದೆ.

ಮಾಲ್ಡೀವ್ಸ್

- ಆಹಾರ ಧಾನ್ಯ, ಆರೋಗ್ಯ, ಶಿಕ್ಷಣದ ಅಗತ್ಯಗಳಿಗೆ ಭಾರತವನ್ನೇ ಹೆಚ್ಚಾಗಿ ಆಶ್ರಯಿಸಿದ ದೇಶ ಮಾಲ್ಡೀವ್ಸ್, ಕೋವಿಡ್–19ರಿಂದ ಆ ದೇಶ ತೀವ್ರ ಬಾಧೆಗೆ ಒಳಗಾದ ಮೇಲೆ ಭಾರತದಂತೆಯೇ ಚೀನಾ ಕೂಡ ಭಾರಿ ಪ್ರಮಾಣದ ಔಷಧಿ ಸಾಮಗ್ರಿಗಳನ್ನು ಮಾಲ್ಡೀವ್ಸ್ ಗೆ ಕಳುಹಿಸಿಕೊಟ್ಟಿದೆ.
- ದೊಡ್ಡ ಪ್ರಮಾಣದ ಸಾಲವನ್ನೂ ಮಂಜೂರು ಮಾಡಿದೆ. ಮಾಲ್ಡೀವ್ಸ್ ನ ರಾಜಧಾನಿ ಮಾಲೆಯಲ್ಲಿ ಬಂದರನ್ನೂ ಚೀನಾ ಅಭಿವೃದ್ಧಿ ಪಡಿಸಿದೆ. ಭಾರತದ ಜತೆಗಿನ ಹಳೆಯ ಸ್ನೇಹಕ್ಕಿಂತ ಮಾಲ್ಡೀವ್ಸ್‌ಗೆ ಈಗ ಚೀನಾ ಪ್ರಿಯವಾಗುತ್ತಿದೆ.
- ಬಂದರು ಅಭಿವೃದ್ಧಿಯ ಜತೆಗೆ, ತನ್ನ ನೆಲದಲ್ಲಿ ಐಷಾರಾಮಿ ಹೋಟೆಲ್‌ಗಳನ್ನು ಆರಂಭಿಸಲು ಚೀನಾಗೆ ಮಾಲ್ಡೀವ್ಸ್ ಅವಕಾಶ ಮಾಡಿಕೊಟ್ಟಿದೆ. ಚೀನಾದ ಲಕ್ಷಾಂತರ ಪ್ರವಾಸಿಗರು ಪ್ರತಿ ವರ್ಷ ಇಲ್ಲಿಗೆ ಭೇಟಿ ನೀಡುತ್ತಾರೆ.
- ಈ ಮೂಲಕ ಹಿಂದೂ ಮಹಾಸಾಗರದ ದಕ್ಷಿಣದ ರಾಷ್ಟ್ರದಲ್ಲಿ ಚೀನಾ ಭದ್ರನೆಲೆ ಕಂಡುಕೊಂಡಿದೆ. ದ್ವೀಪ ರಾಷ್ಟ್ರದ 'ಮರಾವ್ ಅಟಾಲ್'ನಲ್ಲಿ ಸೇನಾನೆಲೆ ಇದೆ. ಇದನ್ನು ಚೀನಾ ಬಳಸಿಕೊಳ್ಳುತ್ತಿದೆ ಎಂಬ ವದಂತಿಗಳಿವೆ. ಆದರೆ ಇದು ಖಚಿತವಾಗಿಲ್ಲ.

ಬಾಂಗ್ಲಾದೇಶ

- ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯು (ಪಿ.ಎಲ್.ಎ.) ಇತ್ತ ಗಲ್ವಾನ್ ಗಡಿಯಲ್ಲಿ ಭಾರತದ ಸೇನೆಯೊಂದಿಗೆ ಮುಖಾಮುಖಿಆಗಿದ್ದ ಹೊತ್ತಿನಲ್ಲೇ ಅತ್ತ ಬಾಂಗ್ಲಾದೇಶದ 5,161 ಸರಕುಗಳ ಸುಂಕರಹಿತ ಆಮದಿಗೆ ಅವಕಾಶವನ್ನು ನೀಡಿದೆ ಚೀನಾ.
- ಬಾಂಗ್ಲಾದೇಶದ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಚೀನಾ 4.80 ಲಕ್ಷ ಕೋಟಿ ರೂ. ಸಾಲವನ್ನೂ ನೀಡಲು ಮುಂದಾಗಿದೆ.
- ಭಾರತವು 2010ರಿಂದ ಇದುವರೆಗೆ ಬಾಂಗ್ಲಾದೇಶಕ್ಕೆ 16 ಲಕ್ಷ ಕೋಟಿರೂ. ಸಾಲ ನೀಡಿದೆ. ಭಾರತ–ಬಾಂಗ್ಲಾ ನಡುವಿನ ವ್ಯಾಪಾರ ವಹಿವಾಟು ವಾರ್ಷಿಕ ರೂ. 7.50 ಲಕ್ಷ ಕೋಟಿಯಷ್ಟಿದ್ದರೆ, ಚೀನಾ–ಬಾಂಗ್ಲಾ ನಡುವಿನ ವಾರ್ಷಿಕ ವ್ಯಾಪಾರ ರೂ. 9.5 ಲಕ್ಷ ಕೋಟಿಗೆ ಹೆಚ್ಚಿದೆ.
- ಬಾಂಗ್ಲಾದೇಶದ ಚಿತ್ತಗಾಂಗ್ ಬಂದರಿನಲ್ಲಿ ಕಂಟೇನರ್ ನಿರ್ವಹಣಾ ವ್ಯವಸ್ಥೆಯನ್ನು ಚೀನಾ ಅಭಿವೃದ್ಧಿಪಡಿಸಿದೆ. ಭಾರತಕ್ಕೆ ತೀರಾ ಹತ್ತಿರದಲ್ಲಿ ಇರುವ ಈ ಬಂದರನ್ನು ಚೀನಾ ತನ್ನ ಸೇನಾ ನೆಲೆಯಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ ಎಂಬ ಕಳವಳ ವ್ಯಕ್ತವಾಗಿದೆ.

ನೇಪಾಳ

- ಚೀನಾದ ಸ್ಟ್ರಿಂಗ್ ಆಫ್ ಪರ್ಲ್ಸ್‌ಗೆ ಇತ್ತೀಚಿನ ಸೇರ್ಪಡೆಗಳಲ್ಲಿ ನೇಪಾಳ ಸಹ ಒಂದು. 2018ರಲ್ಲಿ ಟಿಬೆಟ್‌ನ ಲ್ಹಾಸಾದಿಂದ ನೇಪಾಳ ರಾಜಧಾನಿ ಕಠ್ಮಂಡುವರೆಗೆ ಚೀನಾ ಸರ್ವಋತು ಹೆದ್ದಾರಿ ನಿರ್ಮಿಸಿದೆ.
- ಅಲ್ಲದೆ, ತೈಲ ಕೊಳವೆಮಾರ್ಗ ಮತ್ತು ಬುಲೆಟ್ ರೈಲು ಮಾರ್ಗ ನಿರ್ಮಿಸುತ್ತಿದೆ. ಇದು ಭಾರತದ ಮೇಲೆ ನೇಪಾಳದ ಅವಲಂಬನೆಯನ್ನು ಕಡಿಮೆ ಮಾಡಿದೆ. ಈ ಬೆಳವಣಿಗೆಯ ನಂತರ ಭಾರತದ ಸೇನೆಯ ಜತೆಗಿನ ಜಂಟಿ ಸಮರಾಭ್ಯಾಸವನ್ನು ನೇಪಾಳ ಸೇನೆ ಕೈಬಿಟ್ಟಿದೆ.
- ಭಾರತದ ಮೂರು ಪ್ರದೇಶಗಳನ್ನು ಒಳಗೊಂಡಂತೆ ಭೌಗೋಳಿಕ ನಕ್ಷೆಯನ್ನು ಮಾರ್ಪಡಿಸುವ ಮೂಲಕ ನೇಪಾಳವು ಭಾರತವನ್ನು ಕೆಣಕಿದೆ. ಈ ನಡೆಯ ಹಿಂದೆಯೂ ಚೀನಾದ ಕೈವಾಡವಿದೆ.

ಶ್ರೀಲಂಕಾ

- ಕೊಲಂಬೊ ಬಂದರಿನ ಪೂರ್ವ ಭಾಗದಲ್ಲಿ ಕಂಟೇನರ್ ಟರ್ಮಿನಲ್ ಅಭಿವೃದ್ಧಿಪಡಿಸಲು ಭಾರತ ಹಾಗೂ ಜಪಾನ್ ಜತೆ 2019ರಲ್ಲಿ ಮಾಡಿಕೊಂಡಿದ್ದ ತ್ರಿಪಕ್ಷೀಯ ಒಪ್ಪಂದವನ್ನು ಮರುಪರಿಶೀಲಿಸಲು ಶ್ರೀಲಂಕಾ ನಿರ್ಧರಿಸಿದೆ. ಶ್ರೀಲಂಕಾದ ಈ ತೀರ್ಮಾನದ ಹಿಂದೆ ಚೀನಾದ ಕರಿನೆರಳನ್ನು ಭಾರತ ಕಂಡಿದೆ.
- ಕೊಲಂಬೊ ಅಂತರರಾಷ್ಟ್ರೀಯ ಕಂಟೇನರ್ ಟರ್ಮಿನಲ್‌ನಲ್ಲಿ ಬಂಡವಾಳ ಹೂಡಿರುವ ಚೀನಾ, ಅಲ್ಲಿನ ಬಂದರಿನ ಕಾರ್ಮಿಕರನ್ನು ಭಾರತದ ವಿರುದ್ಧ ಎತ್ತಿಕಟ್ಟಿದೆ ಎಂದು ದೂರಲಾಗಿದೆ.
- ಹಂಬನ್ ತೋಟಾ ಬಂದರನ್ನು ಶ್ರೀಲಂಕಾವು 99 ವರ್ಷಗಳ ಅವಧಿಗೆ ಚೀನಾಕ್ಕೆ ಗುತ್ತಿಗೆ ನೀಡಿದೆ.
- ಪಿ.ಎಲ್.ಎ.ಯ ಅಣ್ವಸ್ತ್ರ ಸಹಿತ ಎರಡು ಸಬ್‌ಮರಿನ್‌ಗಳು ಕೊಲಂಬೊ ಬಂದರಿನಲ್ಲಿ ಬೀಡುಬಿಟ್ಟಿವೆ. ಹಿಂದೂ ಮಹಾಸಾಗರದ ಪುಟ್ಟ ದೇಶವಾದ ಶ್ರೀಲಂಕಾ ವ್ಯೂಹಾತ್ಮಕ ದೃಷ್ಟಿಕೋನದಿಂದ ಮಹತ್ವದ್ದಾಗಿದ್ದು, ಅದಕ್ಕೆ ಅಪಾರ ಪ್ರಮಾಣದ ಸಾಲವನ್ನು ನೀಡಿರುವ ಚೀನಾ, ತನ್ನ ಅನುಕೂಲಕ್ಕೆ ತಕ್ಕಂತೆ ಅದನ್ನು ಬಳಸಿಕೊಳ್ಳುತ್ತಿದೆ.

ಮ್ಯಾನ್ಮಾರ್

- ಮ್ಯಾನ್ಮಾರ್‌ನ ಪಶ್ಚಿಮ ಕರಾವಳಿಯಲ್ಲಿರುವ 'ಕಯಾಕ್‌ಪಯು' ಬಂದರನ್ನು ಚೀನಾ ಅಭಿವೃದ್ಧಿಪಡಿಸಿದೆ.
- ಚೀನಾದ ಮಹತ್ವಾಕಾಂಕ್ಷಿ ಬೆಲ್ಟ್ ಅಂಡ್ ರೋಡ್ ಇನಿಷಿಯೇಟಿವ್‌ನ ಭಾಗವಾಗಿ ಈ ಬಂದರನ್ನು ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯ ಒಟ್ಟು ವೆಚ್ಚದಲ್ಲಿ ಚೀನಾ ಶೇ. 70ರಷ್ಟು ಮತ್ತು ಮ್ಯಾನ್ಮಾರ್ ಶೇ. 30ರಷ್ಟು ಭರಿಸಿವೆ.

ಬೆಲ್ಟ್ ಆಂಡ್ರೋಡ್

- ಅಲ್ಲದೆ ಮ್ಯಾನ್ಮಾರ್‌ನ ಪಶ್ಚಿಮ ಕರಾವಳಿಯ ಈ ಬಂದರಿನಿಂದ ಪೂರ್ವ ಕರಾವಳಿ ಗಡಿಯವರೆಗೆ ತೈಲ ಕೊಳವೆಮಾರ್ಗ–ರಸ್ತೆಮಾರ್ಗ ಮತ್ತು ರೈಲುಮಾರ್ಗವನ್ನು ಚೀನಾ ಅಭಿವೃದ್ಧಿಪಡಿಸುತ್ತಿದೆ. ಈ ಮಾರ್ಗವು ಆಗ್ನೇಯ ಚೀನಾದ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುತ್ತದೆ.

ಪರಮಾಪ್ತ ದೇಶ ಪಾಕಿಸ್ತಾನ

- ಚೀನಾ ಹಾಗೂ ಪಾಕಿಸ್ತಾನದ ರಾಜತಾಂತ್ರಿಕ ಸಂಬಂಧಗಳಿಗೆ ಏಳು ದಶಕಗಳ ದೀರ್ಘ ಇತಿಹಾಸವಿದೆ. ಈ ಕುರಿತು ಚೀನಾ ಸರ್ಕಾರದ ಪತ್ರಿಕೆ ಗ್ಲೋಬಲ್ ಟೈಮ್ಸ್‌ನಲ್ಲಿ ವಿಶೇಷ ಲೇಖನವನ್ನೂ ಪ್ರಕಟಿಸಲಾಗಿದೆ.
- ಎರಡೂ ದೇಶಗಳಿಗೆ ಏಷ್ಯಾದಲ್ಲಿ ಭಾರತವು ಪ್ರಬಲ ಶಕ್ತಿಯಾಗಿ ಬೆಳೆಯುವುದು ಬೇಡ. ಅವುಗಳ ಈ ಸಮಾನ ಬಯಕೆಯೇ ಎರಡನ್ನೂ ಅಷ್ಟೊಂದು ಹತ್ತಿರಕ್ಕೆ ತಂದಿದೆ.
- ಪಾಕಿಸ್ತಾನದ ಮಿಲಿಟರಿಗೆ ಬಲ ತುಂಬಿರುವ ಚೀನಾ, ಧಾರಾಳವಾಗಿ ಸಾಲವನ್ನೂ ನೀಡಿದೆ. ಭಾರತದ ಗಡಿಯನ್ನು ಎರಡೂ ದೇಶಗಳು ಹಂಚಿಕೊಂಡಿರುವುದರಿಂದ ವ್ಯೂಹಾತ್ಮಕ ತಂತ್ರಗಳಿಗೆ ಒಂದಕ್ಕೊಂದು ನೆರವು ನೀಡುತ್ತಿವೆ.
- ವ್ಯಾಪಾರ ವೃದ್ಧಿಯ ಜತೆಗೆ ರಕ್ಷಣಾ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸಿಲ್ಕ್ ರಸ್ತೆಯನ್ನೂ ಚೀನಾ ಅಭಿವೃದ್ಧಿಪಡಿಸಿದೆ.
- ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ ಎರಡು ದೇಶಗಳ ಆರ್ಥಿಕ ಸಂಬಂಧಕ್ಕೆ ಸಾಕ್ಷಿಯಾಗಿದೆ. ಭಾರತದ ಗಡಿಯಿಂದ ಈ ಕಾರಿಡಾರ್ ಹಾದು ಹೋಗುತ್ತದೆ.
- ಜಾಗತಿಕ ವೇದಿಕೆಗಳಲ್ಲಿ ಚೀನಾ ಯಾವಾಗಲೂ ಪಾಕ್‌ನ ಬೆಂಬಲಕ್ಕೆ ನಿಲ್ಲುತ್ತದೆ. ಪಾಕಿಸ್ತಾನದಲ್ಲಿ ಕರಾಚಿ ಮತ್ತು ಗ್ವಾದರ್ ಬಂದರನ್ನು ಚೀನಾ ಅಭಿವೃದ್ಧಿ ಪಡಿಸಿದೆ. ಅರಬ್ಬಿ ಸಮುದ್ರದಲ್ಲಿ ಚೀನಾದ ಅತ್ಯಂತ ಪ್ರಮುಖ ಬಂದರುಗಳು ಇವಾಗಿವೆ.
- ಭಾರತದ ಗುಜರಾತ್‌ಗೆ ಮತ್ತು ಇರಾನ್‌ನಲ್ಲಿ ಭಾರತ ಅಭಿವೃದ್ಧಿ ಪಡಿಸಿರುವ ಛಾಬಹಾರ್ ಬಂದರಿಗೆ ಈ ಎರಡೂ ಬಂದರುಗಳು ಕೆಲವೇನೂರು ಕಿ.ಮೀ.ಗಳಷ್ಟು ಹತ್ತಿರದಲ್ಲಿವೆ.

ಚೀನಾ ಹೆಣೆದ ಸಂಘರ್ಷದ ಬಲೆ

- ತಣ್ಣನೆಯ ಹಿಮಾಲಯದ ಕಣಿವೆಗಳಿಂದ ಉಷ್ಣವಲಯದ ದ್ವೀಪಗಳವರೆಗೆ, ಅಕ್ಕಪಕ್ಕದ ರಾಷ್ಟ್ರಗಳಿಂದ ದೂರದಲ್ಲಿರುವ ಪಶ್ಚಿಮದ ರಾಜಧಾನಿಗಳವರೆಗೆ ಚೀನಾ ಪ್ರಪಂಚದಾದ್ಯಂತ ಹಲವು ಸಂಘರ್ಷಗಳಿಗೆ ಮುಖಾಮುಖಿ ಆಗುತ್ತಿದೆ.
- ಅತ್ತ ಅಮೆರಿಕವು ಅಷ್ಟಷ್ಟೇ ಹಿಂದೆ ಸರಿದಷ್ಟು ಇತ್ತ ಚೀನಾ ಅಷ್ಟೇ ದೃಢವಾದ ಹೆಜ್ಜೆಯೊಂದಿಗೆ ಮುನ್ನುಗ್ಗುತ್ತಿದೆ.
- ಪಶ್ಚಿಮದ ದೇಶಗಳ ಕಟು ಟೀಕೆಗಳ ಹೊರತಾಗಿಯೂ ವಿವಾದಾತ್ಮಕ ಭದ್ರತಾ ಕಾನೂನನ್ನು ಹಾಂಗ್‌ಕಾಂಗ್‌ನಲ್ಲಿ ಜಾರಿಗೆ ತಂದಿರುವುದು, ಚೀನಾದೇಶವೀಗ ಜಾಗತಿಕ 'ಸೂಪರ್‌ಪವರ್' ಆಗಿ ಬೆಳೆಯುತ್ತಿರುವುದಕ್ಕೆ ಮತ್ತೊಂದು ಉದಾಹರಣೆ.
- ಒಂದೊಮ್ಮೆ ದುರ್ಬಲವಾಗಿದ್ದ ಚೀನಾವನ್ನು ಮತ್ತೆ ವಿಶ್ವದ ಮುಂಚೂಣಿ, ಸ್ಥಾನದಲ್ಲಿ ಪ್ರತಿಷ್ಠಾಪಿಸಲು ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಕಾರ್ಯತಂತ್ರದ ಭಾಗವಾಗಿ ಈ ಘರ್ಷಣೆಗಳು ಕಂಡುಬರುತ್ತಿವೆ.
- 'ಅಮೆರಿಕ ಫಸ್ಟ್' ನೀತಿಯೊಂದಿಗೆ ಮಿತ್ರ ರಾಷ್ಟ್ರಗಳನ್ನೇ ದೂರ ಸರಿಸುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಚೀನಾದೊಂದಿಗೆ ವಾಣಿಜ್ಯ ಸಮರಕ್ಕೂ ಇಳಿದಿರುವ ಈ ಸನ್ನಿವೇಶದಲ್ಲಿ ಘರ್ಷಣೆಗಳು ತೀವ್ರ ಸ್ವರೂಪ ಪಡೆಯುತ್ತಿವೆ.
- ದಕ್ಷಿಣ ಚೀನಾ ಸಮುದ್ರದಲ್ಲಿ ಕೃತಕ ದ್ವೀಪಗಳನ್ನು ಸೃಷ್ಟಿಸುತ್ತಾ, ಅಲ್ಲಿ ಮಿಲಿಟರಿ ನೆಲೆಗಳನ್ನು ಸ್ಥಾಪಿಸುತ್ತಿರುವುದು ಚೀನಾ ಇತ್ತೀಚಿನ ವರ್ಷಗಳಲ್ಲಿ ತೋರಿದ ಹೊಸ ವರಸೆ, ಚೀನಾದ ನೌಕಾಪಡೆ ಪಾರೆಸೆಲ್ಸ್ ದ್ವೀಪಸಮೂಹದಲ್ಲಿ ಮಿಲಿಟರಿ ಕಸರತ್ತು ನಡೆಸಿದೆ. ವಿಯೆಟ್ನಾಂ ಮತ್ತು ತೈವಾನ್ ದೇಶಗಳು, ಈ ದ್ವೀಪ ಸಮೂಹವು ತಮ್ಮ ಸರಹದ್ದಿನಲ್ಲಿದೆ ಎಂದು ವಾದಿಸುತ್ತಿವೆ.
- ಅತ್ತ ಪೂರ್ವ ಚೀನಾ ಸಮುದ್ರದಲ್ಲೂ ವಿವಾದದ ಸುಳಿಗಳು ಎದ್ದಿವೆ. ಚೀನಾದ ಬಾಂಬರ್‌ಗಳು ಅಲ್ಲಿನ ನಿರ್ಜನ ದ್ವೀಪಗಳಲ್ಲಿ ಹಾರಾಟ ನಡೆಸುತ್ತಿವೆ ಎಂದು ಜಪಾನ್ ದೂರಿದೆ. ಆ ದ್ವೀಪಗಳ ಮೇಲೆ ಎರಡೂ ದೇಶಗಳು ಹಕ್ಕು ಸ್ಥಾಪನೆಗಾಗಿ ಜಿದ್ದಿಗೆ ಬಿದ್ದಿವೆ.

21. ವಿಶ್ವಸಂಸ್ಥೆಯಲ್ಲಿ ಮತ್ತೆ ಜಮ್ಮು ಕಾಶ್ಮೀರ ವಿಚಾರ ಎತ್ತಿದ ಪಾಕ್:

- ಇನ್ನಷ್ಟು ರಾಷ್ಟ್ರಗಳಿಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವ ನೀಡುವುದನ್ನು ವಿರೋಧಿಸಿರುವ ಪಾಕಿಸ್ತಾನವು, ವಿಶ್ವಸಂಸ್ಥೆಯ ಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಚಾರವನ್ನು ಪುನಃ ಪ್ರಸ್ತಾಪಿಸಿದೆ.

- 'ಕೋವಿಡ್–19 ನಂತರ ಬಹುಪಕ್ಷೀಯತೆ– 75ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಮಗೆಂಥ ವಿಶ್ವಸಂಸ್ಥೆ ಬೇಕು' ಎಂಬ ವಿಚಾರ ಕುರಿತು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯು ಶುಕ್ರವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಪಾಕಿಸ್ತಾನದ ವಿದೇಶಾಂಗ ವ್ಯವಹಾರಗಳ ಸಚಿವ ಮೊಹಮ್ಮದ್ ಖುರೇಷಿ, "ಬಲಾತ್ಕಾರ, ಶಕ್ತಿಯ ಅನಿಯಂತ್ರಿತ ಬಳಕೆಯ ಮೂಲಕ ವಿಶ್ವಸಂಸ್ಥೆ ಹಾಗೂ ಬಹುಪಕ್ಷೀಯತೆಯ ಪರಿಕಲ್ಪನೆಯನ್ನೇ ಬುಡ ಮೇಲು ಮಾಡಲಾಗುತ್ತಿದೆ. ಪಾಕಿಸ್ತಾನವು ಜಮ್ಮು ಕಾಶ್ಮೀರದ ಜನರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಬಗ್ಗೆ ಚಿಂತಿತವಾಗಿದೆ" ಎಂದರು.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

22. ಭಾರತದ ವಿರುದ್ಧ ಅಪಪ್ರಚಾರಕ್ಕೆ ಸಂಸದರಿಗೆ ಹಣ ನೀಡಿದ್ದ ಪಾಕ್!

- ಬ್ರಿಟನ್ ಸಂಸದರು ರಚಿಸಿಕೊಂಡಿದ್ದ ಸರ್ವಪಕ್ಷೀಯ ಸಂಸದೀಯ ಕಾಶ್ಮೀರ ನಿಯೋಗವು (ಎ.ಪಿ.ಪಿ.ಜಿ.ಕೆ.) ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಭೇಟಿ ನೀಡಿ ಅಲ್ಲಿ ಭಾರತೀಯ ಸೇನೆಯಿಂದ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂದು ಅಪಪ್ರಚಾರ ನಡೆಸಲು ಇಮ್ರಾನ್ ಖಾನ್ ಸರ್ಕಾರವು 31 ಲಕ್ಷ ರೂ. ನೀಡಿತ್ತು ಎಂಬ ಸಂಗತಿ ಬಹಿರಂಗಗೊಂಡಿದೆ.
- ನಿಯೋಗದ ನೇತೃತ್ವ ವಹಿಸಿದ್ದ ಲೇಬರ್ ಪಕ್ಷದ ಸಂಸದೆ ಡೆಬ್ಬಿ ಅಬ್ರಾಹಮ್ಸ್ ಅವರ ವೀಸಾ ಅವಧಿ ಮುಕ್ತಾಯ ಗೊಂಡಿದ್ದರಿಂದ ಅವರಿಗೆ ದೇಶದೊಳಗೆ ಪ್ರವೇಶ ನೀಡದೆ ಫೆಬ್ರವರಿ 17 ರಂದು ಅವರನ್ನು ದಿಲ್ಲಿಯಿಂದ ದುಬೈಗೆ ಕಳುಹಿಸಿಕೊಡಲಾಗಿತ್ತು.
- ಮಾರನೇ ದಿನ ಆಕೆ ಪಾಕಿಸ್ತಾನಕ್ಕೆ ವಿಮಾನದಲ್ಲಿ ತೆರಳಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಭೇಟಿ ಮಾಡಿ ತಮ್ಮ ನಿಯೋಗಕ್ಕೆ ಸಲ್ಲಬೇಕಿದ್ದ ಹಣವನ್ನು ಪಡೆದಿರುವುದು ಬಯಲಾಗಿದೆ.
- ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ ರದ್ದುಪಡಿಸಿ ಕೇಂದ್ರಾಡಳಿತ ಪ್ರದೇಶವಾಗಿ ಘೋಷಿಸಿದ್ದನ್ನು ಸಂಸದೆ ಡೆಬ್ಬಿ ವಿರೋಧಿಸಿದ್ದರು.

23. ನೇಪಾಳದಿಂದ ಗುಂಡಿನ ದಾಳಿ:

- ಗಡಿಯಲ್ಲಿ ಭಾರತೀಯರ ಮೇಲೆ ನೇಪಾಳ ಪೊಲೀಸರ ದೌರ್ಜನ್ಯ ಮುಂದುವರಿದಿದೆ. ಬಿಹಾರದ ಕಿಶನ್ ಗಂಜ್‌ನಲ್ಲಿನ ಇಂಡೋ–ನೇಪಾಳ ಗಡಿ ಬಳಿ ಭಾರತೀಯರ ಮೇಲೆ ನೇಪಾಳ ಪೊಲೀಸರು ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ.
- ಜಾನುವಾರಗಳನ್ನು ಹುಡುಕಿಕೊಂಡು ಗಡಿ ಬಳಿಯ ಮಾಫಿ ತೋಲಾ ಪ್ರದೇಶದ ಕೃಷಿಭೂಮಿಯಲ್ಲಿ ಸುತ್ತಾಡುತ್ತಿದ್ದ ಜಿತೇಂದ್ರ ಮತ್ತು ಆತನ ಇಬ್ಬರು ಸ್ನೇಹಿತರ ಮೇಲೆ ನೇಪಾಳ ಪೊಲೀಸರು ಏಕಾಏಕಿ ಗುಂಡು ಹಾರಿಸಿದ್ದಾರೆ. ಜಿತೇಂದ್ರನ ಸಹಚರರು ಪರಾರಿಯಾಗುವಲ್ಲಿ ಯಶಸ್ವಿಯಾದರೂ, ಆತನಿಗೆ ಮಾತ್ರ ಗುಂಡು ತಗುಲಿದೆ.

24. ಭಾರತ – ಅಮೆರಿಕ ಜಂಟಿ ಕಸರತ್ತು ಚೀನಾಗೆ ಅಪಥ್ಯ:

- ಅಂಡಮಾನ್ ನಿಕೋಬಾರ್ ದ್ವೀಪಗಳ ಸಮೀಪ ಭಾರತ ಮತ್ತು ಅಮೆರಿಕದ ನೌಕಾಪಡೆ ನಡೆಸಿರುವ ಜಂಟಿ ಕವಾಯತು ಭಾರತ ಚೀನಾ ನಡುವಣ ಗಡಿ ವಿವಾದದ ಸ್ಥಿತಿಯಲ್ಲಿ ಯಾವುದೇ ಬದಲಾವಣೆ ಉಂಟು ಮಾಡದು ಎಂದು ಚೀನಾದ ಸರ್ಕಾರಿ ಸ್ವಾಮ್ಯದ ಪತ್ರಿಕೆ 'ಗ್ಲೋಬಲ್ ಟೈಮ್' ಹೇಳಿದೆ.
- ಎಲ್.ಎ.ಸಿ.ಯಲ್ಲಿನ ಬಿಕ್ಕಟ್ಟು ಪರಿಹಾರಕ್ಕಾಗಿ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳಲು ಎರಡೂ ದೇಶಗಳು ಈ ತಿಂಗಳ ಆರಂಭದಲ್ಲಿ ಒಪ್ಪಿಕೊಂಡಿದ್ದವು. ಆದರೆ, ಈ ಸೈನಿಕರ ವಾಪಸಾತಿ ಪ್ರಕ್ರಿಯೆಯು ಅನಿಶ್ಚಿತವಾಗಿದೆ ಎಂಬುದರ ಸುಳಿವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇತ್ತೀಚೆಗೆ ನೀಡಿದ್ದರು.
- ಭಾರತದ ಗಡಿಯಲ್ಲಿ ಮಾತ್ರವಲ್ಲದೆ, ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಕೂಡ ಚೀನಾವು ಆಕ್ರಮಣಕಾರಿ ಧೋರಣೆ ಪ್ರದರ್ಶಿಸಿರುವ ಹೊತ್ತಿನಲ್ಲಿಯೇ ಕವಾಯತು ನಡೆದಿದೆ.
- ಎಲ್.ಎ.ಸಿ. ಮೇಲೆ ಹದ್ದಿನಕಣ್ಣು
- ವಾಸ್ತವ ನಿಯಂತ್ರಣ ರೇಖೆಯ ಮೇಲೆ ನಿಗಾ ಇರಿಸುವುದಕ್ಕಾಗಿ ಭಾರತೀಯ ನೌಕಾಪಡೆಯ ಪೊಸೈಡನ್ 8ಐ ವಿಮಾನವನ್ನು ಪೂರ್ವ ಲಡಾಖ್‌ನಲ್ಲಿ ನಿಯೋಜಿಸಲಾಗಿದೆ.
- ಭಾರತೀಯ ನೌಕಾ ಸೇನೆಯಲ್ಲಿ 2013 ರಲ್ಲಿ ಸೇರ್ಪಡೆಯಾಗಿದೆ. 2014ರಲ್ಲಿ ನಾಪತ್ತೆ ಆದ ಮಲೇಷಿಯ ಒಊ 370 ವಿಮಾನ ಶೋಧಕ್ಕೆ ಈ ವಿಮಾನಗಳನ್ನು ಬಳಸಲಾಗಿತ್ತು.
- ಉತ್ತರ ವಲಯದ ಕೆಲವು ಪ್ರಮುಖ ವಾಯುನೆಲೆಗಳಲ್ಲಿ ಮಿಗ್ 29ಕೆ ಯುದ್ಧ ವಿಮಾನಗಳನ್ನೂ ನಿಯೋಜಿಸಲಾಗುವುದು ಎಂದು ಮೂಲಗಳು ಹೇಳಿವೆ.
- ಭಾರತದ ನೌಕಾಪಡೆಯಲ್ಲಿ 40 ಮಿಗ್ 29ಕೆ ಯುದ್ಧ ವಿಮಾನಗಳಿವೆ. ಅವುಗಳಲ್ಲಿ 18 ವಿಮಾನಗಳನ್ನು ಭಾರತದ

ಯುದ್ಧ ವಿಮಾನ ವಾಹಕ ನೌಕೆ ಐ.ಎನ್.ಎಸ್. ವಿಕ್ರಮಾದಿತ್ಯದಲ್ಲಿ ನಿಯೋಜಿಸಲಾಗಿದೆ. ಉಳಿದ ಕೆಲವು ವಿಮಾನಗಳನ್ನು ಗಡಿ ಸಮೀಪದ ನೆಲೆಗಳಿಗೆ ಕಳುಹಿಸಲು ಯೋಚಿಸಲಾಗಿದೆ. ವಾಯುಪ್ರದೇಶದ ಮೇಲೆ ವಾಯುಪಡೆಯ ಪ್ರಾಬಲ್ಯ ಹೆಚ್ಚಳಕ್ಕೆ ಇದು ಪೂರಕ ಎಂದು ಮೂಲಗಳು ತಿಳಿಸಿವೆ.

- ವಾಯುಪಡೆಯು ಸುಖೋಯ್ 30, ಜಾಗ್ವಾರ್ ಮತ್ತು ಮಿರಾಜ್ ಯುದ್ಧ ವಿಮಾನಗಳನ್ನು ಪೂರ್ವ ಲಡಾಖ್ ಮತ್ತು ಎಲ್.ಎ.ಸಿ.ಯ ಇತರೆಡೆಗಳಲ್ಲಿ ಈಗಾಗಲೇ ನಿಯೋಜಿಸಲಾಗಿದೆ.

ಈ ಎಚ್ಚರಿಕೆ ರವಾನೆ

- ಮಲಕ್ಕಾ ಜಲಸಂಧಿಯಲ್ಲಿ ನಡೆಸಲಾದ ಜಂಟಿ ಸಮರಾಭ್ಯಾಸವು ಚೀನಾಕ್ಕೆ ನೀಡಿದ ನೇರ ಸಂದೇಶ. ಈ ಮಾರ್ಗವು ಚೀನಾಕ್ಕೆ ಅತ್ಯಂತ ಮಹತ್ವದ್ದಾಗಿದೆ. ಒಂದು ವೇಳೆ ಸಂಘರ್ಷವು ತೀವ್ರಗೊಂಡರೆ ಈ ಜಲ ಮಾರ್ಗದಲ್ಲಿ ಚೀನಾ ಹಡಗುಗಳ ಯಾನ ಕಷ್ಟ ಎಂಬ ಎಚ್ಚರಿಕೆಯ ರವಾನೆ ಯಾಗಿದೆ. ಆದರೆ, ಇದನ್ನು ಗಣನೆಗೇ ತೆಗೆದುಕೊಂಡಿಲ್ಲ ಎಂಬಂತೆ ಚೀನಾ ವರ್ತಿಸುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

25. ಭಾರತಕ್ಕೆ ಅಮೆರಿಕದ ಬೆಂಬಲ:

- ಭಾರತ ವಿರುದ್ಧ ಚೀನಾ ಗಡಿ ಅತಿಕ್ರಮಣವನ್ನು ಅಮೆರಿಕ ಸಂಸತ್ತಿನ ಕೆಳಮನೆ ಖಂಡಿಸಿದೆ. ಶಾಂತಿಯಿಂದ ಸಮಸ್ಯೆ ಪರಿಹಾರ ಮಾಡಿಕೊಳ್ಳುವಂತೆ ಚೀನಾವನ್ನು ಆಗ್ರಹಿಸಿದೆ.
- 'ಡಿಫೆನ್ಸ್ ಆಥರೈಸೇಷನ್ ಆ್ಯಕ್ಟ್'ಗೆ ತಿದ್ದುಪಡಿ ತರುವ ನಿರ್ಣಯವನ್ನು ಭಾರತೀಯ ಮೂಲದ ಸಂಸದ ಅಮಿಬೆರಾ ಹಾಗೂ ಸೀವ್ಜಬೋಟ್ ಮಂಡಿಸಿದ್ದು ಅದು ಸರ್ವಾನು ಮತದಿಂದ ಅಂಗೀಕಾರಗೊಂಡಿದೆ.
- ಇತ್ತೀಚೆಗೆ ಪೂರ್ವ ಲಡಾಖ್‌ನಲ್ಲಿ ಭಾರತ ಜತೆ ಗಡಿ ತಂಟೆ ತೆಗೆದಿದ್ದ ಚೀನಾಗೆ ಈ ಮೂಲಕ ಅಮೆರಿಕ ಎಚ್ಚರಿಕೆಯ ಸಂದೇಶ ರವಾನಿಸಿದೆ.
- ಕಮ್ಯೂನಿಸ್ಟ್ ಚೀನಾ, ಕೊರೋನಾ ಬಿಕ್ಕಟ್ಟು ಬಳಸಿಕೊಂಡು ನೆರೆ ರಾಷ್ಟ್ರಗಳ ಮೇಲೆ ಆಕ್ರಮಣ ಮಾಡುತ್ತಿದೆ. ಗಲ್ವಾನ್ ಕಣಿವೆ ಬಳಿ ವಾಸ್ತವ ನಿಯಂತ್ರಣ ರೇಖೆಯಲ್ಲಿ ಸೇನೆ ನಿಯೋಜಿಸಿ ಭಾರತದ ಮೇಲೆ ಬಲ ಪ್ರದರ್ಶಿಸುವ ಪ್ರಯತ್ನ ಮಾಡುತ್ತಿದೆ. ಭಾರತವೂ ಇದಕ್ಕೆ ಅಷ್ಟೇ ತೀಕ್ಷ್ಣವಾಗಿ ಪ್ರತ್ಯುತ್ತರ ಕೊಟ್ಟಿದೆ. ಇಂತಹ ಕಠಿಣ ಸನ್ನಿವೇಶದಲ್ಲಿ ಭಾರತದ ಪರ ಅಮೆರಿಕ ನಿಲ್ಲಬಹುದು ಎಂಬುದು ಚೀನಾಗೆ ಸಂಕೇತವಾಗಿದೆ.
- ಅಲ್ಲದೇ ದಕ್ಷಿಣ ಚೀನಾ ಸಮುದ್ರದ 35 ಲಕ್ಷ ಚದರ ಕಿ.ಮೀ. ಪ್ರದೇಶದ ಅಷ್ಟೂ ಸಂಪತ್ತು ತನಗೇ ಸೇರಿದ್ದು ಎಂದು ಹೇಳಿ ವಿಯೆಟ್ನಾಂ, ಬ್ರೂನಿ, ಮಲೇಷ್ಯಾ, ತೈವಾನ್, ಫಿಲಿಪೀನ್ಸ್ ಮೇಲೆ ಅಟ್ಟಹಾಸ ಮೆರೆಯುತ್ತಿರುವ ಅದರ ಆಕ್ರಮಣಶೀಲತೆಯನ್ನು ಬಗ್ಗು ಬಡಿಯುವುದೂ ಇದರ ಉದ್ದೇಶವಾಗಿದೆ.
- ಏಷ್ಯಾದಲ್ಲಿ ಚೀನಾಗೆ ಸಡ್ಡು ಹೊಡೆಯುವ ತಾಕತ್ತಿರುವ ಭಾರತಕ್ಕೆ ರಾಜತಾಂತ್ರಿಕ ಬಲ ನೀಡುವುದು, ಸಂಕಷ್ಟದ ಸಮಯದಲ್ಲಿ ಯುದ್ಧೋಪಕರಣಗಳನ್ನು ರವಾನಿಸುವುದು ಸೇರಿ ಪ್ರಮುಖ ಅಂಶಗಳು ನಿರ್ಣಯದಲ್ಲಿ ಸೇರಿವೆ.

26. ಹೂಸ್ಟನ್‌ನಲ್ಲಿರುವ ಚೀನಾ ರಾಯಭಾರ ಕಚೇರಿಗೆ ಬೀಗ:

- ಹೂಸ್ಟನ್‌ನಲ್ಲಿರುವ ಚೀನಾ ರಾಯಭಾರ ಕಚೇರಿಯನ್ನು ಮುಚ್ಚುವಂತೆ ಅಮೆರಿಕ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಅಮೆರಿಕದ ಬೌದ್ಧಿಕ ಆಸ್ತಿ ಮತ್ತು ಖಾಸಗಿ ಮಾಹಿತಿಗಳ ರಕ್ಷಣೆಗೆ ಇದು ಅನಿವಾರ್ಯ ಕ್ರಮವಾಗಿದೆ ಎಂದು ಹೇಳಲಾಗುತ್ತಿದೆ.
- ಅಮೆರಿಕನ್ನರ ಉದ್ಯೋಗಗಳನ್ನು ಕಸಿಯುವುದು, ಅಕ್ರಮ ವ್ಯಾಪಾರಗಳನ್ನು ಖಂಡಿಸಿ ಈ ಹಿಂದೆ ಕೂಡ ಚೀನಾ ವಿರುದ್ಧ ಕ್ರಮ ಜರುಗಿಸಿದ್ದೇವೆ ಎಂದು ಅಮೆರಿಕ ಗೃಹ ಸಚಿವಾಲಯ ತಿಳಿಸಿದೆ.

27. ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಮಾನ್ಯ ಸಭೆಯ ಅಧಿವೇಶನ:

- ವಿಶ್ವಸಂಸ್ಥೆಯ 75 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಾಮಾನ್ಯ ಸಭೆ ಜರುಗಲಿದ್ದು, 193 ಸದಸ್ಯ ರಾಷ್ಟ್ರಗಳು ಭಾಗವಹಿಸಲಿವೆ.
- ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 75ನೇ ಅಧಿವೇಶನವು ಸೆಪ್ಟಂಬರ್ 15 ರಂದು ಪ್ರಾರಂಭವಾಗಲಿದೆ.
- ಕೊರೋನಾ ವೈರಸ್ ನಿಂದಾಗಿ ವಿಡಿಯೊ ಕಾನ್ಸರೆನ್ಸ್ ಮೂಲಕ ಸಭೆ ನಡೆಸಲು ನಿರ್ಣಯ ಕೈಗೊಳ್ಳಲಾಗಿದ್ದು,

ಪ್ರಮುಖ ದೇಶಗಳ ನಾಯಕರು ತಮ್ಮ ಭಾಷಣದ ವಿಡಿಯೋಗಳನ್ನು ಸಾಮಾನ್ಯ ಸಭೆಗೆ ಕಳುಹಿಸಲಿದ್ದಾರೆ.

- ಸದಸ್ಯ ರಾಷ್ಟ್ರಗಳ, ವೀಕ್ಷಕ ರಾಷ್ಟ್ರಗಳ ಹಾಗೂ ಯುರೋಪಿಯನ್ ರಾಷ್ಟ್ರಗಳ ಮುಖ್ಯಸ್ಥರ ಭಾಷಣದ ವಿಡಿಯೊಗಳನ್ನು ಸಾಮಾನ್ಯ ಸಭೆಯ ಸಭಾಂಗಣದಲ್ಲಿ ಪ್ರಸಾರ ಮಾಡಲಾಗುವುದು ಎಂದು ಸಾಮಾನ್ಯ ಸಭೆ ತಿಳಿಸಿದೆ.

28. ವಾಯುಪಡೆಗೆ ಫ್ರಾನ್ಸ್ ಹ್ಯಾಮರ್ ಕ್ಷಿಪಣಿ ಬಲ:

- ಚೀನಾ ಗಡಿ ವಿವಾದದ ನಡುವೆಯೇ ಫ್ರಾನ್ಸ್‌ನಿಂದ 'ಹ್ಯಾಮರ್' ಕ್ಷಿಪಣಿಗಳನ್ನು ಖರೀದಿಸಲು ಭಾರತ ಮುಂದಾಗಿದೆ.
- ಆಗಸದಿಂದ ಭೂಮಿಗೆ ಅಪ್ಪಳಿಸಿ ಯಾವುದೇ ಗುರಿಯನ್ನು ನಿಖರವಾಗಿ ಉಡಾಯಿಸುವ ಈ ಕ್ಷಿಪಣಿಗಳ ತುರ್ತು ಸ್ವಾಧೀನಕ್ಕೆ ರಕ್ಷಣಾ ಸಚಿವಾಲಯ ಆದೇಶ ನೀಡಿದೆ.
- ಜುಲೈ 29ರಂದು ಐದು ರಫೇಲ್ ಯುದ್ಧ ವಿಮಾನಗಳು ವಾಯು ಪಡೆಗೆ ಸೇರ್ಪಡೆಯಾಗಲಿವೆ. ಇದರ ಜತೆಯಲ್ಲೇ 'ಹ್ಯಾಮರ್' ಕ್ಷಿಪಣಿ ಸಹ ಬತ್ತಳಿಕೆ ಸೇರುವುದರಿಂದ ವಾಯು ಪಡೆಗೆ ಬಲ ಬಂದಂತಾಗಿದೆ.
- ಮೂಲತಃ ಫ್ರಾನ್ಸ್‌ನ ನೌಕಾಪಡೆ ಮತ್ತು ವಾಯುಪಡೆ ಬಳಕೆಗಾಗಿ ಈ ಕ್ಷಿಪಣಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಯಾವುದೇ ರೀತಿಯ ಭೂಪ್ರದೇಶ ಮತ್ತು ವಾತಾವರಣದಲ್ಲಿಯೂ ಬಂಕರ್, ಶೆಲ್ಟರ್‌ಗಳನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿರುವುದರಿಂದ 'ಹ್ಯಾಮರ್'ಗಳನ್ನು ಪೂರ್ವ ಲಡಾಖ್ ವಲಯದಲ್ಲಿಯೇ ನಿಯೋಜಿಸಲೂ ವಾಯುಪಡೆ ನಿರ್ಧರಿಸಿದೆ.

29. ಜಿನ್‌ಪಿಂಗ್ ಆರ್ಥಿಕ ನೀತಿ ವಿರುದ್ಧದ ಜನಾಕ್ರೋಶ ಗಡಿ ವಿವಾದಕ್ಕೆ ಪ್ರೇರಣೆ:

- ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಆರ್ಥಿಕ ನೀತಿಗಳ ವಿರುದ್ಧ ಚೀನಾದಲ್ಲಿ ಜನಾಕ್ರೋಶ ಹೆಚ್ಚಿದೆ. ಇದೇ ಸಂದರ್ಭ ಜೋರಾಗಿರುವ ಅಂತರರಾಷ್ಟ್ರೀಯ ಒತ್ತಡವೂ ಅವರನ್ನು ತೀವ್ರ ಇಕ್ಕಟ್ಟಿಗೆ ಸಿಕ್ಕಿಸಿರುವುದು, ಗಡಿ ತಂಟೆಗಳಿಗೆ ಪ್ರಚೋದನೆ ನೀಡಲು ಕಾರಣವಾಗಿದೆ ಎಂದು ಅಂತರರಾಷ್ಟ್ರೀಯ ಸಮರ ನೀತಿ ತಜ್ಞರು ವಿಶ್ಲೇಷಿಸಿದ್ದಾರೆ.
- ಕೋವಿಡ್ ಸಂಕಷ್ಟದಿಂದ ಸಂಪೂರ್ಣ ಹೊರಬರದ ಚೀನಾ ಆರ್ಥಿಕ ಮುಗ್ಗಟ್ಟಿನ ಹಾದಿಯಲ್ಲಿದೆ. ಆ ದೇಶದ ಅಂತರರಾಷ್ಟ್ರೀಯ ವ್ಯಾಪಾರ ನೆಲಕಚ್ಚಿದೆ.
- ಚೀನಾ ಪೀಪಲ್ಸ್ ಲಿಬರೇಷನ್ ಆರ್ಮಿಯಲ್ಲಿ ಅಧ್ಯಕ್ಷರ ವಿರುದ್ಧ ಅಸಮಾಧಾನ ಹೊಗೆಯಾಡುತ್ತಿದೆ.
- ಹತಾಶೆಯ ಇಂತಹ ಸನ್ನಿವೇಶಗಳನ್ನು ಗೆಲ್ಲಲಾಗದೇ ಚಡಪಡಿಸುತ್ತಿರುವ ಜಿನ್‌ಪಿಂಗ್, ಲಡಾಖ್ ಗಡಿ ಮತ್ತು ದಕ್ಷಿಣ ಚೀನಾ ಸಾಗರ ಪ್ರದೇಶದಲ್ಲಿ ಅತಿಕ್ರಮಣದ ಅಬ್ಬರ ಪ್ರದರ್ಶಿಸಿ ತಾನಿನ್ನೂ ಬಲಾಢ್ಯ ಎನ್ನುವುದನ್ನು ಬಿಂಬಿಸಲು ಯತ್ನಿಸುತ್ತಿದ್ದಾರೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.
- ಅಮೆರಿಕ, ಆಸ್ಟ್ರೇಲಿಯಾ, ಯೂರೋಪ್ ರಾಷ್ಟ್ರಗಳು ಮತ್ತು ಏಷ್ಯಾದ ಕೆಲವು ರಾಷ್ಟ್ರಗಳನ್ನು ಜಿನ್‌ಪಿಂಗ್ ವಿರೋಧ ಕಟ್ಟಿಕೊಂಡಿದ್ದಾರೆ.

30. ಪಾಕಿಸ್ತಾನ–ಬಾಂಗ್ಲಾದ ಮಧ್ಯಸ್ಥಿಕೆಗೆ ಚೀನಾ ಪ್ರಯತ್ನ:

- ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ಪ್ರಧಾನಿಗಳಿಬ್ಬರು ನಡೆಸಿದ ಅಪರೂಪದ ದೂರವಾಣಿ ಸಂಭಾಷಣೆಯು ಭಾರತಕ್ಕೆ ಇರುಸು ಮುರುಸು ಉಂಟುಮಾಡಿದೆ.
- ಭಾರತದ ನೆರೆ ರಾಷ್ಟ್ರಗಳ ಮೇಲೆ ಹಿಡಿತ ಸಾಧಿಸುವ ಚೀನಾದ ಮತ್ತೊಂದು ಪ್ರಯತ್ನ ಇದಾಗಿದೆ ಎಂದೇ ಈ ದೂರವಾಣಿ ಸಂಭಾಷಣೆಯನ್ನು ವಿಶ್ಲೇಷಿಸಲಾಗಿದೆ.
- ಬಾಂಗ್ಲಾದೇಶ ಹಾಗೂ ಪಾಕಿಸ್ತಾನದ ನಡುವಿನ ಐದು ದಶಕಗಳ ವೈಷಮ್ಯಕ್ಕೆ ಕೊನೆಹಾಡಲು, ಮಿತ್ರ ರಾಷ್ಟ್ರವಾದ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ನಡುವೆ ಮಧ್ಯವರ್ತಿಯಾಗಲು ಚೀನಾ ಪ್ರಯತ್ನಿಸುತ್ತಿದೆ ಎಂದು ಕೇಂದ್ರ ಸರ್ಕಾರ ಸಂಶಯ ವ್ಯಕ್ತಪಡಿಸಿದೆ.
- ಜುಲೈ 22ರಂದು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್, ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರಿಗೆ ದೂರವಾಣಿ ಕರೆ ಮಾಡಿದ್ದರು. ದೇಶದಲ್ಲಿ ಕೋವಿಡ್–19 ಸ್ಥಿತಿಗತಿ ಹಾಗೂ ನೆರೆ ಸಮಸ್ಯೆಯ ಕುರಿತು ಇಮ್ರಾನ್ ಖಾನ್ ಅವರಿಗೆ ಹಸೀನಾ ಅವರು ಮಾಹಿತಿ ನೀಡಿದರು.

31. ಭಾರತದ ಮೇಲೆ ಜಂಟಿ ವಾಯು ದಾಳಿ:

- ಪೂರ್ವ ಲಡಾಖ್‌ನ ವಾಸ್ತವ ಗಡಿ ರೇಖೆ ಬಳಿ ಚೀನಾ ವಿವಾದ ತೆಗೆದಿರುವ ಸಂದರ್ಭದಲ್ಲಿಯೇ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪಾಕಿಸ್ತಾನ ಸೇನೆಯೂ ಯುದ್ಧ ತಾಲೀಮು ನಡೆಸತೊಡಗಿದೆ.
- ಚೀನಾ ಸೂಚನೆಯಂತೆ ಪಾಕಿಸ್ತಾನ ವಾಯುಪಡೆಯು ಪಿ.ಒ.ಕೆ.ಯಲ್ಲಿನ ಗಿಲ್ಗಿಟ್ ಬಾಲ್ಟಿಸ್ತಾನದ ಸ್ಕರ್ದು ಪ್ರದೇಶದಲ್ಲಿರುವ ಕ್ಯಾದ್ರಿ ವಾಯುನೆಲೆಯಲ್ಲಿ ತನ್ನ ಜೆ–17 ಯುದ್ಧವಿಮಾನಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆ. ನಿತ್ಯ ಈ ಪ್ರದೇಶದಲ್ಲಿ ಮಿಲಿಟರಿ ತಾಲೀಮನ್ನೂ ನಡೆಸುತ್ತಿದೆ.

- ಜುಲೈ 24–25ರಂದು ಸ್ಕರ್ದುವಿನಲ್ಲಿನ ವಾಯುನೆಲೆಗೆ ಪಾಕ್ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಮುಜಾಹೀದ್ ಅನ್ವರ್ ಖಾನ್ ಭೇಟಿ ನೀಡಿದ್ದಾರೆ. ಕಮಾಂಡರ್‌ಗಳೊಂದಿಗೆ ಸಭೆಯನ್ನೂ ನಡೆಸಿದ್ದಾರೆ ಎಂದು ತಿಳಿದುಬಂದಿದೆ.
- ಸದ್ಯ ಸೂಕ್ಷ್ಮ ಪ್ರದೇಶಗಳೆನಿಸಿರುವ ಜಮ್ಮುಮತ್ತು ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳಲ್ಲಿನ ಗಡಿ ಭಾಗಗಳಿಂದ ಒಂದೇ ಬಾರಿಗೆ ಚೀನಾ ಮತ್ತು ಪಾಕಿಸ್ತಾನ ಮಿಲಿಟರಿ ದಾಳಿ ನಡೆಸುವ ಹುನ್ನಾರವನ್ನು ನಡೆಸುತ್ತಿದೆಯೇ ಎಂಬ ಶಂಕೆಯನ್ನು ರಕ್ಷಣಾ ತಜ್ಞರು ವ್ಯಕ್ತಪಡಿಸಿದ್ದಾರೆ.

ಸಮುದ್ರದಲ್ಲಿಯೂ ತಾಲೀಮು

- ಪೂರ್ವ ಲಡಾಖ್ ಗಡಿ ಸಂಘರ್ಷದಲ್ಲಿ ಭಾರತದ ಬೆನ್ನಿಗೆ ನಿಂತಿರುವ ಅಮೆರಿಕಕ್ಕೆ ಬಿಸಿ ಮುಟ್ಟಿಸಲು ಚೀನಾವು ದಕ್ಷಿಣ ಚೀನಾ ಸಮುದ್ರದಲ್ಲಿ ಯುದ್ಧ ತಾಲೀಮು ತೀವ್ರಗೊಳಿಸಿದೆ. ಯುದ್ಧವಿಮಾನಗಳ ಮೂಲಕ ಸಮುದ್ರ ಪ್ರದೇಶದಲ್ಲಿ ಚೀನಾ ಸೇನೆ ಬಾಂಬ್ ಸ್ಫೋಟಿಸುತ್ತಿದೆ. ಚೀನಾ ವಾಯುಪಡೆಯೇ ಈ ಕುರಿತ ಚಿತ್ರಗಳನ್ನು ಅಧಿಕೃತವಾಗಿ ಬಿಡುಗಡೆ ಮಾಡಿದೆ.

ಭೂತಾನ್ ಮೇಲೂ ಕಣ್ಣು

- ವಿಸ್ತರಣಾವಾದದ ಹುಚ್ಚಿಗೆ ಬಿದ್ದಿರುವ ಚೀನಾವು ಭೂತಾನ್ ಜತೆಗೂ ಗಡಿ ವಿವಾದ ತೆಗೆದಿರುವುದು ಬೆಳಕಿಗೆ ಬಂದಿದೆ, ಭೂತಾನ್ ತ್ರಾಶಿಗಂಗ್ ಜಿಲ್ಲೆಯಲ್ಲಿನ ಅಭಯಾರ್ಣ್ಯದ ಅಭಿವೃದ್ಧಿಗಾಗಿ ಅಮೆರಿಕ ಮೂಲದ ಸಂಸ್ಥೆಯೊಂದರ ನೆರವು ಪಡೆಯಲು ಭೂತಾನ್ ಮುಂದಾಗಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಚೀನಾ, "650 ಚ.ಕಿ.ಮೀ. ವಿಸ್ತೀರ್ಣದ ಅಭಯಾರಣ್ಯದ ಕೆಲವು ಭಾಗ ನಮಗೆ ಸೇರಿದ್ದು," ಎಂದು ಹೇಳಿಕೊಂಡಿದೆ.
- ಚೀನಾದ ಈ ನಡೆಗೆ ಭೂತಾನ್ ತನ್ನ ಪ್ರತಿರೋಧವನ್ನೂ ದಾಖಲಿಸಿದೆ. ಇದೇ ಅಭಯಾರಣ್ಯದ ಮೂಲಕ ರಸ್ತೆ ನಿರ್ಮಿಸುವ ಪ್ರಸ್ತಾವವನ್ನು ಭಾರತ ಭೂತಾನ್‌ಗೆ ಸಲ್ಲಿಸಿದ್ದು, ಇನ್ನೂ ಅನುಮತಿ ಸಿಗಬೇಕಿದೆ. ಈ ರಸ್ತೆ ನಿರ್ಮಾಣವಾದರೆ ಅಸ್ಸಾಂನ ಗುವಾಹಟಿಯಿಂದ ಅರುಣಾಚಲ ಪ್ರದೇಶದ ತವಾಂಗ್ ನಡುವಿನ ಅಂತರ 450 ಕಿ.ಮೀ. ಕಡಿಮೆಯಾಗಲಿದೆ.
- ಚೀನಾ–ಭೂತಾನ್ ನಡುವೆ ಗಡಿ ವಿವಾದ ಇತ್ಯರ್ಥಕ್ಕಾಗಿ 20 ಸಲ ಮಾತುಕತೆಗಳು ನಡೆದಿವೆ. ಕೊನೆಯ ಮಾತುಕತೆ ನಡೆದಿರುವುದು 2016ರಲ್ಲಿ.
- ಚೀನಾ ಉದ್ದೇಶ ಪೂರ್ವಕವಾಗಿಯೇ ಗಡಿ ವಿವಾದವನ್ನು ಜೀವಂತವಾಗಿ ಇರಿಸಿದೆ.

32. ಮಲೇಷ್ಯಾ ಮಾಜಿ ಪ್ರಧಾನಿ ನಜೀಬ್‌ಗೆ 12 ವರ್ಷ ಜೈಲು:

- ಬಹುಕೋಟಿ ಹಣಕಾಸು ವಂಚನೆ ಪ್ರಕರಣದಲ್ಲಿ ಮಲೇಷ್ಯಾದ ಮಾಜಿ ಪ್ರಧಾನಿ ನಜೀಬ್ ರಜಾಕ್ ಅವರಿಗೆ ಅಲ್ಲಿನ ನ್ಯಾಯಾಲಯವು 12 ವರ್ಷ ಜೈಲು ಶಿಕ್ಷೆ ವಿಧಿಸಿದೆ. ನ್ಯಾಯಮೂರ್ತಿ ಮೊಹಮದ್ ನಜಲಾನ್ ಘಜಾಲಿ ಅವರು ತೀರ್ಪು ಪ್ರಕಟಿಸಿದ್ದಾರೆ.
- ಅಧಿಕಾರ ದುರುಪಯೋಗ ಪ್ರಕರಣದಲ್ಲಿ 12 ವರ್ಷ ಜೈಲು, ವಿಶ್ವಾಸ ದ್ರೋಹದ ಮೂರು ಪ್ರಕರಣಗಳಲ್ಲಿ ತಲಾ 10 ವರ್ಷ ಹಾಗೂ ಅಕ್ರಮ ಹಣ ಆ ವರ್ಗಾವಣೆಯ ಮೂರು ಪ್ರಕರಣಗಳಲ್ಲಿ ತಲಾ 10 ವರ್ಷ ಶಿಕ್ಷೆ ವಿಧಿಸಲಾಗಿದೆ. ಜೊತೆಗೆ 370 ಕೋಟಿ ದಂಡವನ್ನೂ ಹೇರಲಾಗಿದೆ. ಎಲ್ಲಾ ಶಿಕ್ಷೆಗಳೂ ಏಕ ಕಾಲದಲ್ಲೇ ಜಾರಿಯಾಗಲಿವೆ ಎಂದು ಘಜಾಲಿ ಅವರು ತೀರ್ಪಿನಲ್ಲಿ ತಿಳಿಸಿದ್ದಾರೆ.

33. ಭಾರತದ ನೆರೆಯ ದೇಶಗಳ ಜತೆ ಚೀನಾ ಸಭೆ – ಪಾಕ್, ಅಫ್ಘಾನಿಸ್ತಾನ, ನೇಪಾಳದ ವಿದೇಶಾಂಗ ಸಚಿವರೊಂದಿಗೆ ವಿಡಿಯೋ ಸಂವಾದ:

- ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರು ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ನೇಪಾಳದ ವಿದೇಶಾಂಗ ಸಚಿವರೊಂದಿಗೆ ಮೊದಲ ವಿಡಿಯೊ ಸಂವಾದ ಸಭೆ ನಡೆಸಿದರು.
- ಕೋವಿಡ್ ಸೋಂಕು ನಿಯಂತ್ರಣಕ್ಕೆ ನಾಲ್ಕು ಅಂಶಗಳ ಕಾರ್ಯಕ್ರಮ, ಆರ್ಥಿಕ ಚೇತರಿಕೆ ಹಾಗೂ ಬೆಲ್ಟ್ ಅಂಡ್ ರೋಡ್ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿ ಪುನರಾರಂಭ ಕುರಿತು ಚರ್ಚಿಸಿದರು.
- ಭಾರತ–ಚೀನಾ ನಡುವೆ ಲಡಾಖ್ ಗಡಿ ಬಿಕ್ಕಟ್ಟು ಇರುವ ನಡುವೆಯೇ ಚೀನಾ ನೇತೃತ್ವದಲ್ಲಿ ಭಾರತದ ನೆರೆಯ ನಾಲ್ಕು ದೇಶಗಳು ಸಭೆ ಸೇರಿರುವುದು ಗಮನಾರ್ಹ ಅಂಶ.
- ಅಫ್ಘಾನ್‌ನ ವಿದೇಶಾಂಗ ಸಚಿವ ಮೊಹಮ್ಮದ್ ಹನೀಫ್ ಅತ್ಮರ್, ನೇಪಾಳದ ಸಚಿವ ಪ್ರದೀಪ್ ಕುಮಾರ್ ಗ್ಯಾವಲಿ ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಪಾಕಿಸ್ತಾನದ ವಿದೇಶಾಂಗ ಸಚಿವರ ಬದಲಾಗಿ, ಆರ್ಥಿಕ ವ್ಯವಹಾರಗಳ ಸಚಿವ ಮಕ್ದೂಮ್ ಖುಸ್ರೋ ಭಕ್ತಿಯಾರ್ ಇದ್ದರು.
- ಕೊರೋನಾ ಕಳಂಕ ತೊಡೆದು ಹಾಕುವುದು ಮತ್ತು ವಿಶ್ವ ಆರೋಗ್ಯ ಸಂಸ್ಥೆಗೆ (ಡಬ್ಲ್ಯೂಎಚ್‌ಒ) ಬೆಂಬಲವಾಗಿ ನಿಲ್ಲುವುದು ಈ ಪ್ರಸ್ತಾವದಲ್ಲಿವೆ.

34. ನಾಸ್ಡಾಕ್ ಬಿಲ್‌ಬೋರ್ಡ್‌ನಲ್ಲಿ ಪ್ರದರ್ಶಿತವಾದ ಭಾರತದ ಮೊದಲ ಕ್ಲಬ್

- ನ್ಯೂಯಾರ್ಕ್ ಟೈಮ್ಸ್ ಸ್ಕೇರ್‌ನಲ್ಲಿರುವ NASDAQ ಬಿಲ್‌ಬೋರ್ಡ್‌ನಲ್ಲಿ ಕೊಲ್ಕತ್ತದ ಮೋಹನ್ ಬಾಗನ್ ಅಥ್ಲೆಟಿಕ್ ಕ್ಲಬ್ ಹೆಸರು ಮಿಂಚಿತು.
- ಅಮೆರಿಕದ ಷೇರು ವಿನಿಮಯ ಕೇಂದ್ರವಾದ NASDAQ ಬಿಲ್‌ಬೋರ್ಡ್‌ನಲ್ಲಿ ಈ ಗೌರವ ಗಳಿಸಿದ ಭಾರತದ ಮೊದಲ

ಕ್ರೀಡಾ ಕ್ಲಬ್ ಎಂಬ ಹೆಗ್ಗಳಿಕೆಗೆ ಮೋಹನ್ ಬಾಗನ್ ಪಾತ್ರವಾಯಿತು.

- 1889ರಲ್ಲಿ ಕ್ಲಬ್ ಆರಂಭವಾಗಿತ್ತು.
- 1911ರ ಜುಲೈ 29ರಂದು ಬಾಗನ್ ಫುಟ್‌ಬಾಲ್ ತಂಡವು ಈಸ್ಟ್ ಯಾರ್ಕ್‌ಶೈರ್ ರೆಜಿಮೆಂಟ್ ತಂಡದ ಎದುರು 2–1 ಗೋಲುಗಳಿಂದ ಗೆದ್ದಿತ್ತು. ಅಲ್ಲಿಯವರೆಗೆ ಯಾವುದೇ ಭಾರತೀಯ ಫುಟ್‌ಬಾಲ್ ಕ್ಲಬ್ ಬ್ರಿಟಿಷ್ ತಂಡಗಳ ಎದುರು ಗೆದ್ದಿರಲಿಲ್ಲ. ಇದರಿಂದಾಗಿ ಫುಟ್‌ಬಾಲ್‌ನಲ್ಲಿ ಬ್ರಿಟಿಷರ ಏಕಸ್ವಾಮ್ಯ ಅಂತ್ಯವಾಗಿತ್ತು. ಆ ಐತಿಹಾಸಿಕ ಜಯವನ್ನು ಪ್ರತಿವರ್ಷವೂ ಆಚರಿಸಲಾಗುತ್ತದೆ.

35. ಮಂಗಳ ಯಾನ ಆರಂಭಿಸಿದ ನಾಸಾ ರೊಬಾಟಿಕ್ :

- ಮಂಗಳ ಗ್ರಹದಲ್ಲಿ ಮನುಷ್ಯನ ಇರುವಿಕೆ ಹಾಗೂ ಅಲ್ಲಿನ ಪುರಾತನ ಜೀವನ ಕ್ರಮದ ಬಗ್ಗೆ ಅಧ್ಯಯನ ನಡೆಸಲು ಉದ್ದೇಶಿಸಿರುವ ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ, ಬಹುನಿರೀಕ್ಷಿತ ಮಂಗಳಯಾನಕ್ಕೆ ಚಾಲನೆ ನೀಡಿದೆ.
- ಪರ್ಸಿವಿಯರೆನ್ಸ್ ಹೆಸರಿನ ರೊಬಾಟಿಕ್ ರೋವರ್ ಹೊತ್ತ ಬಾಹ್ಯಾಕಾಶ ನೌಕೆ ಬೆಳಗ್ಗಿನ ವೇಳೆ ಯಶಸ್ವಿಯಾಗಿ ಯಾನ ಆರಂಭಿಸಿತು. ಪರ್ಸಿವಿಯರೆನ್ಸ್, ಇದುವರೆಗೆ ಮಂಗಳ ಗ್ರಹಕ್ಕೆ ನಾಸಾ ರವಾನಿಸಿರುವ ರೋವರ್‌ಗಳಲ್ಲಿ ಅತಿ ಹಳೆಯದಾಗಿದ್ದು, ಅತ್ಯಾಧುನಿಕ ತಂತ್ರಜ್ಞಾನ ವ್ಯವಸ್ಥೆ ಹೊಂದಿದೆ. ದೊಡ್ಡ ಕಾರಿನ ಗಾತ್ರದ ಈ ರೋವರ್‌ನಲ್ಲಿ ಅತಿ ಸೂಕ್ಷ್ಮ ದೃಶ್ಯಗಳನ್ನು ಸೆರೆಹಿಡಿಯುವ ಕ್ಯಾಮೆರಾಗಳು, ಮೈಕ್ರೋಫೋನ್‌ಗಳು, ಡ್ರಿಲ್‌ಗಳು ಹಾಗೂ ಲೇಸರ್‌ಗಳಿವೆ.
- 48 ಕೋಟಿ ಕಿ.ಮೀ. ಪ್ರಯಾಣ ಮಾಡಲಿರುವ ಈ ರೊಬಾಟಿಕ್ ರೋವರ್ ಮುಂದಿನ ಫೆಬ್ರವರಿಗೆ ಮಂಗಳನ ನೆಲದಲ್ಲಿ ಲ್ಯಾಂಡ್ ಆಗಲಿದೆ. ಮಂಗಳ ಗ್ರಹದ ಕಲ್ಲು– ಮಣ್ಣು ಸಂಗ್ರಹಿಸಿ ಅಧ್ಯಯನಕ್ಕೆ ನೆರವಾಗಲಿದೆ. ಈ ರೋವರ್ 2031ರ ವೇಳೆಗೆ ಭೂಮಿಗೆ ವಾಪಸಾಗಲಿದೆ.
- ಆರು ಚಕ್ರ ಉಳ್ಳ ಪರ್ಸಿವಿಯರೆನ್ಸ್ ಪ್ಲುಟೋನಿಯಮ್ ಬ್ಯಾಟರಿ ನೆರವಿನಿಂದ ಕಾರ್ಯಾಚರಣೆ ನಡೆಸಲಿದೆ. ಇದು ಸೇರಿದರೆ ನಾಸಾದ ಒಂಬತ್ತನೇ ಮಂಗಳಯಾನ ಯಶಸ್ವಿಯಾದಂತಾಗಲಿದೆ. ಇದಕ್ಕಾಗಿ 8 ಶತಕೋಟಿ ಡಾಲರ್ ವೆಚ್ಚ ಮಾಡಲಾಗುತ್ತಿದೆ.

36. ಪ್ಯಾರಿಸ್ ಒಪ್ಪಂದ ಏಕಪಕ್ಷೀಯ:

- ಪ್ಯಾರಿಸ್ ಒಪ್ಪಂದದಲ್ಲಿರುವ ನಿಯಮಗಳನ್ನು ಅಮೆರಿಕ ಮಾತ್ರ ಪಾಲನೆ ಮಾಡುವ ಮೂಲಕ ಹವಾಮಾನ ವೈಪರೀತ್ಯ ನಿಯಂತ್ರಣಕ್ಕೆ ಸಹಕರಿಸಬೇಕು. ಆದರೆ, ಭಾರತ, ಚೀನಾ ಮತ್ತು ರಷ್ಯಾಗಳಿಗೆ ಈ ನಿಯಮಗಳು ಅನ್ವಯಿಸುವುದಿಲ್ಲ. ಇದು ಏಕಪಕ್ಷೀಯ, ಸಾರ್ಮಥ್ಯ ಕುಗ್ಗಿಸುವಂತಹ ಒಪ್ಪಂದವಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.
- ಪ್ಯಾರಿಸ್ ಒಪ್ಪಂದದಿಂದ ಅಮೆರಿಕ ಹೊರಗುಳಿದಿರುವ ಕುರಿತ ಕಾರಣಗಳನ್ನು ನೀಡಿದ ಅವರು, 'ಈ ಒಪ್ಪಂದದಲ್ಲಿರುವಂತಹ ಹಲವು ನಿಬಂಧನೆಗಳನ್ನು ನಾವು ಅಳವಡಿಸಿಕೊಂಡರೆ, ಅಮೆರಿಕದ ಉದ್ಯೋಗ, ಕಾರ್ಖಾನೆಗಳು, ಉದ್ಯಮಗಳನ್ನು ಕಳೆದುಕೊಳ್ಳ ಬೇಕಾಗುತ್ತದೆ. ಬೇರೆ ಬೇರೆ ರಾಷ್ಟ್ರಗಳು ಸ್ಪರ್ಧೆಯಲ್ಲಿ ಮುಂದುವರಿಯುತ್ತವೆ. ಹಾಗೆ ಆಗಲು ನಾನು ಬಿಡುವುದಿಲ್ಲ. ಹಿಂದಿನ ಸರ್ಕಾರ ಕೈಗೊಂಡ ಕ್ರಮದಿಂದ ಬೇರೆ ಬೇರೆ ರಾಷ್ಟ್ರಗಳು ಸ್ಪರ್ಧೆಯಲ್ಲಿ ಮೊದಲ ಸ್ಥಾನದಲ್ಲಿದ್ದವು. ಆದರೆ, ನಾನು ಅಧ್ಯಕ್ಷನಾಗಿರುವವರೆಗೂ ಅಮೆರಿಕ ಎಂದೂ ಮೊದಲ ಸ್ಥಾನದಲ್ಲಿರಬೇಕು' ಎಂದರು.

ವಿಜ್ಞಾನ

1. ಬಯೋಕಾನ್ ಅಭಿವೃದ್ಧಿ ಪಡಿಸಿರುವ ಔಷಧವನ್ನು ಕೋವಿಡ್ ರೋಗಗಳ ಚಿಕಿತ್ಸೆಯಲ್ಲಿ ಬಳಸಲು ಔಷಧ ವಲಯದ ನಿಯಂತ್ರಕ ಸಂಸ್ಥೆಯಾದ ಡಿ.ಸಿ.ಜಿ.ಐ ಅನುಮತಿ ನೀಡಿದೆ :

- ಬಯೊಕಾನ್ ಅಭಿವೃದ್ಧಿಪಡಿಸಿರುವ ಇಟೊಲಿಝು ಯಮಾಬ್ ಎಂಬ ಹೆಸರಿನ ಔಷಧವನ್ನು ಕೋವಿಡ್ ರೋಗಗಳ ಚಿಕಿತ್ಸೆಯಲ್ಲಿ ಬಳಸಲು ಔಷಧ ವಲಯದ ನಿಯಂತ್ರಕ ಸಂಸ್ಥೆಯಾದ ಡಿ.ಸಿ.ಜಿ.ಐ ಅನುಮತಿ ನೀಡಿದೆ.
- ಸಾಧಾರಣದಿಂದ ತೀವ್ರ ಹಂತದ ಕೋವಿಡ್–19 ಪೀಡಿತ ರೋಗಿಗಳ ಚಿಕಿತ್ಸೆಗೆ ಈ ಔಷಧ ಬಳಸಲು ಅನುಮತಿ ನೀಡಲಾಗಿದೆ. ಕೋವಿಡ್ ಚಿಕಿತ್ಸೆಗೆ ಬಳಕೆಯಾಗಲಿರುವ ಮೊದಲ ಜೈವಿಕ ಔಷಧಗಳಲ್ಲಿ ಇದೂ ಒಂದು. ಇಂಜೆಕ್ಷನ್ ಮೂಲಕವೂ ಇದನ್ನು ನೀಡಬಹುದು.
- ವಿಶ್ವಾದ್ಯಂತ ಈ ಔಷಧವನ್ನು ಬಳಸಬಹುದು ಎಂದು ಬಯೊಕಾನ್ ತಿಳಿಸಿದೆ. ಬೆಂಗಳೂರಿನ ಬಯೊಕಾನ್ ಪಾರ್ಕ್‌ನಲ್ಲಿ ಇದನ್ನು ಉತ್ಪಾದಿಸಲಾಗಿದೆ.
- ಮುಂಬಯಿ ಮತ್ತು ಹೊಸದಿಲ್ಲಿಯ ನಾನಾ ಆಸ್ಪತ್ರೆಗಳಲ್ಲಿ ನಿಯಂತ್ರಿಕ ಕ್ಲಿನಿಕಲ್ ಟ್ರಯಲ್ ನಡೆಸಲಾಗಿದೆ. ಹಾಗೂ ಇದಕ್ಕೆ ಸಿಕ್ಕಿರುವ ಯಶಸ್ಸಿನ ಆಧಾರದಲ್ಲಿ ಡಿ.ಸಿ.ಜಿ.ಐ. ಅನುಮತಿ ನೀಡಿದೆ ಎಂದು ಕಂಪನಿ ತಿಳಿಸಿದೆ.

- ಇಟೊಲಿಝುಯಮಾಬ್ ಔಷಧ 25 ಸಾವಿರ ರೂ.ಗಳಿಂದ 30 ಸಾವಿರ ರೂಪಾಯಿಗೆ ಲಭಿಸಲಿದೆ.

2. ಡೆಸ್ಕ್‌ಟಾಪ್ ನಲ್ಲೂ ವಾಟ್ಸ್‌ಆ್ಯಪ್ ಡಾರ್ಕ್ ಮೋಡ್ ಆಯ್ಕೆ ಲಭ್ಯವಾಗಿದೆ:

- ಬಹುನಿರೀಕ್ಷಿತ ವಾಟ್ ಆ್ಯಪ್ ಡಾರ್ಕ್ ಮೋಡ್ ಆಯ್ಕೆ ಈಗ ಡೆಸ್ಕ್‌ಟಾಪ್ ಆವೃತ್ತಿಯಲ್ಲೂ ಲಭ್ಯವಾಗಿದೆ.ದೇಶದ ಬಳಕೆದಾರರಿಗೆ ಸಂಸ್ಥೆಯು ನೂತನ ಆಯ್ಕೆಯನ್ನು ನೀಡಿದೆ.
- ಡಾರ್ಕ್ ಮೋಡ್ ಥೀಮ್ ಬಳಕೆ ಮಾಡುವುದರಿಂದ ಕಣ್ಣಿಗೂ ಹಿತವಾಗುತ್ತದೆ. ಅಂದರೆ ಹೆಚ್ಚು ಸಮಯ ಡೆಸ್ಕ್ ಟಾಪ್ ನಲ್ಲೂ ವಾಟ್ಸ್ ಆ್ಯಪ್ ಬಳಕೆ ಮಾಡುತ್ತಿದ್ದರೆ, ನೀವು ಡಾರ್ಕ್ ಮೋಡ್ ಬಳಸುವುದರಿಂದ ಕಣ್ಣಿಗೆ ಹೆಚ್ಚು ಹಿತಕರವೆನಿಸುತ್ತದೆ. ಹೀಗಾಗಿ ಮೊಬೈಲ್ ಮತ್ತು ಡೆಸ್ಕಟ್ಟಾಪ್‌ಗಳಲ್ಲಿ ಈಗ ಡಾರ್ಕ್ ಮೋಡ್ ಬಳಕೆ ಹೆಚ್ಚುತ್ತಿದೆ.

ಬಳಕೆ ಹೇಗೆ

- ಲ್ಯಾಪ್‌ಟಾಪ್ ಅಥವಾ ಕಂಪ್ಯೂಟರ್‌ನಲ್ಲಿ ವಾಟ್ಸ್‌ಆ್ಯಪ್ ವೆಬ್ ಓಪನ್ ಮಾಡಿ.
- ಅದರಲ್ಲಿ ಸೆಟ್ಟಿಂಗ್ಸ್ ಓಪನ್ ಮಾಡಿ. ನಂತರ, ಥೀಮ್ ಸೆಲೆಕ್ಟ್ ಮಾಡಿ, ಬಳಿಕ, ಡಾರ್ಕ್ ಮೋಡ್ ಸೆಲೆಕ್ಟ್ ಮಾಡಿ.

3. ಗೂಗಲ್ ಅರ್ಥ್ ನಮ್ಮೆಲ್ಲರ ಬದುಕಿನಲ್ಲಿ ಬಹುದೊಡ್ಡ ಪಾತ್ರವನ್ನು ನಿರ್ವಹಿಸುತ್ತಿದೆ:

- ಗೂಗಲ್ ನಮ್ಮೆಲ್ಲರ ಬದುಕಿನಲ್ಲಿ ಬಹುದೊಡ್ಡ ಪಾತ್ರವನ್ನು ನಿರ್ವಹಿಸುತ್ತಿದೆ. ಜಿ.ಮೇಲ್‌ನಿಂದ ಹಿಡಿದು ಮಕ್ಕಳ ಕ್ಲಾಸ್ ರೂಮ್ ವರೆಗೆ ಅದರ ಉತ್ಪನ್ನಗಳು ಇಡೀ ಜಗತ್ತನ್ನೇ ಪ್ರಭಾವಿಸಿದೆ.
- ಈಗಿನ ಹಲವು ಉತ್ಪನ್ನಗಳ ಪೈಕಿ ಗೂಗಲ್ ಅರ್ಥ್ ಕೂಡ ತನ್ನದೇ ಪ್ರಭಾವಳಿಯನ್ನು ಸೃಷ್ಟಿಸಿಕೊಂಡಿದೆ. ಗೂಗಲ್ ಅರ್ಥ್ ಪ್ರೋಗ್ರಾಮ್ ಭೂಮಿಯನ್ನು ಮೂರು ಆಯಾಮಗಳಲ್ಲಿ ತೋರಿಸುವ ಕೆಲಸವನ್ನು ಮಾಡುತ್ತದೆ.
- ಇದಕ್ಕೆ ಅದು ಉಪಗ್ರಹ ಚಿತ್ರಗಳನ್ನು ಆಧಾರವಾಗಿಟ್ಟುಕೊಂಡು ತನ್ನ ಸೇವೆಯನ್ನು ಒದಗಿಸುತ್ತದೆ. ಸ್ಯಾಟಲೈಟ್ ಇಮೇಜಸ್ ಸೂಪರ್ ಇಂಪೋಸಿಂಗ್, ವೈಮಾನಿಕ ಫೋಟೊಗ್ರಫಿ ಮತ್ತು ಜಿ.ಐ.ಎಸ್ ಡೇಟಾ ಮಾಹಿತಿಯನ್ನು ಒದಗಿಸುತ್ತದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ನೀವು ಗ್ಲೋಬ್ ನೋಡಿದ್ದೀರಲ್ಲ, ಅದೇ ಇದು ಅಂದರೆ ನೀವು ಇದನ್ನು 3ಡಿ ಗೂಗಲ್ ಎಂದು ಬೇಕಾದರೂ ಹೇಳಬಹುದು.
- ಇಷ್ಟೆಲ್ಲ ಯಾಕೆ ಹೇಳ ಬೇಕಾಯಿತು ಎಂದರೆ, ಈ ಗೂಗಲ್ 3ಡಿ ಗ್ಲೋಬ್ ಸುತ್ತ ಅರ್ಥ್ ಪ್ರೋಗ್ರಾಮ್‌ಗೆ ಈಗ 15ರ ಸಂಭ್ರಮ. ಈ ಸಂದರ್ಭದಲ್ಲಿ ಗೂಗಲ್ ತನ್ನ ಬ್ಲಾಗ್ನಲ್ಲಿ ಗೂಗಲ್ ಅರ್ಥ್‌ನಿಂದಾಗುತ್ತಿರುವ 15 ಜಬರದಸ್ತ್ ಉಪಯೋಗಗಳನ್ನು ಪಟ್ಟಿಮಾಡಿದೆ.
- ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗೂಗಲ್ ಹೇಗೆ ಪ್ರಯೋಜನಕಾರಿಯಾಗಿದೆ ಎಂಬುದನ್ನು ಈ ಬ್ಲಾಗ್ ವಿವರಿಸುತ್ತದೆ.
- ಜಗತ್ತಿನ ಶೇ. 98ರಷ್ಟು ಭೂಭಾಗವನ್ನು ಈ ಪ್ರೋಗ್ರಾಮ್ ಕವರ್ ಮಾಡಿದೆಯಂತೆ. 1 ಕೋಟಿ ಮೈಲಿ ಸ್ಟ್ರೀಟ್ ವ್ಯೂ, ಚಿತ್ರಗಳನ್ನು ಒಳಗೊಂಡಿದೆ. ಅಂದರೆ ಭೂಮಿ ಇಂಚಿಂಚೂ ಮಾಹಿತಿಯನ್ನು ಒಳಗೊಂಡಿದೆ.

'ಗೂಗಲ್' ಪಟ್ಟಿ ಮಾಡಿದ 'ಅರ್ಥ್' ನ ಸಾಧನೆಗಳು:

- ನೈಸರ್ಗಿಕ ವಿಪತ್ತುಗಳ ವೇಳೆ ನೆರವು.
- ವರ್ಚುವಲ್ ಕ್ಷೇತ್ರಗಳ ಪಯಣ.
- ಪ್ರಾಣಿಗಳ ನಡವಳಿಕೆಯನ್ನು ಭೇದಿಸುವುದು.
- ಕುಟುಂಬಗಳ ಮರು ಮಿಲನ.
- ಯುದ್ಧ ಸಂತ್ರಸ್ತ ಸಮುದಾಯಗಳಿಗೆ ನೆರವು.
- ಬೇಟೆಗಾರರಿಂದ ಆನೆಗಳ ರಕ್ಷಣೆ.
- ಹೊಸ ಹೊಸ ಅರಣ್ಯಗಳ ಶೋಧ.
- ಗ್ರಾಮೀಣ ವಿದ್ಯಾರ್ಥಿಗಳ ಕಲಿಕೆಗೆ ಬೆಂಬಲ.
- ಸಕಾರಾತ್ಮಕ ಪರಿಸರ ಬದಲಾವಣೆಗೆ ಸ್ಫೂರ್ತಿ.
- ಈ ಭೂಮಿಯ ಮೇಲೆ ಜನರಿಗೆ ಪ್ರೀತಿ ಹೆಚ್ಚಿಸಲು ಸ್ಫೂರ್ತಿ.
- ಜಾಗತಿಕ ಭಾಷಾ ವೈವಿಧ್ಯತೆಗೆ ಆದ್ಯತೆ.
- ನಿಷ್ಣಾತ ಕಳ್ಳರನ್ನು ಹಿಡಿಯಲು ನೆರವು.
- ನಿಖರ ಸುದ್ದಿಗಳನ್ನು ವರದಿ ಮಾಡಲು ನೆರವು.
- ಕೋವಿಡ್ 19 ಬಿಕ್ಕಟ್ಟಿನಲ್ಲಿ ಸಾಮಾನ್ಯರಿಗೆ ನೆರವು.

4. ಸುದ್ದಿಯಲ್ಲಿರುವ ಆಪ್ಸ್‌ಗಳು: PODCAST ಅಡಿಕ್ಟ್

- ಸಿಂಗಲ್ ಕಾಸ್ಟ್ ಪ್ರೀಮಿಯಂನಲ್ಲಿ ನಿಮಗೆ ಬಹಳಷ್ಟು ಪ್ಲೇಬ್ಯಾಕ್ ಹಾಡುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ದೊರೆಯುತ್ತದೆ.
- ಜೊತೆಗೆ ನೀವು ಡೌನ್ಲೋಡ್ ರೂಲ್ಸ್, ಪ್ಲೇ ಲಿಸ್ಟ್ ಅನ್ನು ತುಂಬ ಸುಲಭವಾಗಿ ಸೆಟ್ ಮಾಡಿಕೊಳ್ಳಬಹುದು. ಇದು ಕ್ರೋಮ್ಕಾಸ್ಟ್, ಸೋನೋಸ್, ಆಂಡ್ರಾಯ್ಡ್ ಆಟೋ ಮತ್ತು ವಿಯರ್ ಓ.ಎಸ್‌ಗೂ ಸಪೋರ್ಟ್ ಮಾಡುತ್ತದೆ. ಪಾಡ್ ಕಾಸ್ಟ್ ಇಷ್ಟಪಡುವವರಿಗೆ ಬೇಕಾದ ಎಲ್ಲ ಫೀಚರ್‌ಗಳನ್ನು ಇದು ಒಳಗೊಂಡಿದೆ.

ಮೀಟಿಂಗ್ ಜೂಮ್:



- ಅವಶ್ಯಕತೆಯೇ ಸಂಶೋಧನೆಯ ತಾಯಿ ಎಂಬುದು ಕ್ಲೀಷೆಯಾದರೂ ಸುಳ್ಳಲ್ಲ. ಹತ್ತಾರು ವಿಡಿಯೊ ಕಾನ್ಫರೆನ್ಸ್ ಆ್ಯಪ್‌ಗಳು ಹುಟ್ಟಿಕೊಂಡಿವೆ. ಇವೇನು ನಾಯಿ ಕೊಡೆಗಳಲ್ಲ, ವರ್ಷಗಳಿಂದ ಇದ್ದವು.
- ಈಗ ಬಳಕೆ ಹುಕ್ಕಿ ಬಂದ ಮೇಲೆ ಎಲ್ಲರಿಗೂ ಚಿರಪರಿಚಿತವಾಗುತ್ತಿವೆ. ವ್ಯಕ್ತಿಗಳು ಮತ್ತು ಗುಂಪುಗಳ ನಡುವೆ ಮಾತು, ದೃಶ್ಯ, ಪಠ್ಯ, ದಾಖಲೆಗಳ ವಿನಿಮಯಕ್ಕೆ ಪೂರಕವಾದ ಸಲಕರಣೆಗಳನ್ನು ಹುಡುಕುವುದು ಕೂಡ ಕೊಂಚ ತಲೆನೋವಿನ ಕೆಲಸ, ಇಲ್ಲಿ ನಮ್ಮ ಉದ್ದೇಶ, ಗುರಿ, ಪರಿಣಾಮ ಮತ್ತು ಸಫಲತೆಯ ಮಾನದಂಡವನ್ನಿಟ್ಟು ಕೊಂಡು ಸೂಕ್ತವಾದುದನ್ನು ಆಯ್ದುಕೊಳ್ಳಬೇಕಾಗುತ್ತದೆ.
- ಬಹುತೇಕರು ಈ ಕೆಲಸಕ್ಕೆ ಅನುಕರಣೆಯ ಸುಲಭ ಉಪಾಯಕ್ಕೆ ಮೊರೆ ಹೋಗುತ್ತಿದ್ದಾರೆ. ಸಮಾನ ಉದ್ದೇಶವಿರುವಾಗ ಈ 'ಕಾಪಿಚಿಟ್' ಅಪರಾಧವೇನೂ ಅಲ್ಲ. ಆದರೆ ಇಂಥ ವಿಷಯಗಳಲ್ಲಿ ಟ್ರಯಲ್ ಅಂಡ್ ಎರರ್ ತುಂಬ ಒಳ್ಳೆಯದು. ಪರಿಣಾಮ ವಿಶೇಷ ಸಾಧಿಸಬೇಕು ಎಂದರೆ ನಿಮ್ಮ ಬತ್ತಳಿಕೆಯಲ್ಲಿ ಪರಿಶ್ರಮ ಪಟ್ಟುಪಡೆದುಕೊಂಡ ಬಾಣಗಳಿರಬೇಕು.

ಇನ್ನೂ ಇದೆ ಜೂಮ್

- ಎಲ್ಲೆಡೆ ಲಾಕ್‌ಡೌನ್ ಶುರುವಾದ ಕೂಡಲೇ ಸಂವಹನಕ್ಕೆ ಒದಗಿ ಬಂದಿದ್ದೇ ಜೂಮ್ ಆ್ಯಪ್, ಅಮೆರಿಕ ಮೂಲದ ಸಂವಹನ ತಂತ್ರಜ್ಞಾನದ ಈ ಕಂಪನಿ ದಿನ ಬೆಳಗಾಗುವುದರೊಳಗೆ ಮಾಲೀಕ ಕುಬೇರನಾದ.
- ಇದರಲ್ಲಿ ಏಕ ಕಾಲದಲ್ಲಿ ನೂರು ಮಂದಿ ವಿಡಿಯೊಕಾಲ್ ಮಾಡಬಹುದು. ಕರೆಗೆ ಸೇರಿಕೊಳ್ಳಲು ನೀವು ಲಾಗಿನ್ ಆಗಬೇಕಾದ ಅವಶ್ಯಕತೆ ಇಲ್ಲ. ಕಂಪ್ಯೂಟರ್‌ನಲ್ಲೂ ಬಳಸಬಹುದು. ವಿಡಿಯೊ ಕಾಲ್ ವೇಳೆ ನೆಟ್‌ವರ್ಕ್ ತೀರಾ ದುರ್ಬಲವಾಗಿದ್ದರೆ ವಿಡಿಯೊ ಬಟನ್ ಆಫ್ ಮಾಡಿ, ಕಡಿಮೆ ಬ್ಯಾಂಡ್ ವಿಡ್ತ್ ಆಗತ್ಯವಿರುವ ಆಡಿಯೋವನ್ನೂ ಕೇಳಬಹುದು.
- ಕೆಲವರು ಏಕಕಾಲದಲ್ಲಿ ಭಾಗವಹಿಸ ಬಹುದಾದ್ದರಿಂದ ನಿಮಗೇನಾದರೂ ಮಾತನಾಡಬೇಕಿದ್ದರೆ ಕೈ ಎತ್ತುವ ಆಯ್ಕೆಯೊಂದು ಗೋಚರಿಸುತ್ತದೆ. ಅದರಲ್ಲೆ ಚಾಟಿಂಗ್ ಮಾಡುವ ಅವಕಾಶ ಇದೆ. ಯಾರೂ ಮೊದಲು ವಿಡಿಯೊ ಕಾಲ್ ಮಾಡುತ್ತಾರೋ ಅವರು ಇತರರೊಂದಿಗೆ ಒಂದು ಐಡಿಯನ್ನು ಹಂಚಿಕೊಂಡಿರುತ್ತಾರೆ. ಅದನ್ನು ನಮೂದಿಸಿದ ತಕ್ಷಣ ಈ ವಿಡಿಯೊ ಕಾಲ್‌ಗೆ ಸೇರಿಕೊಳ್ಳಬಹುದು.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy,
Vijayanagar, B'lure
99163-99276; 080-41547999

5. ಮಂಗಳನತ್ತ ಯಾನ: ಯು.ಎ.ಇ. ಸಾಧನೆ:

- ಅರಬ್ ಸಂಯುಕ್ತ ರಾಷ್ಟ್ರಗಳ ಬಹು ನಿರೀಕ್ಷಿತ ಮಂಗಳಯಾನಕ್ಕೆ ಬಾಹ್ಯಾಕಾಶ ನೌಕೆ 'ಅಲ್ ಅಮಲ್' ಜಪಾನ್‌ನ ಉಡ್ಡಯನ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆಗೊಂಡಿತು.
- ಈ ಮೂಲಕ ಯು.ಎ.ಇ. ಅಂತರ್ ಗ್ರಹಯಾನ ಆರಂಭಿಸಿದ ಮೊಟ್ಟಮೊದಲ ಮಧ್ಯಪ್ರಾಚ್ಯದ ದೇಶ ಎಂಬ ಕೀರ್ತಿಗೆ ಪಾತ್ರವಾಯಿತು.
- 'ಹೋಪ್ ಪ್ರೋಬ್' ಎಂಬ ಹೆಸರಿನಿಂದಲೂ ಕರೆಸಿಕೊಳ್ಳುವ ಈಗಗನ ನೌಕೆಯನ್ನು ಜಪಾನ್‌ನ ತನೆಂಗಶಿಮಾ ಉಡ್ಡಯನ ಕೇಂದ್ರದಿಂದ ಉಡಾವಣೆ ಮಾಡಲಾಯಿತು.
- ನೌಕೆಯಿಂದ ಬೇರ್ಪಟ್ಟ 'ಅಲ್ ಅಮಲ್' ದುಬೈನಲ್ಲಿರುವ ಅಲ್ ಖಿವಾನೀಜ್ಪ ಬಾಹ್ಯಾಕಾಶ ಸಂಶೋಧನಾ ಕೇಂದ್ರಕ್ಕೆ ಮೊದಲ ಚಿತ್ರ ರವಾನಿಸಿದೆ.

6. ಕ್ಯಾಮೆರಾದ ವಿವಿಧ ಟಾಸ್ಕ್ ಗಳು : ವಿವಿಧ ಆ್ಯಪ್‌ಗಳಿಂದ

- ನಮ್ಮ ಕೈಯಲ್ಲಿರುವ ಸ್ಮಾರ್ಟ್‌ಫೋನ್ ಒಂದು ಅದ್ಭುತ ಜಗತ್ತನ್ನೇ ತನ್ನ ಒಡಲೊಳಗೆ ಇಟ್ಟುಕೊಂಡಿದೆ. ಆ ಜಗತ್ತು ಹೇಗಿದೆ ಮತ್ತು ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಟ್ರಿಕ್ಸ್ ನಮಗೆ ಗೊತ್ತಿರಬೇಕಷ್ಟೇ. ಫೋನ್ನಲ್ಲಿರುವ ಕ್ಯಾಮೆರಾವನ್ನು ಫೋಟೊ ತೆಗೆಯಲು, ವಿಡಿಯೊ

ಮಾಡಿಕೊಳ್ಳಲು ಮಾತ್ರ ಬಳಸಿಕೊಳ್ಳುತ್ತೇವೆ. ಅದೇ ಕ್ಯಾಮೆರಾವನ್ನು ಇನ್ನೂ ಬೇರೆ ಬೇರೆ ರೀತಿಯ ಕಾರ್ಯಗಳಿಗೂ ಬಳಸಿಕೊಳ್ಳಬಹುದು.

- ಈ ಮಲ್ಟಿಟಾಸ್ಕ್ ಮಾಡಲು ಫೋನ್ನಲ್ಲಿ ಕೆಲವು ಆ್ಯಪ್ಗಳನ್ನು ಡೌನ್ಲೋಡ್ ಮಾಡಿಕೊಂಡು ಇನ್ಸ್ಟಾಲ್ ಮಾಡಿಕೊಳ್ಳಬೇಕಾಗುತ್ತದೆ. ಆ ಆ್ಯಪ್ಗಳು ಕ್ಯಾಮೆರಾದ ಮೂಲಕ ತಮ್ಮ ನಿಗದಿತ ಕಾರ್ಯಗಳನ್ನು ಮಾಡುತ್ತದೆ. ಈ ರೀತಿಯ ಅಸಾಧ್ಯ ಎನ್ನಬಹುದಾದ ಕೆಲಸಗಳನ್ನು ಪೂರ್ತಿ ಮಾಡಲು ನೆರವಾಗುಲು ಕೆಲವು ಮಹತ್ವದ ಆ್ಯಪ್ಗಳು ಮಾಹಿತಿ ಇಲ್ಲಿದೆ.

ಆ್ಯಪ್ಗಳು

ಮೈ ಸ್ಕ್ಯಾನ್ಸ್–My Scans

- ಬಹಳಷ್ಟು ಸ್ಕ್ಯಾನಿಂಗ್ ಆ್ಯಪ್ಗಳು ಆದರೆ, ಮೈ ಸ್ಕ್ಯಾನ್ ಆ್ಯಪ್ ಅನ್ನು ತುಂಬ ಸುಲಭವಾಗಿ ಬಳಸಬಹುದು. ಇದು ಸ್ವಯಂ ಆಗಿ ಡಾಕ್ಯುಮೆಂಟ್ ತುದಿಗಳನ್ನು ಗುರುತಿಸಿ ಅದನ್ನು ಕ್ರಾಪ್ ಮಾಡುತ್ತದೆ.
- ಡ್ಯಾಕುಮೆಂಟ್ಗಳನ್ನು ಫೈಲ್ ಮತ್ತು **Folders**ನಲ್ಲಿ ಇಟ್ಟುಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಇದರಿಂದಾಗಿ ನೀವು **Smartphone**ನಿಂದಲೇ ನೇರವಾಗಿ ಪ್ರಿಂಟ್ ಕೂಡ ಕೊಡಬಹುದು.
- ಇದರಲ್ಲಿ ಕ್ಲೌಡ್ ಆಧರಿತ ಇನ್ನು ಬಹಳಷ್ಟು ಫೀಚರ್ಗಳಿವೆ. ಆದರೆ, ಅದಕ್ಕೆ ಶುಲ್ಕ ಕಟ್ಟಬೇಕಾಗುತ್ತದೆ. ಆಂಡ್ರಾಯ್ ಮತ್ತು ಐ.ಓ.ಎಸ್.ನಲ್ಲಿ ಇದು ಲಭ್ಯವಿದೆ.

ವಾರ್ಡನ್ ಕ್ಯಾಮ್– Warden Cam

- ವಾರ್ಡನ್ ಕ್ಯಾಮ್ ಮೂಲಕ ನಿಮ್ಮ **Smartphone** ಅಥವಾ ಟ್ಯಾಬ್ಲೆಟ್ ಅನ್ನು ಸರ್ವೈಲೆನ್ಸ್ ಕ್ಯಾಮೆರಾ ಆಗಿ ಬದಲಿಸಬಹುದು.
- ವಾರ್ಡನ್ ಕ್ಯಾಮ್ ಆ್ಯಪ್ ಅನ್ನು ಎರಡು ಫೋನ್ಗಳಲ್ಲಿ ಇನ್ಸ್ಟಾಲ್ ಮಾಡಿ ಒಂದನ್ನು ರೆಕಾರ್ಡರ್ ಮತ್ತೊಂದನ್ನು ವ್ಯೂವರ್ ರೀತಿಯಲ್ಲಿ ಬಳಸಬಹುದು.
- ಈ ಆ್ಯಪ್ ಮೂಲಕ ನಿಮ್ಮ ಮನೆಯ ಮೇಲೆ ನೀವು 24 ಗಂಟೆಯೂ ನಿಗಾ ವಹಿಸಬಹುದು. ಇದಕ್ಕೆ ಇಂಟರ್ನೆಟ್ ಅಗತ್ಯವಾಗಿ ಬೇಕಾಗುತ್ತದೆ. ಇದು ಕೂಡ ಆಂಡ್ರಾಯ್ ಮತ್ತು ಐ.ಓ.ಎಸ್. ನಲ್ಲಿ ದೊರೆಯುತ್ತದೆ.

ನೈಟ್ ಸ್ಕೈ–Night Sky

- ನಕ್ಷತ್ರ, ಗ್ರಹಗಳು, ಉಪಗ್ರಹಗಳನ್ನು ಪತ್ತೆ ಹಚ್ಚಲು ಈ ನೈಟ್ ಸ್ಕೈ ಆ್ಯಪ್ ಸಹಾಯ ಮಾಡುತ್ತದೆ. ಇದು ಐಫೋನ್ ಅನ್ನೇ ನಿಮ್ಮ ಪ್ಲಾನೆಟೋರಿಯಮ್ ರೀತಿ ಬದಲಿಸಿಬಿಡುತ್ತದೆ.
- ಅಗ್ಮೆಂಟೆಡ್ ರಿಯಾಲಿಟಿ ಟೆಕ್ನಾಲಜಿ ಬಳಸಿಕೊಂಡು ಈ ಪ್ ಕೆಲಸ ಮಾಡುತ್ತದೆ. ಆ ಮೂಲಕವೇ ನೀವು ಆಕಾಶ ಕಾಯಗಳನ್ನು ವೀಕ್ಷಿಸಬಹುದಾಗಿದೆ.

ಸ್ಪೆಕ್ಟರ್ – Spectre

- ಇದು ಪೂರ್ಣವಾಗಿ ಐಫೋನ್ ಬಳಕೆದಾರರಿಗೆ ಮೀಸಲಾದ ಆ್ಯಪ್. ಈ ಆ್ಯಪ್ ಆಂಡ್ರಾಯ್ಡ್ನಲ್ಲಿ ಲಭ್ಯವಿಲ್ಲ, ಐ.ಓ.ಎಸ್.ನಲ್ಲಿ ಮಾತ್ರ ದೊರೆಯುತ್ತದೆ.
- ಲಾಂಗ್ ಎಕ್ಸೋಪೊಷರ್ಾಟ್, ಕೃತಕ ಬುದ್ಧಿ ಮತ್ತೆ ಮತ್ತು ಗುಣಾತ್ಮಕ ಚಿತ್ರಗಳನ್ನು ನೀಡಲು ಕಂಪ್ಯೂಟೇಷನಲ್ ಫೋಟೊಗ್ರಫಿಗೆ ಇದು ನೆರವು ನೀಡುತ್ತದೆ. ಇದರಲ್ಲಿರುವ ಆಯ್ಕೆಯೊಂದನ್ನು ಬಳಸಿ ಕೊಂಡು ನೀವು ಚಿತ್ರದಲ್ಲಿರುವ ವ್ಯಕ್ತಿಗಳನ್ನು ಕಾಣದಂತೆ ಮಾಡಬಹುದಾಗಿದೆ.

ಗೂಗಲ್ ಲೆನ್ಸ್–Google Lens

- ನೀವು ಗೂಗಲ್ ಲೆನ್ಸ್ ಬಗ್ಗೆ ಕೇಳಿದ್ದೀರಿ. ಇದು ಬಹುಪಯೋಗಿ ಆಪ್, ಸ್ಕ್ಯಾನಿಂಗ್, ಪಠ್ಯ ಅನುವಾದ, ಸಸಿಗಳನ್ನು ಗುರುತಿಸುವುದು, ಕೋಡ್ಗಳನ್ನು ಸ್ಕ್ಯಾನ್ ಮಾಡುವುದು ಸೇರಿದಂತೆ ಇನ್ನಿತರ ಕೆಲಸಗಳನ್ನು ಮಾಡಲು ಇದು ಅನುವು ಮಾಡಿಕೊಡುತ್ತದೆ.
- ಆಂಡ್ರಾಯ್ನಲ್ಲಿ ಬಳಕೆದಾರರು ಉಚಿತವಾಗಿ ಡೌನ್ಲೋಡ್ ಮಾಡಿಕೊಳ್ಳಬಹುದು. ಆದರೆ, ಐ.ಓ.ಎಸ್ ಬಳಕೆದಾರರು ಮಾತ್ರ ಗೂಗಲ್ ಫೋಟೋ ಆ್ಯಪ್ ಮೂಲಕ ಬಳಸಿಕೊಳ್ಳಬಹುದು.

ಪ್ಲಾಂಟ್ ಸ್ನಾಪ್ – Plant Snap

- ಆಂಡ್ರಾಯ್ಡ್ ಮತ್ತು ಐ.ಓ.ಎಸ್. ಬಳಕೆದಾರರಿಗೆ ಲಭ್ಯ ಇರುವ ಈ ಪ್ಲಾಂಟ್ ಸ್ನಾಪ್ ಆ್ಯಪ್ ಮೂಲಕ ಮರಗಳನ್ನು ಗುರುತಿಸಬಹುದು. ಸಸ್ಯ ಮತ್ತು ಹೂಗಳನ್ನು ಹೆಸರಿಸಬಹುದು. ಇನ್ ಬಿಲ್ಟ್ ಮೆಷಿನ್ ಲರ್ನಿಂಗ್ ಪ್ರೇಮ್ ವರ್ಕ್ ನಿಂದಾಗಿ ಈ ಕಾರ್ಯಗಳನ್ನು ಮಾಡಬಹುದಾಗಿದೆ.
- ಈ ಆ್ಯಪ್ ಅಂದಾಜು 3 ಲಕ್ಷಕ್ಕೂ ಹೆಚ್ಚು ಮರ, ಹೂ ಮತ್ತು ಸಸಿಗಳನ್ನು ಗುರುತಿಸಬಹುದಂತೆ. ನೀವು ಗುರುತಿಸಬೇಕಿರುವ ಹೂವಿನ ಫೋಟೊವನ್ನು ಹತ್ತಿರದಿಂದ ತೆಗೆಯಬೇಕು. ಮತ್ತೆ ಅದನ್ನು ಝೂಮ್ ಮಾಡಿದರೆ ಸಂಬಂಧಿಸಿದ ಮಾಹಿತಿ ನಿಮಗೆ ಲಭ್ಯವಾಗುತ್ತದೆ.

ಗೂಗಲ್ ಟ್ರಾನ್ಸ್ಲೇಟ್, ಮೈಕ್ರೋಸಾಫ್ಟ್ ಟ್ರಾನ್ಸಲೇಟರ್
Google Translate, Microsoft Translator

- ಭಾಷಾಂತಾರ, ಅನುವಾದಕ್ಕೆ ಸಂಬಂಧಿಸಿದಂತೆ ಅನೇಕ ಆ್ಯಪ್ಗಳು. ಆದರೆ, ಗೂಗಲ್ ಟ್ರಾನ್ಸ್ ಲೇಟ್ ಮತ್ತು ಮೈಕ್ರೋಸಾಫ್ಟ್ ಟ್ರಾನ್ಸ್ ಲೇಟರ್ ಗಳಷ್ಟು ನಿಖರವಾಗಿಲ್ಲ. ಈ ಎರಡೂ ಆ್ಯಪ್ಗಳು ಕ್ರಮವಾಗಿ 26 ಮತ್ತು 60 ಭಾಷೆಗಳಲ್ಲಿ ಅನುವಾದ ಮಾಡಬಲ್ಲವು.
- ನಿಮಗೆ ಗೊತ್ತಿರದ ಭಾಷೆಯ ಸೈನ್ ಬೋರ್ಡ್ ಮೇಲೆ ಕ್ಯಾಮೆರಾ ಪಾಯಿಂಟ್ ಮಾಡಿ ಆಗ ನಿಮಗೆ ಬೇಕಿರುವ ಭಾಷೆಯಲ್ಲಿ ಮಾಹಿತಿ ದೊರೆಯುತ್ತದೆ.

ಮ್ಯಾಥ್ಲೇ–Mathway

- ಈ ಆ್ಯಪ್ ಆಂಡ್ರಾಯ್ಡ್ ಮತ್ತು ಐ.ಒ.ಎಸ್. ಬಳಕೆದಾರರಿಗೆ ಲಭ್ಯವಿದೆ. ಯಾವುದೇ ರೀತಿಯ ಗಣಿತ ಸಮಸ್ಯೆಗಳನ್ನು ಈ ಆ್ಯಪ್ ಮೂಲಕ ಬಗೆಹರಿಸಬಹುದು.
- ಬೀಜ ಗಣಿತದ ಬೇಸಿಕ್ಸ್ ನಿಂದ ಹಿಡಿದು ಸಂಕೀರ್ಣ ಲೆಕ್ಕಗಳನ್ನು ಇದು ಬಗೆಹರಿಸುತ್ತದೆ.
- ನಿಮ್ಮ ಗಣಿತ ಸಮಸ್ಯೆ ಇರುವ ಟೆಕೆಟ್ ಮೇಲೆ ನಿಮ್ಮ ಕ್ಯಾಮೆರಾ ಪಾಯಿಂಟ್ ಮಾಡಿ ಮತ್ತು ಪಿಕ್ಚರ್ ತೆಗೆದುಕೊಳ್ಳಿ. ಆಗ ಉತ್ತರ ನಿಮಗೆ ಲಭ್ಯವಾಗುತ್ತದೆ.

ಆರ್ಥಿಕ

1. ಮ್ಯೂಚುವಲ್ ಫಂಡ್ಸ್ ಮೇಲೆ ಇಂದಿನಿಂದ ಮುದ್ರಾಂಕ ಶುಲ್ಕ:

- ಮ್ಯೂಚುವಲ್ ಫಂಡ್‌ಗಳ ಖರೀದಿ ಮೇಲೆ ಜುಲೈ 1ರಿಂದ ಮುದ್ರಾಂಕ ಶುಲ್ಕ ಅನ್ವಯವಾಗಲಿದೆ. ಈ ಶುಲ್ಕವು ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ), ವ್ಯವಸ್ಥಿತ ವರ್ಗಾವಣೆ ಯೋಜನೆಗಳಿಗೂ (ಎಸ್‌ಟಿಪಿ) ಅನ್ವಯವಾಗಲಿದೆ. ಯುನಿಟ್ಸ್‌ಗಳನ್ನು ಮರಳಿಸಿ ಹಣ ಮರಳಿ ಪಡೆಯುವುದಕ್ಕೆ ಅನ್ವಯಗೊಳ್ಳುವುದಿಲ್ಲ.
- ಶೇ. 0.005ರಷ್ಟು ಸ್ಟ್ಯಾಂಪ್ ಡ್ಯೂಟಿಯು ಷೇರು ಮತ್ತು ಸಾಲ ನಿಧಿ ಮ್ಯೂಚುವಲ್ ಫಂಡ್‌ಗಳಿಗೆ ಅನ್ವಯವಾಗಲಿದೆ. ಡಿಮ್ಯಾಟ್ ಖಾತೆಗಳ ನಡುವೆ ವರ್ಗಾವಣೆಯಾಗುವ ಮ್ಯೂಚುವಲ್ ಫಂಡ್‌ಗಳಿಗೆ ಶೇ. 0.015ರಷ್ಟು ಡ್ಯೂಟಿ ಅನ್ವಯವಾಗಲಿದೆ. 90 ದಿನ ಅಥವಾ ಅದಕ್ಕಿಂತ ಕಡಿಮೆ ದಿನಗಳ ಅಲ್ಪಾವಧಿ ಖರೀದಿಗೆ ಮುದ್ರಾಂಕ ಶುಲ್ಕವು ಹೆಚ್ಚಿನ ಪರಿಣಾಮ ಬೀರಲಿದೆ. ಜನವರಿಯಿಂದಲೇ ಜಾರಿಗೆ ಬರಬೇಕಾಗಿದ್ದ, ಈ ತೆರಿಗೆಯು ಎರಡು ಬಾರಿ ಮುಂದೂಡಿಕೆಯಾಗಿತ್ತು.
- ಉದಾಹರಣೆಗೆ ರೂ. 1 ಲಕ್ಷ ಮೊತ್ತದ ಮ್ಯೂಚುವಲ್ ಫಂಡ್ ಖರೀದಿಗೆ ವಹಿವಾಟು ಶುಲ್ಕವು ರೂ. 100 ಇರಲಿದೆ. ನಿವ್ವಳ ಖರೀದಿಯು ರೂ. 1,00,100 ಆಗಿರಲಿದೆ. ರೂ. 1 ಲಕ್ಷ ಮೊತ್ತಕ್ಕೆ ಶೇ. 0.005 ದರದಲ್ಲಿ ಸ್ಟ್ಯಾಂಪ್ ಡ್ಯೂಟಿ ಮೊತ್ತ ರೂ. 5 ಇರಲಿದೆ.

2. ಬ್ಯಾಂಕಿಂಗ್ ಸೇವೆಗಳಲ್ಲಿ ಬದಲಾವಣೆ

- ಎಟಿಎಂ ಶುಲ್ಕ, ಉಳಿತಾಯ ಖಾತೆಗಳಿಗೆ ಮಿನಿಮಮ್ ಬ್ಯಾಲೆನ್ಸ್ ದಂಡ ಮತ್ತಿತರ ಹಳೇ ನಿಯಮಗಳು ಜುಲೈ 1 ರಿಂದ ಮತ್ತೆ ಜಾರಿಗೆ ಬರಲಿವೆ. ಕೋವಿಡ್–19 ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಬ್ಯಾಂಕಿಂಗ್ ಸೇವೆಯಲ್ಲಿ ಕೆಲವು ವಿನಾಯಿತಿಗಳನ್ನು ಬ್ಯಾಂಕ್‌ಗಳು ಈ ಹಿಂದೆ ನೀಡಿದ್ದವು. ಜೂ.30 ಕ್ಕೆ ಅವಧಿ ಅಂತ್ಯವಾಗಿದ್ದು, ಅದು ವಿಸ್ತರಣೆಯಾಗಿಲ್ಲ. ಹೀಗಾಗಿ, ಜುಲೈ 1 ರ ವಹಿವಾಟುಗಳಿಗೆ ಹಳೆಯ ಶುಲ್ಕ/ದಂಡ ನಿಯಮಗಳು ಅನ್ವಯವಾಗಲಿವೆ. ಕೋವಿಡ್ ಬಿಕ್ಕಟ್ಟಿನಿಂದಾಗಿ ಏಪ್ರಿಲ್, ಮೇ ಮತ್ತು ಜೂನ್‌ನಲ್ಲಿ ಜನರ ಅನುಕೂಲಕ್ಕಾಗಿ ಈ ನಿಯಮಗಳಲ್ಲಿ ವಿನಾಯಿತಿ ನೀಡಲಾಗಿತ್ತು.

ಇಂದಿನಿಂದ ಏನೇನು ಬದಲು?

- ಎಟಿಎಂ ವ್ಯವಹಾರಗಳಿಗೆ ಶುಲ್ಕ, ವ್ಯವಹಾರಗಳ ಕನಿಷ್ಠ ಮಿತಿ ದಾಟಿದರೆ ದಂಡ.
- ಉಳಿತಾಯ ಖಾತೆದಾರರು ಮಿನಿಮಮ್ ಬ್ಯಾಲೆನ್ಸ್ ಕಾಯ್ದುಕೊಳ್ಳದಿದ್ದರೆ ದಂಡ.
- ಪಂಜಾಬ್ ನ್ಯಾಷನಲ್ ಬ್ಯಾಂಕ್ ಉಳಿತಾಯ ಖಾತೆ ಬಡ್ಡಿ ದರವನ್ನು ಶೇ. 0.50 ಕಡಿತ ಗೊಳಿಸಿದ್ದು, ಜುಲೈ 1 ರಿಂದ ಜಾರಿ.
- ವಿಜಯ ಬ್ಯಾಂಕ್ ಮತ್ತು ದೇನಾ ಬ್ಯಾಂಕ್‌ಗಳು ಬ್ಯಾಂಕ್ ಆಫ್ ಬರೋಡಾದಲ್ಲಿ ವಿಲೀನಗೊಂಡಿದ್ದು, ಈ ಪರಿಣಾಮ ಬ್ಯಾಂಕ್ ಆಫ್ ಬರೋಡಾ ಖಾತೆದಾರರು ತಮ್ಮ ಖಾತೆಗಳನ್ನು ನವೀಕರಿಸಬೇಕು. ಇಲ್ಲದೇ ಹೋದರೆ, ಜುಲೈ 1 ರಿಂದ ಗ್ರಾಹಕರ ಖಾತೆಯು ಸ್ಥಗಿತಗೊಳ್ಳುತ್ತದೆ. ನವೀಕರಿಸಿದ ಬಳಿಕ, ಆಧಾರ್, ಪ್ಯಾನ್ ಅಥವಾ ಇತರೆ ದಾಖಲೆ ಸಲ್ಲಿಸಿ ನವೀಕರಿಸಬಹುದು.

3. ಬಿಗ್ ಬಜಾರ್, ಬ್ಯಾಂಡ್ ಫ್ಯಾಕ್ಟರಿ ಖರೀದಿಯತ್ತ ಅಂಬಾನಿ:

- ಕಿಶೋರ್ ಬಿಯಾನಿ ಮಾಲೀಕತ್ವದ ಫ್ಯೂಚರ್ ಗ್ರೂಪ್ ಖರೀದಿಗೆ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮುಂದಾಗಿದ್ದು, ಡೀಲ್ ಅಂತಿಮ ಹಂತದಲ್ಲಿದೆ ಎಂದು ತಿಳಿದು ಬಂದಿದೆ. ಈ ಡೀಲ್ ನಡೆದಿದ್ದೇ ಆದಲ್ಲಿ ದಿನಸಿ, ಫ್ಯಾಷನ್ ಮತ್ತು ದಿನ ಬಳಕೆ ವಸ್ತುಗಳ ಕ್ಷೇತ್ರದಲ್ಲಿ ರಿಲಯನ್ಸ್ ಹಿಡಿತ ಮತ್ತಷ್ಟು ಬಲವಾಗಲಿದೆ.
- ಹಲವು ಜನಪ್ರಿಯ ಬ್ರ್ಯಾಂಡ್‌ಗಳು ಫ್ಯೂಚರ್ ಗ್ರೂಪ್ ಕೈಯಲ್ಲಿವೆ. ಬಿಗ್ ಬಜಾರ್, ಎಫ್‌ಬಿಬಿ, ಸೆಂಟ್ರಲ್, ನೀಲ್ ಗಿರೀಸ್, ಹೆರಿಟೇಜ್ ಫ್ರೆಷ್, ಈಸಿಡೇ, ಬ್ಯಾಂಡ್ ಫ್ಯಾಕ್ಟರಿ, ಗೋಲ್ಡನ್ ಹಾರ್ವೆಸ್ಟ್, ಲೀ ಕೂಪ, ಡಿಜೆ ಆ್ಯಂಡ್ ಜಿ, ಕೊರ್ಯೋ ಸೇರಿದಂತೆ ಇನ್ನೂ ಹತ್ತು ಹಲವು ಬ್ರ್ಯಾಂಡ್‌ಗಳು ಮತ್ತು ರಿಟೇಲ್ ಶಾಪ್‌ಗಳನ್ನು ಫ್ಯೂಚರ್ ಗ್ರೂಪ್ ನಡೆಸುತ್ತದೆ.
- ಈ ಡೀಲ್‌ಗೂ ಮೊದಲು ಬಿಯಾನಿ ಮಾಲೀಕತ್ವದ ಫ್ಯೂಚರ್ ರಿಟೇಲ್, ಮ್ಯೂಚರ್ ಲೈಫ್‌ಸ್ಟೈಲ್ ಫ್ಯಾಷನ್ ಮತ್ತು ಫ್ಯೂಚರ್

ಸಪ್ಲೈ ಜೈನ್ ಸೊಲ್ಯೂಷನ್ಸ್ ವಿಲೀನಗೊಳ್ಳಲಿವೆ. ನಂತರ ಇವುಗಳನ್ನು ಒಟ್ಟಾಗಿ ಮುಕೇಶ್ ಅಂಬಾನಿ ಖರೀದಿಸಲಿದ್ದಾರೆ.

- ಈ ಒಪ್ಪಂದ ಕೊನೆಯ ಹಂತದಲ್ಲಿದ್ದು, ಜುಲೈ 15ರ ಮೊದಲು ಇದನ್ನು ಪೂರ್ಣಗೊಳಿಸಲು ಅಂಬಾನಿ ಉತ್ಸುಕವಾಗಿದ್ದಾರೆ. ಈ ವರ್ಷದ ಆರಂಭದಲ್ಲಿ ಬಿಯಾನಿಗೆ ಸೇರಿದ ಕೆಲವು ಸಂಸ್ಥೆಗಳು ಸಾಲ ಕಟ್ಟುವಲ್ಲಿ ಎಡವಿದ್ದವು.

KAS, FDA, SDA, PSI
KPSC Technical and Non Technical
Online Classes at Jnanagangothri
Download JG's Online Classes App to Start Learning
For more details visit-www.iasjnana.com
Test Series for all the above exams launched online and offline
PSI Test Series with new series started Enrol soon
Contact- Jnanagangothri Academy, Vijayanagar, B'lure
99163-99276; 080-41547999

4. ಚೀನಾ ಎಫ್‌ಡಿಐ ಅತ್ಯಲ್ಪ:

- ಭಾರತಕ್ಕೆ 2019–20ರಲ್ಲಿ ಹರಿದು ಬಂದಿರುವ ಒಟ್ಟು ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಚೀನಾದ ಪಾಲು ಕೇವಲ ಶೇ. 0.5ರಷ್ಟು ಮಾತ್ರ ಎಂದು ಅಧಿಕೃತ ಅಂಕಿ ಅಂಶಗಳು ತಿಳಿಸಿವೆ. ಚೀನಾ 2019–20ರಲ್ಲಿ ಭಾರತದಲ್ಲಿ ಮಾಡಿರುವ ವಿದೇಶಿ ನೇರ ಹೂಡಿಕೆ ಕೇವಲ 163 ದಶಲಕ್ಷ ಡಾಲರ್ (ರೂ. 1,222 ಕೋಟಿ) ಮಾತ್ರ ಎಂದು ಸರ್ಕಾರ ತಿಳಿಸಿದೆ.
- ಭಾರತಕ್ಕೆ ವಿದೇಶಿ ನೇರ ಬಂಡವಾಳ ಹೂಡಿಕೆಯ ಮೂಲಗಳ ಪಟ್ಟಿಯಲ್ಲಿ ಚೀನಾ 18ನೇ ಸ್ಥಾನದಲ್ಲಿದೆ. ಸಿಂಗಾಪುರ, ಮಾರಿಷಸ್ ಮೂಲದಿಂದ ಬರುವ ಹೂಡಿಕೆಗಳು ಚೀನಾಕ್ಕಿಂತ ಹೆಚ್ಚು ಕ್ಷಿಯೋಮಿ ಮುಂತಾದ ಚೀನಾದ ಎಲೆಕ್ಟ್ರಾನಿಕ್ಸ್ ಕಂಪನಿಗಳು ಸಿಂಗಾಪುರ ಮೂಲಕ ಭಾರತದಲ್ಲಿ ಬಂಡವಾಳ ಹೂಡಿಕೆ ಮಾಡಿದೆ.

5. ಭಾರತ – ಚೀನಾ ವ್ಯಾಪಾರ ಕೊರತೆ ಇಳಿಕೆ:

- ಚೀನಾದಿಂದ ಆಮದು ಮಾಡಿಕೊಳ್ಳುವ ಪ್ರಮಾಣ ಕಡಿಮೆ ಆಗಿರುವುದರಿಂದ ಎರಡೂ ದೇಶಗಳ ನಡುವಣ ವ್ಯಾಪಾರ ಕೊರತೆಯು 2019–20 ರಲ್ಲಿ ರೂ. 3.64 ಲಕ್ಷ ಕೋಟಿಗೆ ತಗ್ಗಿದೆ. ಚೀನಾ ಜತೆಗಿನ ರಫ್ತು ವಹಿವಾಟು ರೂ. 4.89 ಲಕ್ಷ ಕೋಟಿಗಳಷ್ಟಿದ್ದರೆ, ಆಮದು ರೂ. 1.24 ಲಕ್ಷ ಕೋಟಿಗಳಷ್ಟಿತ್ತು ಎಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಚೀನಾದಿಂದ ಪ್ರಮುಖವಾಗಿ ಗೋಡೆ ಗಡಿಯಾರ, ಕೈಗಡಿಯಾರ, ಸಂಗೀತ ವಾದ್ಯಗಳು, ಮಕ್ಕಳ ಆಟಿಕೆ ಸಾಮಗ್ರಿ, ಕ್ರೀಡಾ ಸರಕು, ಪೀಠೋಪಕರಣ, ನೆಲಹಾಸು, ಪ್ಲಾಸ್ಟಿಕ್, ಎಲೆಕ್ಟ್ರಿಕ್ ಯಂತ್ರೋಪಕರಣ, ಎಲೆಕ್ಟ್ರಿಕ್ ಸಾಧನ, ರಾಸಾಯನಿಕ, ರಸಗೊಬ್ಬರ, ಔಷಧಿ ತಯಾರಿಕಾ ಪದಾರ್ಥ, ಲೋಹಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.
- ಚೀನಾ ಮೇಲಿನ ಆಮದು ಅವಲಂಬನೆ ತಪ್ಪಿಸಲು ಸರ್ಕಾರವು ಹಲವಾರು ಸರಕುಗಳಿಗೆ ತಾಂತ್ರಿಕ ನಿಯಂತ್ರಣ ಕ್ರಮಗಳನ್ನು ರೂಪಿಸಿದೆ. ಇದರಡಿ 371 ಸರಕುಗಳನ್ನು ಗುರುತಿಸಲಾಗಿದೆ. ಗುಣಮಟ್ಟದ ನಿಯಮಗಳನ್ನು ಪಾಲಿಸಲೂ ಕ್ರಮ ಕೈಗೊಂಡಿದೆ. ಹಲವಾರು ಸರಕುಗಳ ಮೇಲೆ ಸುರಿ ವಿರೋಧಿ ತೆರಿಗೆ ವಿಧಿಸಿದೆ. ಎಲೆಕ್ಟ್ರಾನಿಕ್ ಸರಕು, ಆಟಿಕೆ, ಏರ್ ಕಂಡೀಷನರ್, ಸೈಕಲ್ ಬಿಡಿಭಾಗ, ರಾಸಾಯನಿಕಗಳು, ಸುರಕ್ಷತಾ ಗಾಜು, ರಾಸಾಯನಿಕಗಳು, ಪ್ರೆಷರ್ ಕುಕ್ಕರ್ ಸೇರಿದಂತೆ ವಿವಿಧ ಸರಕುಗಳಿಗೆ ಸಂಬಂಧಿಸಿ 50ಕ್ಕೂ ಹೆಚ್ಚು ಗುಣಮಟ್ಟ ನಿಯಂತ್ರಣ ಆದೇಶಗಳನ್ನು ಕಳೆದ ಒಂದು ವರ್ಷದಿಂದ ಹೊರಡಿಸಲಾಗಿದೆ. ಮೊಬೈಲ್ ಫೋನ್, ದೂರಸಂಪರ್ಕ, ವಿದ್ಯುತ್, ಪ್ಲಾಸ್ಟಿಕ್ ಆಟಿಕೆ ಮತ್ತು ಔಷಧಿ ಪದಾರ್ಥ ಪೂರೈಕೆಯಲ್ಲಿ ಚೀನಾ ಗಮನಾರ್ಹ ಪಾಲು ಹೊಂದಿದೆ.

6. ಸೇವಾ ವಲಯದ ಚಟುವಟಿಕೆ ಕುಸಿತ:

- 'ಕೋವಿಡ್–19' ಪಿಡುಗಿನಿಂದಾಗಿ ಹೊಸ ಕೆಲಸದ ಆರ್ಡರ್‌ಗಳು ಕಡಿಮೆಯಾಗಿವೆ. ಕೆಲ ಮಟ್ಟಿಗೆ ಸ್ಥಿರತೆ ಕಂಡು ಬಂದರೂ ಅಡಚಣೆ ಮುಂದುವರೆದಿರುವುದನ್ನು ಸೇವಾ ಚಟುವಟಿಕೆಗಳ ಸೂಚ್ಯಂಕದ ಸಮೀಕ್ಷೆ ದೃಢಪಡಿಸಿದೆ. ಆರ್ಥಿಕತೆಯಲ್ಲಿ ಚೇತರಿಕೆಯ ಲಕ್ಷಣಗಳು ಕಂಡು ಬರುತ್ತಿವೆ ಎನ್ನುವ ಸರ್ಕಾರದ ಧೋರಣೆಗೆ ಈ ಮಾಹಿತಿಯು ತಣ್ಣೀರೆರಚಿದೆ.
- ಜೂನ್‌ನಲ್ಲಿ ತಯಾರಿಕಾ ವಲಯವು ಸ್ಥಿರತೆ ಸಾಧಿಸಿರುವುದು ವರದಿಯಾದ ಮರು ದಿನವೇ ಈ ವಿವರ ಪ್ರಕಟಗೊಂಡಿದೆ. ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸರ್ವಿಸಸ್ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಜೂನ್‌ನಲ್ಲಿ ಶೇ. 33.7ರಷ್ಟು ಮಾತ್ರ ಏರಿಕೆ ದಾಖಲಿಸಿದೆ. ಮೇನಲ್ಲಿ ಇದು ಶೇ. 12.6ರಷ್ಟಿತ್ತು. ಹಿಂದಿನ ತಿಂಗಳಿಗೆ ಹೋಲಿಸಿದರೆ ಹೆಚ್ಚಳಗೊಂಡಿದ್ದರೂ ಸತತ ನಾಲ್ಕನೇ ತಿಂಗಳೂ ಸೇವಾ ಚಟುವಟಿಕೆಗಳ ಪ್ರಗತಿ ಕುಸಿದಿದೆ.
- ಸೇವಾ ವಹಿವಾಟು ಚಟುವಟಿಕೆಗಳ ಸೂಚ್ಯಂಕವು 50ಕ್ಕಿಂತ ಹೆಚ್ಚಿಗೆ ಇದ್ದರೆ ಪ್ರಗತಿ ಹಾದಿಯಲ್ಲಿ ಇದೆ. ಅದಕ್ಕಿಂತ ಕಡಿಮೆ ಇದ್ದರೆ ಅದನ್ನು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸರ್ವಿಸಸ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಅನ್ವಯ ಕುಸಿತ ಎಂದು ಪರಿಗಣಿಸಲಾಗುವುದು.

7. ಡೆಂಟ್ಸು ಎಕ್ಸ್ ಇಂಡಿಯಾ ನಂ.1 ಮೀಡಿಯಾ ಏಜೆನ್ಸಿ:

- ಅಂತರರಾಷ್ಟ್ರೀಯ ರಿಸರ್ಚ್ ಕನ್ಸಲ್ಟೆನ್ಸಿ ಕಾಮ್ ವರ್ಜೆನ್ಸಿ ಸಂಸ್ಥೆಯು ಡೆಂಟ್ಸು ಎಕ್ಸ್ ಇಂಡಿಯಾವನ್ನು ನಂ.1 ಮೀಡಿಯಾ ಏಜೆ ಎಂಬುದಾಗಿ ಪರಿಗಣಿಸಿದೆ. 2029ರ ಸಾಲಿಗೆ ನೂತನ ಬಿಸಿನೆಸ್ ಮಾನದಂಡದ ಪಟ್ಟಿಯನ್ನು ಬಿಡುಗಡೆಗೊಳಿಸಿದ್ದು, ಡೆಂಟ್ಸು ಎಕ್ಸ್ ಇಂಡಿಯಾವನ್ನು ನಂ. 1 ಮೀಡಿಯಾ ಏಜೆನ್ಸಿ ಎಂದು ಕರೆದಿದೆ. ಜಾಹೀರಾತು ಮತ್ತು ಮಾಧ್ಯಮ ಕಂಪನಿಗಳ ವಿಶ್ಲೇಷಣೆಯನ್ನು ನಡೆಸುವ ಕಾಮ್ ವರ್ಜೆನ್ಸಿ ಈ ರ್ಯಾಂಕಿಗ್ ಸಲುವಾಗಿ 21 ಮೀಡಿಯಾ ಏಜೆನ್ಸಿಗಳನ್ನು ಪರಿಶೀಲನೆ ನಡೆಸಿತ್ತು. ಡೆಂಟ್ಸು ಎಕ್ಸ್ ಇಂಡಿಯಾ ಕಳೆದ 5 ವರ್ಷದಿಂದ ತ್ವರಿತವಾಗಿ ಬೆಳೆಯುತ್ತಿದ್ದು, ಗ್ರಾಹಕರ ಮನಗೆದ್ದಿದೆ ಎಂದು ಸಂಸ್ಥೆಯ ಸಿಇಒ ದಿವ್ಯಾ ಕರಾನಿ ತಿಳಿಸಿದ್ದಾರೆ.

8. ಚೀನಾ ಮೂಲದ ಸ್ಮಾರ್ಟ್‌ಫೋನ್ ಉತ್ಪಾದಕ ಕಂಪನಿಗಳಿಗೆ ಭಾರತದಲ್ಲಿ ತೀವ್ರ ಹೊಡೆತ:

- ಒಪ್ಪೋ, ವಿವೊ, ರಿಯಲ್ ಮಿ, ಕಿಯೋಮಿ ಮುಂತಾದ ಚೀನಾ ಮೂಲದ ಸ್ಮಾರ್ಟ್‌ಫೋನ್ ಉತ್ಪಾದಕ ಕಂಪನಿಗಳಿಗೆ ಭಾರತದಲ್ಲಿ ಉತ್ಪಾದನೆಗೆ ತೀವ್ರ ಹೊಡೆತ ಬಿದ್ದಿದೆ. ಈ ಕಂಪನಿಗಳು ಚೀನಾದಿಂದ ಬಿಡಿ ಭಾಗಗಳನ್ನು ಆಮದು ಮಾಡುತ್ತಿವೆ. ಆದರೆ, ಬಂದರುಗಳಲ್ಲಿ ತೀವ್ರ ತಪಾಸಣೆ, ಕೋವಿಡ್–19 ಪರಿಣಾಮ ಕಾರ್ಮಿಕರ ಕೊರತೆ ಇತ್ಯಾದಿ ಕಾರಣಗಳಿಂದ ಕೋವಿಡ್ ಪೂರ್ವ ಮಟ್ಟವನ್ನು ಹೋಲಿಸಿದರೆ ಉತ್ಪಾದನೆಯ ಪ್ರಮಾಣದಲ್ಲಿ ಶೇ. 30–40ರಷ್ಟು ಕಡಿಮೆಯಾಗಿದೆ.

9. 5ಜಿ ವೆಂಡರ್ಸ್ ಆಯ್ಕೆಯಲ್ಲಿ ಚೀನಾಗೆ ಹಿನ್ನೆಡೆ:

- ಅಮೆರಿಕದ ದೂರಸಂಪರ್ಕ ಇಲಾಖೆಯು ಚೀನಾ ಮೂಲದ ಟೆಲಿಕಾಂ ವೆಂಡರ್‌ಗಳಾದ ಹುವೈ ಮತ್ತು ಝಡ್ ಟಿಇಯನ್ನು 'ರಾಷ್ಟ್ರೀಯ ಭದ್ರತಾ ರಿಸ್ಕ್' ಎಂಬ ಕಾರಣದಿಂದ ದೂರವಿಟಿರುವ ಬೆನ್ನಲ್ಲೇ, ಡೇಟಾ ಕಳ್ಳತನ ಮತ್ತು ಭದ್ರತೆಯ ವಿಚಾರಗಳು 5ಜಿ ವೆಂಡರ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ ನಿರ್ಣಾಯಕವಾಗಲಿದೆ.
- ಭಾರತದಲ್ಲೂ ಹಿರಿಯ ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ. ಭಾರತದಲ್ಲಿ ಮುಂದಿನ ಹಂತದ ಡಿಜಿಟಲ್ ಕ್ರಾಂತಿಯಲ್ಲಿ 5ಜಿ ಮಹತ್ವದ ಸ್ಥಾನ ಪಡೆಯಲಿದೆ. ಆದರೆ, ಡೇಟಾ ಸುರಕ್ಷತೆ, ರಾಷ್ಟ್ರೀಯ ಭದ್ರತೆ ವಿಚಾರಗಳು ನಿರ್ಧಾರ ತೆಗೆದುಕೊಳ್ಳುವ ನಿಟ್ಟಿನಲ್ಲಿ ಪ್ರಮುಖ ಅಂಶಗಳಾಗಲಿವೆ.

10. ಫೇರ್ ಆ್ಯಂಡ್ ಲವ್ಲಿ ಇನ್ಮುಂದೆ 'ಗ್ಲೋ ಆಂಡ್ ಲವ್ಲಿ' ಎಂದು ನಾಮ ಬದಲಾವಣೆ:

- ದಶಕಗಳ ಕಾಲ ಶ್ವೇತ ವರ್ಣ ನೀಡುವ ಭರವಸೆ ನೀಡಿದ್ದ 'ಆ್ಯಂಡ್ ಲವ್ಲಿ' ಕ್ರೀಮ್ ಈಗ 'ಗ್ಲೊ ಆ್ಯಂಡ್ ಲವ್ಲಿ' ಎಂಬುದಾಗಿ ಹೆಸರು ಬದಲಿಸಿಕೊಂಡಿದೆ. ಹಿಂದೂಸ್ತಾನ್ ಯುನಿಲಿವರ್ ಕಂಪನಿ ಎಚ್‌ಯುಎಲ್ ತನ್ನ 'ಫೇರ್ ಆ್ಯಂಡ್ ಲವ್ಲಿ' ಜೊತೆಗೆ, ಪುರುಷರು ಉಪಯೋಗಿಸುವ ಕ್ರೀಮ್ ಹೆಸರನ್ನು 'ಗ್ಲೋ ಆ್ಯಂಡ್ ಹ್ಯಾಂಡ್‌ಸಮ್' ಎಂದು ಬದಲಾಯಿಸಿದೆ. ಏತನ್ಮಧ್ಯೆ, ಈ ವಿಷಯವು ವಿವಾದಕ್ಕೆ ಕಾರಣವಾಗಿದೆ. 'ಫೇರ್ ಆ್ಯಂಡ್ ಹ್ಯಾಂಡ್‌ಸಮ್' ಬ್ರ್ಯಾಂಡ್‌ನ ತಯಾರಕ ಕಂಪನಿಯಾದ ಇಮಾಮಿ, ಇತ್ತೀಚೆಗಷ್ಟೇ ತನ್ನ ಉತ್ಪನ್ನಕ್ಕೆ 'ಇಮಾಮಿ ಗ್ಲೋ ಆ್ಯಂಡ್ ಹ್ಯಾಂಡ್‌ಸಮ್' ಎಂದು ಮರು ನಾಮಕರಣ ಮಾಡಿತ್ತು.

11. ನಾಳೆಯಿಂದ ಚಿನ್ನದ ಬಾಂಡ್ ನಾಲ್ಕನೇ ಕಂತು ಆರಂಭವಾಗಲಿದೆ:

- 2020–21ನೇ ಸಾಲಿನ ಚಿನ್ನದ ಬಾಂಡ್‌ನ ನಾಲ್ಕನೇ ಕಂತು ಕೆಲಸದ ಆರಂಭ ವಾಗಲಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡಿಕೆ ದರವನ್ನು ಪ್ರತಿ ಗ್ರಾಂ ಗೆ 4,852 ರೂ. ನಿಗದಿ ಮಾಡಿದೆ.
- ಆನ್‌ಲೈನ್ ಮೂಲಕ ಬಾಂಡ್ ಖರೀದಿಗೆ ಹಣ ಪಾವತಿಸುವವರಿಗೆ ಪ್ರತಿ ಗ್ರಾಂ ಗೆ 50 ರೂ. ರಂತೆ ವಿನಾಯಿತಿ ಸಿಗಲಿದೆ. ಹೀಗಾಗಿ ಇಂತಹ ಹೂಡಿಕೆದಾರರಿಗೆ ನೀಡಿಕೆ ಬೆಲೆ 4,802 ರೂ. ಇರಲಿದೆ.
- 2020ರ ಜೂನ್ 6 ರಿಂದ 10ರ ವರೆಗೆ ಬಾಂಡ್ ಖರೀದಿಗೆ ಅವಕಾಶ ಇರಲಿದೆ. ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯವರೆಗೆ ಆರು ಕಂತುಗಳ ಚಿನ್ನದ ಬಾಂಡ್ ವಿತರಣೆ ಮಾಡುವುದಾಗಿ ಆರ್‌ಬಿಐ ಏಪ್ರಿಲ್‌ನಲ್ಲಿ ಘೋಷಣೆ ಮಾಡಿತ್ತು.

ಕೇಂದ್ರ ಸರ್ಕಾರದ ಸಮ್ಮುಖದಲ್ಲಿ ಆರ್.ಬಿ.ಐ ಈ ಬಾಂಡ್‌ಗಳನ್ನು ವಿತರಣೆ ಮಾಡಲಿದೆ.

- ಭೌತಿಕ ರೂಪದಲ್ಲಿ ನಿಷ್ಪ್ರಯೋಜಕವಾಗಿರುವ ಚಿನ್ನವನ್ನು ಬಳಕೆಗೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರ, 2015 ರಲ್ಲಿ ಚಿನ್ನದ ಬಾಂಡ್ ಯೋಜನೆ ಜಾರಿಗೊಳಿಸಿತು. ಬ್ಯಾಂಕ್‌ಗಳು, ಆಯ್ದ ಅಂಚೆ ಕಚೇರಿಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಸ್‌ಎಚ್‌ಸಿಐಎಲ್) ರಾಷ್ಟ್ರೀಯ ಮತ್ತು ಮುಂಬೈ ಷೇರು ವಿನಿಮಯ ಕೇಂದ್ರಗಳಲ್ಲಿ ಈ ಬಾಂಡ್ಗಳನ್ನು ಮಾರಾಟ ಮಾಡಲಾಗುವುದು

12. ಬ್ಯಾಂಕ್ ಸಾಲ ವಿತರಣೆಯಲ್ಲಿ ಶೇಕಡಾ 6.18 ವೃದ್ಧಿಯಾಗಿದೆ:

- ಬ್ಯಾಂಕ್‌ಗಳಲ್ಲಿ ಸಾಲ ವಿತರಣೆ ಮತ್ತು ಠೇವಣಿಗಳ ಸಂಗ್ರಹ ಎರಡೂ ಜೂನ್‌ನಲ್ಲಿ ಚೇತರಿಕೆಯಾಗಿದೆ. ಜೂನ್ 19ಕ್ಕೆ ಅಂತ್ಯವಾದ ಪಾಕ್ಷಿಕದಲ್ಲಿ ಬ್ಯಾಂಕ್ ಸಾಲ ವಿತರಣೆಯಲ್ಲಿ 6.18 ಪರ್ಸೆಂಟ್ ಏರಿಕೆಯಾಗಿದೆ.
- 102.45 ಲಕ್ಷ ಕೋಟಿ ರೂ.ಗೆ ವೃದ್ಧಿಸಿದೆ. ಬ್ಯಾಂಕ್‌ಗಳಲ್ಲಿ ಠೇವಣಿ ಸಂಗ್ರಹ 138 ಲಕ್ಷ ಕೋಟಿ ರೂ. ಗೆ ಚೇತರಿಸಿದೆ. 2019ರ ಜೂನ್ 21ಕ್ಕೆ ಅಂತ್ಯವಾದ ಪಾಕ್ಷಿಕದಲ್ಲಿ ಬ್ಯಾಂಕ್ ಸಾಲ 96.48 ಲಕ್ಷ ಕೋಟಿ ರೂ. ಗಳಾಗಿತ್ತು. ಠೇವಣಿ ಸಂಗ್ರಹ 124 ಲಕ್ಷ ಕೋಟಿ ರೂ. ಗಳಾಗಿತ್ತು. ಲಾಕ್‌ಡೌನ್ ಪರಿಣಾಮ ಮೇ ನಲ್ಲಿ ಬ್ಯಾಂಕ್ ಸಾಲ ವಿತರಣೆ ಮತ್ತು ಠೇವಣಿ ಸಂಗ್ರಹ ಎರಡೂ ಇಳಿದಿತ್ತು.

13. ಆರ್ಥಿಕತೆ ಚೇತರಿಕೆಗೆಯಾಗುತ್ತಿರುವುದಕ್ಕೆ ಇ–ವೇ ಬಿಲ್‌ಗಳೇ ಸೂಚಕಗಳಾಗಿವೆ:

- ಕಳೆದ ಜೂನ್‌ನಲ್ಲಿ 4.27 ಕೋಟಿ ಇ–ವೇ ಬಿಲ್‌ಗಳು ತಯಾರಾಗಿವೆ. ಮಾರ್ಚ್‌ನಲ್ಲಿ ಇ–ವೇ ಬಿಲ್ ಗಳ ಸಂಖ್ಯೆ 4.03 ಕೋಟಿ ಇತ್ತು. ಜೂನ್‌ನಲ್ಲಿ ಹೆಚ್ಚಾಗಿರುವ ಇ–ವೇ ಬಿಲ್‌ಗಳೇ ಆರ್ಥಿಕತೆ ಚೇತರಿಕೆಯ ಸೂಚಕ ಎಂದು ಸರ್ಕಾರವು ವ್ಯಾಖ್ಯಾನಿಸಿದೆ.

14. ಐ.ಒ.ಸಿ 1.04 ಲಕ್ಷ ಕೋಟಿ ಮೊತ್ತದ ಯೋಜನೆಗಳ ಮರು ಚಾಲನೆ:

- ಲಾಕ್‌ಡೌನ್ ನಿಬರ್ಂಧಗಳು ಸಡಿಲಗೊಳ್ಳುತ್ತಿರುವುದರಿಂದ 1.04 ಲಕ್ಷ ಕೋಟಿ ಮೊತ್ತದ ಯೋಜನೆಗಳಿಗೆ ಮರು ಚಾಲನೆ ನೀಡಿರುವುದಾಗಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐ.ಒ.ಸಿ) ತಿಳಿಸಿದೆ.
- ಭವಿಷ್ಯದ ಇಂಧನ ಬೇಡಿಕೆ ಪೂರೈಸಲು ಮತ್ತು ಉದ್ಯೋಗ ಸೃಷ್ಟಿಸುವ ಮೂಲಕ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಇದು ಪೂರಕವಾಗಿದೆ. ರೂ. 1.04 ಲಕ್ಷ ಕೋಟಿ ಮೊತ್ತದ 336 ಯೋಜನೆಗಳಿಗೆ ಮತ್ತೆ ಚಾಲನೆ ನೀಡಲಾಗಿದೆ ಎಂದೂ ಹೇಳಿದೆ.
- 2020–21ನೇ ಹಣಕಾಸು ವರ್ಷದಲ್ಲಿ 26,143 ಕೋಟಿ ಬಂಡವಾಳ ವೆಚ್ಚ ಮಾಡುವ ಹಾದಿಯಲ್ಲಿ ಕಂಪನಿಯು ಸಾಗುತ್ತಿದೆ. ಮೊದಲ ತ್ರೈಮಾಸಿಕದಲ್ಲಿ 2,674 ಕೋಟಿ ಹೂಡಿಕೆ ಮಾಡಲಾಗಿದೆ. ದೀರ್ಘಾವಧಿಯ ಬಂಡವಾಳ ವೆಚ್ಚವು ದೇಶದ ಬೇಡಿಕೆಯನ್ನು ಆಧರಿಸಿ ನಿರ್ಧಾರವಾಗಲಿದೆ ಎಂದೂ ಹೇಳಿದೆ.

15. ಪಿ.ಎಫ್. ಖಾತೆದಾರರಿಗೆ ಮತ್ತೆ ತಿಂಗಳು ಸರ್ಕಾರದ ನೆರವು:

- ಉದ್ಯೋಗಿಗಳ ಭವಿಷ್ಯ ನಿಧಿ (ಇ.ಪಿ.ಎಫ್) ಸದಸ್ಯರಿಗೆ ಇದು ಸಿಹಿ ಸುದ್ದಿ, ಉದ್ಯೋಗಿಗಳ ಪಿಎಫ್ ಖಾತೆಗೆ ನೀಡುತ್ತಿರುವ ಹಣಕಾಸು ನೆರವನ್ನು ಮತ್ತೆ ಮೂರು ತಿಂಗಳಿನ ತನಕ ವಿಸ್ತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯ ಅಡಿಯಲ್ಲಿ ಇ.ಪಿ.ಎಫ್ ಖಾತೆಗೆ ನೀಡುತ್ತಿರುವ ನೆರವನ್ನು 2020ರ ಜೂನ್‌ನಿಂದ ಆಗಸ್ಟ್ ತನಕ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ.
- ಇ.ಪಿ.ಎಫ್. ಖಾತೆಗೆ ಉದ್ಯೋಗದಾತರು ನೀಡುವ ಶೇ. 12 ಮತ್ತು ಉದ್ಯೋಗಿಗಳ ಪಾಲಿನ ಶೇ. 12 ಸೇರಿ ಒಟ್ಟು ಶೇ. 24ರಷ್ಟು ಪಾಲನ್ನು ಸರ್ಕಾರ ಆಗಸ್ಟ್ ತನಕ ನೀಡಲಿದೆ. ಇದಕ್ಕಾಗಿ 4,860 ಕೋಟಿ ರೂ. ವೆಚ್ಚವಾಗಲಿದೆ. 72 ಲಕ್ಷ ಉದ್ಯೋಗಿಗಳಿಗೆ ಇದರ ಪ್ರಯೋಜನ ದೊರೆಯಲಿದೆ. ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.
- ಇದುವರೆಗೆ ಏಪ್ರಿಲ್‌ನಲ್ಲಿ 74.3 ಕೋಟಿ, ಮೇನಲ್ಲಿ 74.75 ಕೋಟಿ ಹಾಗೂ ಜೂನ್‌ನಲ್ಲಿ 64.72 ಕೋಟಿ ಮಂದಿಗೆ ಪ್ರಯೋಜನ ಲಭಿಸಿದೆ.

16. ಸರ್ಕಾರದ ಕೊಡುಗೆಯು ಎಲ್ಲ ಉದ್ಯೋಗಿಗಳಿಗೂ ಅನ್ವಯವಾಗುವುದಿಲ್ಲ:

- 100 ರ ತನಕ ಉದ್ಯೋಗಿಗಳನ್ನು ಹೊಂದಿರುವ ಸಣ್ಣ ಕಂಪನಿಗಳ ನೌಕರರಿಗೆ ಅನ್ವಯವಾಗುತ್ತದೆ. ಇಲ್ಲವೇ, ಮಾಸಿಕ 15,000 ರೂ. ಗಿಂತ ಕಡಿಮೆ ವೇತನ ಇರುವ ಉದ್ಯೋಗಿಗಳಿಗೆ ಮಾತ್ರ ಅನ್ವಯವಾಗಲಿದೆ.

17. ಜಿಡಿಪಿ ಶೇ. 3 ರಷ್ಟು ಕುಸಿತವಾಗಲಿದೆ ಎಂದು ಬಿ.ಒ.ಎಫ್.ಎ ಸೆಕ್ಯುರಿಟೀಸ್ ಅಂದಾಜು ಮಾಡಿದೆ:

- ಭಾರತದ ಆರ್ಥಿಕ ವೃದ್ಧಿ ದರವು (ಜಿ.ಡಿ.ಪಿ) 2020–21ನೇ ಹಣಕಾಸು ವರ್ಷದಲ್ಲಿ ಶೇ. 3ರಷ್ಟು ಕುಸಿತ ಕಾಣಲಿದೆ ಎಂದು ದಲ್ಲಾಳಿ ಸಂಸ್ಥೆ ಬಿ.ಒ.ಎಫ್.ಎ ಸೆಕ್ಯುರಿಟೀಸ್ ಅಂದಾಜು ಮಾಡಿದೆ.
- ಆರ್.ಬಿ.ಐ ಸೇರಿದಂತೆ ಆರ್ಥಿಕ ತಜ್ಞರು ದೇಶದ ಜಿ.ಡಿ.ಪಿ ಬೆಳವಣಿಗೆಯನ್ನು ತಗ್ಗಿಸುತ್ತಿದ್ದಾರೆ. ಶೇ 7ರವರೆಗೂ ನಕಾರಾತ್ಮಕ ಬೆಳವಣಿಗೆ ಹೊಂದುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.
- ಮುಕ್ತ ಮಾರುಕಟ್ಟೆಯಲ್ಲಿ 7.12 ಲಕ್ಷ ಕೋಟಿ ಮೌಲ್ಯದ ಸರ್ಕಾರಿ ಬಾಂಡ್‌ಗಳನ್ನು ಖರೀದಿಸುವ ಮೂಲಕ ವಿತ್ತೀಯ ಕೊರತೆ ನಿಯಂತ್ರಿಸಲು ಆರ್.ಬಿ.ಐ ಪ್ರಯತ್ನಿಸಲಿದೆ ಎಂದು ಹೇಳಿದೆ.

18. 58 ಕಂಪನಿಗೆ ಭಾರತೀಯರ ನೇತೃತ್ವ:

- 11 ರಾಷ್ಟ್ರಗಳಲ್ಲಿ ಒಟ್ಟು 36 ಲಕ್ಷಕ್ಕೂ ಅಧಿಕ ಉದ್ಯೋಗಿಗಳನ್ನು ಒಳಗೊಂಡಿರುವ ದಿಗ್ಗಜ ಕಂಪನಿಗಳ ನೇತೃತ್ವವನ್ನು 58 ಭಾರತೀಯರು ವಹಿಸಿದ್ದಾರೆ.
- ಅಮೆರಿಕ, ಕೆನಡಾ, ಇಂಗ್ಲೆಂಡ್, ಸಿಂಗಾಪುರ ಸೇರಿದಂತೆ 11 ದೇಶಗಳಲ್ಲಿ ಈ ಕಂಪನಿಗಳಿದ್ದು, ಒಟ್ಟಾಗಿ 1 ಲಕ್ಷ ಕೋಟಿ ಡಾಲರ್‌ಗೂ ಅಧಿಕ ಆದಾಯವನ್ನು ಹೊಂದಿವೆ. ಅವುಗಳ ಮಾರುಕಟ್ಟೆ ಮೌಲ್ಯ 4 ಲಕ್ಷ ಕೋಟಿ ಡಾಲರ್‌ಗೂ ಹೆಚ್ಚು ಎಂದು ಅಮೆರಿಕ ಮೂಲದ ಇಂಡಿಯಾಸೊರಾ ಸಂಸ್ಥೆಯ ವರದಿ ತಿಳಿಸಿದೆ.

19. ಅಮೆರಿಕದ ಮೂಲದ ಆ್ಯಪ್ ಕಂಪನಿಯ ಐಫೋನ್‌ಗಳನ್ನು ಉತ್ಪಾದಿಸುವ ಕಂಪೆನಿ ಭಾರತಕ್ಕೆ ಬರಲಿದೆ:

- ಕೋವಿಡ್ ಸೋಂಕು ಹರಡುವಿಕೆ ವಿಚಾರದಲ್ಲಿ ಅಂತರರಾಷ್ಟ್ರೀಯ ಸಮುದಾಯದ ಆಕ್ರೋಶ ಎದುರಿಸುತ್ತಿರುವ ಚೀನಾಗೆ ಆರ್ಥಿಕ ಹೊಡೆತ ನೀಡಲು ಅನೇಕ ರಾಷ್ಟ್ರಗಳು ಮುಂದಾಗಿವೆ.
- ಅಮೆರಿಕದ ಆ್ಯಪ್ ಕಂಪನಿಯ ಐಫೋನ್‌ಗಳನ್ನು ಉತ್ಪಾದಿಸುವ ಜಾಗತಿಕ ಗುತ್ತಿಗೆದಾರ ಸಂಸ್ಥೆ ತೈವಾನ್ ಮೂಲದ ಫಾಕ್ಸ್ ಕಾನ್ ಕ್ರಮೇಣ ಚೀನಾ ಹೂಡಿಕೆಯನ್ನು ಭಾರತಕ್ಕೆ ಸ್ಥಳಾಂತರಿಸಲು ನಿರ್ಧರಿಸಿದೆ.
- ಇದರ ಭಾಗವಾಗಿ ಚೆನ್ನೈನಲ್ಲಿರುವ ಘಟಕದಲ್ಲಿ 7,500 ಕೋಟಿ ರೂ. ಬಂಡವಾಳ ಹೂಡಿಕೆಗೆ ಮುಂದಾಗಿದೆ ಎಂದು ಮೂಲಗಳು ಹೇಳಿವೆ.
- ಕೊರೋನಾ ಬಿಕ್ಕಟ್ಟಿನ ಬಳಿಕ ಅಮೆರಿಕ ಹಾಗೂ ಚೀನಾ ಮಧ್ಯೆ ವಾಣಿಜ್ಯ ಸಮರ ತೀವ್ರಗೊಂಡಿರುವ ಹೊತ್ತಿನಲ್ಲಿಯೇ ಈ ಬೆಳವಣಿಗೆ ನಡೆದಿದೆ. ಇದರಿಂದ ಆತ್ಮನಿರ್ಭರ ಯೋಜನೆಗೆ ಇನ್ನಷ್ಟು ಬಲ ಬರಲಿದೆ.
- ಫಾಕ್ಸ್ ಕಾನ್ ಕಂಪನಿಗೆ ಚೀನಾದಲ್ಲಿನ ಘಟಕಗಳನ್ನು ಕ್ರಮೇಣ ಭಾರತಕ್ಕೆ ಸ್ಥಳಾಂತರಿಸುವಂತೆ ಅಮೆರಿಕದಿಂದ ಒತ್ತಡ ಹೆಚ್ಚುತ್ತಿದೆ ಎನ್ನಲಾಗುತ್ತಿದೆ. ಆದರೆ ಈ ಬಗ್ಗೆ ಫಾಕ್ಸ್ ಕಾನ್ ಅಥವಾ ಆ್ಯಪ್ ವಿವರಣೆ ನೀಡಿಲ್ಲ.
- ಫಾಕ್ಸ್ ಕಾನ್ ಚೆನ್ನೈ ಬಳಿಯ ಶ್ರೀಪೆರಂಬೂರ್‌ನಲ್ಲಿರುವ ಘಟಕದಲ್ಲಿ ಐಫೋನ್ ಎಕ್ಸ್,ಆರ್ ಅನ್ನು ಉತ್ಪಾದಿಸುತ್ತಿದೆ. ಬಂಡವಾಳ ಹೂಡಿಕೆ ಹೆಚ್ಚಳದಿಂದ ಅಂದಾಜು 6,000 ಉದ್ಯೋಗ ಸೃಷ್ಟಿಯ ಸಂಭವ ಇದೆ.
- ಫಾಕ್ಸ್ ಕಾನ್ ಆಂಧ್ರಪ್ರದೇಶದಲ್ಲಿಯೂ ಘಟಕ ಹೊಂದಿದೆ.

20. ಆರ್ಥಿಕತೆ ಚೇತರಿಕೆಯತ್ತ ಸಾಗುತ್ತಿದೆ ಎಂದು ಶಕ್ತಿಕಾಂತ್ ದಾಸ್ ಹೇಳಿದ್ದಾರೆ:

ಕೋವಿಡ್ ಪರಿಣಾಮ

- ಬ್ಯಾಂಕ್‌ಗಳ ವಸೂಲಾಗದ ಸಾಲದಲ್ಲಿ (ಎನ್.ಪಿ.ಎ) ಏರಿಕೆ
- ಬ್ಯಾಂಕ್‌ಗಳಿಗೆ ಬಂಡವಾಳ ನಷ್ಟ ಸಾಧ್ಯತೆ
- ಬ್ಯಾಂಕಿಂಗ್ ವಲಯಕ್ಕೆ ಪುನರ್ಧನದ ಅಗತ್ಯ

21. ಜಿಯೊ ಷೇರು ಮಾರಾಟದ ನಾಲ್ಕು ಒಪ್ಪಂದ ಪೂರ್ಣಗೊಂಡಿವೆ:

- ಜಿಯೊ ಪ್ಲಾಟ್‌ಫಾರ್ಮ್ಸ್‌ನ ಶೇ. 6.13ರಷ್ಟು ಷೇರುಗಳನ್ನು ನಾಲ್ಕು ಕಂಪನಿಗಳಿಗೆ ಮಾರಾಟ ಮಾಡುವ ಒಪ್ಪಂದವು ಪೂರ್ಣಗೊಂಡಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ತಿಳಿಸಿದೆ.
- ಫೇಸ್‌ಬುಕ್ ಜತೆಗಿನ ಒಪ್ಪಂದ ಪೂರ್ಣಗೊಂಡ ಬಳಿಕ, ಎಲ್.ಕಾಟರ್‌ಟನ್, ದಿ ಪಬ್ಲಿಕ್ ಇನ್‌ವೆಸ್ಟ್‌ಮೆಂಟ್ ಫಂಡ್, ಸಿಲ್ವರ್ ಲೇಕ್ ಮತ್ತು ಜನರಲ್ ಅಟ್ಲಾಂಟಿಕ್ ಕಂಪನಿಗಳಿಂದ ಒಟ್ಟಾರೆ 30,062 ಕೋಟಿ ಬಂಡವಾಳ ಪಡೆದು ಕೊಂಡಿರುವುದಾಗಿ ಹೇಳಿದೆ.
- ಫೇಸ್‌ಬುಕ್‌ನಿಂದ ಈಗಾಗಲೇ 43,574 ಕೋಟಿ ಹೂಡಿಕೆಯನ್ನು ಕಂಪನಿ ಪಡೆದುಕೊಂಡಿದೆ.
- ರಿಲಯನ್ಸ್ ಕಂಪನಿಯು ಜಿಯೊ ಪ್ಲಾಟ್‌ಫಾರ್ಮ್ ನ ಶೇ. 25.09 ಷೇರುಗಳನ್ನು 11 ಹೂಡಿಕೆದಾರರಿಗೆ 1,17,588.45 ಕೋಟಿ ರೂ. ಗೆ ಮಾರಾಟ ಮಾಡುವ ಒಪ್ಪಂದ ಮಾಡಿಕೊಂಡಿದೆ.
- ಇದರಲ್ಲಿ ಇದುವರೆಗೆ ಒಟ್ಟಾರೆ 5 ಹೂಡಿಕೆ ಒಪ್ಪಂದಗಳು ಪೂರ್ಣಗೊಂಡಿವೆ.

22. ಫ್ಲಿಪ್‌ಕಾರ್ಟ್ ಗ್ರೂಪ್‌ನಲ್ಲಿ 9,056 ಕೋಟಿ ಹೂಡಿಕೆ:

- ಇ–ಕಾಮರ್ಸ್‌ನ ದೇಶಿ ದೈತ್ಯ ಸಂಸ್ಥೆ ಫ್ಲಿಪ್‌ಕಾರ್ಟ್, ಹೂಡಿಕೆದಾರರಿಂದ 9,056 ಕೋಟಿ ಮೊತ್ತದ ಬಂಡವಾಳ ಸಂಗ್ರಹಿಸಿದೆ.
- ಈ ಹಾಲಿ ಪಾಲುದಾರರೂ ಒಳಗೊಂಡ ಈ ಸುತ್ತಿನ ಹೂಡಿಕೆಯಿಂದ ಫ್ಲಿಪ್‌ಕಾರ್ಟ್ ಮಾರುಕಟ್ಟೆ ಮೌಲ್ಯವು ಈಗ 1,87,915 ಕೋಟಿಗೆ ತಲುಪಿದೆ ಎಂದು ಫ್ಲಿಪ್‌ಕಾರ್ಟ್ ತಿಳಿಸಿದೆ.
- 2018ರಲ್ಲಿ ವಾಲ್‌ಮಾರ್ಟ್, 1.07 ಲಕ್ಷ ಕೋಟಿ ಮೊತ್ತದ ಬಂಡವಾಳ ತೊಡಗಿಸಿ ಫ್ಲಿಪ್‌ಕಾರ್ಟ್ ಗ್ರೂಪ್‌ನ ಶೇ. 77ರಷ್ಟು ಪಾಲು ಬಂಡವಾಳವನ್ನು ಖರೀದಿಸಿತ್ತು.

23. ಇ.ಇ.ಎಂ.ಎ ಅಧ್ಯಕ್ಷ ಸ್ಥಾನಕ್ಕೆ ರೋಶನ್:

- ಇವೆಂಟ್ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಮ್ಯಾನೇಜ್‌ಮೆಂಟ್ ಅಸೋಸಿಯೇಶನ್ (ಇ.ಇ.ಎಂ.ಎ.) ಇತ್ತೀಚೆಗೆ ತನ್ನ ಅಧ್ಯಕ್ಷೀಯ ಚುನಾವಣೆಯಲ್ಲಿ ನೂತನ ಅಧ್ಯಕ್ಷರನ್ನಾಗಿ 'ರೋಶನ್ ಅಬ್ಬಾಸ್' ಅವರನ್ನು ಆಯ್ಕೆ ಮಾಡಲಾಗಿದೆ.

24. ಹಣದುಬ್ಬರ ಶೇ. 1.81ರಷ್ಟು ಕುಸಿತ:

- ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗಿದ್ದರೂ, ಇಂಧನ, ವಿದ್ಯುತ್ ಬೆಲೆ ಇಳಿಕೆಯಿಂದಾಗಿ ಜೂನ್‌ನಲ್ಲಿನ ಸಗಟು ಬೆಲೆ ಆಧರಿಸಿದ ಹಣದುಬ್ಬರವು ಶೇ. 1.81ಕ್ಕೆ ಇಳಿದಿದೆ.
- ಮೇ ತಿಂಗಳಲ್ಲಿ ಸಗಟು ಬೆಲೆ ಇಳಿತವು ಶೇ. 3.21ರಷ್ಟಿತ್ತು. ತಿಂಗಳ ಸಗಟು ಬೆಲೆ ಸೂಚ್ಯಂಕ ಆಧರಿಸಿದ ವಾರ್ಷಿಕ ಹಣದುಬ್ಬರ ದರವು, ಹಿಂದಿನ ವರ್ಷದ ಇದೇ ಅವಧಿಯಲ್ಲಿನ ಶೇ. 2.02 ಗೆ ಹೋಲಿಸಿದರೆ ಶೇ.1.82ರಷ್ಟಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ತಿಳಿಸಿದೆ.

25. ಅಂಬಾನಿ ವಿಶ್ವದ 6ನೇ ಶ್ರೀಮಂತ :

- ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿಯವರು ವಿಶ್ವದ 6ನೇ ದೊಡ್ಡ ಶ್ರೀಮಂತ ವ್ಯಕ್ತಿಯಾಗಿ ಹೊರಹೊಮ್ಮಿದ್ದಾರೆ.
- ಅಮೆರಿಕಾದ 'ಇಲಾನ್ ಮಸ್ಕ್', ಗೂಗಲ್ ಸ್ಥಾಪಕ 'ಸರ್ಗಿ ಬ್ರಿನ್' ಮತ್ತು 'ಲಾರ್ರಿ ಪೇಜ್' ಅವರನ್ನು ಹಿಂದಿಕ್ಕಿದ್ದಾರೆ.
- ಬ್ಲೂಮ್ ಬರ್ಗ್ ಬಿಲಿಯನೇರ್ ಪಟ್ಟಿಯ ಪ್ರಕಾರ, ಈಗ ಅಂಬಾನಿಯ ಆಸ್ತಿ ಮೊತ್ತ 72.4 ಶತಕೋಟಿ ಡಾಲರ್ (5.43 ಲಕ್ಷ ಕೋಟಿ ರೂ.) ಗೆ ಏರಿದೆ.

26. ಜಿಯೊದಲ್ಲಿ ಗೂಗಲ್‌ನ 30,000 ಕೋಟಿ?

- ರಿಲಯನ್ಸ್ ಜಿಯೊದಲ್ಲಿ ಗೂಗಲ್ ಕಂಪನಿಯು 4 ಶತಕೋಟಿ ಡಾಲರ್ (30,000 ಕೋಟಿ ರೂ.) ಹೂಡಿಕೆ ಮಾಡುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಈ ಸಂಬಂಧ ಮಾತುಕತೆ ನಡೆಯುತ್ತಿದ್ದು, ಮುಂದಿನ ಕೆಲ ವಾರಗಳಲ್ಲಿ ಘೋಷಣೆ ಪ್ರಕಟವಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

27. ಜಲಾನಯನ ಯೋಜನೆಯ ಮೂಲಕ ಅಭಿವೃದ್ಧಿ ನಬಾರ್ಡ್‌ನ ಧ್ಯೇಯ

- ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) 39ನೇ ಸಂಸ್ಥಾಪನಾ ದಿನವನ್ನು ಜುಲೈ 12ರಂದು ಆಚರಿಸಲಾಯಿತು.
- ಇದೇ ವೇಳೆ 1982ರ ಜುಲೈ 12ರಂದು ಸ್ಥಾಪನೆ ಆದಾಗಿನಿಂದ ನಬಾರ್ಡ್ ಸಂಸ್ಥೆಯು ಕರ್ನಾಟಕ ರಾಜ್ಯಕ್ಕೆ ನೀಡಿದ ಕೊಡುಗೆಯ ಬಗ್ಗೆ ವಿವರಿಸುವ 38 ವರ್ಷಗಳ ಪ್ರಯಾಣ' ಹೆಸರಿನ ಕಿರು ಪುಸ್ತಕ ಬಿಡುಗಡೆ ಮಾಡಲಾಗಿದೆ.
- ರಾಜ್ಯದಲ್ಲಿ ಶೇ. 75ರಷ್ಟು ವ್ಯವಸಾಯ ಭೂಮಿಯು ಮಳೆ ಆಧಾರಿತವಾಗಿದೆ.
- ಜಲಾನಯನ ಅಭಿವೃದ್ಧಿ ನಿಧಿಯಡಿ, ರಾಜ್ಯದಲ್ಲಿ ಇದುವರೆಗೂ 298 ಜಲಾನಯನ ಯೋಜನೆಗಳನ್ನು ಉತ್ತೇಜಿಸಿ ರೂ. 221.89 ಕೋಟಿಗಳ ಅನುದಾನ ನೀಡಲಾಗಿದೆ. 3.04 ಲಕ್ಷ ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿಗೊಳಿಸುವ ಮೂಲಕ 66,500 ಕುಟುಂಬಗಳು ಇದರ ಲಾಭ ಪಡೆದುಕೊಂಡಿವೆ.

28. 5ಜಿ ಸೇವೆ ನೀಡಲು ಜಿಯೊ ರೆಡಿ:

- ಮೇಡ್ ಇನ್ ಇಂಡಿಯಾ '5ಜಿ ಸೇವೆ' ಆರಂಭಿಸಲು ಸಿದ್ಧತೆ ನಡೆಸಿರುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಘೋಷಿಸಿದೆ. 5ಜಿ ಸ್ಪೆಕ್ಟಮ್ ಲಭ್ಯವಾದೊಡನೆ ಸೇವೆ ಆರಂಭಿಸಲಾಗುವುದು ಎಂದು ಕಂಪನಿಯ 43ನೇ ವಾರ್ಷಿಕ ಸಭೆಯಲ್ಲಿ (ಎ.ಜಿ.ಎಂ.) ಅಧ್ಯಕ್ಷ ಮುಕೇಶ್ ಅಂಬಾನಿ ತಿಳಿಸಿದ್ದಾರೆ.
- ರಿಲಯನ್ಸ್ ಜಿಯೊದಲ್ಲಿ ಗೂಗಲ್ 33,737 ಕೋಟಿ ರೂ. ಹೂಡಲಿರುವುದನ್ನು ಮುಕೇಶ್ ದೃಢಪಡಿಸಿದರು. ಜಿಯೊದ ಶೇ. 7.7 ಷೇರುಗಳನ್ನು ಗೂಗಲ್ ಖರೀದಿಸಲಿದೆ.
- ಗೂಗಲ್ ಮತ್ತು ಜಿಯೊ ಸಹಭಾಗಿತ್ವದಲ್ಲಿ ಆ್ಯಂಡ್ರಾಯ್ಡ್ ಆಧಾರಿತ ಅಗ್ಗದ ಸ್ಮಾರ್ಟ್ ಫೋನ್‌ಗಳನ್ನು ತಯಾರಿಸಲಾಗುವುದು. ಗೂಗಲ್ ಮತ್ತು ಜಿಯೊ ಒಟ್ಟಾಗಿ ಭಾರತವನ್ನು 2ಜಿ ಮುಕ್ತಗೊಳಿಸಲಿವೆ ಎಂದರು.
- ರಿಲಯನ್ಸ್ ಇಂಡಸ್ಟ್ರೀಸ್ ಈಗ ಸಂಪೂರ್ಣವಾಗಿ ಸಾಲ ಮುಕ್ತ ಕಂಪನಿಯಾಗಿದೆ. 2021ರ ಮಾರ್ಚ್‌ಗೆ ಸಾಲ ಮುಕ್ತ ಕಂಪನಿ ಆಗುವ ಗುರಿ ಹಾಕಿಕೊಳ್ಳಲಾಗಿತ್ತು. ಅದಕ್ಕೂ ಮೊದಲೇ ಸಾಧನೆ ಸಾಧ್ಯವಾಗಿದೆ.

ಜಿಯೋ ಗ್ಲಾಸ್ ಅನಾವರಣ :

- ರಿಲಯನ್ಸ್ ಎ.ಜಿ.ಎಂ.ನಲ್ಲಿ ಮಿಕ್ಸೆಡ್ ರಿಯಾಲಿಟಿ ಸಲ್ಯೂಷನ್ಸ್ ತಂತ್ರಜ್ಞಾನ ಹೊಂದಿರುವ ಜಿಯೊ ಗ್ಲಾಸ್ ಅನ್ನು ಅನಾವರಣಗೊಳಿಸಲಾಯಿತು. ಶಿಕ್ಷಕರು, ವಿದ್ಯಾರ್ಥಿಗಳಿಗೆ 3ಡಿ ವರ್ಚುವಲ್ ತರಗತಿ, ಜಿಯೊ ಮೂಲಕ ಹೋಲೊಗ್ರಾಫಿಕ್ ತರಗತಿಗಳನ್ನು ನಿರ್ವಹಿಸಲು ಜಿಯೊ ಗ್ಲಾಸ್ ನೆರವಾಗಲಿದೆ. ಇದರ ಬಿಡುಗಡೆಯ ದಿನ ಮತ್ತು ದರವನ್ನು ಪ್ರಕಟಿಸಿಲ್ಲ, ನೋಡಲು ಕನ್ನಡಕದಂತಿರುವ ಜಿಯೊ ಗ್ಲಾಸ್ 3ಡಿ ಮತ್ತು ಇತರ ತಂತ್ರಜ್ಞಾನ ಒಳಗೊಂಡಿದೆ.

29. ಕೈಗಾರಿಕೆಗಳಿಂದ ಪ್ರಗತಿ:

- ನೀತಿ ಆಯೋಗದ ವರದಿ: "ಕೋವಿಡೋತ್ತರ ಜಗತ್ತಿನಲ್ಲಿ ಭಾರತದ ಉದ್ದಿಮೆಗಳ ಸ್ವರೂಪ ಬದಲಾಗಲಿದೆ. ಆರ್ಥಿಕತೆಯನ್ನು ಉತ್ತೇಜಿಸಲು ಸರ್ಕಾರವು ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಬೇಕಿದೆ. ಕಚ್ಚಾವಸ್ತುಗಳ ಮರುಬಳಕೆಗೆ ಆದ್ಯತೆ ನೀಡಬೇಕಿದೆ. ಇದಕ್ಕೆ ಸಂಬಂಧಿಸಿದ ಕೈಗಾರಿಕೆಗಳು ಮುಂದಿನ ಹಂತದಲ್ಲಿ ಭಾರತದ ಆರ್ಥಿಕತೆಯನ್ನು ಪ್ರಗತಿಯತ್ತ ಒಯ್ಯಲಿವೆ".
- ದೊಡ್ಡ ಪ್ರಮಾಣದ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳಲ್ಲಿ ಕಾಗದ, ಪ್ಲಾಸ್ಟಿಕ್ ಮತ್ತು ಲೋಹದ ವೆಚ್ಚವನ್ನು ಕಡಿಮೆ ಮಾಡಬೇಕು. ಈ ಯೋಜನೆಗಳಲ್ಲಿ ಮರುಬಳಕೆ ಮಾಡಲಾದ ಕಚ್ಚಾವಸ್ತುಗಳನ್ನು ಬಳಸಬೇಕು. ಆ ಮೂಲಕ ಯೋಜನೆಗಳವೆ ಚ್ಚವನ್ನು ತಗ್ಗಿಸಬೇಕು.
- ಜಾಗತಿಕ ಆರ್ಥಿಕ ಬೆಳವಣಿಗೆಗೆ ಕೋವಿಡ್–19 ತಡೆಒಡ್ಡಿದೆ. ಆದರೆ ಇದೇ ಸಂದರ್ಭದಲ್ಲಿ ಭಾರತದ ಮೂಲಸೌಕರ್ಯ ಅಭಿವೃದ್ಧಿ ವಲಯ ಮತ್ತು ಕೈಗಾರಿಕೆಗಳು ಪ್ರಗತಿಯ ಹಾದಿಯಲ್ಲಿವೆ.

30. 2.73 ಕೋಟಿ ಜನರು ಬಡತನದಿಂದ ಹೊರಕ್ಕೆ:

- ಭಾರತದಲ್ಲಿ ಕಳೆದ 10 ವರ್ಷಗಳಿಂದ ಬಡತನ ನಿವಾರಣೆಯಲ್ಲಿ ಭಾರಿ ಪ್ರಮಾಣದ ಸುಧಾರಣೆ ಕಂಡು ಬರುತ್ತಿದ್ದು ಬಡತನ ಕಡಿಮೆಯಾಗಿದೆ. 2.73 ಕೋಟಿ ಜನರು ಬಡತನದಿಂದ ಹೊರ ಬಂದಿದ್ದಾರೆ ಎಂದು ವಿಶ್ವಸಂಸ್ಥೆ ತಿಳಿಸಿದೆ.
- 2000–2019ರ ನಡುವೆ 65 ದೇಶಗಳಲ್ಲಿ ಬಡತನ ಕಡಿಮೆಯಾಗಿದೆ. ಅದರಲ್ಲೂ ಬಡತನ ರೇಖೆಯಿಂದ ಹೊರಬಂದ ಜನರಲ್ಲಿ ಅರ್ಧದಷ್ಟು ಜನರು ಅರ್ಮೇನಿಯಾ ಭಾರತ, ನಿಕಾರಾಗುವಾ, ಉತ್ತರ ಮಸೆಡೋನಿಯಾ ದೇಶಗಳ ನಾಗರಿಕರಾಗಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.
- ಆದರೆ ಕೊವಿಡ್–19 ಮಹಾಮಾರಿ ನಂತರ ಅನೇಕ ಉದ್ದಿಮೆಗಳು ಮುಚ್ಚಿದ್ದು, ನಿರುದ್ಯೋಗ ಹೆಚ್ಚಿದೆ. ಆದ್ದರಿಂದ ಈ ಅಂಕಿ–ಅಂಶಗಳನ್ನು ಪುನಃ ಪರೀಶೀಲಿಸಬೇಕಾಗುವುದು.

31. ರೋಶಿನಿ ನಾಡರ್ ಎಚ್.ಸಿ.ಎಲ್. ಮುಖ್ಯಸ್ಥೆ:

- ಎಚ್.ಸಿ.ಎಲ್. ಟೆಕ್ನಾಲಜಿಸ್ ಸಂಸ್ಥೆಯ ಸಂಸ್ಥಾಪಕ ಶಿವ್ ನಾಡರ್ ಅವರ ಪುತ್ರಿ ರೋಶಿನಿ ನಾಡರ್ ಸಂಸ್ಥೆಯ ಮುಖ್ಯಸ್ಥೆಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.
- ಎಂ.ಬಿ.ಎ. ಪದವೀಧರೆಯಾಗಿರುವ ರೋಶಿನಿ (38) ಈ ಮುನ್ನ ಎಚ್.ಸಿ.ಎಲ್. ಎಂಟರ್‌ಪ್ರೈಸಸ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ಹಾಗೂ ಮತ್ತು ಸಿ.ಇ.ಒ. ಆಗಿದ್ದರು. ಎಚ್.ಸಿ.ಎಲ್.ಗೆ ಸೇರುವ ಮುನ್ನವೇ ಅನೇಕ ಸಂಸ್ಥೆಗಳಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ.
- ಫೋರ್ಬ್ ಸಂಸ್ಥೆಯ ಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ ರೋಶಿನಿ 54ನೇ ಸ್ಥಾನದಲ್ಲಿದ್ದಾರೆ.

32. ಅಮೆರಿಕದಿಂದ 3 ಲಕ್ಷ ಕೋಟಿ ಎಫ್.ಡಿ.ಐ:

- ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಭಾರತದ ಮೇಲೆ ಅಮೆರಿಕದ ಕಂಪನಿಗಳು ಹೊಂದಿರುವ ವಿಶ್ವಾಸ ಹೆಚ್ಚಾಗುತ್ತಲೇ ಇದೆ ಎಂದು ಅಮೆರಿಕ ಭಾರತ ಕಾರ್ಯತಂತ್ರ ಮತ್ತು ಸಹಭಾಗಿತ್ವ ವೇದಿಕೆ (ಯು.ಎಸ್.ಐ.ಎಸ್.ಪಿ.ಎಫ್.) ಹೇಳಿದೆ.
- ಕೋವಿಡ್‌ನಿಂದಾಗಿ ಜಗತ್ತೇ ಸಮಸ್ಯೆಗೆ ಸಿಲುಕಿದೆ. ಹೀಗಿದ್ದರೂ, ಈ ವರ್ಷ ಇಲ್ಲಿಯವರೆಗೆ ಅಮೆರಿಕದ ಕಂಪನಿಗಳು ಭಾರತದಲ್ಲಿ ರೂ. 3 ಲಕ್ಷ ಕೋಟಿ ವಿದೇಶಿ ನೇರ ಬಂಡವಾಳ (ಎಫ್.ಡಿ.ಐ.) ಹೂಡಿಕೆ ಮಾಡಿವೆ.
- ಇತ್ತೀಚಿನ ವಾರಗಳಲ್ಲಿ ಗೂಗಲ್, ಫೇಸ್‌ಬುಕ್ ಮತ್ತು ವಾಲ್‌ಮಾರ್ಟ್ ನಂತಹ ಕಂಪನಿಗಳು ಹೂಡಿಕೆ ಮಾಡಿರುವ ಮೊತ್ತವೇ 11.5 ಲಕ್ಷ ಕೋಟಿಗಳಷ್ಟಾಗಿದೆ.
- ಜಾಗತಿಕ ಹೂಡಿಕೆದಾರರಿಗೆ ಭಾರತವು ಈಗಲೂ ಅತ್ಯಂತ ಭರವಸೆದಾಯಕ ಮಾರುಕಟ್ಟೆಯಾಗಿ ಉಳಿದಿದೆ. ಭಾರತದ ಬಗ್ಗೆ ಹೂಡಿಕೆದಾರರು ಹೊಂದಿರುವ ವಿಶ್ವಾಸವು ಗರಿಷ್ಠ ಮಟ್ಟದಲ್ಲಿದೆ. ಅಮೆರಿಕ ಮಾತ್ರವಲ್ಲದೆ ಮಧ್ಯಪ್ರಾಚ್ಯದ ದೇಶಗಳಿಂದಲೂ ಹೂಡಿಕೆಯಾಗುತ್ತಿದೆ.
- ಭಾರತಕ್ಕೆ ಎಫ್.ಡಿ.ಐ. ಆಕರ್ಷಿಸುವ ನಿಟ್ಟಿನಲ್ಲಿ ಈ ವೇದಿಕೆಯು ದೆಹಲಿಯೊಂದಿಗೆ ನಿರಂತರವಾಗಿ ಕೆಲಸ ಮಾಡುತ್ತಿದೆ. ಅಮೆರಿಕದ ಕಂಪನಿಗಳಿಗೆ ಚೀನಾದಾಚೆಗೆ ನೆಲೆ ಸ್ಥಾಪಿಸಿಕೊಳ್ಳಲು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.
- ಟ್ರಂಪ್ ಅಧಿಕಾರಕ್ಕೆ ಬಂದಾಗಿನಿಂದಲೂ ಈ ಕಾರ್ಯ ನಡೆಯುತ್ತಿದ್ದರೂ, ಕೋವಿಡ್ ಸಂದರ್ಭದಲ್ಲಿ ಅದಕ್ಕೆ ವೇಗ ದೊರೆತಿದೆ.

33. ಕರೋನಾ ಚಿಕಿತ್ಸೆಗೆ ವಿಶೇಷ ವಿಮೆ:

- ದೇಶದಲ್ಲಿ ಕೊರೋನಾ ಸಾಂಕ್ರಾಮಿಕ ರೋಗದ ಹಾವಳಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ಸಾಮಾನ್ಯ ಮತ್ತು ಆರೋಗ್ಯ ವಿಮೆ ಕಂಪನಿಗಳಿಗೆ ಎರಡು ಸ್ಟ್ಯಾಂಡರ್ಡ್ ಕೋವಿಡ್ ವಿಶೇಷ ವಿಮೆ ಪಾಲಿಸಿಗಳನ್ನು ಬಿಡುಗಡೆಗೊಳಿಸುವಂತೆ ಭಾರತೀಯ ವಿಮೆ ಮಾರುಕಟ್ಟೆ ನಿಯಂತ್ರಕ ಪ್ರಾಧಿಕಾರ ಐ.ಆರ್.ಡಿ.ಎ.ಐ. ಸೂಚಿಸಿದೆ.
- ಈ ವಿಮೆ ಯೋಜನೆಗಳನ್ನು 'ಕೋವಿಡ್ ಕವಚ್' ಮತ್ತು 'ಕೋವಿಡ್ ರಕ್ಷಕ್' ಎಂದು ಕರೆಯಲಾಗಿದೆ. ಈ ಎರಡು ವಿಮೆ ಪಾಲಿಸಿಗಳ ವಿಶೇಷತೆಗಳನ್ನು ಪಾಲಿಸಿ ಬಜಾರ್ ಡಾಟ್‌ಕಾಮ್ ನ ಆರೋಗ್ಯ ವಿಮೆ ಮುಖ್ಯಸ್ಥ ಅಮಿತ್ ಭಾಬ್ರಾ ವಿವರಿಸಿದ್ದಾರೆ.
- ಈ ಎರಡೂ ವಿಮೆ ಪ್ಲಾನ್‌ಗಳು ಕೊರೋನಾ ವೈರಸ್ ಕುರಿತ ಚಿಕಿತ್ಸೆಯ ವೆಚ್ಚಕ್ಕೆ ಮಾತ್ರ ಅನ್ವಯ. ಇದು ಸ್ಟ್ಯಾಂಡರ್ಡ್ ಇನ್ಸೂರೆನ್ಸ್ ಪಾಲಿಸಿ ಆಗಿರುವುದರಿಂದ ಎಲ್ಲ ಜೀವ ವಿಮೆ, ಆರೋಗ್ಯ ವಿಮೆ ಮತ್ತು ಸಾಮಾನ್ಯ ವಿಮೆ ಕಂಪನಿಗಳು ಕಡ್ಡಾಯವಾಗಿ ಒದಗಿಸಬೇಕಾಗುತ್ತದೆ.
- ಐ.ಆರ್.ಡಿ.ಎ.ಐ. ಪ್ರಕಾರ, ಕೊರೋನಾ ಕವಚ್ ವಿಮೆ ಪಾಲಿಸಿ ಅಡಿಯಲ್ಲಿ ಕನಿಷ್ಠ 50,000 ರೂ. ಹಾಗೂ ಗರಿಷ್ಠ 5 ಲಕ್ಷ ರೂ. ವಿಮೆ ಲಭ್ಯ.
- ಕೊರೋನಾ ರಕ್ಷಕ್ ಅಡಿಯಲ್ಲಿ ಕನಿಷ್ಠ 50,000 ರೂ. ಹಾಗೂ ಗರಿಷ್ಠ 2.5 ಲಕ್ಷ ರೂ. ಕವರೇಜ್ ಲಭ್ಯ.
- ಕೊರೋನಾ ವಿಶೇಷ ವಿಮೆಗಳಡಿಯಲ್ಲಿ ಆಸ್ಪತ್ರೆಯಲ್ಲಿನ ಕೊಠಡಿ ವೆಚ್ಚ ಪಿ.ಪಿ.ಇ. ಕಿಟ್, ಗ್ಲೌಸ್, ಮಾಸ್ಕ್, ವೈದ್ಯಕೀಯ ವೆಚ್ಚ, ಆಯುಷ್ ವೆಚ್ಚ ಇತ್ಯಾದಿಗಳಿಗೆ ಕವರೇಜ್ ಪಡೆಯಬಹುದು.
- ಕೊರೋನಾ ರಕ್ಷಕ್‌ನಲ್ಲಿ ವಿಮೆ ಪರಿಹಾರ ಪಡೆಯಲು ಆಸ್ಪತ್ರೆಯಲ್ಲಿ ಕನಿಷ್ಠ 72 ಗಂಟೆಗಳ ಕಾಲ ದಾಖಲಾಗಿರಬೇಕು.

34. ಎ.ಜಿ.ಆರ್. ಬಾಕಿ: 11 ಸಾವಿರ ಕೋಟಿ ಪಾವತಿಸಿದ ವೊಡಾಫೋನ್:

- ಹೊಂದಾಣಿಕೆ ಮಾಡಿದ ಒಟ್ಟು ವರಮಾನದ (ಎ.ಜಿ.ಆರ್.) ಬಾಕಿಗೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ 11 ಸಾವಿರ ಕೋಟಿಯನ್ನು ಸರ್ಕಾರಕ್ಕೆ ಪಾವತಿಸಲಾಗಿದೆ ಎಂದು ವೊಡಾಫೋನ್ ಹೇಳಿದೆ.
- ಈ ಹಿಂದೆ ಮೂರು ಕಂತುಗಳಲ್ಲಿ 6,854 ಕೋಟಿ ಪಾವತಿಸಲಾಗಿತ್ತು. ಇದರಿಂದ ಒಟ್ಟಾರೆ 7,854 ಕೋಟಿ ಪಾವತಿಸಿದಂತಾಗಿದೆ ಎಂದು ಷೇರುಪೇಟೆಗೆ ತಿಳಿಸಿದೆ.
- ದೂರಸಂಪರ್ಕ ಇಲಾಖೆಯ ಪ್ರಕಾರ, ವೊಡಾಫೋನ್ ಐಡಿಯಾ ಕಂಪನಿಯು 58 ಸಾವಿರ ಕೋಟಿ ಎ.ಜಿ.ಆರ್. ಬಾಕಿ ನೀಡಬೇಕಿದೆ. 2020ರ ಮಾರ್ಚ್ ಅಂತ್ಯಕ್ಕೆ ಕಂಪನಿಯ ನಿವ್ವಳ ನಷ್ಟ 73,878 ಕೋಟಿಗಳಷ್ಟಾಗಿದೆ.

35. 280 ಮಳಿಗೆ ಮುಚ್ಚಿದ ಕೆಫೆ ಕಾಫಿ ಡೇ ಕಂಪನಿ:

- ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ 280 ಮಳಿಗೆಗಳನ್ನು ಮುಚ್ಚಿರುವುದಾಗಿ ಕೆಫೆ ಕಾಫಿ ಡೇ ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ. ಇದರಿಂದಾಗಿ 2020ರ ಜೂನ್ 20ರ ಅಂತ್ಯಕ್ಕೆ ಕಂಪನಿ ಬಳಿ 1,480 ಮಳಿಗೆಗಳು ಉಳಿದಂತಾಗಿದೆ.
- ಬ್ಲಾಕ್‌ಸ್ಟೋನ್ ಗ್ರೂಪ್‌ಗೆ ತನ್ನ ಟೆಕ್ನಾಲಜಿ ಬಿಸಿನೆಸ್ ಪಾರ್ಕ್ ಮಾರಾಟ ಮಾಡಿದ ಬಳಿಕ 13 ಸಾಲದಾತರಿಗೆ ಒಟ್ಟು 1,644 ಕೋಟಿ ರೂ ಪಾವತಿಸುವುದಾಗಿ ಮಾರ್ಚ್‌ನಲ್ಲಿ ಸಿ.ಸಿ.ಡಿ. ಘೋಷಿಸಿತ್ತು.
- ಬೆಂಗಳೂರಿನಲ್ಲಿರುವ ಗ್ಲೋಬಲ್ ವಿಲೇಜ್ ಟೆಕ್ ಪಾರ್ಕ್ ಅನ್ನು ಜಾಗತಿಕ ಹೂಡಿಕೆ ಸಂಸ್ಥೆ ಬ್ಲಾಕ್‌ಸ್ಟೋನ್ ಮತ್ತು ರಿಯಲ್ ಎಸ್ಟೇಟ್ ವಲಯದ ಸಾಲಾರ್‌ಪುರಿಯಾ ಸತ್ವಾ ಸಂಸ್ಥೆಗೆ 2,700 ಕೋಟಿ ರೂ. ಗೆ ಮಾರಾಟ ಮಾಡುವ ಒಪ್ಪಂದ ಮಾಡಿಕೊಂಡಿದೆ.

36. ಬ್ಯಾಂಕುಗಳ ಖಾಸಗೀಕರಣ:

ಮುಖ್ಯಾಂಶಗಳು:

- ಕೇಂದ್ರ ಸರ್ಕಾರದ ಅಧೀನದಲ್ಲಿ ಐದು ಬ್ಯಾಂಕ್ ಸಾಕು ವಿಲೀನ ಆಗಿರದ ಬ್ಯಾಂಕ್‌ಗಳನ್ನು ಮಾರಾಟ ಮಾಡಲು ಆಲೋಚನೆ

ಕೊವಿಡ್ ಬಿಕ್ಕಟ್ಟು: ಖಾಸಗೀಕರಣಕ್ಕೆ ಪೂರಕ ಪರಿಸ್ಥಿತಿ ಇಲ್ಲ

- ಕೇಂದ್ರ ಸರ್ಕಾರವು ತನ್ನ ಮಾಲೀಕತ್ವದಲ್ಲಿರುವ ಬ್ಯಾಂಕ್‌ಗಳ ಪೈಕಿ ಅರ್ಧಕ್ಕಿಂತ ಹೆಚ್ಚಿನ ಪ್ರಮಾಣದ ಬ್ಯಾಂಕುಗಳನ್ನು ಖಾಸಗಿಯವರಿಗೆ ಒಪ್ಪಿಸುವ ಆಲೋಚನೆಯಲ್ಲಿ ಇದೆ. ಬ್ಯಾಂಕಿಂಗ್ ಉದ್ಯಮದ ಪುನರ್ ರಚನೆ ಪ್ರಕ್ರಿಯೆಯ ಭಾಗವಾಗಿ ಐದು ಬ್ಯಾಂಕ್‌ಗಳನ್ನು ಮಾತ್ರ ತನ್ನ ಅಧೀನದಲ್ಲಿ ಉಳಿಸಿಕೊಳ್ಳುವ ಉದ್ದೇಶ ಹೊಂದಿದೆ.
- ಈ ಯೋಜನೆಯ ಮೊದಲ ಭಾಗವಾಗಿ, ಬ್ಯಾಂಕ್ ಆಫ್ ಇಂಡಿಯಾ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಯುಕೊ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರ, ಪಂಜಾಬ್ ಅ್ಯಂಡ್ ಸಿಂಧ್ ಬ್ಯಾಂಕ್‌ಗಳಲ್ಲಿನ ಷೇರುಗಳನ್ನು ಮಾರಾಟ ಮಾಡಿ, ಆ ಮೂಲಕ ಈ ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಒಪ್ಪಿಸಲಾಗುತ್ತದೆ.
- ತಾನು ಹೊಂದಿರುವ ಆಸ್ತಿಗಳನ್ನು ಮಾರಾಟ ಮಾಡಿ, ಆದಾಯ ಸಂಗ್ರಹಿಸುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಭಾರತದಲ್ಲಿ ಸರ್ಕಾರದ ಮಾಲೀಕತ್ವದಲ್ಲಿ ಐದಕ್ಕಿಂತ ಹೆಚ್ಚು ಬ್ಯಾಂಕುಗಳು ಇರಬಾರದು ಎಂದು ಸರ್ಕಾರದ ಹಲವು ಸಮಿತಿಗಳು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಶಿಫಾರಸ್ಸು ಮಾಡಿವೆ.
- ಹಿಂದಿನ ವರ್ಷ ಕೇಂದ್ರ ಸರ್ಕಾರವು ಒಟ್ಟು ಹತ್ತು ರಾಷ್ಟ್ರೀಕೃತ ಬ್ಯಾಂಕುಗಳನ್ನು ನಾಲ್ಕು ಬ್ಯಾಂಕುಗಳನ್ನಾಗಿ ವಿಲೀನಗೊಳಿಸಿತ್ತು.
- ಕೊರೋನಾ ವೈರಾಣು ಸೃಷ್ಟಿಸಿದ ಬಿಕ್ಕಟ್ಟಿನ ಪರಿಣಾಮವಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಬ್ಯಾಂಕುಗಳ ವಸೂಲಾಗದ ಸಾಲದ (ಎನ್.ಪಿ.ಎ.) ಪ್ರಮಾಣದಲ್ಲಿ ಹೆಚ್ಚಳ ಆಗುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿಯೇ ಸರ್ಕಾರವು ಬ್ಯಾಂಕುಗಳ ಖಾಸಗೀಕರಣದ ಯೋಜನೆ ಸಿದ್ಧಪಡಿಸುತ್ತಿದೆ.
- 2019ರ ಸೆಪ್ಟೆಂಬರ್ ಅಂತ್ಯದ ವೇಳೆಗೆ ಭಾರತದ ಬ್ಯಾಂಕುಗಳಲ್ಲಿ ವಸೂಲಾಗದ ಸಾಲದ ಮೊತ್ತವು 9.35 ಲಕ್ಷ ಕೋಟಿ ರೂ. ಆಗಿತ್ತು.

ಸಾಲ ಅನುಪಾತ ಹೆಚ್ಚಳ

- ಕೋವಿಡ್–19 ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಹೆಚ್ಚುವರಿ ಸಾಲ ಪಡೆದಿದೆ. ಹೀಗಾಗಿ ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿ.ಡಿ.ಪಿ.) ಮತ್ತು ಸಾಲದ ಅನುಪಾತವು ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಶೇಕಡ 87.6 ಕ್ಕೆ ಏರಿಕೆಯಾಗಲಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್.ಬಿ.ಐ.) ಆರ್ಥಿಕ ತಜ್ಞರು ಹೇಳಿದ್ದಾರೆ.
- 2019–20ನೇ ಹಣಕಾಸು ವರ್ಷದಲ್ಲಿ ಈ ಅನುಪಾತವು ಶೇಕಡ 72.2ರಷ್ಟಿತ್ತು. ಇವೆರಡರ ಮಧ್ಯದ ಅನುಪಾತದಲ್ಲಿ ಶೇಕಡ 4ಕ್ಕಿಂತ ಹೆಚ್ಚು ಏರಿಕೆಯಾಗುವುದಕ್ಕೆ ಕಾರಣ, ಬೆಳವಣಿಗೆ ದರದಲ್ಲಿ ಆಗಿರುವ ಕುಸಿತ ಎನ್ನಬಹುದು.
- ಸಾಂಪ್ರದಾಯಿಕ ನೆಲೆಯಲ್ಲಿ ವಿತ್ತೀಯ ನಿರ್ವಹಣೆ ಮಾಡುವ ಬದಲಾಗಿ ಬೆಳವಣಿಗೆಗೆ ಪೂರಕವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಜ್ಞರು ಸಲಹೆ ನೀಡಿದ್ದಾರೆ.
- ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ ಕಾಯ್ದೆ–2003ರ (ಎಫ್.ಆರ್.ಬಿ.ಎಂ. ಕಾಯ್ದೆ 2003) ಗುರಿಯ ಪ್ರಕಾರ, ಜಿ.ಡಿ.ಪಿ.ಯ ಶೇಕಡ 60ರಷ್ಟಕ್ಕೆ ಒಟ್ಟು ಸಾಲದ ಮೊತ್ತವನ್ನು ಮಿತಿಗೊಳಿಸಬೇಕು. ಈ ಗುರಿ ತಲುಪುವುದು 2030ನೆಯ ಹಣಕಾಸಿನ ವರ್ಷದಲ್ಲಿ ಸಾಧ್ಯವಾಗಬಹುದು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಕರಣಕ್ಕೆ 51 ವರ್ಷ

- ದೇಶದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಆಗಿ ಜುಲೈ 19ಕ್ಕೆ 51 ವರ್ಷಗಳು.ತುಂಬಿವೆ. ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದಾಗ, 1969ರಲ್ಲಿ ಸುಗ್ರೀವಾಜ್ಞೆಯ ಮೂಲಕ 14 ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಗಿತ್ತು.

37. ಬಜಾಜ್ ಫೈನಾನ್ಸ್ ಹೊಸ ಅಧ್ಯಕ್ಷ:

- ಬಜಾಜ್ ಫೈನಾನ್ಸ್ ಕಂಪನಿಯ ಕಾರ್ಯನಿರ್ವಾಹಕೇತರ ಅಧ್ಯಕ್ಷ ಸ್ಥಾನದಿಂದ ರಾಹುಲ್ ಬಜಾಜ್ ಅವರು ಕೆಳಗಿಳಿಯಲಿದ್ದಾರೆ.
- ಆ ಸ್ಥಾನವನ್ನು ಸಂಜೀವ್ ಬಜಾಜ್ ಅವರು ವಹಿಸಿಕೊಳ್ಳಲಿದ್ದಾರೆ. ರಾಹುಲ್ ಬಜಾಜ್ ಅವರು ಮೂರು

ದಶಕಗಳಿಗೂ ಹೆಚ್ಚು ಅವಧಿಯಿಂದ ಕಂಪನಿಯ ಅಧ್ಯಕ್ಷರಾಗಿದ್ದರು.

- ಸಂಜೀವ್ ಈಗ ಕಂಪನಿಯ ಉಪಾಧ್ಯಕ್ಷರಾಗಿದ್ದಾರೆ. ಸಂಜೀವ್ ಆಗಸ್ಟ್ 1 ರಿಂದ ಹೊಸ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ.

38. ಕೃಷಿರಂಗ ಮತ್ತು ಆರ್ಥಿಕ ಬೆಳವಣಿಗೆ:

- 1960ರ ದಶಕದ ಉತ್ತರಾರ್ಧದಲ್ಲಿ ಜಾಗತಿಕ ಮಟ್ಟದಲ್ಲಿ ಆಹಾರ ಉತ್ಪಾದನೆಯ ಪ್ರಮಾಣದಲ್ಲಿ ಅಧಿಕ ಹಚ್ಚಳವಾಯಿತು. ಅದನ್ನು ಸೂಚಿಸುವ 'ಹಸಿರು ಕ್ರಾಂತಿ' ಎನ್ನುವ ಪದಪ್ರಯೋಗ ಪ್ರಾರಂಭವಾಗಿದ್ದು ಆಗಲೇ.
- 1968ರ ಮಾರ್ಚ್ 8ರಂದು ಅಮರಿಕದ ಅಭಿವೃದ್ಧಿ ಏಜೆನ್ಸಿಯ ಪ್ರಧಾನ ಆಡಳಿತಗಾರ ವಿಲಿಯಂ ಎಸ್. ಗಾಡ್ಡೊಡ್ಡ ಸಮಾರಂಭವನ್ನುದ್ದೇಶಿಸಿ ಭಾಷಣ ಮಾಡಿದರು. "ಇದು ರಷ್ಯಾದಲ್ಲಾದ ಹಿಂಸಾತ್ಮಕ ಕೆಂಪು ಕ್ರಾಂತಿಯಲ್ಲ, ರಾನ್ ಶಾ ಸೃಷ್ಟಿಸಿದಂತಹ ಶ್ವೇತ ಕ್ರಾಂತಿಯೂ ಅಲ್ಲ. ಇದನ್ನು ನಾನು ಹಸಿರು ಕ್ರಾಂತಿ ಎಂದು ಕರೆಯುತ್ತೇನೆ' ಎಂದು ಘೋಷಿಸಿ ತಮ್ಮ ರಾಜಕೀಯ ಚತುರತೆ ಪ್ರದರ್ಶಿಸಿದರು.
- ಹಸಿರು ಕ್ರಾಂತಿಯು ಹುಟ್ಟುಹಾಕಿದ ನೋವು–ನಲಿವುಗಳನ್ನು ದೊಡ್ಡ ಪ್ರಮಾಣದಲ್ಲಿ ಕಂಡ ದೇಶಗಳಲ್ಲಿ ಭಾರತವೂ ಒಂದು. ಈ ದೇಶದಲ್ಲಿ ದ್ವಿತೀಯ ಹಸಿರು ಕ್ರಾಂತಿಯಾಗಬೇಕೆಂದು ಆಗಾಗ ಹೇಳುವಾಗ, 1968 ರ ಹೊತ್ತಿಗೆ ಕಾಣಿಸಿಕೊಂಡಿದ್ದು ಪ್ರಥಮ ಹಸಿರು ಕ್ರಾಂತಿ ಎಂದು ಭಾವಿಸುವುದು ಒಂದು ರೂಢಿ ಅಷ್ಟೆ.
- ನರೇಂದ್ರ ಮೋದಿ ನೇತೃತ್ವದ ಪ್ರಥಮ ಎನ್.ಡಿ.ಎ. ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದ ಅರುಣ್ ಜೇಟ್ಲಿ, ಉತ್ಪಾದಕತೆಯನ್ನು ಹೆಚ್ಚಿಸಲು ತಂತ್ರಜ್ಞಾನ ಆಧಾರಿತ ದ್ವಿತೀಯ ಹಸಿರು ಕ್ರಾಂತಿಯ ಅಗತ್ಯವನ್ನು, ಶೇ. 4ರಷ್ಟು ವಾರ್ಷಿಕ ಕೃಷಿ ಬೆಳವಣಿಗೆ ದರದ ಗುರಿಯನ್ನು ಪ್ರಥಮ ಬಜೆಟ್‌ನಲ್ಲಿ ಸಾರಿದ್ದರು.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ನರೇಗಾ) ಕೃಷಿಗೆ ಪೂರಕವಾಗುವಂತೆ ಬದಲಾಯಿಸುವ ಅವಶ್ಯಕತೆಯನ್ನು ಪ್ರತಿಪಾದಿಸಿದ್ದು ಅವರ ದೂರದೃಷ್ಟಿಗೆ ಸಾಕ್ಷಿಯಾಗಿತ್ತು. ಅದು ಇಷ್ಟರಲ್ಲಿ ಸರಿಯಾಗಿ ಈಡೇರಿದ್ದರೆ, ದೊಡ್ಡ ಸಂಖ್ಯೆಯಲ್ಲಿರುವ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಎಷ್ಟೋ ಅನುಕೂಲವಾಗುತ್ತಿತ್ತು.
- 2019–20ರ ಕೇಂದ್ರ ಆರ್ಥಿಕ ಸಮೀಕ್ಷೆ ತಿಳಿಸುವಂತೆ, ದುರ್ಬಲ ವರ್ಗಕ್ಕೆ ಸೇರಿದ ಸಣ್ಣ ಮತ್ತು ಅತಿಸಣ್ಣ ರೈತರು ಒಟ್ಟು ರೈತರ ಸಂಖ್ಯೆಯ ಶೇ. 87ರಷ್ಟಿರುವುದು ಗ್ರಾಮೀಣ ಆರ್ಥಿಕತೆಯ ಬೆಳವಣಿಗೆಗೆ ಅಡ್ಡಿಯಾಗುತ್ತಿರುವ ಪ್ರಧಾನ ಕಾರಣಗಳಲ್ಲೊಂದು.
- ಪ್ರಥಮ ಹಸಿರು ಕ್ರಾಂತಿಯ ಪ್ರಗತಿಯಿಂದ 70ರ ದಶಕದ ಪೂರ್ವಾರ್ಧದಲ್ಲೇ ದೇಶವು ಆಹಾರ ಪೂರೈಕೆಯ ವಿಷಯದಲ್ಲಿ ಸ್ವಾವಲಂಬಿಯಾಗಿದ್ದು ಗಮನಾರ್ಹ ಸಾಧನೆ. ಸಾಧನೆಯ ಜತೆಗೆ ಸಮಸ್ಯೆಗಳೂ ಹುಟ್ಟಿ ಬೆಳೆದಿವೆ.
- ಹಸಿರು ಕ್ರಾಂತಿ ಪಸರಿಸಿದಂತೆ ಕಾಣಿಸಿಕೊಂಡ ಪ್ರಾದೇಶಿಕ ಅಸಮತೋಲನ, ಅಧಿಕಗೊಂಡ ಸಾಗುವಳಿ ವೆಚ್ಚ, ಮಿತಿಮೀರಿದ ಪರಿಸರ ಮಾಲಿನ್ಯ, ವೈಯಕ್ತಿಕ ಆದಾಯ–ಸಂಪತ್ತಿನ ವಿತರಣೆಯಲ್ಲಿ ತೀವ್ರವಾದ ಅಸಮಾನತೆ ಮತ್ತು ಸುಧಾರಿತ ಬಿತ್ತನೆ ಬೀಜಗಳ ಬಳಕೆಗೆ ಅಗತ್ಯವಾದ ಸಾಮಗ್ರಿಗಳನ್ನು ಪಡೆಯಲು ವಿದೇಶಗಳ ಮೇಲೆ ಅತಿಯಾದ ಅವಲಂಬನೆ ಕ್ಲಿಷ್ಟ ಸಮಸ್ಯೆಗಳೇ ಆಗಿದ್ದವು.
- ಈಗ ಕೆಲವು ಸುಧಾರಣೆಗಳಾಗಿದ್ದರೂ ದೇಶದಲ್ಲಿ ಅಗತ್ಯ ಸಾಮಗ್ರಿಗಳ ಉತ್ಪಾದನೆ ಹಚ್ಚಿದ್ದರೂ ದ್ವಿತೀಯ ಹಸಿರು ಕ್ರಾಂತಿಯ ದಾರಿ ತಿಳಿದಷ್ಟು ಸುಗಮವಾಗಿಲ್ಲ.

39. ಯು.ಪಿ.ಐ. ಆ್ಯಪ್‌ಗಳಲ್ಲಿ ಆಟೋ ಪೇ ಗೆ ಅವಕಾಶ:

- ಯು.ಪಿ.ಐ. ಆಧಾರಿತ ಪೇಮೆಂಟ್ ಆ್ಯಪ್‌ನಲ್ಲಿ 'ಆಟೊ ಪೇ' ಆಯ್ಕೆಯನ್ನು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ (ಎನ್.ಪಿ.ಸಿ.) ಜಾರಿಗೊಳಿಸಿದೆ.
- ಪದೇ ಪದೇ ಮಾಡುವಂಥ ಆವರ್ತಿತ ಪೇಮೆಂಟ್‌ಗಳಿಗೆ ಇದರಿಂದ ಅನುಕೂಲಕರವಾಗಲಿದೆ. ಬಸ್ ಪಾಸ್, ರೈಲ್ವೆ ಟಿಕೆಟ್, ಡಿ.ಟಿ.ಎಚ್., ಇನ್ಷೂರೆನ್ಸ್, ಇ.ಎಂ.ಐ.ಗಳು, ವಿದ್ಯುತ್ ಬಿಲ್ ಇತ್ಯಾದಿ ನಿಯಮಿತ ಬಿಲ್ ಪಾವತಿಗೆ ಇದರಿಂದ ಅನುಕೂಲಕರವಾಗಲಿದೆ ಎಂದು ಸಂಸ್ಥೆ ತಿಳಿಸಿದೆ.
- 2,000 ರೂ. ವರೆಗಿನ ಮೊತ್ತಕ್ಕೆ ಆಟೊ ಪೇ ಅವಕಾಶ ನೀಡಲಿದೆ. ಹೆಚ್ಚಿನ ಮೊತ್ತವಾದರೇ, ಪ್ರತಿ ಸಲವೂ ಗ್ರಾಹಕರು ಯು.ಪಿ.ಐ. ಪಿನ್ ಬಳಸಬೇಕಾಗುತ್ತದೆ.

40. ಅಂಬಾನಿ ವಿಶ್ವದ 5ನೇ ದೊಡ್ಡ ಧನಿಕ:

- ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷ ಮುಕೇಶ್ ಅಂಬಾನಿ ಈಗ, ವಿಶ್ವದ 5ನೇ ದೊಡ್ಡ ಶ್ರೀಮಂತ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬಿಸಿನೆಸ್ ಮ್ಯಾಗಜಿನ್ ಫೋರ್ಬ್ಸ್ ಪ್ರಕಾರ, ಅಂಬಾನಿ ಈಗ 75 ಶತಕೋಟಿ ಡಾಲರ್ (5.61 ಲಕ್ಷ ಕೋಟಿ ರೂ.) ಸಂಪತ್ತನ್ನು ಹೊಂದಿದ್ದಾರೆ.
- ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಕಂಪನಿ ಇತಿಹಾಸದಲ್ಲಿ ಸಾರ್ವಕಾಲಿಕ ರೂ. 2,010ಕ್ಕೆ ಏರಿಕೆಯಾಗಿವೆ. ರಿಲಯನ್ಸ್ ಸಮೂಹದ ಮಾರುಕಟ್ಟೆ ಬಂಡವಾಳ 12.70 ಲಕ್ಷ ಕೋಟಿ ರೂ.ಗೆ ಹೆಚ್ಚಳವಾಗಿದೆ.

ವಿಶ್ವದ ಟಾಪ್ 5 ಧನಿಕರು:

- ಅಮೆಜಾನ್ ಸಿ.ಇ.ಒ. ಜೆಫ್ ಬಿಜೋಸ್ ಅವರು ವಿಶ್ವದ ನಂ.1 ಕುಬೇರರಾಗಿದ್ದು ಅವರು 14.13 ಲಕ್ಷ ಕೋಟಿ ರೂ. ಮೌಲ್ಯದ ಸಂಪತ್ತು ಹೊಂದಿದ್ದಾರೆ.
- ಜೆಫ್ ಬಿಜೋಸ್, ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್ ಗೇಟ್ಸ್, ಬರ್ನಾರ್ಡ್ ಅರ್ನಾಲ್ಟ್, ಮಾರ್ಕ್ ಜುಕರ್‌ಬರ್ಗ್, ಮುಕೇಶ್ ಅಂಬಾನಿ ಟಾಪ್ 5 ಶ್ರೀಮಂತರ ಪಟ್ಟಿಯಲ್ಲಿದ್ದಾರೆ.
- ಒಂದೇ ದಿನ 16,112 ಕೋಟಿ ರೂ. ಏರಿಕೆ
- ಬ್ಲೂಮ್ ಬರ್ಗ್ ಬಿಲಿಯನೇರ್ ಸೂಚ್ಯಂಕದ ಪ್ರಕಾರ, ಮುಕೇಶ್ ಅಂಬಾನಿ ಸಂಪತ್ತು ಒಂದೇ ದಿನ 2.12 ಶತಕೋಟಿ ಡಾಲರ್ (16,112 ಕೋಟಿ ರೂ.) ಏರಿಕೆಯಾಗಿದೆ.
- ಸಿರಿವಂತಿಕೆಯಲ್ಲಿ ಗೂಗಲ್ ಸಂಸ್ಥಾಪಕ ಲ್ಯಾರಿ ಪೇಜ್ ಮತ್ತು ಅಮೆರಿಕದ ಹೂಡಿಕೆದಾರ ಮತ್ತು ಕೊಡುಗೈ ದಾನಿ ವಾರೆನ್ ಬಫೆಟ್, ಟೆಸ್ಲಾ ಸಿ.ಇ.ಒ. ಇಲಾನ್ ಮಸ್ಕ್ ಅವರನ್ನು ಹಿಂದಿಕ್ಕಿದ್ದಾರೆ.
- 2020ರಲ್ಲಿ ಅಂಬಾನಿಯು ತಮ್ಮ ಸಂಪತ್ತಿಗೆ 1.18 ಲಕ್ಷ ಕೋಟಿ ರೂ. ಸೇರಿಸಿದ್ದಾರೆ.

41. ಭಾರತದಲ್ಲಿ ಹೂಡಿಕೆಗೆ ಆಹ್ವಾನ:

- ಭಾರತ–ಅಮೆರಿಕ, ಬ್ಯುಸಿನೆಸ್ ಕೌನ್ಸಿಲ್ ಆಯೋಜಿಸಿರುವ ಎರಡು ದಿನಗಳ ವರ್ಚ್ಯುವಲ್ ಶೃಂಗಸಭೆಯನ್ನು ಉದ್ದೇಶಿಸಿ ಪ್ರಧಾನ ಮಂತ್ರಿಗಳು 'ಭಾರತದಲ್ಲಿ ಬಾಹ್ಯಾಕಾಶ ಸಂಶೋಧನೆ, ವಿಮಾನಯಾನ, ವಿಮಾನ ತಯಾರಿಕೆ ಮತ್ತು ವೈದ್ಯಕೀಯ ಮೂಲಸೌಕರ್ಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿ' ಎಂದು ಆಹ್ವಾನಿಸಿದರು.
- 'ರಕ್ಷಣಾ ಕ್ಷೇತ್ರದಲ್ಲಿ ಶೇ. 75ರವರೆಗೂ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡಲಾಗಿದೆ. ವಿಮಾ ಕ್ಷೇತ್ರದಲ್ಲೂ ಹೂಡಿಕೆ ನಿಯಮಗಳನ್ನು ಸಡಿಲಿಸಲಾಗಿದೆ. ಭಾರತವು ವಿದೇಶಿ ಬಂಡವಾಳವನ್ನು ಮುಕ್ತವಾಗಿ ಸ್ವಾಗತಿಸುತ್ತದೆ' ಎಂದು ಹೇಳಿದರು.

42. ಹಣಕಾಸು ಸೇವೆಗಳತ್ತ ವಾಟ್ಸ್‌ಆ್ಯಪ್:
ಮುಖ್ಯಾಂಶಗಳು

- ಹಣಕಾಸು ಸೇವೆಗಳಲ್ಲಿ ವಾಟ್ಸ್‌ಆ್ಯಪ್ ಆಸಕ್ತಿ
- ಕಿರುಸಾಲ, ವಿಮೆ ಕ್ಷೇತ್ರದಲ್ಲಿ ಸೇವೆ
- ಕಡಿಮೆ ಆದಾಯ ಹೊಂದಿರುವವರು ಗುರಿ
- ಹಣಕಾಸು ಸೇವಾ ಉತ್ಪನ್ನಗಳಾದ ವಿಮೆ, ಕಿರುಸಾಲ ಮತ್ತು ಪಿಂಚಣಿ ಪಡೆಯುವುದನ್ನು ಸುಲಭಗೊಳಿಸಲು ವಾಟ್ಸ್‌ಆ್ಯಪ್, ಭಾರತದ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಜೊತೆಗೂಡಿ ಕೆಲಸ ಮಾಡಲಿದೆ.

43. ಗ್ರಾಹಕರ ಹಿತರಕ್ಷಣೆಗೆ ಮಹತ್ವದ ಹೆಜ್ಜೆ:

- ಬದಲಾದ ಕಾಲಮಾನ ಮತ್ತು ಮಾರುಕಟ್ಟೆಯ ವಿಸ್ತಾರಕ್ಕೆ ಅನುಗುಣವಾಗಿ ಗ್ರಾಹಕರ ಹಿತವನ್ನು ರಕ್ಷಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ರೂಪಿಸಿರುವ ಗ್ರಾಹಕರ ಹಿತರಕ್ಷಣಾ ಕಾಯ್ದೆ–2019 ಭಾಗಶಃ ಜಾರಿಗೆ ಬಂದಿದೆ.
- 1986ರ ಗ್ರಾಹಕರ ಹಿತರಕ್ಷಣಾ ಕಾಯ್ದೆಗೆ ಹಲವು ಹೊಸ ವಿಷಯಗಳನ್ನು ಸೇರಿಸಿದ್ದು, ಅವುಗಳ ಜಾರಿಯು ಗ್ರಾಹಕರ ದೃಷ್ಟಿಯಿಂದ ಮಹತ್ವದ ಹೆಜ್ಜೆಯಾಗಿದೆ. ಗ್ರಾಹಕರ ಬೇಡಿಕೆ ಮತ್ತು ಆಸಕ್ತಿಗಳನ್ನು ಹೊಸ ಕಾಯ್ದೆಯ ಅಡಿಯಲ್ಲಿ ಕಾನೂನುಬದ್ಧ ಹಕ್ಕುಗಳೆಂದು ಮಾನ್ಯ ಮಾಡುವ ಮೂಲಕ ಗ್ರಾಹಕರ ಕೈ ಬಲಪಡಿಸಲಾಗಿದೆ.
- 'ಗ್ರಾಹಕ' ಎಂಬ ಪದದ ವ್ಯಾಖ್ಯೆಯನ್ನೇ ವಿಸ್ತಾರಗೊಳಿಸಿದ್ದು, ಆನ್‌ಲೈನ್ ಮಾರ್ಕೆಟಿಂಗ್, ನೇರ ವ್ಯಾಪಾರ (ಡೈರೆಕ್ಟ್ ಸೆಲ್ಲಿಂಗ್) ಮತ್ತು ಇತರ ಎಲ್ಲ ಬಗೆಯ ಡಿಜಿಟಲ್ ಮಾರ್ಕೆಟಿಂಗ್ ಚಟುವಟಿಕೆಗಳನ್ನೂ ಕಾಯ್ದೆಯ ವ್ಯಾಪ್ತಿಗೆ ತರಲಾಗಿದೆ.
- 1986ರಲ್ಲಿ ಗ್ರಾಹಕ ಹಿತರಕ್ಷಣಾ ಕಾಯ್ದೆ ರೂಪಿಸಿದ ಸಮಯದಲ್ಲಿ ದೇಶದಲ್ಲಿ ಇ–ಕಾಮರ್ಸ್ ಕ್ಷೇತ್ರ ಕಣ್ಣು ತೆರೆದಿರಲಿಲ್ಲ. ಹೀಗಾಗಿ ಅದು ಕಾಯ್ದೆಯ ಭಾಗವೇ ಆಗಿರಲಿಲ್ಲ.
- ಮೂರು ದಶಕಗಳಿಂದ ಕಾಯ್ದೆಯಲ್ಲಿ ಉಳಿದಿದ್ದ ಹಲವು ನ್ಯೂನತೆಗಳನ್ನು ಹೊಸ ಕಾಯ್ದೆಯಲ್ಲಿ ಸರಿಪಡಿಸಲಾಗಿದೆ.
- ಕಲಬೆರಕೆ, ದೋಷಪೂರಿತ ಉತ್ಪನ್ನಗಳ ಮಾರಾಟದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಅವಕಾಶವನ್ನು ನೂತನ ಕಾಯ್ದೆ ತೆರೆದಿಟ್ಟಿದೆ. ಅನುಚಿತ ವ್ಯಾಪಾರ ಪದ್ಧತಿಯನ್ನು ವಿಸ್ತೃತವಾಗಿ ವಿವರಿಸಿದ್ದು, ಅದನ್ನು ನಿಯಂತ್ರಿಸಲು ಪ್ರಬಲವಾದ ಕಾನೂನಿನ ಅಸ್ತ್ರವನ್ನು ಕಾಯ್ದೆ ಒದಗಿಸಿದೆ.
- ಸೇವಾ ವಲಯಕ್ಕೆ ಸಂಬಂಧಿಸಿದಂತೆಯೂ ಕಾಯ್ದೆಯಲ್ಲಿ ಹಲವು ವಿಷಯಗಳನ್ನು ಸೇರಿಸಲಾಗಿದೆ. ತೊಂದರೆಗೊಳಗಾದ ಗ್ರಾಹಕರು ಉತ್ಪಾದಕರು, ಮಾರಾಟಗಾರರು ಹಾಗೂ ಸೇವೆ ಒದಗಿಸುವವರ ವಿರುದ್ಧ ಬಹು ಹಂತಗಳಲ್ಲಿ ಕಾನೂನು ಸಮರ ನಡೆಸಲು ಹೊಸ ಕಾಯ್ದೆಯಿಂದ ಅವಕಾಶ ಸೃಷ್ಟಿಯಾಗಿದೆ.

44. ವಿಶ್ವಲೀಗ್ ಫೋರಂಗೆ ಭಾರತದ ಇಂಡಿಯನ್ ಸೂಪರ್ ಲೀಗ್:

- ಇಂಡಿಯನ್ ಸೂಪರ್ ಲೀಗ್ (ಐ.ಎಸ್.ಎಲ್.) ಇದೀಗ ಪ್ರೀಮಿಯರ್ ಲೀಗ್, ಲಾ ಲಿಗಾ ಮತ್ತು ಬಂಡೆಸ್ ಲಿಗಾದಂತಹ ಲೀಗ್‌ಗಳನ್ನು ಒಳಗೊಂಡಿರುವ ವೃತ್ತಿಪರ ಫುಟ್ಬಾಲ್ ಲೀಗ್‌ಗಳ ಒಕ್ಕೂಟ, ಪ್ರತಿಷ್ಠಿತ ವಿಶ್ವ ಲೀಗ್‌ಗಳ ಫೋರಮ್ (ಡಬ್ಲ್ಯು.ಎಲ್.ಎಫ್) ಗೆ ಸೇರ್ಪಡೆಯಾಗಿದೆ.

- ಇದರೊಂದಿಗೆ ಭಾರತದ ಫುಟ್ಬಾಲ್ ಲೀಗ್‌ಗೆ ಅಂತರರಾಷ್ಟ್ರೀಯ ಸ್ಥಾನಮಾನ ದೊರೆತಂತಾಗಿದೆ. ಡಬ್ಲ್ಯು.ಎಲ್.ಎಫ್.ಗೆ ಸೇರ್ಪಡೆಯಾದ ದಕ್ಷಿಣ ಏಷ್ಯಾದ ಮೊದಲ ಲೀಗ್ ಹಾಗೂ ಏಷ್ಯಾದ 7ನೇ ಲೀಗ್ ಎಂಬ ಗೌರವ ನಮ್ಮದು ಎಂದು ಐ.ಎಸ್.ಎಲ್. ತಿಳಿಸಿದೆ.

45. ರಿಲಯನ್ಸ್ ರಿಟೇಲ್‌ನಲ್ಲಿ ಅಮೆಜಾನ್ ಹೂಡಿಕೆ?

- ಅಮೆಜಾನ್ ಡಾಟ್‌ಕಾಮ್ ಅನ್ನು ರಿಲಯನ್ಸ್ ಇಂಡಸ್ಟ್ರೀಸ್‌ನ ರಿಟೇಲ್ ವಿಭಾಗದ ಸಂಸ್ಥೆ ರಿಲಯನ್ಸ್ ರಿಟೇಲ್‌ನ ಶೇ. 9.9ರಷ್ಟು ಷೇರುಗಳನ್ನು ಖರೀದಿಸುವ ನಿರೀಕ್ಷೆ ಇದೆ. ಈ ಸಂಬಂಧ ಮಾತುಕತೆ ನಡೆದಿದೆ.
- ಜಿಯೊಮಾರ್ಟ್ ಸಲುವಾಗಿ 13 ಲಕ್ಷ ಕೋಟಿ ರೂ. ಗಳನ್ನು ಅಮೆಜಾನ್, ರಿಲಯನ್ಸ್ ರಿಟೇಲ್‌ನ ಹೂಡಿಕೆಗೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.
- ಮುಂಬೈ ಷೇರು ವಿನಿಮಯ ಕೇಂದ್ರದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್‌ನ ಪ್ರತಿ ಷೇರಿನ ದರ 2,078 ರೂ.ಗೆ ವೃದ್ಧಿಸಿತು. ಷೇರು ದರ ಏರಿಕೆ ಪರಿಣಾಮ ಮುಕೇಶ್ ಅಂಬಾನಿ ಈಗ ವಿಶ್ವದ 5ನೇ ಸಿರಿವಂತರಾಗಿದ್ದಾರೆ.

46. 'ಜಿಎಸ್‌ಟಿ ಇ–ಇನ್‌ವಾಯ್ಸ್ ಅಕ್ಟೋಬರ್ 1 ರಿಂದ ಜಾರಿ':

- ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಜಿ.ಎಸ್.ಟಿ. ವಂಚಿಸುವುದನ್ನು ತಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರವು ಇ–ಇನ್‌ವಾಯ್ಸ್ ಯೋಜನೆ ರೂಪಿಸಿದ್ದು, ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ.
- ಈ ಕುರಿತು ಮುಂದಿನ ವಾರ ಪ್ರಕಟಣೆ ಹೊರಬೀಳಲಿದೆ ಎಂದು ಸಿ.ಬಿ.ಐ.ಸಿ. ಪ್ರಧಾನ ಆಯುಕ್ತ (ಜಿ.ಎಸ್.ಟಿ.) ಯೋಗೇಂದ್ರ ಗರ್ಗ್ ತಿಳಿಸಿದ್ದಾರೆ.
- ವಾರ್ಷಿಕ ವಹಿವಾಟು ಮೊತ್ತ 500 ಕೋಟಿ ಮತ್ತು ಅದಕ್ಕಿಂತ ಹೆಚ್ಚು ಇರುವ ಉದ್ದಿಮೆಗಳು ಮೊದಲಿಗೆ ಈ ಯೋಜನೆಯ ಅಡಿ ಬರಲಿವೆ. ಮುಂದಿನ ಹಂತದಲ್ಲಿ, 1100 ಕೋಟಿ ಮೊತ್ತದ ವಹಿವಾಟು ನಡೆಸುವವರಿಗೆ ಅದನ್ನು ಜಾರಿಗೊಳಿಸಲಾಗುವುದು ಎಂದು ತಿಳಿಸಿದರು.
- ಉದ್ಯಮಿಗಳ ಮಧ್ಯೆ ನಡೆಯುವ ವಹಿವಾಟನ್ನು (ಬಿ.2.ಬಿ.) ಜಿ.ಎಸ್.ಟಿ. ನೆಟ್‌ವರ್ಕ್‌ನಲ್ಲಿ ಇ–ಇನ್‌ವಾಯ್ಸ್ ಮೂಲಕ ದೃಢೀಕರಿಸಲಾಗುವುದು.
- ಕೈಯಿಂದ ವಿವರಗಳನ್ನು (ಮ್ಯಾನುವಲ್) ಭರ್ತಿ ಮಾಡುವಾಗ ಅಂಕಿ ಅಂಶಗಳು ತಪ್ಪಾಗಿ ದಾಖಲಾಗುವ ಸಾಧ್ಯತೆ ಇರುತ್ತದೆ. ಇದನ್ನು ಸಂಪೂರ್ಣವಾಗಿ ತೊಡೆದು ಹಾಕುವ ಉದ್ದೇಶಕ್ಕೆ ತೆರಿಗೆದಾರರು ನಡೆಸುವ ವಹಿವಾಟಿನ ಪ್ರಕ್ರಿಯೆಯನ್ನು ಡಿಜಿಟಲೀಕರಣಕ್ಕೆ ಒಳ ಪಡಿಸಲಾಗಿದೆ.

47. ದೇಶದಲ್ಲಿ ಇನ್ನಷ್ಟು ಸುಧಾರಣೆ ಬೇಕು: ಐ.ಎಂ.ಎಫ್:

- **ಮುಖ್ಯಾಂಶಗಳು**
- ಕಾರ್ಮಿಕ ಕಾನೂನು ಸುಧಾರಿಸಬೇಕು
- ಜಿ.ಎಸ್.ಟಿ. ಮತ್ತು ದಿವಾಳಿ ಸಂಹಿತೆ ಸುಧಾರಣೆ
- ಮೂಲಸೌಕರ್ಯಕ್ಕೆ ಹೂಡಿಕೆ ಹೆಚ್ಚಬೇಕು
- ವಾಣಿಜ್ಯೋದ್ಯಮಕ್ಕೆ ಪೂರಕ ವಾತಾವರಣ ಸೃಷ್ಟಿಸುವಲ್ಲಿ, ಹೂಡಿಕೆಯನ್ನು ಪ್ರೋತ್ಸಾಹಿಸುವಲ್ಲಿ ಭಾರತ ನಡೆಸಿದ ಪ್ರಯತ್ನಗಳು ಫಲ ನೀಡಿವೆಯಾದರೂ, ಸುಸ್ಥಿರ ಹಾಗೂ ಇನ್ನಷ್ಟು ಒಳಗೊಳ್ಳುವ ಬೆಳವಣಿಗೆ ಸಾಧಿಸಲು ಭಾರತವು ಹೆಚ್ಚಿನ ಆರ್ಥಿಕ ಸುಧಾರಣಾ ಕ್ರಮಗಳನ್ನು ಜಾರಿಗೆ ತರಬೇಕು ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.) ಹೇಳಿದೆ.
- 1.49 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಅಂತರರಾಷ್ಟ್ರೀಯ ಮಟ್ಟದ ಹಲವು ಕಂಪನಿಗಳು ಈಚೆಗೆ ಘೋಷಿಸಿವೆ. ಈ ವರ್ಷದಲ್ಲಿಭಾರತಕ್ಕೆ ಹರಿದು ಬಂದಿರುವ ಒಟ್ಟು ವಿದೇಶಿ ನೇರ ಬಂಡವಾಳ ರೂ. 2.99 ಲಕ್ಷ ಕೋಟಿ.
- ಹೊಸದಾಗಿ ಜಾರಿಗೆ ತಂದ ದಿವಾಳಿ ಸಂಹಿತೆ ಮತ್ತು ರಾಷ್ಟ್ರಮಟ್ಟದಲ್ಲಿ ಜಾರಿಗೆ ಬಂದ ಜಿ.ಎಸ್.ಟಿ. ವ್ಯವಸ್ಥೆಯು ಸುಲಲಿತವಾಗಿ ವಾಣಿಜ್ಯೋದ್ಯಮ ನಡೆಸಲು ಅವಕಾಶ ಇರುವ ದೇಶಗಳ ಪಟ್ಟಿಯಲ್ಲಿ ಭಾರತದ ಸ್ಥಾನವನ್ನು ಉತ್ತಮಪಡಿಸಿವೆ.
- 2018ರಲ್ಲಿ ಈ ಪಟ್ಟಿಯಲ್ಲಿ 100 ನೆಯ ಸ್ಥಾನದಲ್ಲಿದ್ದ ಭಾರತವು, 2020ರಲ್ಲಿ 63ನೆಯ ಸ್ಥಾನಕ್ಕೆ ಬಂದಿದೆ.

48. ಆರ್.ಬಿ.ಐ. ಹಣಕಾಸು ಸ್ಥಿರತೆ ವರದಿ ಪ್ರಕಟ:

- ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ವಸೂಲಾಗದಿರುವ ಸಾಲದ ಪ್ರಮಾಣವು 2021ರ ಮಾರ್ಚ್ ವೇಳೆಗೆ ಶೇ. 12.2ಕ್ಕೆ

ವೃದ್ಧಿಸುವ ಸಾಧ್ಯತೆ ಇದೆ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತಿಳಿಸಿ, ಹೀಗಿದ್ದರೂ ಒಟ್ಟಾರೆಯಾಗಿ ಬ್ಯಾಂಕಿಂಗ್ ವ್ಯವಸ್ಥೆ ಸುರಕ್ಷಿತವಾಗಿದೆ ಎಂದು ಹೇಳಿದೆ.

- ಆರ್.ಬಿ.ಐ. ಜುಲೈ ತಿಂಗಳಿನ ಹಣಕಾಸು ಸ್ಥಿರತೆ ವರದಿಯನ್ನು ಬಿಡುಗಡೆಗೊಳಿಸಿದೆ. ಕೋವಿಡ್–19 ಬಿಕ್ಕಟ್ಟಿನ ಪರಿಣಾಮ ಅರ್ಥ ವ್ಯವಸ್ಥೆಯ ಸ್ಥಿರತೆಯನ್ನು ಕಾಪಾಡಲು ಆರ್.ಬಿ.ಐ. ಹಲವಾರು ಗಮನಾರ್ಹ ಕ್ರಮಗಳನ್ನು ಕೈಗೊಂಡಿದೆ ಎಂದು ವರದಿ ತಿಳಿಸಿದೆ.
- ಸಾಲದ ಮರು ಪಾವತಿಯ ಅವಧಿ ಮುಂದೂಡಿಕೆಯ ಪರಿಣಾಮಗಳನ್ನು ಈಗಲೇ ಗ್ರಹಿಸುವುದು ಕಷ್ಟಕರ. ಕೋವಿಡ್–19 ಬಿಕ್ಕಟ್ಟಿನ ಪರಿಣಾಮ ಬ್ಯಾಂಕ್‌ಗಳಲ್ಲಿ ವಸೂಲಾಗದ ಸಾಲದ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆ ಇದೆ. 2021ರ ಮಾರ್ಚ್ ವೇಳೆಗೆ ಖಾಸಗಿ ಬ್ಯಾಂಕ್‌ಗಳಲ್ಲಿ ವಸೂಲಾಗದ ಸಾಲ ಶೇ. 7.3ಕ್ಕೆ ಹಾಗೂ ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ಶೇ. 12.5ಕ್ಕೆ ವೃದ್ಧಿಸುವ ಸಾಧ್ಯತೆ ಇದೆ ಎಂದು ಆರ್.ಬಿ.ಐ. ವರದಿ ತಿಳಿಸಿದೆ.
- ಬ್ಯಾಂಕ್‌ಗಳಲ್ಲಿ ಸಾಲದ ವಿತರಣೆಯ ಪ್ರಮಾಣವು 2019–20ರಲ್ಲಿ ದುರ್ಬಲವಾಗಿತ್ತು. ಲಾಕ್‌ಡೌನ್ ಮತ್ತು ಸಾಮಾಜಿಕ ಅಂತರದ ಅವಶ್ಯಕತೆಯ ಪರಿಣಾಮ 200 ರಾಷ್ಟ್ರಗಳಲ್ಲಿ ಆರ್ಥಿಕ ಚಟುವಟಿಕೆಗಳು ಅಸ್ತವ್ಯಸ್ತವಾಗಿದೆ. 2020ರ ಜನವರಿ–ಮಾರ್ಚ್ ಅವಧಿಯಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿ ಆರ್ಥಿಕ ಬೆಳವಣಿಗೆಯ ಪ್ರಮಾಣವು ಮೈನಸ್ 3.4ರಿಂದ ಮೈನಸ್ 14.2 ಪರ್ಸೆಂಟ್ ತನಕ ಕುಸಿದಿದೆ.
- ಅಭಿವೃದ್ಧಿಶೀಲ ದೇಶಗಳಲ್ಲಿ ಜಿ.ಡಿ.ಪಿ. 2.9 ಪರ್ಸೆಂಟ್ ನಿಂದ ಮೈನಸ್ 6.8 ಪರ್ಸೆಂಟ್ ತನಕ ಕುಸಿದಿದೆ ಎಂದು ವರದಿ ತಿಳಿಸಿದೆ. ವಿದೇಶಿ ಸಾಂಸ್ಥಿಕ ಹೂಡಿಕೆಯು 2020ರ ಮಾರ್ಚ್‌ನಲ್ಲಿ ಗಣನೀಯವಾಗಿ ಹೊರ ಹೋಗಿದ್ದರೂ, ಮೇ ಮತ್ತು ಜೂನ್‌ನಲ್ಲಿ ಮತ್ತೆ ಚೇತರಿಸಿದೆ. ಒಳ ಹರಿವು ಸುಧಾರಿಸಿದೆ ಎಂದು ತಿಳಿಸಿದೆ.

49. ಬ್ಯಾಂಕ್‌ಗಳಲ್ಲಿ ನಿಮ್ಮ ಹಣ ಎಷ್ಟು ಸುರಕ್ಷಿತ?

- ಬ್ಯಾಂಕ್‌ಗಳಲ್ಲಿ ನೀವು ಇಡುವ ಉಳಿತಾಯದ ಡಿಪಾಸಿಟ್ ಅಥವಾ ಹಣಕ್ಕೆ ನೇರವಾಗಿ ಸಂಬಂಧಿಸಿದ, ಮೂರು ವರ್ಷಗಳ ಹಿಂದೆ ಕೋಲಾಹಲ ಸೃಷ್ಟಿಸಿ ಕಣ್ಮರೆಯಾಗಿದ್ದ ಎಫ್.ಆರ್.ಡಿ.ಐ. ಎಂಬ ವಿಧೇಯಕದ ಬದಲಿಗೆ, ಮತ್ತೊಂದು ಪರಿಷ್ಕೃತ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಲು ಸರ್ಕಾರ ಯತ್ನಿಸುತ್ತಿದೆ. ಆದರೆ ಇದೂ ಕೂಡ ವಿವಾದಕ್ಕೀಡಾಗಿದೆ
- ಹಳೆಯ ಫೈನಾನ್ಸಿಯಲ್ ರೆಸಲ್ಯೂಷನ್ ಆ್ಯಂಡ್ ಡಿಪಾಸಿಟ್ ಇನ್ಷೂರೆನ್ಸ್ ಎಫ್.ಆರ್.ಡಿ.ಐ. ವಿಧೇಯಕದ ಬದಲಿಗೆ, 'ಹಣಕಾಸು ವಲಯ ಅಭಿವೃದ್ಧಿ ಮತ್ತು ನಿಯಂತ್ರಣ ವಿಧೇಯಕ 2019'ನ್ನು ಕೇಂದ್ರ ಸಚಿವ ಸಂಪುಟದ ಅನುಮೋದನೆ ಪಡೆದು ಸಂಸತ್ತಿನಲ್ಲಿ ಮಂಡಿಸಲು ಸಿದ್ಧತೆ ನಡೆದಿದೆ.

ಎಫ್.ಎಸ್.ಡಿ.ಆರ್. ಉದ್ದೇಶವೇನು?

- ಯಾವುದಾದರೂ ಹಣಕಾಸು ಸಂಸ್ಥೆ ಅಥವಾ ಬ್ಯಾಂಕ್ ತನ್ನ ವ್ಯವಹಾರದಲ್ಲಿ ಮುಗ್ಗರಿಸಿ ಪತನವಾದ ಸಂದರ್ಭ, ಬಿಕ್ಕಟ್ಟಿನ ಇತ್ಯರ್ಥಕ್ಕೆ ಸಂಬಂಧಿಸಿದ ನಾನಾ ಕಾನೂನಾತ್ಮಕ ಮತ್ತು ನಿಯಂತ್ರಕ ಕ್ರಮಗಳನ್ನು ಸಂಯೋಜಿಸಿ, ಅಪೂರ್ಣವಾಗಿರುವ ನಿಯಮಾವಳಿಗಳನ್ನು ಸರಿಪಡಿಸಿ, ವ್ಯವಸ್ಥೆಗೊಳಿಸುವುದು ಎಫ್.ಎಸ್.ಡಿ.ಆರ್. ವಿಧೇಯಕದ ಉದ್ದೇಶ ಎಂದು ಸರ್ಕಾರ ಪ್ರತಿಪಾದಿಸಿದೆ.
- ಈ ವಿಧೇಯಕವು ಕಾಯ್ದೆಯಾಗಿ ಜಾರಿಯಾದರೆ, ಅದರ ವ್ಯಾಪ್ತಿಗೆ ಎಲ್ಲ ಸಾರ್ವಜನಿಕ ಮತ್ತು ಖಾಸಗಿ ಬ್ಯಾಂಕ್‌ಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್.ಬಿ.ಎಫ್.ಸಿ.), ಸಹಕಾರ ಬ್ಯಾಂಕ್‌ಗಳು, ವಿಮೆ ಕಂಪನಿಗಳು, ಪೇಮೆಂಟ್ ಸಿಸ್ಟಮ್‌ಗಳು, ಇತರ ಹಣಕಾಸು ಸೇವೆಗಳು ಎಲ್ಲವೂ ಬರಲಿದೆ. ಷೇರು ವಿನಿಮಯ ಕೇಂದ್ರಗಳು, ಮ್ಯೂಚುವಲ್ ಫಂಡ್; ಕ್ಲಿಯರಿಂಗ್ ಹೌಸ್, ಕ್ಯಾಪಿಟಲ್ ಮಾರ್ಕೆಟ್ ಇಂಟರ್ ಮೀಡಿಯೇಟರೀಸ್‌ಗಳೂ ಇದರ ವ್ಯಾಪ್ತಿಗೆ ಒಳಪಡಲಿವೆ.
- ಒಂದೇ ವರ್ಷದೊಳಗೆ ಹಿಂತೆಗೆತಕೀಡಾದ ಎಫ್.ಆರ್.ಡಿ.ಐ.
- ಈ ಹಿಂದೆ 2017ರಲ್ಲಿ ಪ್ರಸ್ತಾಪವಾಗಿದ್ದ ಫೈನಾನ್ಸಿಯಲ್ ರೆಸಲ್ಯೂಷನ್ ಆ್ಯಂಡ್ ಡಿಪಾಸಿಟ್ ಇನ್ಷೂರೆನ್ಸ್ ಬಿಲ್ ಅನ್ನು 2018ರಲ್ಲಿ ಹಿಂತೆಗೆದುಕೊಳ್ಳಲಾಯಿತು. ಲೋಕಸಭೆಯಲ್ಲಿ ಮಂಡನೆಯಾಗಿದ್ದ ಈ ವಿಧೇಯಕದಲ್ಲಿದ್ದ 'ಬೇಲ್ ಇನ್' ಎಂಬ ಪ್ರಸ್ತಾಪಕ್ಕೆ ತೀವ್ರ ಪ್ರತಿರೋಧ ಎದುರಾಗಿತ್ತು.
- ಮೇಕ್ ಇನ್ ಪರಿಣಾಮ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ದಿವಾಳಿಯಾದ ವೇಳೆ, ಪರಿಹಾರ ಕ್ರಮಗಳಿಗೆ ಬ್ಯಾಂಕ್‌ನಲ್ಲಿರುವ ಠೇವಣಿದಾರರ ಹಣವನ್ನೂ ಬಳಸಿಕೊಳ್ಳಬಹುದು. ವಿಮೆ ಕವರೇಜ್‌ನಲ್ಲಿ ಇರುವಷ್ಟು ಮೊತ್ತ ಹೊರತುಪಡಿಸಿ ಮಿಕ್ಕ ಹಣವನ್ನು ಬ್ಯಾಂಕಿನ ಈಕ್ವಿಟಿಗಳಾಗಿಯೂ ಪರಿವರ್ತಿಸಬಹುದು ಹೀಗಾಗಿ ಸಣ್ಣ ಉಳಿತಾಯಗಾರರ ವಿಶ್ವಾಸವನ್ನು ಈ ವಿಧೇಯಕ ಗಳಿಸಲಿಲ್ಲ, ಜನತೆಯ ಆಕ್ರೋಶಕ್ಕೆ ಮಣಿದ ಸರ್ಕಾರ ವಿಧೇಯಕವನ್ನು ಹಿಂತೆಗೆದುಕೊಂಡಿತ್ತು.

50. ಬಲ್ಕ್ ಎಸ್.ಎಂ.ಎಸ್. ಶುಲ್ಕ 25–30% ಏರಿಕೆ:

- ವಾಣಿಜ್ಯೋದ್ದೇಶದ ಬಲ್ಕ್ ಎಸ್ಎಂಎಸ್ ಸೇವೆಯ ಶುಲ್ಕದಲ್ಲಿ 25 ರಿಂದ 30 ಪರ್ಸೆಂಟ್ ಏರಿಕೆಯನ್ನು ಟೆಲಿಕಾಂ ಕಂಪನಿಗಳು ಮಾಡಿವೆ. ಪರಿಷ್ಕೃತ ದರ ಆಗಸ್ಟ್ ನಿಂದ ಅನ್ವಯವಾಗಲಿದೆ. ಇದು ಈ ವರೆಗಿನ ಗರಿಷ್ಠ ಮಟ್ಟದ ಏರಿಕೆಯಾಗಿದೆ.
- ಇದರ ಪರಿಣಾಮ ಬ್ಯಾಂಕಿಂಗ್, ರಿಟೇಲ್, ಇ–ಕಾಮರ್ಸ್, ಡೆಲಿವರಿ ಆ್ಯಪ್ ಇತ್ಯಾದಿ ವಲಯಗಳಲ್ಲಿ ಕಂಪನಿಗಳಿಗೆ ಎಸ್.ಎಂ.ಎಸ್. ವೆಚ್ಚ ಏರಿಕೆಯಾಗಲಿದೆ. .
- ಸ್ಪ್ಯಾಮ್ ಎಸ್.ಎಂ.ಎಸ್. ಗಳನ್ನು ಪತ್ತೆ ಹಚ್ಚಲು ಬ್ಲಾಕ್ ಚೈನ್ ತಂತ್ರಜ್ಞಾನವನ್ನು ಟೆಲಿಕಾಂ ಕಂಪನಿಗಳು ಜಾರಿಗೆ ತರುತ್ತಿದ್ದು, ಇದರ ಹೊರೆ ನಿಭಾಯಿಸಲು ಬಲ್ಕ್ ಎಸ್ಎಂಎಸ್ ಸೇವೆ ಏರಿಕೆ ಮಾಡಲಾಗಿದೆ.
- ಟಾಟಾ ಕಮ್ಯುನಿಕೇಷನ್ಸ್, ವಿಡಿಯೊಕಾನ್, ರೂಟ್ ಮೊಬೈಲ್, ಎಸಿಎಲ್ ಮೊಬೈಲ್, ವ್ಯಾಲ್ಯುಫರ್ಸ್ಟ್ ಸೇರಿದಂತೆ 50,000ಕ್ಕೂ ಅಧಿಕ ಟೆಲಿಮಾರ್ಕೆಟರ್‌ಗಳು, ಒಂದು ಎಸ್ಎಂಎಸ್ ಸಂದೇಶಕ್ಕೆ ಈಗ 9–10 ಪೈಸೆ ಪಾವತಿಸುತ್ತಿದ್ದಾರೆ. ದರ ಪರಿಷ್ಕರಣೆ ನಂತರ 2.5 ಪೈಸೆ ಏರಿಕೆಯಾಗುವ ನಿರೀಕ್ಷೆ ಇದೆ.

51. ಟೂರಿಸಂ, ಎಂ.ಎಸ್.ಎಂ.ಇ. ಗೆ ಕೋವಿಡ್ ಏಟು:

- ಪ್ರವಾಸೋದ್ಯಮ ಮತ್ತು ಆತಿಥೋದ್ಯಮ, ನಿರ್ಮಾಣ, ವೈಮಾನಿಕ, ಆಟೊಮೊಬೈಲ್ಸ್ ಮತ್ತು ಎಂ.ಎಸ್.ಎಂ.ಇ. ವಲಯವು ಕೋವಿಡ್ ಬಿಕ್ಕಟ್ಟಿನ ಪರಿಣಾಮ ಹೆಚ್ಚು ಸಂಕಷ್ಟಕ್ಕೀಡಾಗಿದೆ ಎಂದು ಆರ್‌ಬಿಐ ವರದಿ ತಿಳಿಸಿದೆ.
- ರಿಸರ್ವ್ ಬ್ಯಾಂಕಿನ ಹಣಕಾಸು ಸ್ಥಿರತೆ ವರದಿಯು ಉದ್ಯಮದ ಸ್ಥಿತಿಗತಿಯನ್ನು ತೆರೆದಿಟ್ಟಿದೆ. ಲಾಕ್‌ಡೌನ್‌ಗೆ ಮೊದಲು ನಿರ್ಮಾಣ ಕ್ಷೇತ್ರಕ್ಕೆ ಬ್ಯಾಂಕ್‌ಗಳು ಶೇ. 24ರಷ್ಟು ಸಾಲಗಳು 2020ರ ಮಾರ್ಚ್‌ನಲ್ಲಿ ಅನುತ್ಪಾದಕ ಸಾಲಗಳಾಗಿ (ಎನ್‌ಪಿಎ) ಪರಿಣಮಿಸಿವೆ.
- ಪ್ರವಾಸೋದ್ಯಮ ವಲಯದಲ್ಲೂ ಮುಂದಿನ 6 ತಿಂಗಳು ಚೇತರಿಕೆ ಸಾಧ್ಯತೆಗಳು ಕ್ಷೀಣಿಸಿವೆ ಎಂದು ಆರ್‌ಬಿಐ ಸಮೀಕ್ಷೆ ತಿಳಿಸಿದೆ. ವಿಮಾನ ಕ್ಷೇತ್ರವೂ ಬಿಕ್ಕಟ್ಟಿನಲ್ಲಿದೆ.
- 3 ವರ್ಷ ಇರಲಿದೆಯೇ ಕರಾಳ ಛಾಯೆ
- ಆರ್.ಬಿ.ಐ. ಸಮೀಕ್ಷೆಯ ಪ್ರಕಾರ, ಕೋವಿಡ್ ಬಿಕ್ಕಟ್ಟಿನ ಪ್ರತಿಕೂಲ ಪರಿಣಾಮಗಳು ಮುಂದಿನ 3 ವರ್ಷಗಳ ಕಾಲ ಮುಂದುವರಿಯಲಿದೆ.
- ಬ್ಯಾಂಕ್‌ಗಳ ಗುಣಮಟ್ಟದ ಮೇಲೆ ನಕಾರಾತ್ಮಕ ಪ್ರಭಾವ ಬೀರಲಿದೆ.
- ವಿದೇಶಿ ನೇರ ಬಂಡವಾಳ ಹೂಡಿಕೆ ತಗ್ಗಬಹುದು.
- ಮೂಲ ಸೌಕರ್ಯ ಹೂಡಿಕೆ ಇಳಿಕೆಯಾಗಬಹುದು.
- ರಿಯಲ್ ಎಸ್ಟೇಟ್ ದರಗಳು ಕುಸಿಯಬಹುದು
- ಜಾಗತಿಕ ಆರ್ಥಿಕ ಬೆಳವಣಿಗೆ, ದೇಶಿ ಬೆಳವಣಿಗೆ, ವಿತ್ತೀಯ ಕೊರತೆ ಹೆಚ್ಚು ಕಾಡಲಿದೆ.
- ಷೇರು ಮಾರುಕಟ್ಟೆಯಲ್ಲಿ ಹೆಚ್ಚಿನ ಏರಿಳಿತ ಆಗಬಹುದು.
- ಸಾಮಾಜಿಕ ಅಸಮಾನತೆಯೂ ಹೆಚ್ಚಬಹುದು ಎಂದಿದೆ.

52. ಬ್ಯಾಂಕುಗಳಿಗೆ ಬೇಕು ಸರ್ಕಾರದ ನೆರವು:

- ಸರ್ಕಾರದಿಂದ ಹೆಚ್ಚಿನ ಹಣಕಾಸು ನೆರವು ಸಿಗದೆ ಇದ್ದರೆ, ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಿಗೆ ನಿರೀಕ್ಷಿತ ಸವಾಲುಗಳನ್ನು ಎದುರಿಸಲು ಖಾಸಗಿ ಮೂಲಗಳಿಂದ ಸಂಗ್ರಹಿಸುವ ಬಂಡವಾಳವು ಸಾಕಾಗಲಿಕ್ಕಿಲ್ಲ ಎಂದು ಫಿಚ್ ರೇಟಿಂಗ್ ಹೇಳಿದೆ.
- ಬಂಡವಾಳ ಮಾರುಕಟ್ಟೆಯಿಂದ ಹಣ ಸಂಗ್ರಹಿಸುವ ಯೋಜನೆ ಇರುವುದಾಗಿ ಸರ್ಕಾರಿ ಸ್ವಾಮ್ಯದ ಹಲವು ಬ್ಯಾಂಕುಗಳು ಈಚೆಗೆ ಹೇಳಿದ್ದವು. ಹೂಡಿಕೆದಾರರಲ್ಲಿ ಅಷ್ಟೊಂದು ಉತ್ಸಾಹ ಇಲ್ಲದಿರುವುದು ಸೇರಿ ಬೇರೆ ಬೇರೆ ಕಾರಣಗಳಿಂದಾಗಿ, ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಬಂಡವಾಳ ಸಂಗ್ರಹಿಸುವಲ್ಲಿ ಸವಾಲುಗಳು ಹೆಚ್ಚಿವೆ ಎಂದು ಫಿಚ್ ಹೇಳಿದೆ.
- ಸರ್ಕಾರವು ಕೆಲವು ಬ್ಯಾಂಕು ಗಳಲ್ಲಿ ತಾನು ಹೊಂದಿರುವ ಷೇರು ಗಳ ಪ್ರಮಾಣ ಕಡಿಮೆ ಮಾಡಿಕೊಂಡರೆ, ಠೇವಣಿದಾರರ ವಿಶ್ವಾಸ ಕುಗ್ಗಲು ಕಾರಣವಾಗಬಹುದು. ಹೂಡಿಕೆದಾರರ ಆಸಕ್ತಿಯೂ ಕುಂದಬಹುದು ಎಂದು ಫಿಚ್ ಹೇಳಿದೆ.

- ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿನ ಷೇರು ಮಾರಾಟವು ತೀರಾ ಸವಾಲಿನದ್ದು. ಈಗಿನ ಕಾನೂನಿನ ಅನ್ವಯ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿ ಕನಿಷ್ಠ ಶೇಕಡ. 51ರಷ್ಟು ಷೇರುಗಳು ಸರ್ಕಾರದ್ದಿರಬೇಕು. ಷೇರು ಮಾರಾಟಕ್ಕೆ ಮೊದಲು ಈ ಕಾನೂನು ತಿದ್ದುಪಡಿ ಮಾಡಬೇಕಾಗಬಹುದು ಎಂದೂ ಅದು ಹೇಳಿದೆ.

53. ಸಹಕಾರ ಬ್ಯಾಂಕ್:

- ಸಹಕಾರ ಬ್ಯಾಂಕ್‌ಗಳನ್ನು ಇತರ ಬ್ಯಾಂಕ್‌ಗಳಂತೆ ರಿಸರ್ವ್ ಬ್ಯಾಂಕ್‌ನ ಮೇಲುಸ್ತುವಾರಿಗೆ ಒಳಪಡಿಸಲು ಕೇಂದ್ರ ಸರ್ಕಾರ ಇತ್ತೀಚೆಗೆ ಸುಗ್ರೀವಾಜ್ಞೆ ಹೊರಡಿಸಿದ ಬೆನ್ನಲ್ಲೇ, ಮುಂದಿನ ಹಂತವಾಗಿ ಸಹಕಾರ ಬ್ಯಾಂಕ್‌ಗಳ ವಿಲೀನ ಸನ್ನಿಹಿತವಾಗಿದೆ.
- ಈ ನಡುವೆ, ಈ ಪ್ರಸ್ತಾಪದ ಬಗ್ಗೆ ಪರ–ವಿರೋಧದ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಸಹಕಾರ ಬ್ಯಾಂಕ್‌ಗಳ ಉದ್ದೇಶ ಲಾಭಕ್ಕಿಂತ ಹೆಚ್ಚಾಗಿ ನೆರವಾಗುವುದಾಗಿದೆ. ನಿರ್ದಿಷ್ಟ ಸಮುದಾಯ ಮತ್ತು ವರ್ಗಗಳನ್ನು ಆಧರಿಸಿ ಇಂಥ ಬ್ಯಾಂಕ್‌ಗಳು ರೂಪುಗೊಂಡಿವೆ. ಹೀಗಿರುವಾಗ ಇಂಥ ಹಲವು ಬ್ಯಾಂಕ್‌ಗಳನ್ನು ಒಂದೆಡೆ ಸೇರಿಸಿದರೆ ನಿರ್ದಿಷ್ಟ ಗ್ರಾಹಕರ ಹಿತಾಸಕ್ತಿಗೆ ಧಕ್ಕೆ ಬರಲಿದೆ ಎಂಬ ಆತಂಕವೂ ಇದೆ.
- ಸರ್ಕಾರದ ಬ್ಯಾಂಕಿಂಗ್ ನಿಯಂತ್ರಣ (ತಿದ್ದುಪಡಿ) ಸುಗ್ರೀವಾಜ್ಞೆ 2020, ಕಳೆದ ಜೂನ್ 26 ರಿಂದ ಜಾರಿಯಾಗಿದೆ. ಇದರ ಬೆನ್ನಲ್ಲೇ, ನಗರ ಸಹಕಾರ ಬ್ಯಾಂಕ್‌ಗಳ ವಿಲೀನ ಮತ್ತು ಸಂಯೋಜನೆಗೆ ಸಹಕಾರ ವಲಯದ ತಜ್ಞರು, ಹೂಡಿಕೆದಾರರು ರಿಸರ್ವ್ ಬ್ಯಾಂಕ್‌ಗೆ ಮನವಿ ಸಲ್ಲಿಸಿದ್ದಾರೆ.
- ಕೇಂದ್ರ ಸರ್ಕಾರ, ರಿಸರ್ವ್ ಬ್ಯಾಂಕ್ ಮತ್ತು ಎಲ್ಲಾ ರಾಜ್ಯ ಸರ್ಕಾರಗಳು ಮುಂದಿನ ಹಂತದಲ್ಲಿ ಸಹಕಾರ ಬ್ಯಾಂಕ್‌ಗಳ ಬಲವರ್ಧಿಸಲು ಕ್ರಮ ತೆಗೆದುಕೊಳ್ಳಬೇಕು. ಮುಖ್ಯವಾಗಿ ಸಹಕಾರ ಬ್ಯಾಂಕ್‌ಗಳ ಸಂಖ್ಯೆಯನ್ನು 2025ರ ಮಾರ್ಚ್ ಅಂತ್ಯದೊಳಗೆ ಈಗಿನ 1,540 ರಿಂದ 40ಕ್ಕೆ ಇಳಿಸಬೇಕು.

ರಾಷ್ಟ್ರೀಯ ಅಪೆಕ್ಸ್ ಹಣಕಾಸು ಸಂಸ್ಥೆ ಸ್ಥಾಪನೆಗೆ ಬೇಡಿಕೆ

- ಸಹಕಾರ ಬ್ಯಾಂಕಿಂಗ್ ವಲಯಕ್ಕೆ ಸಂಬಂಧಿಸಿ, ರಾಷ್ಟ್ರೀಯ ಮಟ್ಟದಲ್ಲಿ ಅಪೆಕ್ಸ್ ಹಣಕಾಸು ಸಂಸ್ಥೆ ಸ್ಥಾಪಿಸಬೇಕು. ಇದಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ಎಲ್ಲ ಸಹಕಾರ ಬ್ಯಾಂಕ್‌ಗಳು ಬಂಡವಾಳ ನಿಧಿ ಒದಗಿಸಬೇಕು.
- ಹೌಸಿಂಗ್ ಫೈನಾನ್ಸ್ ಕಂಪನಿಗಳಿಗೆ ನ್ಯಾಷನಲ್ ಹೌಸಿಂಗ್ ಬ್ಯಾಂಕ್, ಸಣ್ಣ ಮತ್ತು ಎಂಎಸ್‌ಎಂಇ ಸಾಲ ನೀಡುವ ಕಂಪನಿಗಳಿಗೆ ಎಸ್‌ಐಡಿಬಿಐ, ರಫ್ತು ಮತ್ತು ಆಮದು ಬಿಸಿನೆಸ್‌ಗೆ ಸಾಲ ವಿತರಣೆಗೆ ಸಂಭಂದಿಸಿ ಎಕ್ಸಿಮ್ ಬ್ಯಾಂಕ್ ಇರುವಂತೆ ಸಹಕಾರ ಬ್ಯಾಂಕಿಂಗ್‌ಗೆ ರಾಷ್ಟ್ರೀಯ ಅಪೆಕ್ಸ್ ಹಣಕಾಸು ಸಂಸ್ಥೆ ಸ್ಥಾಪನೆಯಾಗಬೇಕು ಎಂಬ ಬೇಡಿಕೆ ಉಂಟಾಗಿದೆ.

ಪರಿಣಾಮವೇನು?

- ಸಹಕಾರ ಬ್ಯಾಂಕ್‌ಗಳನ್ನು ವಿಲೀನಗೊಳಿಸುವುದರಿಂದ ಒಂದೇ ಕಡೆ ಕೇಂದ್ರೀಕೃತವಾಗಿರುವ ಸಣ್ಣ ಸಹಕಾರ ಬ್ಯಾಂಕ್‌ಗಳು ವಿಲೀನವಾಗಿ ದೊಡ್ಡ ಬ್ಯಾಂಕ್‌ಗಳಾಗಲಿದೆ. ಅವುಗಳ ದಕ್ಷತೆ, ಬಂಡವಾಳ ಸೌಕರ್ಯ ಹೆಚ್ಚಬಹುದು. ವೆಚ್ಚ ಕಡಿತಕ್ಕೂ ಅನುಕೂಲಕರವಾಗಲಿದೆ.

ಸವಾಲೇನು?:

- ಪ್ರತಿಯೊಂದು ಸಹಕಾರ ಬ್ಯಾಂಕ್‌ಗಳ ವ್ಯಾಪ್ತಿ ಸೀಮಿತ ಪ್ರದೇಶಗಳಲ್ಲಿ ಇರುವುದರಿಂದ ವಿಲೀನಕ್ಕೆ ಸವಾಲುಗಳು ಎದುರಾಗಬಹುದು. ಭಿನ್ನ ಸಮುದಾಯಗಳ ಸಹಕಾರ ಬ್ಯಾಂಕ್‌ಗಳ ವಿಲೀನ ಕ್ಲಿಷ್ಟಕರವಾಗಬಹುದು.

54. 80 ಲಕ್ಷ ಪಿಎಫ್ ಸದಸ್ಯರಿಂದ 30,000 ಕೋಟಿ ವಿತ್ ಡ್ರಾ:

- ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್‌ಒ) ಸಂಘಟನೆಯ 80 ಲಕ್ಷ ಸದಸ್ಯರು ಕಳೆದ 4 ತಿಂಗಳಲ್ಲಿ (ಏಪ್ರಿಲ್–ಜುಲೈ) 30,000 ಕೋಟಿ ರೂ. ಗಳನ್ನು ಹಿಂಪಡೆದು ಕೊಂಡಿದ್ದಾರೆ.
- ಕೋವಿಡ್–19 ನಿಂದಾಗಿ ಆರ್ಥಿಕ ಸಂಕಷ್ಟ ಎದುರಾಗಿದೆ. ಉದ್ಯೋಗ ನಷ್ಟ, ವೇತನ ಕಡಿತ, ವೈದ್ಯಕೀಯ ವೆಚ್ಚ ಮತ್ತಿತರ ಖರ್ಚುಗಳನ್ನು ನಿಭಾಯಿಸಲು ಇಪಿಎಫ್‌ಒ ಸದಸ್ಯರು, ತಮ್ಮ ಪಿಎಫ್ ಖಾತೆಯಿಂದ ಹಣವನ್ನು ವಿತ್‌ಡ್ರಾ ಮಾಡಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ 1 ಕೋಟಿ ಜನ ತಮ್ಮ ಖಾತೆಯಿಂದ ಹಣ ತೆಗೆಯುವ ನಿರೀಕ್ಷೆ ಇದೆ.
- ಸದಸ್ಯರ ಪಿಎಫ್ ಖಾತೆಯಲ್ಲಿನ ಶೇ. 75ರಷ್ಟು ಹಣ ಅಥವಾ ಮೂರು ತಿಂಗಳ ವೇತನ ಇದರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಕೋವಿಡ್ ಕಾರಣ ತೋರಿಸಿ ವಿತ್ ಡ್ರಾ ಮಾಡಲು ಅವಕಾಶವಿದೆ.



ಕ್ರೀಡೆ

1. ಐಸಿಸಿ ಮುಖ್ಯಸ್ಥ ಹುದ್ದೆ ತೊರೆದ ಶಶಾಂಕ್:

- ಐಸಿಸಿಗೆ ನೇಮಕವಾದ ಮೊದಲ ಸ್ವತಂತ್ರ ಮುಖ್ಯಸ್ಥರಾಗಿದ್ದ ಶಶಾಂಕ್ ಮನೋಹರ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯಸ್ಥರ ಹುದ್ದೆಯನ್ನು ತೊರೆದಿದ್ದಾರೆ. ಮುಂದಿನ ಮುಖ್ಯಸ್ಥರ ಚುನಾವಣೆ ಪ್ರಕ್ರಿಯೆ ನಡೆಯುವವರೆಗೂ ಉಪ ಮುಖ್ಯಸ್ಥರಾಗಿರುವ, ಸಿಂಗಪುರ ಕ್ರಿಕೆಟ್ ಸಂಸ್ಥೆ ಮಾಜಿ ಅಧ್ಯಕ್ಷ ಇಮ್ರಾನ್ ಖ್ವಾಜಾ ಹಂಗಾಮಿ ಮುಖ್ಯಸ್ಥರಾಗಲಿದ್ದಾರೆ. ಎರಡು ವರ್ಷಗಳ ಎರಡು ಅವಧಿಯನ್ನು ಮುಕ್ತಾಯಗೊಳಿಸಿ, ಅವರಾಗಿಯೇ ಈ ಸ್ಥಾನ ಬಿಟ್ಟುಕೊಟ್ಟಿದ್ದಾರೆ. ಮಂಡಳಿ ಸಭೆಯಲ್ಲಿ ಇಮ್ರಾನ್ ಖ್ವಾಜಾ ಅವರನ್ನು ಹಂಗಾಮಿ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

2. ಜಡೇಜ 'ಶತಮಾನದ ಟೆಸ್ಟ್ ಕ್ರಿಕೆಟಿಗ':

- ಭಾರತದ ರವೀಂದ್ರ ಜಡೇಜ ಅವರು ವಿಸ್ಡನ್ ನಿಯತಕಾಲಿಕೆಯ '21ನೇ ಶತಮಾನದ ಶ್ರೇಷ್ಠ ಭಾರತೀಯ ಟೆಸ್ಟ್ ಕ್ರಿಕೆಟಿಗ' ಗೌರವಕ್ಕೆ ಪಾತ್ರರಾಗಿದ್ದಾರೆ. ವಿಶ್ವದ ಅತ್ಯಮೂಲ್ಯ ಆಟಗಾರರ ಪಟ್ಟಿಯಲ್ಲಿ, ಜಡೇಜ ಎರಡನೇ ಸ್ಥಾನ ಪಡೆದಿದ್ದಾರೆ. ಶ್ರೀಲಂಕಾದ ದಿಗ್ಗಜ ಸ್ಪಿನ್ನರ್ ಮುತ್ತಯ್ಯ ಮುರಳೀಧರನ್ ಅಗ್ರಸ್ಥಾನದಲ್ಲಿದ್ದಾರೆ. 31 ವರ್ಷದ ಆಲ್‌ರೌಂಡರ್ ಜಡೇಜ 97.3 ಎಂವಿಪಿ ರೇಟಿಂಗ್ ಗಳಿಸಿದ್ದಾರೆ.
- ಕ್ರಿಕ್‌ವಿಜ್ ಸಂಸ್ಥೆಯು ನಡೆಸಿದ ವಿಶ್ಲೇಷಣೆಯನ್ನು ಆಧರಿಸಿ ವಿಶ್ವ ಕ್ರಿಕೆಟ್‌ನ ಪ್ರತಿಯೊಬ್ಬ ಆಟಗಾರನಿಗೆ ಎಂವಿಪಿ ರೇಟಿಂಗ್ ನೀಡಲಾಗುತ್ತದೆ. ಸಾಮರ್ಥ್ಯ, ವಯಸ್ಸು ಅಥವಾ ಮಾದರಿಯಲ್ಲಿ ಸಮಾನವಾಗಿರುವ ಆಟಗಾರರೊಂದಿಗೆ ಹೋಲಿಕೆ ಮಾಡಲಾಗುತ್ತದೆ. ಅವರು ಪಂದ್ಯದ ಮೇಲೆ ಬೀರಿದ ಪ್ರಭಾವ, ಅಂಕಿ ಅಂಶಗಳನ್ನು ರೇಟಿಂಗ್‌ಗೆ ಪರಿಗಣಿಸಲಾಗುತ್ತದೆ ಎಂದು ದತ್ತಾಂಶ ವಿಶ್ಲೇಷಕ ಫ್ರೆಡ್ಡಿ ವೈಲ್ಡ್ ಹೇಳಿದ್ದಾರೆ.

3. ಎಎಫ್‌ಸಿ ಕಪ್ ಆತಿಥ್ಯಕ್ಕೆ ಭಾರತ ಬಿಡ್:

- 2027ರ ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಗೆ ಆತಿಥ್ಯ ವಹಿಸಲು ಭಾರತ ಸೇರಿದಂತೆ ಐದು ಸದಸ್ಯ ರಾಷ್ಟ್ರಗಳು ಆಸಕ್ತಿ ತೋರಿವೆ ಎಂದು ಏಷ್ಯನ್ ಫುಟ್ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ದೃಢಪಡಿಸಿದೆ. ಬಿಡ್ ಸಲ್ಲಿಸಲು ಜೂನ್ 30 ಕೊನೆಯ ದಿನಾಂಕವಾಗಿದ್ದು, ಇರಾನ್, ಕತಾರ್, ಸೌದಿ ಅರೇಬಿಯಾ ಮತ್ತು ಉಜ್ಬೇಕಿಸ್ತಾನ ಬಿಡ್ ಸಲ್ಲಿಸಿರುವ ಇತರ ರಾಷ್ಟ್ರಗಳಾಗಿವೆ. ಎಎಫ್‌ಸಿ ಏಷ್ಯನ್ ಕಪ್‌ಗೆ 1956ರಲ್ಲಿ ಚಾಲನೆ ನೀಡಲಾಗಿತ್ತಾದರೂ, ಆತಿಥ್ಯ ಬಯಸಿ ಭಾರತ ಬಿಡ್ ಸಲ್ಲಿಸಿರುವುದು ಇದೇ ಮೊದಲು.

4. ರಾಷ್ಟ್ರೀಯ ವೇದಿಕೆ ಸ್ಥಾಪನೆ:

- ಕ್ರೀಡೆಯಲ್ಲಿ ಉದ್ದೀಪನ ಮದ್ದು ಸೇವನೆ ಪ್ರಕರಣಗಳಿಗೆ ಸಂಬಂಧಿಸಿದ ಮಾನದಂಡಗಳ ಅನುಷ್ಠಾನಕ್ಕಾಗಿ ರಾಷ್ಟ್ರೀಯ ವೇದಿಕೆಯೊಂದನ್ನು ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆ. ಯುನೆಸ್ಕೊ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ

ನಿರ್ಣಯಗಳ ಅನುಸಾರ ಸ್ಥಾಪನೆಯಾಗುವ ಈ ವೇದಿಕೆಗೆ ಕೇಂದ್ರ ಕ್ರೀಡಾ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷರಾಗಿರುವರು. ಭಾರತ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷ ಮತ್ತು ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕದ (ನಾಡಾ) ಮಹಾನಿರ್ದೇಶಕರು ವೇದಿಕೆಯ ಸದಸ್ಯರಾಗಿರುವರು. 10 ಮಂದಿಯ ವೇದಿಕೆಯಲ್ಲಿ ಗೃಹ, ಹಣಕಾಸು, ವಿದೇಶಾಂಗ ವ್ಯವಹಾರ, ಮಾನವ ಸಂಪನ್ಮೂಲ, ಆರೋಗ್ಯ ಮತ್ತು ಕಾನೂನು ಇಲಾಖೆಯ ಪ್ರತಿನಿಧಿಗಳಿಗೂ ಸದಸ್ಯತ್ವ ಇರಲಿದೆ. ಈ ಸಂಬಂಧ ಜೂನ್ 27ರಂದು ಕ್ರೀಡಾ ಸಚಿವಾಲಯವು ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಕಳುಹಿಸಿದೆ.

- ಉದ್ದೀಪನ ಮದ್ದು ತಡೆಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಸಮಾವೇಶದ ನಿರ್ಣಯಗಳನ್ನು 2005ರಲ್ಲಿ ನಡೆದ ಯುನೆಸ್ಕೊ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾಗಿತ್ತು. ಈ ನಿರ್ಣಯಗಳಿಗೆ ಭಾರತವೂ ಸಹಿ ಹಾಕಿತ್ತು. ಕ್ರೀಡೆಯಲ್ಲಿ ಉದ್ದೀಪನ ಮದ್ದು ಸೇವನೆಯನ್ನು ತಡೆಯುವುದು ಮತ್ತು ಅದರ ವಿರುದ್ಧ ಹೋರಾಡುವುದು ಅಂತರರಾಷ್ಟ್ರೀಯ ಸಮಾವೇಶದ ಉದ್ದೇಶವಾಗಿತ್ತು.

5. ಆಸ್ಟ್ರೇಲಿಯಾ: ಡ್ಯೂಕ್ಸ್ ಚೆಂಡಿನ ಬಳಕೆ ನಿಷೇದಿಸಿದೆ:

- ಇಂಗ್ಲೆಂಡ್‌ನಲ್ಲಿ ತಯಾರಾಗುವ ಡ್ಯೂಕ್ಸ್ ಚೆಂಡುಗಳನ್ನು ದೇಶಿಯ ಕ್ರಿಕೆಟ್ ಟೂರ್ನಿಯಲ್ಲಿ ಬಳಸದಿರಲು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ನಿರ್ಧರಿಸಿದೆ. ಡ್ಯೂಕ್ಸ್ ಬದಲು ಸ್ವದೇಶದಲ್ಲೇ ತಯಾರಿಸುವ ಕೂಕಬುರಾ ಚೆಂಡು ಬಳಸುವುದಾಗಿ ಹೇಳಿದೆ. ಇದು ಮುಂದಿನ ಋತುವಿನ ಶೆಫೀಲ್ಡ್ ಶೀಲ್ಡ್ ಟೂರ್ನಿಯಿಂದಲೇ ಜಾರಿಯಾಗಲಿದೆ. ಈ ನಿರ್ಧಾರಕ್ಕೆ ಡ್ಯೂಕ್ಸ್ ಕ್ರಿಕೆಟ್ ಕಂಪನಿ ಮಾಲೀಕ ದಿಲೀಪ್ ಜಜೋಡಿಯಾ ಖೇದ ವ್ಯಕ್ತಪಡಿಸಿದ್ದಾರೆ.

6. ಬ್ಯಾಡ್ಮಿಂಟನ್ ತಾರೆ 'ಲಿನ್' ವೃತ್ತಿ ಬದುಕಿಗೆ ವಿದಾಯ ಘೋಷಿಸಿದ್ದಾರೆ:

- ಸಾರ್ವಕಾಲಿಕ ಶ್ರೇಷ್ಠ – ಬ್ಯಾಡ್ಮಿಂಟನ್ ಆಟಗಾರ ಚೀನಾದ ಲಿನ್ ಡ್ಯಾನ್ ವೃತ್ತಿ ಬದುಕಿಗೆ ಗುಡ್ ಬೈ ಹೇಳಿದ್ದಾರೆ. ಇದರರ್ಥ, 2008ರ ಬೀಜಿಂಗ್ ಹಾಗೂ 2012ರ ಲಂಡನ್ ಒಲಿಂಪಿಕ್ಸ್ ಚಾಂಪಿಯನ್ ಮುಂದಿನ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ರಾಕೆಟ್ ಝಳಪಿಸುವುದಿಲ್ಲ.

5 ಬಾರಿ ವಿಶ್ವ ಸಾಮ್ರಾಟನಾಗಿದ್ದ 'ಲಿನ್'

- ಎರಡು ಒಲಿಂಪಿಕ್ ಕ್ರೀಡಾಕೂಟಗಳಲ್ಲಿ ಚಿನ್ನದ ಪದಕ ಗೆದ್ದಿರುವ ಜತೆಗೆ ಡ್ಯಾನ್ 5 ಬಾರಿ ವಿಶ್ವಚಾಂಪಿಯನ್ ಕೂಡ ಆಗಿದ್ದಾರೆ. ದೀರ್ಘ ಕಾಲ ನಂ.1 ಪಟ್ಟದಲ್ಲಿದ್ದ ಹೆಗ್ಗಳಿಕೆಗೂ ಭಾಜನರಾಗಿದ್ದಾರೆ. 2000ನೇ ಇಸವಿಯಲ್ಲಿ ಬ್ಯಾಡ್ಮಿಂಟನ್ ಅಂಗಣಕ್ಕೆ ಕಾಲಿಟ್ಟಿದ್ದ ಡ್ಯಾನ್ ವೃತ್ತಿಜೀವನದಲ್ಲಿ ಒಟ್ಟು 666 ಸಿಂಗಲ್ಸ್ ಪಂದ್ಯಗಳನ್ನು ಗೆದ್ದಿದ್ದಾರೆ.

7. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮುಖ್ಯ ಕಾರ್ಯ ನಿರ್ವಾಹಕ ರಾಹುಲ್ ಜೋಹ್ರಿ ರ ರಾಜೀನಾಮೆ ಅಂಗೀಕಾರ:

- ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಜೊಹ್ರಿ ಯವರ ರಾಜೀನಾಮೆಯನ್ನು ಅಂಗೀಕರಿಸಿದೆ.
- ಜೊಹ್ರಿ ಕಳೆದ ವರ್ಷ ಡಿಸೆಂಬರ್‌ನಲ್ಲೇ ಸಿ.ಇ.ಒ ಹುದ್ದೆಗೆ ರಾಜೀನಾಮೆ ನೀಡಿದ್ದರು ಎಂದು ಹೇಳಲಾಗುತ್ತಿದೆ. ಶಶಾಂಕ್ ಮನೋಹರ್ ಬಿ.ಸಿ.ಸಿ.ಐ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಂದರೆ 2016ರಲ್ಲಿ ಜೊಹ್ರಿ ಬಿ.ಸಿ.ಸಿ.ಐ ಗೆ ಸಿ.ಇ.ಒ ಆಗಿ ನೇಮಕಗೊಂಡಿದ್ದರು.

8. ಹಾಕಿ ಇಂಡಿಯಾದ ಅಧ್ಯಕ್ಷ ಮುಷ್ತಾಕ್ ಅಹ್ಮದ್ ರಾಜೀನಾಮೆ ಸಲ್ಲಿಸಿದ್ದಾರೆ

- 2011ರ ಕ್ರೀಡಾ ನೀತಿ ಉಲ್ಲಂಘಿಸಿ ಹಾಕಿ ಇಂಡಿಯಾದ ಅಧ್ಯಕ್ಷ ಹುದ್ದೆಗೆ ಆಯ್ಕೆಯಾಗಿದ್ದ ಮುಷ್ತಾಕ್ ಅಹ್ಮದ್ ಅವರು ರಾಜೀನಾಮೆ ಸಲ್ಲಿಸಿದ್ದಾರೆ.
- ಜು.7 ರಂದು ಅಹ್ಮದ್ ನೀಡಿದ್ದ ರಾಜೀನಾಮೆ ಪತ್ರ ಅಂಗೀಕೃತ ವಾಗಿದೆ ಎಂದು ಹಾಕಿ ಇಂಡಿಯಾದ ಪ್ರಕಟಣೆ ತಿಳಿಸಿದೆ.
- ಕ್ರೀಡಾ ನೀತಿ ಉಲ್ಲಂಘಿಸಿದ್ದ ಅಹ್ಮದ್ ಅವರು ತಕ್ಷಣದಲ್ಲೇ ಸ್ಥಾನ ತೊರೆಯಬೇಕು ಎಂದು ಕೆಲವು ದಿನಗಳ ಹಿಂದೆ ಹಾಕಿ ಇಂಡಿಯಾ ಸೂಚನೆ ಹೊರಡಿಸಿತ್ತು.
- ಹಾಕಿ ಇಂಡಿಯಾದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಉಪಾಧ್ಯಕ್ಷರಾಗಿದ್ದ ಮಣಿಪುರ ಮೂಲದ ಗ್ಯಾನೇಂದ್ರ ನಿಂಗೊಂಬಮ್ ಅವರಿಗೆ ಅಧ್ಯಕ್ಷಸ್ಥಾನ ವಹಿಸಲಾಗಿದೆ.

9. ಟಿ20 ವಿಶ್ವಾ ಕಪ್ 2021ಕ್ಕೆ ಶ್ರೀಲಂಕಾದಲ್ಲಿ ನಡೆಯಲಿದೆ:

- ಈ ವರ್ಷ ನಡೆಯಬೇಕಿದ್ದ ಟಿ.20 ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯನ್ನು 2021ರ ಐ.ಸಿ.ಸಿ ವೇಳಾಪಟ್ಟಿಯಲ್ಲಿ ಮರುಹೊಂದಿಸುವ ಕೆಲಸ ಪ್ರಗತಿಯಲ್ಲಿದೆ ಎಂದು ಏಷ್ಯಾ ಕ್ರಿಕೆಟ್ ಸಮಿತಿ (ಎ.ಸಿ.ಸಿ) ತಿಳಿಸಿದೆ.
- ನಿರೀಕ್ಷೆಯಂತೆ ನಡೆದಲ್ಲಿ ಏಷ್ಯಾ ಕಪ್‌ನ 15ನೇ ಆವೃತ್ತಿ 2021ರ ಜೂನ್‌ನಲ್ಲಿ ಶ್ರೀಲಂಕಾದಲ್ಲಿ ನಡೆಯಲಿದೆ.
- 2020ರ ಆವೃತ್ತಿ ಪಾಕಿಸ್ತಾನದಲ್ಲಿ ನಡೆಯಬೇಕಿತ್ತು. ಆದರೆ, ಪಾಕಿಸ್ತಾನಕ್ಕೆ ತೆರಳಲು ಭಾರತ ಸಿದ್ಧವಿಲ್ಲದ ಕಾರಣ ಟೂರ್ನಿಯನ್ನು ತಟಸ್ಥ ಸ್ಥಳ (ಯು.ಎ.ಇ)ದಲ್ಲಿ ನಡೆಸಲು ತೀರ್ಮಾನಿಸಲಾಗಿತ್ತು. ಆತಿಥ್ಯ ಅವಕಾಶವನ್ನು ಯು.ಎ.ಇ ಕಳೆದುಕೊಳ್ಳಲಿದೆ.

10. ಫುಟ್‌ಬಾಲ್ ದಿಗ್ಗಜ 'ಚಾರ್ಲ್ಟನ್' ನಿಧನರಾಗಿದ್ದಾರೆ:

- ಅಪೂರ್ವ ಆಟದ ಮೂಲಕ ಪುಟ್ ಬಾಲ್ ಲೋಕದಲ್ಲಿ ಹೆಜ್ಜೆ ಗುರುತು ಮೂಡಿಸಿದ್ದ ಇಂಗ್ಲೆಂಡ್‌ನ ಹಿರಿಯ ಆಟಗಾರ ಜಾಕ್ ಚಾರ್ಲ್ಟನ್ (85) ನಿಧನರಾಗಿದ್ದಾರೆ.
- ಚಾರ್ಲ್ಟನ್ ಅವರು 1966ರ ವಿಶ್ವಕಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದ ಇಂಗ್ಲೆಂಡ್ ತಂಡದಲ್ಲಿ ಆಡಿದ್ದರು.
- 1965 ರಿಂದ 1970ರ ಅವಧಿಯಲ್ಲಿ ತಂಡದ ಪರ 35 ಪಂದ್ಯಗಳಲ್ಲಿ ಕಣಕ್ಕಿಳಿದಿದ್ದ ಅವರು 6 ಗೋಲು ದಾಖಲಿಸಿದ್ದರು.

11. ಕ್ರೀಡಾ ಆಡಳಿತದಲ್ಲಿ ಲಿಂಗ ಸಮಾನತೆ ತರಲು ಪ್ರಯತ್ನ:

- ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಕ್ರೀಡಾ ಆಡಳಿತದಲ್ಲಿ ಲಿಂಗ ಸಮಾನತೆ ತರಲು ಮುಂದಾಗಿದ್ದು, ಎಲ್ಲ ದೇಶಗಳ ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಗಳಿಗೆ ಕನಿಷ್ಠ ಶೇ. 30ರಷ್ಟು ಮಹಿಳಾ ಪ್ರತಿನಿಧಿಗಳಿರಬೇಕೆಂದು ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಒಲಿಂಪಿಕ್ಸ್ ಸಮಿತಿ (ಐ.ಒ.ಎ) ಈ ಬಗ್ಗೆ ಗಮನ ಹರಿಸಲು ನಿರ್ಧರಿಸಿದೆ.

12. 'ಅಶೋಕ್ ಕುಮಾರ್ ಧ್ಯಾನ್‌ಚಂದ್'ಗೆ "ಬಾಗನ್" ಗೌರವ:

- ಹಾಕಿ ಮಾಂತ್ರಿಕ ಧ್ಯಾನ್‌ಚಂದ್ ಅವರ ಪುತ್ರ, ಹಾಕಿಪಟು ಅಶೋಕ್ ಕುಮಾರ್ ಅವರು ಮೊಹನ್ ಬಾಗನ್ ಫುಟ್‌ಬಾಲ್ ಕ್ಲಬ್ ನೀಡುವ ಜೀವಮಾನ ಶ್ರೇಷ್ಠ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

13. ಪರದೀಪ್ ಅಮಾನತು :

- ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಜಯಿಸಿದ್ದ ವೇಟ್ಲಿಫ್ಟರ್ ಪರದೀಪ್ ಸಿಂಗ್ ಅವರನ್ನು ಉದ್ದೀಪನ ಮದ್ದು ಸೇವನೆ ಆರೋಪದಲ್ಲಿ ಅಮಾನತು ಮಾಡಲಾಗಿದೆ.
- ಅವರ ರಕ್ತದ ಮಾದರಿಯಲ್ಲಿ ಮನುಷ್ಯನ ಸಾಮರ್ಥ್ಯ ವೃದ್ಧಿಯ ಕೃತಕ ಹಾರ್ಮೋನ್ ಅಂಶ ಪತ್ತೆಯಾಗಿದೆ. ಇದನ್ನು ವಾಡಾ ನಿಷೇಧಿಸಿದೆ.

14. ಫಿಗರ್ ಸ್ಕೇಟರ್ ಎಕಟರಿನಾ ಇನ್ನಿಲ್ಲ:

- ವಿಶ್ವ ವಿಖ್ಯಾತ ಫಿಗರ್ ಸ್ಕೇಟರ್ (ಐಸ್ ಮೇಲೆ ಸ್ಕೇಟಿಂಗ್ ಮಾಡುವವರು) ಎಕಟರಿನಾ ಅಲೆಕ್ಸಾಂಡ್ರೋವ್‌ಸ್ಕಾಯಾ ಅಕಾಲಿಕ ಮರಣಕ್ಕೆ ತುತ್ತಾಗಿದ್ದಾರೆ, ಅವರಿಗೆ 20 ವರ್ಷವಾಗಿತ್ತು.
- 2018ರ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಎಕಟರಿನಾ ಆಸ್ಟ್ರೇಲಿಯಾವನ್ನು ಪ್ರತಿನಿಧಿಸಿದ್ದರು.

15. ಐ.ಪಿ.ಎಲ್:

- ಬಹುನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್‌ನ 13ನೇ ಆವೃತ್ತಿಗೆ ಸಂಯುಕ್ತ ಅರಬ್ ಗಣರಾಜ್ಯ (ಯು.ಎ.ಇ.) ದಲ್ಲಿ ಸೆಪ್ಟೆಂಬರ್ 19ರಂದು ಚಾಲನೆ ದೊರೆಯಲಿದ್ದು, ನವೆಂಬರ್ 8 ರಂದು ಟೂರ್ನಿ ಸಮಾರೋಪಗೊಳ್ಳಲಿದೆ.
- ಒಟ್ಟು 51 ದಿನಗಳ ಪೂರ್ಣ ಪ್ರಮಾಣದ ಟೂರ್ನಿ ಇದು.
- ಇದಕ್ಕೂ ಮೊದಲು ಟೂರ್ನಿಯಲ್ಲಿ 5 ಡಬಲ್ ಹೆಡರ್‌ಗಳಿರುತ್ತವೆ ಎನ್ನಲಾಗಿತ್ತು. ಆದರೆ, ಈಗಿನ ಪ್ರಕಾರ, 12 ಡಬಲ್ ಹೆಡರ್ಗಳಿರುತ್ತವೆ.

ವಿಶೇಷ ದಿನಗಳು

1. ಹಿಮಪರ್ವತಗಳಲ್ಲಿ ವಿಜಯ ದುಂದುಭಿ: ಕಾರ್ಗಿಲ್ ವಿಜಯ ದಿವಸ ಜುಲೈ 26:

- 1999ರ ಫೆಬ್ರವರಿಯಲ್ಲಿ ಪಾಕ್ನೊಂದಿಗೆ ಶಾಂತಿ ಸಂದೇಶದೊಂದಿಗೆ ಅಂದಿನ ನಮ್ಮ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಪಾಕಿಸ್ತಾನದ ಲಾಹೋರ್ಗೆ ಬಸ್ ಯಾತ್ರೆ ಕೈಗೊಂಡರು. ಪಾಕಿಸ್ತಾನದ ಆಗಿನ ಪ್ರಧಾನಿ ನವಾಜ್ ಷರೀಫ್ ಈ ಸ್ನೇಹ ಹಸ್ತಕ್ಕೆ ಕೈಚಾಚಿದರು.

- ಅದೇ ವೇಳೆ, ಕಾರ್ಗಿಲ್ನಲ್ಲಿ ಒಳ ನುಸುಳುವ ಯೋಜನೆಯನ್ನು ಸಿದ್ದಪಡಿಸಿಟ್ಟುಕೊಂಡಿತ್ತು ಪಾಕಿಸ್ತಾನ ಸೇನೆ. ಜನವರಿ – ಫೆಬ್ರವರಿಯಲ್ಲಿ ಇಲ್ಲಿ ಭಯಂಕರ ಚಳಿ ಇರುವುದರಿಂದ ಭಾರತದ ಯೋಧರು ಪ್ಯಾಟ್ರೋಲಿಂಗ್ ಮಾಡುವುದಿಲ್ಲ. ಇದೇ ಸನ್ನಿವೇಶದಲ್ಲಿ ಪಾಕಿಸ್ತಾನ ಸೇನೆಯ ಕೆಲವು ತುಕಡಿಗಳು ಕಳ್ಳರಂತೆ ಗಡಿ ನಿಯಂತ್ರಣ ರೇಖೆಯ ಒಳನುಸುಳಿ ಕಾರ್ಗಿಲ್ನ ಬೆಟ್ಟಗಳಲ್ಲಿ ಡೇರೆ ಹೂಡಿ ಕುಳಿತರು.
- 'ಆಪರೇಷನ್ ಬದ್ರ್' ಎಂಬ ಗುಪ್ತನಾಮದಲ್ಲಿ ನಡೆದ ಆ ಕಾರ್ಯಾಚರಣೆಯ ಮುಖ್ಯ ಗುರಿ ಕಾಶ್ಮೀರ ಮತ್ತು ಲಡಾಖ್ ನಡುವಿನ ಕೊಂಡಿಯನ್ನು ಒಡೆದು, ಭಾರತ ಪಡೆಗಳು ಸಿಯಾಚಿನ್ ಗ್ಲೇಸಿಯರ್ನಿಂದ ಹಿಂದೆ ಸರಿಯುವಂತೆ ಮಾಡುವುದಾಗಿತ್ತು.
- ಇದರ ಯಾವ ಮಾಹಿತಿಯೂ ಪಾಕ್ ಪ್ರಧಾನಿ ನವಾಜ್ ಷರೀಫ್ ಅವರಿಗಿರಲಿಲ್ಲ, ಈ ವಿಷಯವನ್ನು 2007ರಲ್ಲಿ ಅವರೇ ಸ್ವತಃ ಬಹಿರಂಗ ಮಾಡಿದ್ದರು.
- ಪಾಕ್ ಯೋಧರ ಜತೆಗೆ ಉಗ್ರರೂ ಇದ್ದರು. ಪಾಕಿಸ್ತಾನ ಸೇನೆಯು ಮೊದಲಿಗೆ ಇದು ಬಂಡುಕೋರರ ಕೃತ್ಯ ಎಂದು ಹೇಳಿ ತಿಪ್ಪೆ ಸಾರಿಸಲು ಯತ್ನಿಸಿತು. ಆದರೆ, ಕದನ ಬಿಗಡಾಯಿಸಿದಾಗ ನಿಜ ಒಪ್ಪದೆ ಗತ್ಯಂತರವಿರಲಿಲ್ಲ.
- ಅಂದಿನ ಪಾಕ್ ಸೇನಾ ಮುಖ್ಯಸ್ಥ ಜನರಲ್ ಪರ್ವೇಜ್ ಮುಷರ್ರಫ್ ಹಾಗೂ ಮತ್ತೊಬ್ಬ ಸೇನಾಧಿಕಾರಿ ಅಜೀಜ್ ಜತೆ ಕಾರ್ಗಿಲ್ ವಿಷಯಕ್ಕೆ ಸಂಬಂಧಿಸಿದಂತೆ ನಡೆಸಿದ ಸಂವಹನ ಸಂದೇಶಗಳನ್ನು ಭಾರತ ಸಂಗ್ರಹಿಸಿ ಹೊರ ಜಗತ್ತಿಗೆ ಇದು ಗೊತ್ತಾಗುವಂತೆ ಮಾಡಿತು.

ಎಚ್ಚೆತ್ತುಕೊಂಡ ಭಾರತೀಯ ಸೇನೆ :

- 1999ರ ಮೇ ತಿಂಗಳಲ್ಲೇ ಭಾರತೀಯ ಸೈನ್ಯಕ್ಕೆ ನುಸುಳುಕೋರರ ಪತ್ತೆ ಹಚ್ಚಿತು. ಆರಂಭದಲ್ಲಿ, ಇದು ಉಗ್ರಗಾಮಿಗಳ ಕೃತ್ಯ ಇರಬೇಕು ಅಂದುಕೊಂಡರು.
- ಮೇ 3 ರಂದು ಬೆಟ್ಟಗುಡ್ಡಗಳಲ್ಲಿ ತಿರುಗಾಡುವ ಕುರಿಗಾಹಿಗಳು ಈ ನುಸುಳುಕೋರರ ಮಾಹಿತಿಯನ್ನು ಭಾರತೀಯ ಸೇನೆಗೆ ನೀಡಿದರು.
- ಮೇ 5 ರಂದು ಇವರನ್ನು ವಿಚಾರಿಸಲು ಹೋದ ಭಾರತೀಯ ಗಡಿಭದ್ರತಾ ಪಡೆಯ ಐವರು ಯೋಧರನ್ನು ಪಾಕಿಗಳು ಕೊಂದು ಹಾಕಿದರು. ಪಾಕ್ ಸೈನ್ಯದ ಚಲನೆ ಖಚಿತವಾಯಿತು.
- ಪ್ರಧಾನಿ ವಾಜಪೇಯಿ ಹಾಗೂ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡಿಸ್ ಅವರಿಗೆ ಮಾಹಿತಿ ಹೋಯಿತು. ಅವರು ಪಾಕ್ ಸೈನ್ಯವನ್ನು ಹೊರದೂಡಲು ಸೈನ್ಯಕ್ಕೆ ಮುಕ್ತ ಹಸ್ತ ನೀಡಿದರು.
- ಭೂಸೇನಾ ಮುಖ್ಯಸ್ಥ ಜ. ವೇದಪ್ರಕಾಶ್ ಮಲಿಕ್ ಹಾಗೂ ವಾಯುಸೇನಾ ಮುಖ್ಯಸ್ಥ ಏರ್ಚೀಫ್ ಮಾರ್ಷಲ್ ಅನಿಲ್ ಯಶವಂತ ಟಿಪ್ನಿಸ್ ಮುಂದಿನ ಕಾರ್ಯಾಚರಣೆಯ ಆಗುಹೋಗುಗಳನ್ನು ರೂಪಿಸಿದರು. ಕಾರ್ಯಾಚರಣೆಗೆ 'ಆಪರೇಷನ್ ವಿಜಯ್' ಎಂದು ಹೆಸರಿಡಲಾಯಿತು.
- ಕಾರ್ಗಿಲ್ ಪ್ರದೇಶದ ಪ್ರಮುಖ ಪರ್ವತವಾದ ಟೈಗರ್ ಹಿಲ್ ಜೊತೆಗೆ ದ್ರಾಸ್, ಕಸ್ಕರ್, ಮುಷ್ಕೋಹ್ ಬೆಟ್ಟಗಳನ್ನೂ ಪಾಕಿಗಳು ಹಿಡಿದಿಟ್ಟುಕೊಂಡಿದ್ದರು.

ಟೈಗರ್ ಹಿಲ್ ವಶಕ್ಕಾಗಿ ಹೋರಾಟ

- ಕಾರ್ಗಿಲ್– ದ್ರಾಸ್ ಪ್ರಾಂತ್ಯದಲ್ಲಿ ಟೈಗರ್ ಹಿಲ್ ಪ್ರಮುಖವಾಗಿತ್ತು. ಇದನ್ನು ಏರಿ ಕುಳಿತಿದ್ದ ಪಾಕಿಗಳನ್ನು ಹಿಮ್ಮೆಟ್ಟಿಸದೆ ವಿಜಯ ಪೂರ್ಣವಾಗಲು ಸಾಧ್ಯವಿರಲಿಲ್ಲ.
- ಇದು ಭಾರತದ ಕಡೆಯಿಂದ ಏರಲು ತುಂಬಾ ಕಠಿಣವಾದ ಮೈ ಹೊಂದಿದೆ. ಎತ್ತರದಲ್ಲಿ ಪಾಕ್ ಸೈನಿಕರು ಕುಳಿತಿದ್ದು, ಕೆಳಗಿನಿಂದ ಬರುತ್ತಿದ್ದ ಭಾರತೀಯ ಸೈನಿಕರನ್ನು ಸುಲಭವಾಗಿ ಕೊಳ್ಳುತ್ತಿದ್ದರು. ಇಲ್ಲಿಂದ ಅವರಿಗೆ ಭಾರತದ ಹೆದ್ದಾರಿ ಎನ್ಎಚ್1ಎ ಕಾಣಿಸುತ್ತಿತ್ತು. ಅಲ್ಲಿಂದಲೇ ಹೆದ್ದಾರಿಯ ಮೇಲೆ, ಬಾಂಬ್ ಸುರಿಮಳೆಯನ್ನೂ ಅವರು ಸುರಿಸಿ, ಭಾರತೀಯ ಸೇನೆಯ ವಾಹನಗಳು ಓಡಾಡಲಾಗದಂತೆ ಮಾಡಿಬಿಟ್ಟಿದ್ದರು. ಇದನ್ನು ವಶಪಡಿಸಿಕೊಳ್ಳುವುದು ಮುಖ್ಯವಾಗಿತ್ತು.
- ಜುಲೈ 1ರ ಹೊತ್ತಿಗೆ ಟೈಗರ್ ಹಿಲ್ನ ಅಕ್ಕ–ಪಕ್ಕದ ಬೆಟ್ಟಗಳನ್ನು 8 ಸಿಖ್ ರೆಜಿಮೆಂಟ್ ವಶಪಡಿಸಿಕೊಂಡಿತ್ತು. ಟೈಗರ್ ಹಿಲ್ ಅನ್ನು ಕೆಳಗಿನಿಂದ ಏರಲು 18 ಗ್ರೆನೆಡಿಯರ್ ಪಡೆ ಸಜ್ಜಾಯಿತು.
- ಡಿ ಕಂಪನಿ ಮತ್ತು ಘಾತಕ್ ಪ್ಲಟೂನ್ಗಳ ಕ್ಯಾಪ್ಟನ್ ಸಚಿನ್ ನಿಂಬಾಳ್ಕರ್ ಮತ್ತು ಲೆ.ಬಲವಾನ್ ಸಿಂಗ್ ಅವರು ವೈರಿಗಳಿಗೆ ಆಶ್ಚರ್ಯವಾಗುವಂತೆ, ಕಡಿದಾದ ಶಿಖರದ ಕಡೆಯಿಂದ ಏರಿ ಬಂದು, ಗುಂಡಿನ ದಾಳಿ ಆರಂಭಿಸಿದರು. ಇನ್ನೊಂದು ಕಡೆಯಿಂದ 8 ಸಿಖ್ ರೆಜಿಮೆಂಟ್ ಗುಂಡಿನ ದಾಳಿ ನಡೆಸಿತು. ದಿಕ್ಕು ತೋಚದಂತಾದ ವೈರಿಗಳು ಭಯಭೀತರಾಗಿ ಪಲಾಯನ ಮಾಡಿದರು. ಇಲ್ಲವೇ ಭಾರತೀಯ ಸೈನಿಕರ ಕೈಯಲ್ಲಿ ಹತರಾದರು. 18 ಗ್ರೆನೆಡಿಯರ್ ನಿರಂತರವಾಗಿ ಶೆಲ್ ದಾಳಿಗಳನ್ನು ನಡೆಸುತ್ತ ವೈರಿಗಳ ದಿಕ್ಕೆಡಿಸಿದರು.
- ಟೈಗರ್ ಹಿಲ್ ವಿಜಯ ನಿರ್ಣಾಯಕವಾಗಿತ್ತು. ಈ ಎತ್ತರದ ಬೆಟ್ಟವನ್ನು ಗೆದ್ದ ಬಳಿಕ ಉಳಿದ ಬೆಟ್ಟಗಳನ್ನು ಗೆಲ್ಲಲು ಸುಲಭವಾಯಿತು.

2. ಜುಲೈ 28, ಹೆಪಟೈಟಿಸ್ ದಿನ:

- ಜಗತ್ತಿನಾದ್ಯಂತ ಸುಮಾರು 290 ಮಿಲಿಯನ್ ಮಂದಿ ಹೆಪಟೈಟಿಸ್ ಕಾಯಿಲೆಯಿಂದ ತಮಗರಿವಿಲ್ಲದೇ ಬಳಲುತ್ತಿದ್ದಾರೆ. ಈ ಸೋಂಕನ್ನು ಆರಂಭದಲ್ಲಿಯೇ ಪತ್ತೆಹಚ್ಚಿ ಚಿಕಿತ್ಸೆ ಪಡೆಯದಿದ್ದರೆ ಅದು ಮಾರಣಾಂತಿಕವಾಗಬಹುದು.
- ಈ ಹೆಪಟೈಟಿಸ್ ಅಥವಾ ಪಿತ್ತಜನಕಾಂಗದ ಉರಿಯೂತದ ಬಗ್ಗೆ ಅರಿವು ಮೂಡಿಸಲು "ಫೈಂಡ್ ದ ಮಿಸ್ಸಿಂಗ್ ಮಿಲಿಯನ್ಸ್" ಎಂಬ ಘೋಷಣೆಯೊಂದಿಗೆ ಈ ವರ್ಷದ ಹೆಪಟೈಟಿಸ್ ದಿನ ಆಚರಿಸಲಾಗುತ್ತಿದೆ.
- ವೈರಲ್ ಹೆಪಟೈಟಿಸ್ ಕಾಮಾಲೆ ರೋಗಕ್ಕೆ ಕಾರಣವಾಗಿ ರಕ್ತದಲ್ಲಿ ಟ್ರಾನ್ಸ್ ಅಮೈನೇಜ್ ಕಿಣ್ವಗಳು ಹೆಚ್ಚಾಗುತ್ತವೆ. ತಲೆ ನೋವು, ಮಾಂಸಖಂಡಗಳ ನೋವು, ಕೀಲು ನೋವು, ವಾಕರಿಕೆ ಹಾಗೂ ಅರುಚಿ ಕಾಣಿಸಿ ಕಾಮಾಲೆ ಉತ್ಪತ್ತಿಯಾಗುತ್ತದೆ. ವಾಂತಿ ಹಾಗೂ ಹೊಟ್ಟೆಯಲ್ಲಿ ಅಸ್ವಸ್ಥತೆಗಳಿರುತ್ತವೆ. ರಕ್ತದಲ್ಲಿ ಅಲ್ಕಲೈನ್ ಫಾಸ್ಪೇಟ್ ಹಾಗೂ ಪ್ರೋಥ್ರೋಬಿನ್ ಟೈಮ್‌ನಲ್ಲಿ ಹೆಚ್ಚಳವಾಗಿರುತ್ತದೆ.
- ಬೇರೆಯವರ ರೇಜರ್, ಟೂತ್ ಬ್ರಷ್ ಬಳಕೆ, ಸಚ್ಚವಿಲ್ಲದ ಸೂಜಿಯ ಬಳಕೆ, ಸೋಂಕಿತ ಗರ್ಭಿಣಿಯಿಂದ ನವಜಾತ ಶಿಶುವಿಗೆ, ಅನ್‌ಸ್ಕ್ರೀನ್ಡ್ ರಕ್ತದ ಉತ್ಪನ್ನಗಳನ್ನು ಬಳಸುವವರಿಗೆ ಹೆಪಟೈಟಿಸ್ ಸೋಂಕು ತಗುಲುವ ಸಾಧ್ಯತೆ ಇರುತ್ತದೆ.
- ಈ ಸೋಂಕು ತಗುಲಿ 2 ರಿಂದ 4 ವಾರಗಳಲ್ಲಿ ರಕ್ತದಲ್ಲಿ ಸಿ.ಆರ್.ಎನ್.ಎ ಪತ್ತೆ ಹಚ್ಚುವುದರಿಂದ ಈ ಸೋಂಕನ್ನು ದೃಢಪಡಿಸಬಹುದು.
- ಹೆಪಟೈಟಿಸ್ ಎ, ಬಿ, ಸಿ, ಸೇರಿದಂತೆ ಹಲವು ಪಂಗಡಗಳು ನಾನಾ ರೀತಿಯಲ್ಲಿ ಪಿತ್ತ ಜನಕಾಂಗದ ವ್ಯಾಧಿಗಳನ್ನುಂಟು ಮಾಡುತ್ತವೆ.

3. ಭಾರತವೇ ಹುಲಿಗಳ ತವರು: ಜುಲೈ 29 ವಿಶ್ವ ಹುಲಿ ದಿನ:

- ರಷ್ಯಾದ ಸೇಂಟ್ ಪೀಟರ್ಸ್ ಬರ್ಗ್‌ನಲ್ಲಿ 2010ರ ಜುಲೈ 29ರಂದು ನಡೆದ 'ಹುಲಿ ಶೃಂಗ'ದಲ್ಲಿ ಮೊದಲ ಬಾರಿ 'ವಿಶ್ವಹುಲಿ ದಿನ' ಆಚರಿಸಿ, ಹುಲಿ ಸಂರಕ್ಷಣೆ ಜಾಗೃತಿ ಮೂಡಿಸಲು ನಿರ್ಧರಿಸಲಾಯಿತು.
- ಬೇಟೆ, ಅಂಗಾಂಗಗಳಿಗಾಗಿ ಹುಲಿಗಳ ಹತ್ಯೆಗೆ ತಡೆಯೊಡ್ಡುವುದಲ್ಲದೆ ಹುಲಿಗಳ ನೈಸರ್ಗಿಕ ವಾಸತಾಣಗಳ ರಕ್ಷಣೆಯೂ ಕೂಡ ಜಾಗೃತಿಯ ಬಹುಮುಖ್ಯ ಭಾಗವಾಗಿದೆ.
- ವಿಶ್ವದಲ್ಲೇ ಅತಿ ಹೆಚ್ಚು ಹುಲಿಗಳು (2,967) ಮತ್ತು ಹುಲಿ ರಕ್ಷಿತಾರಣ್ಯ (50) ಗಳನ್ನು ಭಾರತ ಹೊಂದಿದೆ. ಕೇವಲ 12 ವರ್ಷಗಳಲ್ಲಿ ದೇಶದಲ್ಲಿ ಹುಲಿಗಳ ಸಂಖ್ಯೆ ದುಪ್ಪಟ್ಟಾಗಿದೆ. 3,900 ಹುಲಿಗಳು ವಿಶ್ವದಲ್ಲಿ ಇವೆ ಎಂದು ಅಂದಾಜಿಸಲಾಗಿದೆ.
- ವಿಶ್ವದಲ್ಲಿನ ಹುಲಿಗಳ ಪೈಕಿ ಶೇ. 70ರಷ್ಟು ಹುಲಿಗಳು ಭಾರತದಲ್ಲಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.
- ಶೇ. 7ರಷ್ಟು ಅರಣ್ಯವು ಏಷ್ಯಾದಲ್ಲಿ ಹುಲಿಗಳಿಗೆ ವಿಹಾರವಾಸಕ್ಕೆ ಈಗ ಲಭ್ಯವಿದೆ. ಶೇ. 45ರಷ್ಟು ಹುಲಿ ವಾಸ ಪ್ರದೇಶವು ಕಳೆದ 10 ವರ್ಷಗಳಲ್ಲಿ ಏಷ್ಯಾದಲ್ಲಿ ನಾಶವಾಗಿದೆ.
- 24,710 ಎಕರೆ ವಿಸ್ತೀರ್ಣ ಪ್ರದೇಶ ಒಂದು ಹುಲಿಯ ಆರಾಮದಾಯಕ (ನೈಸರ್ಗಿಕವಾಗಿ ಸಮೃದ್ಧ ಬೇಟೆ, ಓಡಾಟ, ಸಂತಾನೋತ್ಪತ್ತಿ) ಮತ್ತು ಸುರಕ್ಷಿತ ಜೀವನಕ್ಕೆ ಅಗತ್ಯವಾದ ಅರಣ್ಯ ಪ್ರದೇಶ.

ಹುಲಿಗಳಿಗೆ ಆಪತ್ತು ಏಕೆ?

- ವನ್ಯಜೀವಿ ಅಂಗಾಂಗಳ ಸಾಗಣೆ ಜಾಲ, ಮಾನವ–ಹುಲಿ ಸಂಘರ್ಷ, ವಾಸಯೋಗ್ಯ ತಾಣ ನಾಶ; ಈ ಮೂರರಿಂದಲೇ ಹುಲಿ ಸಂತತಿಗೆ ಆಪತ್ತು ಎದುರಾಗಿದೆ.
- ಹುಲಿಗಳನ್ನು ಹೊಂದಿರುವ ದೇಶಗಳು ಭಾರತ, ಚೀನಾ, ಬಾಂಗ್ಲಾದೇಶ, ಕಾಂಬೋಡಿಯಾ, ಲಾವೊಸ್, ವಿಯೆಟ್ನಾಂ, ಥೈಲೆಂಡ್, ಭೂತಾನ್, ಇಂಡೋನೇಷ್ಯಾ, ನೇಪಾಳ, ಮಲೇಷ್ಯಾ, ರಷ್ಯಾ, ಮ್ಯಾನ್ಮಾರ್.

ಮೂರು ಪಭೇದ ನಾಶ

- ರಾಯಲ್ ಬೆಂಗಾಲ್ ಟೈಗರ್, ಇಂಡೋ ಚೈನೀಸ್, ಸೈಬೀರಿಯನ್/ಆಮುರ್, ಸುಮಾತ್ರನ್, ಸೌತ್ ಚೀನಾ ಜಾತಿಯ ಹುಲಿಗಳು ಮಾತ್ರ ಅತಿ ಕಡಿಮೆ ಸಂಖ್ಯೆಯಲ್ಲಿ ಪ್ರಾಣಿಸಂಗ್ರಹಾಲಯ ಕಾಡುಗಳಲ್ಲಿ ಉಳಿದಿವೆ.
- ಬಾಲಿ ಟೈಗರ್, ಜಾವನ್ ಟೈಗರ್, ಕ್ಯಾಸ್ಪಿಯನ್ ಟೈಗರ್ ನಶೀಸಿ ಹೋಗಿವೆ.
- ಭಾರತದ ಹೆಗ್ಗುರುತು, ಕರ್ನಾಟಕದ ಹೆಮ್ಮೆ
- ಜಾಗತಿಕ ಭೂಪ್ರದೇಶದಲ್ಲಿ 2.5% ಭೂಪ್ರದೇಶ ಮಾತ್ರವೇ ಭಾರತದಲ್ಲಿದೆ. ಆದರೆ ಜಾಗತಿಕ ಜೀವವೈವಿಧ್ಯದಲ್ಲಿ 8% ಪಾಲನ್ನು ಭಾರತ ಹೊಂದಿದೆ.
- ಇನ್ನು ಹುಲಿ ವಿಷಯಕ್ಕೆ ಬಂದರೆ ದೇಶದಲ್ಲಿ ಅತಿ ಹೆಚ್ಚು ಹುಲಿಗಳಿರುವ ರಾಜ್ಯಗಳ ಪೈಕಿ ಮಧ್ಯಪ್ರದೇಶವು 526 ಹುಲಿಗಳನ್ನು ಹೊಂದಿದ್ದರೆ, ಕರ್ನಾಟಕದಲ್ಲಿ 524 ಹುಲಿಗಳಿವೆ.

ಪ್ರಶಸ್ತಿ

1. ಡಾ. ಇಂದಿರಾ ಹೆಗ್ಗಡೆಗೆ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ:

- ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಿರಿಯ ಲೇಖಕಿ ಡಾ. ಇಂದಿರಾ ಹೆಗ್ಗಡೆ ಅವರಿಗೆ 2020ನೇ ಸಾಲಿನ 'ಡಾ. ಬಿ. ಸರೋಜಾದೇವಿ ಸಾಹಿತ್ಯ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.
- ಇವರು ಸಾಹಿತ್ಯ ಲೋಕಕ್ಕೆ ಕಾದಂಬರಿ, ಕಾವ್ಯ, ಜೀವನ ಚರಿತ್ರೆ, ಸಂಶೋಧನಾ ಕೃತಿಗಳನ್ನು ರಚಿಸಿ, ಕನ್ನಡ ಸಾಹಿತ್ಯಾಸಕ್ತರ ಮನಸೆಳೆದಿದ್ದಾರೆ.

16. ಬೂಕರ್ ಪ್ರಶಸ್ತಿ ಆಯ್ಕೆ ಪಟ್ಟಿಯಲ್ಲಿ "ಬರ್ನ್ಟ್ ಸುಗರ್":

- ಪ್ರಸಕ್ತ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿಗೆ ಆಯ್ಕೆಯಾಗ ಬಹುದಾದ ಹದಿಮೂರು ಕೃತಿಗಳ ಪಟ್ಟಿ ಬಿಡುಗಡೆಯಾಗಿದ್ದು, ಅದರಲ್ಲಿ ದುಬೈನಲ್ಲಿರುವ ಭಾರತ ಮೂಲದ ಲೇಖಕಿ 'ಅವ್ನಿ ದೋಶಿ' ಅವರ ಚೊಚ್ಚಲ ಕಾದಂಬರಿ 'ಬರ್ನ್ಟ್ ಸುಗರ್' ಕಾದಂಬರಿಯೂ ಸ್ಥಾನ ಪಡೆದಿದೆ.
- ಬ್ರಿಟನ್ ಅಥವಾ ಐರ್ಲೆಂಡ್‌ನಲ್ಲಿ 2019 ಅಕ್ಟೋಬರ್‌ನಿಂದ 2020 ಸೆಪ್ಟೆಂಬರ್ ಅವಧಿಯಲ್ಲಿ ಪ್ರಕಟಗೊಂಡ ಸುಮಾರು 162 ಕಾದಂಬರಿಗಳನ್ನು ಪರಿಶೀಲಿಸಿದ ತೀರ್ಪುಗಾರರು, 13 ಲೇಖಕರ ಕೃತಿಗಳನ್ನೊಳಗೊಂಡ ಪ್ರಾಥಮಿಕ ಹಂತದ ಆಯ್ಕೆ ಪಟ್ಟಿಯನ್ನು ತಯಾರಿಸಿದ್ದು, ಅದರಲ್ಲಿ ಅವ್ನಿ ದೋಶಿಯವರ ಕಾದಂಬರಿಯೂ ಸೇರಿದೆ. ಜತೆಗೆ, ಎರಡು ಬಾರಿ 'ಬೂಕರ್ ಪ್ರಶಸ್ತಿ' ಪಡೆದಿರುವ ಹಿಲರಿ ಮಂಟೇಲ್ ಅವರ 'ದಿ ಮಿರರ್ ಅಂಡ್ ದಿ ಲೈಟ್' ಕೃತಿಯೂ ಸೇರಿದೆ.

ನೇಮಕ

1. ಇಂದ್ರಮಣಿ ಪಾಂಡೆ ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿಯಾಗಿ ನೇಮಕ:

- ಹಿರಿಯ ಐ.ಎಫ್.ಎಸ್. ಅಧಿಕಾರಿ ಇಂದ್ರಮಣಿ ಪಾಂಡೆ ಅವರನ್ನು ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿಯಾಗಿ ನೇಮಕ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. 1990ರ ಸಾಲಿನ ಐಎಫ್ಎಸ್ ಅಧಿಕಾರಿಯಾಗಿರುವ ಇಂದ್ರಮಣಿ ಪಾಂಡೆ, 2015ರಲ್ಲಿ ಓಮಾನ್‌ನಲ್ಲಿ ಭಾರತೀಯ ರಾಯಭಾರಿಯಾಗಿದ್ದರು. ಅಲ್ಲದೆ, ಪ್ಯಾರಿಸ್‌ನಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

2. ವಿಶ್ವಸಂಸ್ಥೆಯ ಯುವ ಸಲಹಾ ಗುಂಪಿಗೆ ಅರ್ಚನಾ ನೇಮಕ:

- ಹವಾಮಾನ ವೈಪರೀತ್ಯದ ವಿರುದ್ಧದ ಹೋರಾಟಕ್ಕಾಗಿ ವಿಶ್ವಸಂಸ್ಥೆ ಹೊಸದಾಗಿ ರಚಿಸಿರುವ ಯುವ ಸಲಹಾ ಗುಂಪಿಗೆ ಭಾರತದ ಯುವ ಪರಿಸರ ಹೋರಾಟಗಾರ್ತಿ ಅರ್ಚನಾ ಸೋರೆಂಗ್ ಅವರನ್ನು ನೇಮಿಸಲಾಗಿದೆ.
- ಆರು ಯುವ ಪರಿಸರ ಹೋರಾಟಗಾರರನ್ನು ಒಳಗೊಂಡ ಯುವ ಸಲಹಾ ಗುಂಪಿಗೆ ಅರ್ಚನಾ ಅವರನ್ನು ನೇಮಿಸಿರುವುದಾಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ತಿಳಿಸಿದ್ದಾರೆ.
- ಒಡಿಶಾ ಮೂಲದ ಅರ್ಚನಾ ಸೋರೆಂಗ್, ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ (ಟಿಐಎಸ್ಎಸ್)ನಲ್ಲಿ ಆಡಳಿತ ನಿರ್ವಹಣೆ ವಿಷಯದಲ್ಲಿ ಅಧ್ಯಯನ ಮಾಡಿದ್ದಾರೆ.
- ಇವರು ಸ್ಥಳೀಯ ಸಮುದಾಯಗಳ ಪಾರಂಪರಿಕ ಜ್ಞಾನ ಮತ್ತು ಆಚರಣೆಗೆ ಅಧ್ಯಯನ, ಸಂಶೋಧನೆ ಮತ್ತು ದಾಖಲಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಜತೆಗೆ ಪಾರಂಪರಿ ಜ್ಞಾನ ಮತ್ತು ಆಚರಣೆಗಳ ಸಂರಕ್ಷಣೆಯಲ್ಲೂ ತೊಡಗಿದ್ದಾರೆ.

ನಿಧನ

1. ವೆಸ್ಟ್ ಇಂಡೀಸ್‌ನ ದಿಗ್ಗಜ ಕ್ರಿಕೆಟಿಗ ಸರ್ ಎವರ್ಟನ್ ವೀಕ್ಸ್ (95) ನಿಧನ

- ಎವರ್ಟನ್, ಫ್ರಾಂಕ್ ವಾರೆಲ್ ಮತ್ತು ಕ್ಲೈಡ್ ವಾಲ್ಕಾಟ್ ಸಮಕಾಲೀನರು. ಇವರೆಲ್ಲರೂ 1948 ರಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು. 'ಐಸಿಸಿ ಹಾಲ್ ಆಫ್ ಫೇಮ್' ಗೌರವಕ್ಕೆ ಭಾಜನರಾಗಿದ್ದ ಎವರ್ಟನ್ ಈ ಸಮಿತಿಯ ಸದಸ್ಯರೂ ಆಗಿದ್ದರು. ಕೋಚ್, ವಿಶ್ಲೇಷಕ, ತಂಡದ ಮ್ಯಾನೇಜರ್, ಐಸಿಸಿ ಪಂದ್ಯದ ರೆಫರಿಯಾಗಿಯೂ ಕೆಲಸ ಮಾಡಿದ್ದರು. ಎವರ್ಟನ್, 1948ರಿಂದ 1958ರ ಅವಧಿಯಲ್ಲಿ ಒಟ್ಟು 48 ಟೆಸ್ಟ್ ಪಂದ್ಯಗಳನ್ನು ಆಡಿದ್ದರು.

2. ಬಾಲಿವುಡ್‌ನ ಹೆಸರಾಂತ ನೃತ್ಯ ಸಂಯೋಜಕ ಸರೋಜ್ ಖಾನ್ (71) ನಿಧನ:

- ಇವರು ಮೂರು ಬಾರಿ ರಾಷ್ಟ್ರೀಯ ಪ್ರಶಸ್ತಿ ಪಡೆದ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

3. ಬಾಲಿವುಡ್ ನಿರ್ಮಾಪಕ ಹರೀಶ್ ಶಾ ನಿಧನ:

- ಬಾಲಿವುಡ್‌ನ ಖ್ಯಾತ ನಿರ್ಮಾಪಕ, ನಿರ್ದೇಶಕ ಹರೀಶ್ ಶಾ (76) ನಿಧನ.
- 1972ರಲ್ಲಿ ಬಿಡುಗಡೆಗೊಂಡಿದ್ದ ರಾಜೇಶ್ ಖನ್ನಾ ಅಭಿನಯದ 'ಮೇರೆ ಜೀವನ್ ಸಾಥಿ' ಚಿತ್ರದ ನಿರ್ಮಾಪಕರಾಗಿದ್ದರು. ಈ ಚಿತ್ರ ಹರೀಶ್ ಶಾ ಅವರಿಗೆ ಖ್ಯಾತಿ ತಂದುಕೊಟ್ಟಿತ್ತು. 'ಕಾಲಾ–ಸೋನಾ', 'ರಾಮ್ ತೇರಿ ಕಿತ್ನೆ ನಾಮ್' ಇವರ ನಿರ್ಮಾಣದಲ್ಲಿ ಮೂಡಿ ಬಂದ ಪ್ರಮುಖ ಚಲನಚಿತ್ರಗಳು.
- ಇವರು ನಿರ್ದೇಶಿಸಿದ ಮೊದಲ ಚಿತ್ರ 'ಧನ್ ದೌಲತ್'. ಇದರಲ್ಲಿ ರಿಷಿ ಕಪೂರ್ ಮತ್ತು ನೀತು ಕಪೂರ್ ಮುಖ್ಯ ಪಾತ್ರದಲ್ಲಿ ನಟಿಸಿದ್ದರು.

4. ಶೋಲೆ ಹಾಸ್ಯ ನಟ ಜಗದೀಪ್ ನಿಧನ:

- ಶೋಲೆ ಚಿತ್ರದ ಸೂರ್ಮಾ ಭೋಪಾಲಿ ಪಾತ್ರದ ಮೂಲಕ ಜನಪ್ರಿಯರಾಗಿದ್ದ ಹಿರಿಯ ಬಾಲಿವುಡ್ ನಟ ಜಗದೀಪ್ (81) ನಿಧನ ಹೊಂದಿದ್ದಾರೆ.

- 1951ರಲ್ಲಿ ಅಫ್ಸಾನಾ ಚಿತ್ರದಲ್ಲಿ ಬಾಲ ನಟನಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಅವರು 400ಕ್ಕೂ ಹೆಚ್ಚು ಚಿತ್ರದಲ್ಲಿ ನಟಿಸಿದ್ದರು.
- 'ಹಮ್ ಪಂಚಿ ಏಕ್ ದಲ್ ಕೆ' ಚಿತ್ರದಲ್ಲಿ ಜಗದೀಪ್ ಅವರ ನಟನೆಗೆ ಮೆಚ್ಚಿ ಮಾಜಿ ಪ್ರಧಾನಿ ಜವಾಹರ್‌ಲಾಲ್ ನೆಹರು ಅವರು ತಮ್ಮ ವೈಯಕ್ತಿಕ ಸಿಬ್ಬಂದಿಯ ಸೇವೆಯನ್ನೇ ಕೊಡುಗೆಯಾಗಿ ನೀಡಿದ್ದರು.

5. ಸುಭದ್ರಮ್ಮ ಮನ್ಸೂರು ಇನ್ನಿಲ್ಲ :

- ಅರ್ಧ ಶತಮಾನಕ್ಕೂ ಹೆಚ್ಚು ಕಾಲ ರಂಗಭೂಮಿಯಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಹಿರಿಯ ಕಲಾವಿದೆ, ಗಾಯಕಿ, ಸುಭದ್ರಮ್ಮ ಮನ್ಸೂರು (81) ನಿಧನರಾಗಿದ್ದಾರೆ.
- 15 ಸಾವಿರಕ್ಕೂ ಅಧಿಕ ನಾಟಕಗಳ ಪ್ರದರ್ಶನ ನೀಡಿದ್ದ ಇವರಿಗೆ ನಾಟಕ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಪ್ರಶಸ್ತಿ ಸೇರಿದಂತೆ ಹಲವು ಸನ್ಮಾನಗಳು ಸಂದಿವೆ.

6. ಬಹುಭಾಷಾ ವಿದ್ವಾಂಸ ಯು.ಪಿ. ಉಪಾಧ್ಯಾಯ ನಿಧನ:

- ಬಹುಭಾಷಾ ವಿದ್ವಾಂಸ ಡಾ. ಯು.ಪಿ. ಉಪಾಧ್ಯಾಯ (88) ನಿಧನ.
- ಸಂಸ್ಕೃತ, ಕನ್ನಡ ಮತ್ತು ಭಾಷಾ ವಿಚಾರವಾಗಿ ಕೇರಳ, ಪುಣೆ, ಮದ್ರಾಸ್ ವಿ.ವಿ.ಯಿಂದ ಸ್ನಾತಕೋತ್ತರ ಪದವಿ ಪಡೆದ ಉಳಿಯಾರು ಪದ್ಮನಾಭ ಉಪಾಧ್ಯಾಯ (ಯು.ಪಿ.ಉಪಾಧ್ಯಾಯ) ಹಿಂದಿಯಲ್ಲಿ ವಿದ್ವಾನ್, ಭಾಷಾ ವಿಚಾರದಲ್ಲಿ ಪಿ.ಎಚ್.ಡಿ. ಮತ್ತು ಫ್ರೆಂಚ್ ಡಿಪ್ಲೊಮಾ ಗಳಿಸಿದ್ದರು. ಹಿಂದಿ, ಕನ್ನಡ, ತುಳು, ಮಲೆಯಾಳಂ, ತಮಿಳು, ಇಂಗ್ಲಿಷ್, ಫ್ರೆಂಚ್ ಹಾಗೂ ಆಫ್ರಿಕಾದ ಸೆನೆಗಲ್ನ ಒಲೊಫ್ ಭಾಷಾ ತಜ್ಞರಾಗಿದ್ದರು.
- 1958–59ರಲ್ಲಿ ಮದ್ರಾಸ್‌ನ ಸರ್ಕಾರಿ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರೆರಿಯಲ್ಲಿ ಸಹಾಯಕ ಗ್ರಂಥಪಾಲಕ, ಬೆಂಗಳೂರಿನ ಸೈಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಸಂಸ್ಕೃತ, ಕನ್ನಡ ಪ್ರಾಧ್ಯಾಪಕರಾಗಿದ್ದರು. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ವತಿಯಿಂದ ಆರು ಸಂಪುಟಗಳ ತುಳು ನಿಘಂಟು ರಚನೆಗೆ 18 ವರ್ಷಶ್ರಮಿಸಿದ್ದರು. 3,400 ಪುಟಗಳ ಆರು ಸಂಪುಟ ರಚಿಸಿದ್ದು ದಾಖಲೆಯಾಗಿದೆ.
- ಪುಣೆಯ ಡೆಕ್ಕನ್ ಕಾಲೇಜ್ ಆಫ್ ಪೋಸ್ಟ್ ಗ್ರಾಜುವೇಟ್ ಆ್ಯಂಡ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನಲ್ಲಿ ಸಂಶೋಧನಾ ವಿದ್ವಾಂಸ ಮತ್ತು ಪ್ರಾಧ್ಯಾಪಕರಾಗಿ 3 ವರ್ಷ ಸೇವೆ ಸಲ್ಲಿಸಿದ್ದರು.
- ಮೈಸೂರಿನ ಸದರ್ನ್ ರೀಜನಲ್ ಲ್ಯಾಂಗ್ವೇಜ್ ಸೆಂಟರ್ ಆಫ್ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲ್ಯಾಂಗ್ವೇಜ್ ನ ಪ್ರಿನ್ಸಿಪಾಲರಾಗಿದ್ದ ಇವರು, 1973 ರಿಂದ 81ರ ತನಕ ಆಫ್ರಿಕಾದ ಸೆನೆಗಲ್‌ನಲ್ಲಿ ಭಾರತ ಆಫ್ರಿಕಾ ನಾಗರಿಕತೆ ಕುರಿತ ಅಧ್ಯಯನ, ಸಂಶೋಧನೆ ನಡೆಸಿದರು.
- ಲಂಡನ್, ಫ್ರಾನ್ಸ್ ವಿ.ವಿ.ಗಳ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು.
- ದ್ರಾವಿಡ ಮತ್ತು ನೀಗ್ರೋ, ಆಫ್ರಿಕಾ ಭಾಷೆ ಮತ್ತು ನಾಗರಿಕತೆ ಕುರಿತ ಸಂಶೋಧನೆಯಲ್ಲೂ ತೊಡಗಿದ್ದರು. ಹತ್ತು ಹಲವು ಪ್ರಶಸ್ತಿಗಳು ಸಂದಿವೆ.

7. ಮಧ್ಯಪ್ರದೇಶ ರಾಜ್ಯಪಾಲ ಲಾಲ್‌ಜಿ ಟಂಡನ್ ನಿಧನ:

- ಟಂಡನ್ ಅವರು 2018–19ರಲ್ಲಿ ಒಂದು ವರ್ಷ ಬಿಹಾರದ ರಾಜ್ಯಪಾಲರಾಗಿದ್ದರು. ನಂತರ ಮಧ್ಯಪ್ರದೇಶ ರಾಜ್ಯಪಾಲರಾಗಿ ವರ್ಗಗೊಂಡಿದ್ದರು.
- ತಮ್ಮ ತವರು ನೆಲ ಲಖನೌನಿಂದ 1970ರಲ್ಲಿ ರಾಜಕೀಯ ಯಾತ್ರೆಆರಂಭಿಸಿದ್ದ ಲಾಲ್‌ಜಿ, ಹಿಂದಿರುಗಿ ನೋಡಿದ್ದಿಲ್ಲ ಸರಣಿ ಗೆಲುವುಗಳ ನಂತರ 1991 ಮತ್ತು 2003 ರ ಈ ನಡುವೆ ಹಲವು ಬಾರಿ ಅವರು ರಾಜ್ಯದ ಸಚಿವರಾಗಿ ಸೇವೆಸಲ್ಲಿಸಿದ್ದರು.
- 2009ರಲ್ಲಿ ಅವರು, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಉತ್ತರಾಧಿಕಾರಿಯಾಗಿ ಲಖನೌ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ಅಟಲ್ ಅವರಿಗೆ ಪರಮಾಪ್ತರಾಗಿದ್ದ ಟಂಡನ್ ವಾಜಪೇಯಿ ಅವರ 'ದತ್ತುಪುತ್ರ' ಎಂದೇ ಗುರುತಿಸಿಕೊಂಡಿದ್ದರು.

ಆನಂದಿ ಬೆನ್ ಹೆಚ್ಚುವರಿ ಹೊಣೆ:

- ಟಂಡನ್ ಅವರು ಅನಾರೋಗ್ಯದಿಂದ ಆಸ್ಪತ್ರೆ ಸೇರಿದ ಬಳಿಕ ಉತ್ತರಪ್ರದೇಶ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಅವರು ಮಧ್ಯಪ್ರದೇಶದ ಹೆಚ್ಚುವರಿ ಹೊಣೆಗಾರಿಕೆ ವಹಿಸಿಕೊಂಡಿದ್ದರು.
- ಪರ್ಯಾಯ ವ್ಯವಸ್ಥೆ ಆಗುವವರೆಗೆ ಆನಂದಿಬೆನ್ ಅವರೇ ಮಧ್ಯಪ್ರದೇಶ ರಾಜ್ಯಪಾಲರ ಆಗುಹೋಗುಗಳನ್ನು

ನೋಡಿಕೊಳ್ಳಲಿದ್ದಾರೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

8. ಹಿರಿಯ ನಟಿ ಶಾಂತಮ್ಮ ನಿಧನ:

- ಕನ್ನಡ ಚಿತ್ರರಂಗದ ಹಿರಿಯ ನಟಿ ಶಾಂತಮ್ಮ (95) ನಿಧನ.
- ಶಾಂತಮ್ಮ ಕನ್ನಡ, ತಮಿಳು, ತೆಲುಗು, ಮಲಯಾಳಂ, ಹಿಂದಿ ಭಾಷೆಗಳ ಸಿನಿಮಾಗಳು ಸೇರಿದಂತೆ 450ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ.

9. ಬಾಲಿವುಡ್ ನಿರ್ದೇಶಕ ರಜತ್ ಮುಖರ್ಜಿ ಇನ್ನಿಲ್ಲ:

- ಬಾಲಿವುಡ್ ನಿರ್ದೇಶಕ ರಜತ್ ಮುಖರ್ಜಿ(60) ಜೈಪುರದಲ್ಲಿ ನಿಧನ.
- ಅವರು ನಿರ್ದೇಶಿಸಿದ್ದ 'ಪ್ಯಾರ್ ತೂನೇ ಕ್ಯಾಕಿಯಾ' ಮತ್ತು 'ರೋಡ್' ಚಿತ್ರಗಳು ಭಾರಿ ಯಶಸ್ಸು ಕಂಡಿದ್ದವು.
- ಗಾಯಕ ಸೋನು ನಿಗಮ್ ಮತ್ತು ಫ್ಲೋರಾ ಸಯಾನಿ ತಾರಾಬಳಗದಲ್ಲಿ 'ಲವ್ ಇನ್ ನೇಪಾಳ' ಚಿತ್ರವನ್ನು ನಿರ್ದೇಶಿಸಿದ್ದರು.
- ಅದಾದ ನಂತರ ಹೊಸಬರನ್ನು ಹಾಕಿಕೊಂಡು ತೆಗೆದ 'ಉಮೀದ್' ನಿರೀಕ್ಷಿಸಿದಷ್ಟು ಯಶಸ್ವಿಯಾಗಲಿಲ್ಲ.

10. ಹ್ಯಾಮಿಲ್ಟನ್‌ಗೆ ಪ್ರಶಸ್ತಿ:

- ಮಿಂಚಿನ ವೇಗದ ಚಾಲನೆ ಮಾಡಿ ಸರ್ಕೀಟ್‌ನ ಲ್ಯಾಪ್ ದಾಖಲೆ ಮುರಿದ ಮರ್ಸಿಡಿಸ್ ಚಾಲಕ ಲೂಯಿಸ್ ಹ್ಯಾಮಿಲ್ಟನ್ ಸಂಭ್ರಮಿಸಿದರು.
- ಹಂಗೆರಿಯನ್ ಗ್ರಾನ್ ಪ್ರಿ ಫಾರ್ಮ್ಯುಲಾ ಒನ್ ಪ್ರಶಸ್ತಿ ಸುತ್ತಿನಲ್ಲಿ ಮೊದಲಿಗರಾದ ಅವರು ಹ್ಯಾಟ್ರಿಕ್ ಸಾಧಿಸಿದರು.
- ಹ್ಯಾಮಿಲ್ಟನ್ ವೃತ್ತಿಜೀವನದಲ್ಲಿ 90 ನೇ ಬಾರಿ ಅಗ್ರ ಸ್ಥಾನ ಗಳಿಸಿದ್ದರು.
- ಈ ಗೆಲುವಿನೊಂದಿಗೆ ಅವರು ಹಂಗೆರಿಯನ್ ಗ್ರಾನ್ ಪ್ರಿಯಲ್ಲಿ ಒಟ್ಟು ಎಂಟು ಬಾರಿ ಪ್ರಶಸ್ತಿ ಗಳಿಸಿದ ಸಾಧನೆಮಾಡಿದರು. ಈ ಮೂಲಕ ಮೈಕೆಲ್ ಶುಮಾಕರ್ ದಾಖಲೆಯನ್ನು ಸರಿಗಟ್ಟಿದರು. ಶುಮಾಕರ್ ಫ್ರೆಂಚ್ ಗ್ರಾನ್ಪ್ರಿಯಲ್ಲಿ ಎಂಟು ಬಾರಿ ಪ್ರಶಸ್ತಿ ಗೆದ್ದಿದ್ದರು.

11. ಫುಟ್ಬಾಲ್ ಆಟಗಾರ ಜಾರ್ಜ್ ನಿಧನ:

- ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದ ಫುಟ್‌ಬಾಲ್ ಆಟಗಾರ ಕೆ.ಕೆ.ಜಾರ್ಜ್ (85) ಅವರು ನಿಧನ.
- 1968ರಲ್ಲಿ ಸಂತೋಷ್ ಟ್ರೋಫಿ ಗೆದ್ದ ರಾಜ್ಯ ತಂಡದಲ್ಲಿ ಅವರು ಆಡಿದ್ದರು. ಪ್ರಮುಖ ಟೂರ್ನಿಗಳಲ್ಲಿ ಸಿ.ಐ.ಎಲ್. ತಂಡವನ್ನು ಪ್ರತಿನಿಧಿಸಿದ್ದರು.

12. ನೃತ್ಯ ಸಂಯೋಜಕಿ ಅಮಲಾ ಶಂಕರ್ ನಿಧನ:

- ನೃತ್ಯಪಟು ಮತ್ತು ನೃತ್ಯ ಸಂಯೋಜಕಿ ಅಮಲಾ ಶಂಕರ್ (101) ನಿಧನ.
- ಕಲಾಕ್ಷೇತ್ರದ ಸಾಧನೆಗಾಗಿ ಪಶ್ಚಿಮ ಬಂಗಾಳ ಕೊಡಮಾಡುವ 'ಬಂಗ ಭೂಷಣ' ಪ್ರಶಸ್ತಿಯನ್ನು 2011ರಲ್ಲಿ ಪಡೆದಿದ್ದರು.


KARNATAKA ECONOMIC SURVEY 2019-20
ಕರ್ನಾಟಕದ ಆರ್ಥಿಕ ಸಮೀಕ್ಷೆ 2019-20
KAS / FDA / SDA / Group 'C' / PDO & PSI
ಒಳಗೊಂಡಂತೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಅತ್ಯುಪಯುಕ್ತ ಪುಸ್ತಕ
₹249/-

ಜ್ಞಾನಗಂಗೋತ್ರಿ ಕೋಚಿಂಗ್ ಸೆಂಟರ್

ತರಬೇತಿ ಪಡೆದು ಸೇವೆಗೆ ಆಯ್ಕೆಯಾದವರ ಪಟ್ಟಿ

SERVICES AVAILABLE AT JNANAGANGOTHRI		
Course	**Batches**	**Timings**
KAS Prelims	3 Batches/day	7am, 10am 5:45pm
KAS Core batch prelims+mains	6 Months	7am to 7 pm
FDA/SDA Regular batch	3 Batches/day	7am, 10am 5:45pm
FDA/SDA Core Batch	1 Batch/Day	7am to 7 pm
PSI Regular batch	3 Batches/day	7am, 10am 5:45pm
PSI Core batch	1 Batch/Day	7am to 7 pm
Banking/SSC/Railways	1 Batch	10am to 1 pm
Test Series for KAS, FDA/SDA, PSI, BANKING, RRB ETC	Available both online and offline	
24 hr Reading Rooms	24 hr	NA
Mock intervies for all competitive Exams	On appointment	
Free KPSC current affairs available everyday visit www.iasjnana.com		

ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ
ವಿಜಯನಗರ, ಬೆಂಗಳೂರು

ಜೂನ್ – 2020

ಜ್ಞಾನಗಂಗೋತ್ರಿ

ಇ–ಮ್ಯಾಗಝಿನ್

Useful for KAS, KPSC, PSI and all State govt exams

Free copy not for sale

www.iasjnana.com **9916399276**

Jnanagangothri

An Institute for IAS, KAS, PSI, Banking, SSC, Railways and for all State govt and Central govt. recruitments.

Join Jnanagangothri Online Classes
Click the link below to download JG's Online Classes:
https://play.google.com/store/apps/details?id=com.iasjnana.courses

Login to www.iasjnana.com for daily current affairs and free PDF download

To take test series (KPSC/KAS/PSI) visit www.iasjnana.com